MICRO FILMED
BY

KARNATAKA STATE
ARCHIVES



FIRS. 15. APP. 1990

ಜೀವನ ಚರಿತ್ರೆ - ಕನ್ನಡ

ಶಾಲಾ ಪಠ್ಯಕ್ರಮ - 1302 ರಿಂದ ಮುಂದು

ವರಿಯಲಾಗಿದೆ.

ಸ್ಥಾಪನೆ : ೧೮೬೫ 150 ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ಸವ ಬೆಳ್ಳಿ ಮಹೋತ್ಸವ

ಪುಸ್ತಕ ಪ್ರದರ್ಶನ ೧೯೮೮



ಶತಮಾನೋತ್ಸವ ಬೆಳ್ಳಿ ಪಬ್ಬ

(ಎಪ್ಪತ್ತೊ೦ಭತ್ತನೆ ವರ್ಷ)

ಮಾರ್ಚ್ ೧೯೭೭

ಡಿ. ಚನ್ನಬಸಪ್ಪ ಜವಳಿ

(ಗುಜ್ಜಿ-ಬಿಳಲು)

ಸಂಪಾದಕರು

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತತಿಯ

ಸರಕಾರಿ ಉಪಾಧ್ಯಾಯರ ಪರಿಷತ್ತಿನ ಪ್ರಕಾಶನಾಲಯ

ದೇವ್ಲಾಪುರ ಚನ್ನಬಸಪ್ಪ ವೃತ್ತ, ರಾಮಪ್ಪನಹಳ್ಳಿ, ಘಾಟಪಾಡಿ

KANARESE
SCHOOL PAPER

ಪುಸ್ತಕ ೩೮] ಜಾನ್ಯೂಆರಿ ೧೯೦೨. [ಸಂಚಿಕೆ ೧.

ಅನುಕ್ರಮಣಿಕೆ.

	ಪುಟ.
ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು	
ಶಿಕ್ಷಾಕ್ರಮ	೧–೨
ಶಿಕ್ಷಕನ ಕೆಲಸವೂ ಕರ್ತವ್ಯವೂ	೩–೧೫
ನೋಟೀಸು ...	೧೫–೧೭
ಪತ್ರವ್ಯವಹಾರ	೧೮
ವರ್ಥಪ್ಯಾಯಿಜ ಪರೀಕ್ಷೆಯ ಪ್ರಶ್ನೆಗಳು ...	೧೮–೨೪

CONTENTS

1. Educational Intelligence and Useful Notes	1–7
2. Manual of method	7–15
3. Teacher's Work & Duty (Communicated)	15–17
4. Departmental Notice	18
5. Correspondence.	18–22
6. Question Paper Wurth Prize Examination	22–24

DHARWAR:
PRINTED AT THE KARNATIC BOOK DEPOT PRESS,
1902.

REGISTERED No. B 10

ಕನ್ನಡ ಶಾಲಾಪತ್ರಿಕೆಯ ವರ್ಗಣಿ ವರ್ಷಕ್ಕೆ ಮುಂಗಡ ರೂ ೮.
ಒಂದು ಸಂಚಿಕೆಗೆ ೨ ೯

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಪ್ಪೊ ಇಪ್ಪತ್ತಿ ೪ ಪಂಕ್ತಿಗಳವರೆಗೆ ೧ ರೂ.
ಮೂವರುವಾರೆ ಇಪ್ಪತ್ತರ ೬ ,, ೧ ರೂ
ಆರುವಾರೆ ಇಪ್ಪತ್ತಕ್ಕೆ ೪ ,, ೧ ರೂ.

ಸೂಚನೆಗಳು.

೧. ಶಾಸ್ತ್ರಾಪತ್ರಿಕೆಯ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ಪಿಜ್ಞೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿ ಹಾಸಲು ಬೀಳುವದು.
೩. ಭಾಷಾಂತರ ಮಾಡಿ ಛಾಪಿಸುವಹಾದರೆ ಮೇಲಿನ ದರದ ಮ್ಯಾಡಿ ಕೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.
೫. ಟೀಕೀಟು ಇಟ್ಟ ಕೊಳ್ಳು ಉತ್ತರ ಶಿಗಲಾರದು.

Raoji B. Karandikar
ಮ್ಯಾನೇಜರ ಕ. ಶಾಲಾಪತ್ರಿಕೆ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಜಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತವಿವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ ॥೧

ಪುಸ್ತಕ ೩೮] ಜಾನ್ಯೂಆರಿ ೧೯೦೨. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

विद्वान् सर्वत्र पूज्यते ॥

ನಾವು ಕಳೆದ ತಿಂಗಳ ಪತ್ರಿಕೆಯಲ್ಲಿ ಸೀನಿಯರ ರ್ಯಾಂಗ್ಲರ ಎಂಬ ಗೌರವದ ಬಿರುದನ್ನು ಪಡೆದ ಪ್ರೊಫೆಸರ ರಘುನಾಥ ಪುರುಷೋತ್ತಮ ಪರಾಂಜಪೇ ಎಂಬವರಿಗೆ ಕೆಂಬ್ರಿಜ್ ನಗರದ ವಿದ್ಯಾಪೀಠದವರು ಸೇಂಟ್‌ಜಾನ್ಸ್ ಕಾಲೇಜದ ಫೆಲೊಗಳನ್ನಾಗಿ ನೇಮಿಸಿದ್ದನ್ನು ಉಲ್ಲೇಖಿಸಿರುವದು ವಾಚಕರಿಗೆ ನೆನಪಿರಬಹುದು. ವರುಷಕ್ಕೆ ೭೦೦ ಪೌಂಡುಗಳು ಅಂದರೆ ಸುಮಾರು ೭೫೦೦ ರೂಪಾಯಿಗಳನ್ನು ಬಾಳುವ ಈ ಫೆಲೋಶಿಪ್ಪು ೩ ವರ್ಷ ನಡೆಯುವದು. ಈ ಅವಧಿಯಲ್ಲಿ ಗಣಿತ ವಿಷಯಕ್ಕೆ ವ್ಯಾಸಂಗವನ್ನು ಚನ್ನಾಗಿ ಸಾಗಿಸಿದರೆ ಈ ಫೆಲೋಶಿಪ್ಪು ಮುಂದೆ ೩ ವರ್ಷ ನಡೆಯುವದು. ಈವಿದ್ವಜ್ಜಣಿಗಳು ದಿಶಂಬರ ತಿಂಗಳ ೫ನೇ ತಾರೀಖಿನ ದಿವಸ ತಮ್ಮ ಜನ್ಮಭೂಮಿಯೊದ ಹಿಂದುಸ್ಥಾನಕ್ಕೆ ಬಂದಿರುವರು. ಬರುವ ಕಾಲವು ಮುಂಚಿತವಾಗಿಯೇ ಗೊತ್ತಿದ್ದದರಿಂದ ಮುಂಬಯಿ ಪಟ್ಟಣದೊಳಗಿನ ಜನರು ಹಿಂಡುಗಟ್ಟಿಕೊಂಡು ಕಡಲ ದಂಡೆಯಲ್ಲಿ ಹಡಗದ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದರು ಹಲಕೆಲವರು ಹಡಗದವರೆಗೆ ಹೋಗಿ ಕರಕೊಂಡು ಬರಬೇಕೆಂದು ಆತುರ ಪಟ್ಟರು. ಆದರೆ ಅಲ್ಲಿಯವರೆಗೆ ಯಾರನ್ನೂ ಹೋಗಗೊಡಲಿಲ್ಲ. ಡಾ. ಸರ ಭೂಲಚಂದ್ರ,

ನಾ. ಗೋಖಲೆ, ಮಿ. ವಾಚ್ಚಾ, ಪ್ರೊಫೆಸರ್ ಕರ್ವೆ ಮೊದಲಾದ ದೊಡ್ಡ ಜನರು ಮಾತ್ರ ಧಕ್ಕೆಯವರೆಗೆ ಹೋಗಿದ್ದರು. ರ್ಯಾಂಗ್ಲರರ ಮುಖವನ್ನು ನೋಡಿದ ಕೂಡಲೆ ಸಾವಿರಾರು ಜನರು ಚಪ್ಪಳಿಯನ್ನಿಕ್ಕುತ್ತ ಜಯಘೋಷವನ್ನು ಮಾಡಿದರು. ರಘುನಾಥರಾಯನು ಬಾಂಡ್ ಪೀಯರಿಯ ನೆರೆಯಲ್ಲಿರುವ ಭವ್ಯವಾದ ಮಂದಿರದಲ್ಲಿ ಪ್ರಮುಖ ಜನರೊಡನೆ ಪ್ರವೇಶಿಸಿ ಆಸನದ ಮೇಲೆ ಕೂತ ಬಳಿಕ ಡಾಕ್ಟರ ಸರ ಭಾಲಚಂದ್ರರವರು ಸ್ವಾಗತಪರವಾದ ಭಾಷಣವನ್ನು ಮಾಡಿದರು. ತಾವು ರ್ಯಾಂಗ್ಲರ ಪದವಿಯನ್ನು ಪಡೆದದ್ದರಿಂದ ನಮಗಿಂತೂ ಹೇಳಕೂಡದಷ್ಟು ಆನಂದವಾಗಿರುವದು ನಿಜವು. ಇದಲ್ಲದೆ ಹಿಂದೂ ಜನರು ಯೋಗ್ಯ ಅನುಕೂಲಗಳು ದೊರೆದರೆ ಬೇಕಾದಂಥ ಸಾಹಸದ ಕಾರ್ಯವನ್ನು ನಿತ್ತರಿಸಲಿಕ್ಕೆ ತಕ್ಕವರಿರುತ್ತಾರೆಂಬ ಸಂಗತಿಯು ಜಗಕೆಲ್ಲ ವಿಖ್ಯಾತವಾಯಿತು ಎಂದು ನುಡಿದು ರ್ಯಾಂಗ್ಲರೆರವರ ಕಂಠದಲ್ಲಿ ಪುಷ್ಪಮಾಲೆಯನ್ನು ಹಾಕಿದರು. ಕೈಯಲ್ಲಿ ಹೂವಿನ ಗಜರೆಗಳನ್ನು ಕಟ್ಟುವ ಹೊತ್ತಿನಲ್ಲಿ ಮಿ. ವಾಚ್ಚಾ ಇವರು "ಇವು ಬರೇ ಹೂವಿನ ಗಜರೆಗಳಲ್ಲ, ಶಾಸ್ತ್ರಗಳನ್ನು ಉತ್ಕರ್ಷಗೊಳಿಸಲಿಕ್ಕೆಂದು ಕಟ್ಟುವ ಜಯ ಕಂಕಣವೇ ದು" ನುಡಿದರು. ಬಳಿಕ ನ್ಯೂ ಹಾಯಸ್ಕೂಲ, ಎಲ್ಫಿನಸ್ಟನ್ ಹಾಯಸ್ಕೂಲ, ಮಿಶನ್‌ಸ್ಕೂಲ, ಗೋಕುಲದಾಸ ತೇಜಪಾಲ ಹಾಯಸ್ಕೂಲ ಮುಂತಾದ ಶಾಲೆಗಳ ಮುಂದಿಂದ ಊರೊಳಗೆ ಬಂದರು. ಆಯಾ ಶಾಲೆಗಳ ಗುರುಗಳು ತೋರಣ-ಪತಾಕೆಗಳಿಂದ ಶೃಂಗರಿಸಿಕೊಂಡು ವಿದ್ಯಾರ್ಥಿಗಳಿಂದೊಡಗೂಡಿ ಇವರನ್ನು ಸತ್ಕರಿಸಬೇಕೆಂದು ಶಾಲಾಗ್ರಹದ ಬಾಗಿಲಲ್ಲಿ ನಿಂತುಕೊಂಡಿದ್ದರು. ಎಲ್ಫಿನಸ್ಟನ್ ಹಾಯಸ್ಕೂಲ ಮುಂದೆ ಬರಲು, ಆ ಕಾಲೇಜದ ಪ್ರಿನ್ಸಿಪಾಲರು ತಮಗಾದ ಆನಂದವನ್ನು ವ್ಯಕ್ತಪಡಿಸಿದ್ದಲ್ಲದೆ "ನೀವು ಹಿಂದುಸ್ತಾನದೊಳಗಿನ ಒಂದು ಬೆಲೆಯುಳ್ಳ ರತ್ನವಾಗಿದ್ದೀರೆಂದು" ಆಡಿ ತೋರಿಸಿದರು.

ಮರುದಿವಸ ಬ್ರಾಹ್ಮಣಸಭೆಯಲ್ಲಿ ರ್ಯಾಂಗ್ಲರರವರ ಸತ್ಕಾರ ಸಮಾರಂಭವು ನಡೆಯಿತು. ಅಧ್ಯಕ್ಷರಾದ ಡಾಕರ್ಟ

ಸರ ಭಾಲಚಂದ್ರರು– ತಾವು ಗಣಿತ ಶಾಸ್ತ್ರದ ಅಭ್ಯಾಸವನ್ನು ಹೆಚ್ಚಿಸುತ್ತ ಮೊದಲೇ ಗೊತ್ತು ಮಾಡಿಟ್ಟುಕೊಂಡಂತೆ ಫರ್ಗ್ಯೂಸನ್ ಕಾಲೇಜದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತ ಸ್ವಾರ್ಥವನ್ನು ತ್ಯಜಿಸಿ ದೇಶೋನ್ನತಿಗಾಗಿ ಕಾಯುವನ್ನು ಸವಿಸುವ ಬಗೆಯನ್ನು ಸ್ವಜನರಿಗೆ ತೋರಿಸುತ್ತ ಕೇರೋ ಪಂತ, ಬಾಪೂಶಾಸ್ತ್ರಿ ಮೊದಲಾದ ಗಣಿತಶಾಸ್ತ್ರ ವಿಶಾರದರನ್ನು ಮರಿಸುತ್ತ ಬಹುಕಾಲ ಬಾಳಿರಿ; ಎಂಬ ಅರ್ಥದ ಭಾಷಣವನ್ನು ಮಾಡಿದರು. ಅದೇ ದಿವಸ ಗ್ರ್ಯಾಜೂಯಿಟ್ ಅಸೋಸಿಯೇಶನ್‌ದವರು ವಿದ್ಯಾಪೀಠದ ಭವ್ಯವಾದ ಮಂದಿರದಲ್ಲಿ ಬಂದು ಮಾನಪತ್ರವನ್ನು ಕೊಟ್ಟರು. ಈ ಸಭೆಗೆ ಪ್ರೊಫೆಸರರಾದ ರಾಜವಾಡೆ, ಭಾಟೆ, ಕಾಥವಟೆ, ಅಡವ್ಹೊಕೇಟ ಸೆಟ್ಲೂರ, ಶಾಮರಾವ ವಿಠ್ಠಲ, ಭಾಜೇಕರ, ಶೇಟ ನರೋತ್ತಮದಾಸ, ಡಾಕ್ಟರ ಜಠಾರ, ಮಿ ಚೇಂಬರ್ಸ ದಸ್ತೂರ ವಾಚ್ಚಾ ಮುಂತಾದ ಬಹು ಜನ ಪ್ರಮಿತರು ಕೂಡಿದ್ದರು. ನಾಮದಾರ ಮೋಥಾ ಸಾಹೇಬರು ಅಧ್ಯಕ್ಷರಾಗಿದ್ದರು. ಮಾನಪತ್ರವು ಬೆಳ್ಳಿಯ ಡಬ್ಬಿಯಲ್ಲಿ ಹಾಕಿ ಕೊಡಲ್ಪಟ್ಟಿತು. ಅದರೊಳಗಿನ ಆಶಯವು ಡಾಕ್ಟರ ಭಾಲಚಂದ್ರರವರ ಭಾಷಣದಂತೆ ಇತ್ತು- ಈ ಮಾನಪತ್ರ ಸ್ವೀಕರಿಸುವ ಸಮಯದಲ್ಲಿ ರಘುನಾಥರಾಯರು ನುಡಿದದ್ದೇನಂದರೆ–ಇಂಥಿಂಥಾ ಮಹಾ ಪುರುಷರಿಂದ ಹೊಗಳಿಸಿಕೊಳ್ಳುವಷ್ಟು ಯೋಗ್ಯತೆಯು ನನ್ನದಲ್ಲ. ಈ ಪದವಿಯನ್ನು ಪಡೆದ ಬಳಿಕ ನನ್ನ ತಲೆಯ ಮೇಲೆ ದೊಡ್ಡ ದೊಂದು ಮಹತ್ಕಾರ್ಯದ ಹೊರೆಯೇ ಬಂತೆಂದು ಎಣಿಸುತ್ತೇನೆ. ಅಗರೆ ಹಣದಿಂದಲೂ ಚೀರೆ ಬಗೆಯಿಂದಲೂ ಪ್ರೋತ್ಸಾಹನೆಯನ್ನು ಕೊಟ್ಟಂಥ ಹಿಂದುಸ್ತಾನ ಸರಕಾರವನ್ನೂ ಪ್ರೊ. ಕರ್ವೆ ಸಾಹೇಬರನ್ನೂ ಎಂದೂ ಮರೆಯೆನು. ಇ.

ಬಳಿಕ ಸಭಾ ವಿಸರ್ಜನವಾಯಿತು. ಈ ಸಭೆಗೆ ರಘುನಾಥರಾಯರು ಅಂಗಿ ರುಮಾಲ ಮುಂತಾದ ದೇಶೀ ವೇಷಾಕುಗಳಿಂದ ಬಂದಿದ್ದರು. ಇದೊಂದು ಲಕ್ಷದಲ್ಲಿಡತಕ್ಕ ಸಂಗತಿಯು.

ಹೋದ ತಿಂಗಳಲ್ಲಿ ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಯು ಮುಗಿಯಿತು. ಈ ಸಾರೆಯ ಪರೀಕ್ಷೆಗೆ ಧಾರವಾಡ ಜಿಲ್ಲೆಯಿಂದ ೧೧೩ ಮಂದಿ, ಬೆಳಗಾವಿ ಜಿಲ್ಲೆಯಿಂದ ೬೩ ಮಂದಿ, ವಿಜಾಪೂರ ಜಿಲ್ಲೆಯಿಂದ ೪೬ ಮಂದಿ, ಕಾರವಾರ ಜಿಲ್ಲೆಯಿಂದ ೧೫ ಮಂದಿ ವಿದ್ಯಾರ್ಥಿಗಳು ಬಂದಿದ್ದರು. ನಾಲ್ಕೂ ಜಿಲ್ಲೆಗೆ ಕೂಡಿ ಒಟ್ಟು ೨೩೬ ವಿದ್ಯಾರ್ಥಿಗಳನ್ನು ಸಂಬಳದೊಂದಿಗೆ ತಕ್ಕೊಳ್ಳುವರೆಂದು ಗೊತ್ತಾಗಿದೆ. ಇದಲ್ಲದೆ ಸಂಬಳಿಲ್ಲದ ೧೦-೧೫ ಮಂದಿ ವಿದ್ಯಾರ್ಥಿಗಳನ್ನು ತಕ್ಕೊಳ್ಳುವರು. ಒಟ್ಟು ಸುಮಾರು ನಾಲ್ವತ್ತು ಜನರು ಕಾಲೇಜದಲ್ಲಿ ಸೇರಿರುವರೆಂದು ತಿಳಿದದೆ. ಆದರೆ ಆಯಾ ಜಿಲ್ಲೆಯವರನ್ನು ಆಯಾ ಜಿಲ್ಲೆಗಾಗಿ ತಕ್ಕೊಳ್ಳುವದು ಲೇಸು. ಒಂದು ವೇಳೆ ಆಯಾ ಜಿಲ್ಲೆಯಲ್ಲಿ ಚಲೋ ವಿದ್ಯಾರ್ಥಿಗಳು ಸಿಗದಿದ್ದರೆ ಆಯಾ ಜಿಲ್ಲೆಗಳ ಗಡಿವಾಡದ ವಿದ್ಯಾರ್ಥಿಗಳನ್ನಾದರೂ ತಕ್ಕೊಳ್ಳಲಿಕ್ಕೆ ಅಡ್ಡಿಯಿಲ್ಲ ಒಟ್ಟಿನ ಮೇಲೆ ನಮ್ಮ ಮತವೇನಂದರೆ- ತಮತಮಗೆ ತಮತಮ್ಮ ಜಿಲ್ಲೆಯು ಹವೆ, ನೀರು, ಭಾಷೆ, ಪರಿಸ್ಥಿತಿ ಮುಂತಾದವುಗಳಿಂದ ಉತ್ತಮವೆಂತಲೂ ಬೇರೆ ಜಿಲ್ಲೆಯು ಅಷ್ಟು ಉತ್ತಮವಲ್ಲೆಂತಲೂ ಪ್ರತಿ ಒಬ್ಬನ ತಿಳುವಳಿಕೆಯುಂಟು. ವಾಸಸ್ಥಳವು ಒತ್ತಟ್ಟಿಗೆ, ಕೆಲಸ ಮಾಡುವದು ಬೇರೊಂದು ಕಡಿಗೆ ಇರುವದರಿಂದ ಕೆಲವು ಗೃಹಕೃತ್ಯಗಳ ಅನಾನುಕೂಲತೆಗಳು ಒದಗುವವು. ಹೀಗಾಗಿ ಕೆಲಸ ಮಾಡುವವನ ಮನಸ್ಸು ಅಡಕೊತ್ತಿನಲ್ಲಿ ಶಿಕ್ಕ ಅಡಿಕೆಯಂತೆ ಆಗುವದು. ಇನ್ನು ಎರಡನೇ ಬಗೆಯಿಂದ ವಿಚಾರಿಸಿದರೆ ಮೇಲಾಟದ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಮೇಲಿನ ನಂಬರವನ್ನು ದೊರಿಕಿಸಿದಂಥ ವಿದ್ಯಾರ್ಥಿಯನ್ನು ಬಿಟ್ಟು ಮಧ್ಯಮ ತರದ ಅಥವಾ ಕನಿಷ್ಠ ತರದ ಯೋಗ್ಯತೆಯ ವಿದ್ಯಾರ್ಥಿಯನ್ನು ತಕ್ಕೊಂಡರೆ ಪರೀಕ್ಷೆಯ ಉದ್ದೇಶಕ್ಕೂ ಸತ್‌ಶಿಕ್ಷಕರನ್ನುಂಟು ಮಾಡುವ ಕಾಲೇಜದ ಉದ್ದೇಶಕ್ಕೂ ಅತಂಕ ಬರುವದು ಇವೆರಡೂ ತೋದರೆಗಳನ್ನು ಸುಲಭವಾಗಿ ನೀಗಿ ಚಲೋ ವಿದ್ಯಾರ್ಥಿಗಳನು

ತಕ್ಕೊಳ್ಳುವ ಉಪಾಯಗಳನ್ನು ಕಾಲೇಜದ ಅಧಿಕಾರಿಗಳು ಕೈಕೊಳ್ಳುವರೆಂದು ನಂಬುತ್ತೇವೆ.

ಕಳೆದ ದಿಶಂಬರ ತಿಂಗಳಲ್ಲಿ ಫಿಮೇಲ ಟ್ರೇನಿಂಗ ಕ್ಲಾಸಿನ ಪ್ರವೇಶ ಪರೀಕ್ಷೆಯು ಆಯಿತು. ಒಟ್ಟಿಗೆ ೧೪ ಮಂದಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ ಬೆಳಗಾವಿ ಜೆಲ್ಲೆಯವರು ೩ ಮಂದಿ, ವಿಜಾಪೂರ ಜೆಲ್ಲೆಯವರು ೩ ಮಂದಿ, ಧಾರವಾಡ ಜೆಲ್ಲೆಯವರು ೮ ಮಂದಿ ಇರುವರು. ತೇರ್ಗಡೆ ಹೊಂದಿದ (೩) ಮಂದಿಯನ್ನು ವರ್ಗದಲ್ಲಿ ಶೇರಿಸಿಕೊಳ್ಳುವರೆಂದು ತಿಳಿದದೆ. ಗುಳೇದಗುಡ್ಡದಿಂದ ಬಂದ ಕ್ರಿಸ್ತಿಯನ್ ಹೆಣ್ಣುಮಕ್ಕಳಿಗೆ ಪಾದ್ರಿಯವರೇ ಆಶ್ರಯ ಕೊಡುವದಾಗಿ ತಿಳಿದದೆ. ಹಾಗಾದರೆ ಒಟ್ಟು ಹತ್ತರವರೆಗೆ ವಿದ್ಯಾರ್ಥಿನಿಯರಾಗುವರೆನ್ನಬಹುದು. ಈ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ೩ ಮಂದಿಗೆ ೭೦ ರೂಪಾಯಿದ ಸರ್ಟಿಫಿಕೇಟುಗಳೂ ಇಬ್ಬರಿಗೆ ೧೫ ರೂಪಾಯಿದ ಸರ್ಟಿಫಿಕೇಟುಗಳೂ ದೊರೆತಿರುವವು ಇವರು ತಮ್ಮ ನೇಮಕವಾದ ಸ್ಥಳಕ್ಕೆ ಹೋಗಿರುವರು. ಒಟ್ಟಿನ ಮೇಲೆ ಈ ಚಿಕ್ಕ ಸಂಸ್ಥೆಯು ಸಮಾಧಾನಕರವಾಗಿ ನಡೆದಿರುವದೆಂದು ಹೇಳಬಹುದು.

ಮುಂಗನಂಥ ಮನುಷ್ಯ.

ಜಾವಾ ನಡುಗಡ್ಡೆಯಲ್ಲಿ ಅರ್ನೆಸ್ಟ್‌ಹೇಕೆಲನೆಂಬವನೊಬ್ಬ ಶಾಸ್ತ್ರಜ್ಞನಿರುವನು. ಅವನಿಗೆ ಒಂದು ತರದ ಪ್ರಾಣಿಯು ದೊರೆತಿರುವದು. ಅದನ್ನು ಪೂರಾ ಮನುಷ್ಯರೊಳಗೂ ಪೂರಾ ಮುಂಗಗಳೊಳಗೂ ಎಣಿಸಲಿಕ್ಕೆ ಬರುವಂತಿಲ್ಲ. ಮುಂಗ ಮತ್ತು ಮನುಷ್ಯರ ಶಾರೀರಿಕ ಮಾನಸಿಕ ಸ್ಥಿತಿಗಳಲ್ಲಿ ಬಹಳ ವೈಲಕ್ಷಣ್ಯವುಂಟು. ಆದರೆ ಈ ದೊರೆತ ಪ್ರಾಣಿಯು ಮುಂಗನಿಗಿಂತ ಮನುಷ್ಯನನ್ನು ಹೆಚ್ಚಿಗೆ ಹೋಲುತ್ತದೆ. ಆದ್ದರಿಂದ ಇದು ಇವೆರಡು ಪ್ರಾಣಿಗಳ ಮಧ್ಯಸ್ಥಿತಿಯ ಪ್ರಾಣಿ ಇರಬಹುದೆಂದು ತರ್ಕಿಸುತ್ತಾರೆ. ಇದರ ತಲೆ ಸಣ್ಣದು, ಮುಖಮುದ್ರೆಯು ಜಾಣತನವನ್ನು ಸೂಚಿಸುವಂಥಾದ್ದು, ಕಾಲುಗಳು ಗಿಡ್ಡಾಗಿದ್ದು ಕೈಗಳು ಉದ್ದಾಗಿರುವವು.

ಮಂಗಗಳಂತೆ ನಾಲ್ಕೂ ಕಾಲುಗಳನ್ನು ಊರಿ ನಡೆಯದೆ ಮನುಷ್ಯರಂತೆ ನಡೆಯುವದು. ಇದು ಇವನ ಮನೆತುಂ ಬಾ ಮನಬಂದಂತೆ ಸುತ್ತಾಡುವದು; ದಣಿದ ಕೂಡಲೆ ಮನುಷ್ಯರಂತೆ ತೋಳನ್ನು ತಲೆಗಿಂಬಿಗಿಟ್ಟುಕೊಂಡು ಮಲ ಗುವದು; ತೆಂಗಿನ ಕಾಯಿಯನ್ನು ಒಡಿದು ಚಿಪ್ಪು ತೆಗೆದೊ ಗೆದು ಕೊಬ್ಬರೀ ತಿನ್ನುವದು; ಕಿತ್ತಳೇ ಹಣ್ಣನ್ನು ಸುಲಿದು ತಿನ್ನುವದು. ಮನುಷ್ಯರಂತೆ ತಾಲಿಯಿಂದ ನೀರು ಕುಡಿ ಯುವದು. ಇದರ ಬಾಯಿಂದ ಮೂರು ತರದ ಧ್ವನಿಗಳು ಮಾತ್ರ ಹೊರಡುವವು. ಆ ಧ್ವನಿಗಳಿಂದ ಆ ಮನೆಯ ಒಡೆ ಯನಿಗೆ ಈ ಪ್ರಾಣಿಯ ಮನೋಭಾವವು ಒಳಿತಾಗಿ ತಿಳಿ ಯುವದು. ಶಿಟ್ಟಿನ ಮೇಲಿಂದ ಇದು ಮನುಷ್ಯರನ್ನು ಹೆಚ್ಚಿ ಗೆ ಹೋಬುತ್ತದೆಂಬದು ನಿರ್ವಿವಾದವು. ಈ ಶಾಸ್ತ್ರಜ್ಞನು ಈ ಪ್ರಾಣಿಯ ಸಂಬಂಧದಿಂದ ಹೆಚ್ಚಿಗೆ ತಿಳುಕೊಳ್ಳಬೇಕೆಂ ದು ಪ್ರಯತ್ನಿಸುವನು. ತುಸು ದಿವಸಗಳಲ್ಲಿ ಇದರ ಸಂಬಂ ಧದ ಹಲವು ಸೋಜಿಗದ ಹೊಸ ಸಂಗತಿಗಳು ಬೈಲಿಗೆ ಬರು ವವೆಂದು ಆಶೆಯುಂಟು. ಇದಕ್ಕೆ ಅವನು ಹಿಲೋಬೆಟ್ಸಲು ಸಿಸ್ಕಸ್ ಎಂದು ಹೆಸರಿಟ್ಟಿದ್ದಾನೆ. ಆದರೆ ನಾವು ಇದಕ್ಕೆ ಮಂ ಗನಂಥ ಮನುಷ್ಯನೆಂದು ಕರೆಯುವಾ.

ಸರ ಚಾರ್ಲಸ ಡಾರ್ವಿನ್ನನೆಂಬ ಸೃಷ್ಟಿಶಾಸ್ತ್ರ ಶೋಧಕ ನು ಪ್ರಾಣಿಗಳ ಉತ್ಪತ್ತಿಯನ್ನು ವರ್ಣಿಸಿರುವದು ಹ್ಯಾಗೆಂ ದರೆ:---ಮೊದಲು ಜಲಚರಗಳು ಬಳಿಕ ಜಲಸ್ಥಳಚರಗಳು, ಆ ಮೇಲೆ ವನ್ಯ ಪಶುಗಳು. ಕಡೆಯಲ್ಲಿ ಮನುಷ್ಯನು. ಇದೇ ತತ್ವದಂತೆ ನಮ್ಮ ಜನರಲ್ಲಿಯು ಮತ್ಸ್ಯಕಚ್ಛಪಾದಿ ಅವತಾರಗಳ ಕಲ್ಪನೆಯು ಹುಟ್ಟಿರಬಹುದು. ಶರೀರರಚ ನೆಯಲ್ಲಿ ಶೀರ ಅಪೂರ್ಣತ್ವವನ್ನು ಪಡೆದ ತ್ರಿಪಾಲಿಕಾ ಮುಂ ತಾದ ಆರಂಭದ ಪ್ರಾಣಿಗಳಿಗಿಂತ ಮತ್ಸ್ಯಾದಿ ಪ್ರಾಣಿಗಳ ಶರೀರರಚನೆಯು ಪೂರ್ಣವಾಗಿರುವದು. ಇವುಗಳಿಗಿಂತ ಕ್ರಮವಾಗಿ ಡಾರ್ವಿನ್ನ ಸಾಹೇಬರು ವರ್ಣಿಸಿದ ಉತ್ಪತ್ತಿ ಕ್ರಮದ ಪ್ರಾಣಿಗಳ ಶರೀರರಚನೆಯು ಹೆಚ್ಚೆಚ್ಚು ಪೂರ್ಣ ತೆಯನ್ನು ಪಡೆಯುತ್ತಾ ಪಡೆಯುತ್ತಾ ಮನುಷ್ಯನೆಂಬ ಕಡೆ ಯ ಪ್ರಾಣಿಯು ಸಂಪೂರ್ಣವಾದ ಶರೀರರಚನೆಯನ್ನು ಪಡೆ

ದಿರುವನು. ಮನುಷ್ಯಶರೀರದ ರಚನೆಯನ್ನು ಹೋಲುವ ಮಂಗನಿಗೂ ಮನುಷ್ಯನಿಗೂ ನಡುವೆ ಕೆಲವು ಪ್ರಾಣಿಗಳಿರ ಬೇಕೆಂದು ಡಾರ್ವಿನ್ನನು ಆಕ್ಷೇಪಿಸುತ್ತಿದ್ದನು ಆದರೆ ಅಂ ಥ ಪ್ರಾಣಿಯು ಇದು ವರೆಗೆ ಶಿಕ್ಕಿದ್ದಿಲ್ಲ. ಈ ಪ್ರಾಣಿಯು ನಿಕ್ಕಂದಿನಿಂದ ಮಂಗ ಮತ್ತು ಮನುಷ್ಯರ ಮಧ್ಯವರ್ತಿ ಯಾದ ಪ್ರಾಣಿಮಾಲಿಕೆಯೊಳಗಿನದೊಂದು ಮಣಿಯು ಶಿಕ್ಕಂ ತಾಯಿತೆಂದು ಹೇಳಬಹುದು.

MANUAL OF METHOD.

ಶಿಕ್ಷಾಕ್ರಮ.

(೨೯೫ ನೇ ಪುಟದಿಂದ ಮುಂದೆ ಸಾಗಿದ್ದು.)

ಟೀಕಾಪಾಠದ ವಿಷಯಗಳು:— ಟೀಕಾಪಾಠಗಳಿಗಾಗಿ ವ ಸ್ತುಪಾಠಗಳನ್ನು ತೆಗೆದುಕೊಳ್ಳುವದೇ ಬಹಳ. ಯಾಕಂದ ರೆ ಈ ಪಾಠಗಳಲ್ಲಿ ಸಿದ್ಧತೆ, ಪ್ರಯೋಗ, ದೃಷ್ಟಾಂತ ಟೀಕಾ ಇವೇ ಮೊದಲಾದ ಯಾವತ್ತು ಅಂಗಗಳಿಗೆ ಅವಕಾಶ ದೊ ರೆಯುತ್ತದೆ. ಆದರೆ ಈ ವಿಕಾವಲಂಬನವು ಸರಿಯಲ್ಲ. ಟೀಕಾಪಾಠಗಳಲ್ಲಿ ಸಾಲೆಯಲ್ಲಿ ಎಲ್ಲ ವಿಷಯಗಳ ಸಮಾ ವೇಶವಾಗಲಿಕ್ಕೇಬೇಕು. ಅಂದರೆ ಯಾವತ್ತು ಇಯತ್ತೆಗ ಳ ಹಾಗೂ ವರ್ಗಗಳ ವಿಷಯಗಳು ಬರಲಿಕ್ಕೆಬೇಕು. ಯಾಕಂದರೆ ಹುಡುಗರ ಶಿಕ್ಷಣದಲ್ಲಿ ಈ ವಿಷಯಗಳೇ ಬಹ ಳ ಇರುತ್ತವೆ. ಮತ್ತು ಇವುಗಳನ್ನು ಕಲಿಸಲಿಕ್ಕೆ ಉಪ ಯೋಗಿಸಲ್ಪಡುವ ಪದ್ಧತಿಗಳು ಬಹಳ ಗೌರವದವಿರುತ್ತ ವೆ. ಯಾಕಂದರೆ ಆ ಪದ್ಧತಿಗಳು ಸುಪ್ಪದುಷ್ಟವಿದ್ದಂತೆ ವಿದ್ಯಾ ರ್ಥಿಗಳ ಕೋಮಲ ಮನಸ್ಸುಗಳು ವಿದ್ಯಾಸಂಪನ್ನವಿಹೀನ ವಾಗುವವು

ಟೀಕಾ:—ಇದಾದರೂ ವಿಕದೇಶಿಯವಿರಕೂಡದು. ಕೇ ವಲ ದೋಷಗಳನ್ನೇ ಬೈಲಿಗೆ ಹಾಕುವದು ಟೀಕೆಯ ಪ್ರ ಯೋಜನವಲ್ಲ. ದೋಷಗಳಂತೆ ಗುಣಗಳನ್ನಾದರೂ ವ್ಯಕ್ತ ಪಡಿಸಿ ಶ್ಲಾಘಿಸುವದು ಟೀಕಾಕಾರ್ಯವು. ಹೊಸ ಶಿಕ್ಷಕರಿ ಗೆ ಬಹುಶಃ ಟೀಕಾ ಮಾಡಗೊಡುವದು ಕಡಿಮೆ ಹಾಗೂ ಹೀಗೆ ಮಾಡುವದಕ್ಕೆ ಹಲವು ಯೋಗ್ಯ ಕಾರಣಗಳೂ ಇದು

ತ್ತವೆ. ಈ ಕಾರಣಗಳಲ್ಲಿ ಶಿಕ್ಷಕರ ಕೊರತೆಯೆನ್ನೂ ಅವರ ಮರ್ಯಾದಿತವಾದಂಥ ಅನುಭವವನ್ನೂ ಜ್ಞಾನವನ್ನೂ ಎಣಿಸಬಹುದು. ಆದರೆ ಸಾಧ್ಯವಾದ ಮಟ್ಟಿಗೆ ಹೆಚ್ಚು ಕಾಲ ಇದ್ದ ಪ್ಯೂಪಿಲ್ ಟೀಚರರಿಗೆ ಬೇರೆ ಹೊಸ ಶಿಕ್ಷಕರ ಶಿಕ್ಷಣದ ಮೇಲೆ ಟೀಕಾ ಮಾಡಗೊಡಬೇಕು. ಮತ್ತು ಅವರ ಟೀಕೆಯ ನಂತರ ಮುಖ್ಯ ಶಿಕ್ಷಕನು ಟೀಕಾ ಮಾಡಬೇಕು. ಹೀಗೆ ಮಾಡುವದರಿಂದ ಶಿಕ್ಷಣದ ಒಳ್ಳೇ ಕ್ರಮಗಳನ್ನು ಕಲಿಯುವದಕ್ಕೂ ಶಿಕ್ಷಣವು ನಡೆದಿರುವಾಗ್ಗೆ ಅದನ್ನು ಏಕಾಗ್ರಚಿತ್ತದಿಂದ ಪರೀಕ್ಷಿಸುವದಕ್ಕೂ ವಿಶೇಷ ಉತ್ತೇಜನ ದೊರೆಯುವದು. ಇದರಿಂದ ಶಿಕ್ಷಣವನ್ನು ರಚಿಸುವದಕ್ಕೂ ಪ್ರಥಕ್ಕರಣ ಮಾಡುವದಕ್ಕೂ ಕೂಡೇ ರೂಢಿಯಾಗುವದು. ಸದ್ಯಕ್ಕೆ ಟೀಕಾಪಾಠದಲ್ಲಿ ಬಹುತರವಾಗಿ ಪಾಠವನ್ನು ರಚನೆ ಮಾಡುವದರ ಕಡೆಗೇ ವಿಶೇಷ ಲಕ್ಷ್ಯ ಕೊಡಲ್ಪಡುತ್ತದೆ. ಆದರೆ ಮೇಲೆ ಹೇಳಿದಂತೆ ಟೀಕಾ ಮಾಡುವದರಿಂದ ಅದರ ಪ್ರಥಕ್ಕರಣ ಶಕ್ತಿಗೆ ಉತ್ತೇಜನ ಕೊಟ್ಟಂತೆ ಆಗುತ್ತದೆ. ಆದಕಾರಣ ಇಂಥ ಟೀಕೆಯನ್ನು ಮಾಡಗೊಡಬೇಕೆಂಬದಿಷ್ಟೇ ಅಲ್ಲ; ಅದಕ್ಕೆ ತಕ್ಕ ಉತ್ತೇಜನವನ್ನೂ ಕೊಡಬೇಕು.

ಟೀಕಾ ಮಾತುವದರಲ್ಲಿ ಲಕ್ಷಿಸತಕ್ಕಂಥ ಹಲವು ನಿಯಮಗಳಿರುತ್ತವೆ ಈ ವಿಷಯದಲ್ಲಿ ಇಲ್ಲಿ ಬಹಳ ನಿಯಮುಗಳನ್ನು ಹೇಳುವದರಿಂದ ಉಪಯೋಗವಿಲ್ಲ. ಯಾಕಂದರೆ ಅದರಿಂದ ಟೀಕಾ ಮಾಡುವದರಲ್ಲಿ ಗೊಂದಲವಾಗುವದಕ್ಕೂ ತಿಳುವಳಿಕೆ ಇಲ್ಲದೆ ಎಲ್ಲರೂ ಒಂದೇ ರೀತಿಯಿಂದ ಟೀಕಾ ಮಾಡುವದಕ್ಕೂ ಆಸ್ಪದವಾಗುವದು. ಈ ಪರಿಣಾಮಗಳು ಇಷ್ಟವಲ್ಲ ಸೂಕ್ಷ್ಮರೀತಿಯಿಂದಲೂ ಒಳ್ಳೇ ರೀತಿಯಿಂದಲೂ ಟೀಕಾ ಮಾಡುವ ಶಕ್ತಿಯು ಜ್ಞಾನವೂ ಅನುಭವವೂ ಬೆಳೆದ ಹಾಗೆ ತಾನೇ ಬೆಳೆಯುತ್ತ ಹೋಗುವದು. ಶಿಕ್ಷಕನಿಗೆ ತನ್ನ ಟೀಕೆಯನ್ನು ಬರಬರುತ್ತಾ ತಕ್ಕ ಪ್ರಮಾಣದಿಂದ ಬೆಳಿಸಲಿಕ್ಕೆ ಬರುವದು; ಆದರೆ ಮೊದಲು ಅವನು ಪಾಠಗಳ ಮುಖ್ಯ ಭಾಗಗಳನ್ನಷ್ಟೇ ಲಕ್ಷಿಸಿ, ಸುಲಭ ರೀತಿಯಿಂದ ಟೀಕೆ ಮಾಡಬೇಕು ಗುಣಗಳನ್ನು ಹೊಗಳಬೇಕು. ದೋಷಗಳನ್ನು ತಿಳ್ವಬೇಕು ಆದರೆ ಟೀಕೆಯಲ್ಲಿ

ಅವಶ್ಯವಾದ ಈ ಎರಡು ಸಂಗತಿಗಳಲ್ಲದೆ ನನಪಿಡತಕ್ಕಂಥ ಹಾಗೂ ಅದರಂತೆ ವರ್ತಿಸತಕ್ಕಂಥ ಇನ್ನೂ ಹಲವು ಸಂಗತಿಗಳಿರುವವು ಅವು ಯಾವವೆಂದರೆ :—

೧ ಟೀಕೆಯಲ್ಲಿ ತಪ್ಪುಗಳನ್ನು ಹೊರಗೆಡಹಿದಂತೆ ಆವುಗಳನ್ನು ನೀಗುವ ಬಗೆಗಳನ್ನಾದರೂ ಹೇಳಲಿಕ್ಕೆಬೇಕು. ಕೆಡಹುವ ಗುಣವಿದ್ದಂತೆ ಕಟ್ಟುವ ಗುಣವಾದರೂ ಇರಲಿಕ್ಕೆಬೇಕು. ಅಂದರೆ ಯಾವದೊಂದು ಶಿಕ್ಷಣಕ್ರಮವನ್ನು ಹಳಿದಿದ್ದರೆ, ಅದಕ್ಕೂ ಬಲೋ ಶಿಕ್ಷಣಕ್ರಮವನ್ನು ಸೂಚಿಸಲಿಕ್ಕೆಬೇಕು.

೨. ಶ್ಲಾಘನೆಯು ಸಯುಕ್ತಿಕವಾಗಿರಬೇಕು. ಮತ್ತು ಅದರ ಕಾರಣಗಳನ್ನು ಹೇಳಬೇಕು.

೩ ಟೀಕೆಯು ಸಂಕ್ಷಿಪ್ತವೂ ಮಾರ್ಮಿಕವೂ ಇರಬೇಕು. ಟೀಕಾಪಾಠದ ಪ್ರತಿಯೊಂದು ಅಂಗಗಳನ್ನು ಎಡೆಬಿಡದೆ ಟೀಕಿಸುವದು ಅವಶ್ಯವಿಲ್ಲ. ಪಾಠದೊಳಗಿನ ಗುಣದೋಷಗಳನ್ನೇ ಲಕ್ಷಿಸತಕ್ಕಂಥ ಸಂಗತಿಗಳಾಗಿರುತ್ತವೆ.

೪. ಟೀಕಾ ಮಾಡುವಾಗ ಸಹಾಯಕ್ಕಾಗಿ ಯಾವದಾದರೊಂದು ಟೀಕೆಯ ನಮೂನೆಯನ್ನು ಯಾವಾಗಲೂ ಉಪಯೋಗಿಸಬೇಕು ಇಂಥಾದ್ದೇ ಒಂದು ನಮೂನೆಯನ್ನು ಹಿಂಬಾಲಿಸಬೇಕೆಂಬ ನಿರ್ಬಂಧವಿಲ್ಲ. ಶಿಕ್ಷಣದ ಸಂಬಂಧದಿಂದ ನೋಡಿದರೆ ಈ ವಿಷಯದಲ್ಲಿ ಯಾವದಾದರೂ ಪುಸ್ತಕದೊಳಗಿಂದ ತೆಗೆದುಕೊಂಡ ನಮೂನೆಗಿಂತಲೂ ಶಿಕ್ಷಕನು ತಾನೇ ತಯಾರ ಮಾಡಿದ ನಮೂನೆಯು ಹೆಚ್ಚು ಬೆಲೆಯುಳ್ಳದ್ದಿರುವದು. ಯಾಕಂದರೆ ಪುಸ್ತಕದೊಳಗಿನ ನಮೂನೆಯು ಒಂದೇ ತರದ್ದಿರುವದರಿಂದ ಅದು ಎಲ್ಲ ಪಾಠಗಳಿಗೆ ತಕ್ಕದ್ದಾಗಿರಲಾರದು; ಪಾಠದ ಮೇಲಿಂದ ನಮೂನೆಯನ್ನು ತಯಾರಿಸತಕ್ಕದ್ದೇ ಹೊರ್ತು ನಮೂನೆಯಿಂತೆ ಪಾಠವನ್ನು ತಯಾರಿಸತಕ್ಕದ್ದಿರುವದಿಲ್ಲ. ಹಾಗೂ ಟೀಕೆಯು ಯಾವದಾದರೂ ಒಂದೇ ನಮೂನೆಯನ್ನು ತೆಗೆದುಕೊಂಡರೆ ಬಹುತರವಾಗಿ ಅದರಂತೆಯೇ ಪಾಠಗಳನ್ನು ರಚಿಸುವ ಸ್ರವೃತಿಯಾಗುತ್ತದೆ. ಮತ್ತೊಂದೇನೆಂದರೆ ಟೀಕೆಯು

ನಮೂನೆಯಲ್ಲಿ ಕಿರುಕುಳ ಸಂಗತಿಗಳನ್ನು ಮಿತಿಮೀರಿ ಸೇರಿಸಬಾರದು. ಯಾಕಂದರೆ ಅದರಿಂದ ಟೀಕಾ ಮಾಡುವಾಗ ಕೈ ಕಟ್ಟಿದಂತಾಗಿ ಏನೂ ಸ್ವತಂತ್ರ್ಯ ಉಳಿಯುವದಿಲ್ಲ. ಕೆಳಗೆ ಟೀಕೆಯ ಬಂದು ನಮೂನೆಯನ್ನು ಕೊಟ್ಟಿದ್ದೇವೆ. ಈ ನಮೂನೆಯು ಬೇರಾದ ಪಾಠಗಳಿಗೆ ಉಪಯೋಗಿಸುತ್ತದೆಂದು ತಿಳಿಯಬಾರದು. ಪ್ಯುಪಿಲ್ ಟೀಚರನು ಅಥವಾ ಹೊಸ ಶಿಕ್ಷಕನು ತಕ್ಕ ನಮೂನೆಯನ್ನು ತಾನೇ ಯಾವ ಪ್ರಕಾರ ಮಾಡಿಕೊಳ್ಳಬೇಕೆಂಬದನ್ನು ತೋರಿಸುವದಕ್ಕಾಗಿ ಮಾತ್ರವೇ ಇದನ್ನು ಕೊಟ್ಟಿದ್ದೇವೆ.

ಸಂಖ್ಯೆ	ಪಾಠದವಿಷಯ ಇತ್ಯಾದಿ	ಹೇಳತಕ್ಕ ಸಂಗತಿಗಳು.	ಕ್ರಮ.
೧	ವಿಷಯ		
೨	ವರ್ಗ ಅಥವಾ ಹುಡುಗರು	ಸರಾಸರಿ ವಯಸ್ಸು ಮಾಸ	
೩	ವೇಳೆ		
೪	ಉಪಕರಣ		

ಸಂಖ್ಯೆ	ಶಿಕ್ಷಕನ ವಿಷಯದಲ್ಲಿ	ಸಂಖ್ಯೆ	ವರ್ಗದ ವಿಷಯದಲ್ಲಿ
೧	ರೀತಿ	೧	ಲಕ್ಷ್ಯ
	(ಅ) ಧ್ವನಿ	೨	ಉತ್ಸಾಹ
	(ಬ) ಅಭಿನಯ	೩	ತಿದ್ದುವಿಕೆ ಅಥವಾ ಓರಣ
	(ಕ) ಕೂಡ್ರುವ ಅಥವಾ ನಿಲ್ಲತಕ್ಕ ಸ್ಥಳ	೪	ಬುದ್ಧಿ ಸಂಸ್ಕಾರ
	( ) ಸ್ವಭಾವ		
೨	ಭಾಷೆ		
೩	ಪ್ರಶ್ನೆಗಳು		
೪	ಸಾರಾಂಶ ಅಥವಾ ಉಪಸಂಹಾರ		
೫	ಪ್ರಯೋಗಗಳೂ ದೃಷ್ಟಾಂತಗಳೂ		
೬	ಕರೇ ಹಲಿಗೆ		

೫ ನೇ ಅಧ್ಯಾಯ.

ವರ್ಗಶಿಕ್ಷಣ.

ಹುಡುಗರನ್ನು ಕ್ರಮಗೊಳಿಸಿ ತಕ್ಕ ವರ್ಗಗಳಲ್ಲಿ ಸೇರಿಸಿ ಶಾಲೆಯನ್ನು ವ್ಯವಸ್ಥಿತವಾಗಿ ನಡಿಸಲಿಕ್ಕೂ ವಿದ್ಯಾರ್ಥಿಗಳ ಶಿಕ್ಷಣವನ್ನು ಸಾಧಿಸಲಿಕ್ಕೂ ಶಿಕ್ಷಕನು ತಕ್ಕವನಾಗಿರಲಿಕ್ಕೆ ಬೇಕೆಂಬದಕ್ಕೆ ಸಂದೇಹವಿಲ್ಲ. ಈ ಕೆಲಸಗಳು ಸರಿಯಾಗಿ ಆಗಬೇಕಾದರೆ ಮೊದಲು ಮಾಸ್ತರನಲ್ಲಿಯೇ ಯಾವತ್ತು ಅವಶ್ಯವಾದ ಶಾರೀರಿಕ, ಮಾನಸಿಕ, ನೈತಿಕ ಗುಣಗಳು ಇರಲಿಕ್ಕೆಬೇಕು. ಆ ಗುಣಗಳ ನಿರ್ದೇಶವನ್ನು ಈ ಕೆಳಗೆ ಮಾಡಿರುತ್ತೇವೆ.

(೫) ಮಾನಸಿಕ ಗುಣಗಳು :—ಶಿಕ್ಷಕನು ಬಹು ಶ್ರುತನಿರಬೇಕು. ವರ್ಗಕ್ಕೆ ಕಲಿಸುವ ಯಾವತ್ತು ವಿಷಯಗಳ ಪೂರ್ಣ ಜ್ಞಾನವುಳ್ಳವನಿರಬೇಕು. ಒಂದು ವೇಳೆ ಪೂರ್ಣ ಜ್ಞಾನವಿಲ್ಲದಿದ್ದರೂ ತಕ್ಕಮಟ್ಟಿಗೆ ಪೂರ್ಣವಾದಂಥ ಜ್ಞಾನ ನಾದರೂ ಇರಲಿಕ್ಕೆಬೇಕು. ತಾನು ಕಲಿಸುವ ಸಂಗತಿಗಳನ್ನು ನಿಸ್ಸಂದಿಗ್ಧವಾಗಿಯೂ ಅಚ್ಚುಕಟ್ಟಾಗಿಯೂ ಹೇಳಲಿಕ್ಕೆ ಬರುವಂತೆ ಪಾಠಗಳನ್ನು ಯಾವಾಗಲೂ ಎಚ್ಚರದಿಂದಲೂ ನಿರಾಲಸ್ಯದಿಂದಲೂ ನೋಡಿಕೊಳ್ಳುತ್ತಿರಬೇಕು. ವಿದ್ಯಾಭ್ಯಾಸಂಗವನ್ನು ಯಾವಾಗಲೂ ನಡಿಸಿ, ತನ್ನ ಮನಸ್ಸಿನ ಸುಸಂಸ್ಕಾರಣೆಯನ್ನು ಸಾಧಿಸುವ ಶಿಕ್ಷಕನೇ ವಿವಿಧವಿದ್ಯಾರ್ಥಿಗಳ ಸಮೂಹದ ತೊಂದರೆಗಳನ್ನು ಮುಂಗಂಡು ಬಗೆಬಗೆಯ ಹಂಚಿಕೆ ಉಪಾಯಗಳಿಂದ ಅವುಗಳನ್ನು ಪರಿಹರಿಸಲಿಕ್ಕೂ ವಿದ್ಯಾರ್ಥಿಗಳ ಲಕ್ಷವನ್ನು ಎಳಕೊಳ್ಳಲಿಕ್ಕೂ ಪ್ರೀತಿಯನ್ನು ಸಂಪಾದಿಸಲಿಕ್ಕೂ ಶಿಕ್ಷಣದ ಕೆಲಸದಲ್ಲಿ ಯಶವನ್ನು ಪಡೆಯಲಿಕ್ಕೂ ಸಮರ್ಥನಾಗುವನು. ಅವನ ಭಾಷೆಯು ದುರ್ಬೋಧವೂ ಕ್ಲಿಷ್ಟವೂ ಇರಬಾರದು. ಆದರೆ ಬಾಲಬೋಧವೂ ಸಹಜವೂ ಆಗಿ ಇರಬೇಕು. ಅವನಲ್ಲಿ ಡಾಂಭಿಕತನ ದುರಭಿಮಾನಗಳ ಗಂಧವಾದರೂ ಇರಕೂಡದು. ತನ್ನ ಜಾಣ್ಮೆಯನ್ನು ಎಂದಿಗೂ ಮೆರೆಸಕೂಡದು. ತನಗಿಂತ ಬಲ್ಲವರ ಕೂಡ ಸ್ನೇಹವನ್ನು ಬಳಿಸಬೇಕು. ಅವರ ಸಹ

ಪಾಸದಿಂದ ಇವನಿಗೆ ಬಗೆಬಗೆಯ ಪ್ರಯೋಜನಗಳುಂಟು. ಮುಖ್ಯವಾಗಿ ಪಾಂಡಿತ್ಯದ ಮದವು ಮೊಳೆದೋರದು. ಶಿಕ್ಷಕನಲ್ಲಿ ವಿಷಯವರ್ಣನ ನೈಪುಣ್ಯವು ಬೇಕು. ಈ ಸಾಮರ್ಥ್ಯವನ್ನು ಮನಃಪೂರ್ವಕವಾಗಿ ಸಂಪಾದಿಸಲಿಕ್ಕೆ ಯತ್ನಿಸಬೇಕು. ವಿದ್ಯಾದಾನದ ಹೋರೆಯಲ್ಲಿ ಮಿಕ್ಕ ಹೋರೆಗಳಂತೆ ದಿನದಿನಕ್ಕೆ ಸುಧಾರಣೆಯಾಗುವದು ನಿಜವು, ಆದದರಿಂದ ಶಿಕ್ಷಕನು ತನ್ನ ಹಳೆ ಪದ್ಧತಿಯನ್ನು ಇಟ್ಟುಕೊಂಡು ಕೂಡುವದು ಸರಿಯಲ್ಲ. ಅವುಗಳಲ್ಲಿ ದೇಶಕಾಲಾದಿ ಪರಿಸ್ಥಿತಿಗಳನ್ನು ಅನುಲಕ್ಷಿಸಿ ತಕ್ಕ ವಿಪರ್ಯಾಯಗಳನ್ನು ಮಾಡಿಕೊಳ್ಳುವದು ಅವಶ್ಯವು. ಆದ ಕಾರಣ ತನ್ನ ಅವಲೋಕನಾಭ್ಯಾಸಗಳನ್ನು ಶಿಕ್ಷಕನು ಸಾಗಿಸಬೇಕು

(೩) ನೈತಿಕ ಗುಣಗಳು :—ಶೀಲಸ್ವಭಾವಗಳು ನಿರ್ದುಷ್ಟವಾಗಿರಬೇಕು. ಶಿಕ್ಷಕರ ಆಚಾರವಿಚಾರಗಳನ್ನು ಜನರು ಸೂಕ್ಷ್ಮರೀತಿಯಿಂದ ವಿಚಾರಿಸುವರು. ವಿದ್ಯಾರ್ಥಿಗಳಂತೂ ಕಣ್ಣಿಟ್ಟು ನೋಡಿ ಅವರ ಅನುಕರಣವನ್ನು ಮಾಡಲಿಕ್ಕೆ ಹವಣಿಸುವರು ಆದದ್ದರಿಂದ ಶಿಕ್ಷಕನು ತನ್ನ ಚಿತ್ತಸಮತೆಯನ್ನು ಕಾಯ್ದುಕೊಂಡು ವಿದ್ಯಾರ್ಥಿಗಳೊಡನೆ ಯಾವಾಗಲೂ ಉಲ್ಲಾಸವೃತ್ತಿಯಿಂದ ನಡಕೊಳ್ಳಬೇಕು. ಶೀಘ್ರಕೋಪಿಯೂ, ನಿಷ್ಠುರನೂ, ಕಠಿಣಚಿತ್ತನೂ, ಉಗ್ರಸ್ವಭಾವದವನೂ ಆದ ಶಿಕ್ಷಕನ ಮುಖವನ್ನು ನೋಡುವಂಥ ಶಬ್ದವನ್ನು ಕೇಳುವಂಥ ವಿದ್ಯಾರ್ಥಿಗಳು ದುರ್ಗುಣದ ಆಗರದಲ್ಲಿಯೇ ಇರುತ್ತಾರೆಂದು ಒಬ್ಬ ಕವಿಯು ಹೇಳುತ್ತಾನೆ. ಈ ಮಾತು ಸಟೆಯಲ್ಲ. ಉಲ್ಲಾಸವೃತ್ತಿಯು ಶಿಕ್ಷಕನಲ್ಲಿರತಕ್ಕ ಪ್ರಥಮ ಗುಣವು. ಕರ್ತವ್ಯಕ್ಕೂ ಉಲ್ಲಾಸವೃತ್ತಿಗೂ ಸಹಚರ್ಯದ ಯೋಗವನ್ನು ಹುಟ್ಟಿಸುವ ಶಿಕ್ಷಕನು ವಿದ್ಯಾರ್ಥಿಗಳಿಗೆ ಅತಿ ಗೌರವದ ಪಾತ್ರವನ್ನು ಕಲಿಸುವನೆಂಬದಕ್ಕೆ ಸಂಶಯವಿಲ್ಲ. ಇಂಥ ಶಿಕ್ಷಕನ ಕೈಯಲ್ಲಿರುವ ಹುಡುಗರು ಕೆಲಸಕ್ಕೆ ಮೂಗು ಮುರಿಯದೆ ಅದನ್ನು ಆನಂದದಿಂದ ಕೈಕೊಳ್ಳಬಹುದು. ಸಹಾನುಭೂತಿಯು ಶಿಕ್ಷಕನಲ್ಲಿರತಕ್ಕ ಎರಡನೆಯ ಗುಣವು ವಿದ್ಯಾರ್ಥಿಗಳ ಸೌಖ್ಯದಿಂದ ಹಿಗ್ಗುವದೂ ದುಃಖವನ್ನು ಕಂಡು ಮರಗುವದೂ ದುಃಖವನ್ನು ಪರಿ

ಹರಿಸಲಿಕ್ಕೂ ಸುಖವನ್ನು ಬೆಳಿಸಲಿಕ್ಕೂ ತ್ರಿಕರಣಪೂರ್ವಕವಾಗಿ ಯತ್ನಿಸುವದೂ ಇವೇ ಮೊದಲಾದ ಕಾರ್ಯೋತ್ಪಾದಕ ಗುಣಕ್ಕೆ ಸಹಾನುಭೂತಿ ಅಥವಾ ಪ್ರೇಮವೆಂಬ ಹೆಸರು. ಈ ಗುಣವು ಬಹಳ ಪ್ರಯೋಜನಕರವಾದದ್ದು. ಶಿಕ್ಷಕನಲ್ಲಿ ಈ ಗುಣವಿದ್ದರೆ ವಿದ್ಯಾರ್ಥಿಗಳಲ್ಲಿಯೂ ಈ ಗುಣವು ಹುಟ್ಟುತ್ತದೆ. ಈ ಗುಣದಿಂದ ಮಾಸ್ತರನಿಗೆ ಮಾನವೂ ಮರ್ಯಾದೆಯೂ ದೊರಕುವದಲ್ಲದೆ ಸಾಲೆಯಲ್ಲಿ ಸುಖದ ತೌರವನೆಯಾಗಿ ಒಪ್ಪುತ್ತದೆ. ಉಲ್ಹಾಸವೃತ್ತಿಗೂ ಸಹಾನುಭೂತಿ ಅಥವಾ ಪ್ರೇಮಕ್ಕೂ ಒಳ್ಳೇ ನಡತೆ ನಡಾವಳಿಗಳ ಜೋಡಿರಲಿಕ್ಕೆಬೇಕು. ಈ ಜೋಡನ್ನು ಸಾಧಿಸಲಿಕ್ಕೆ ಮಾಸ್ತರನ ನಡತೆನಡಾವಳಿಗಳು ನಿರ್ದುಷ್ಟವಾಗಿರಲಿಕ್ಕೆಬೇಕೆಂಬದು ಸಹಜವು ಇದಲ್ಲದೆ ವಿದ್ಯಾರ್ಥಿಗಳ ನಡತೆನಡಾವಳಿಗಳನ್ನು ಹುಟ್ಟಿಸಲಿಕ್ಕೂ ಅವುಗಳನ್ನು ಆಗ್ರಹಪೂರ್ವಕವಾಗಿ ತೆಳಿಸಿ ತಿದ್ದಲಿಕ್ಕೂ ಶಿಕ್ಷಕನು ಯಾವಾಗಲೂ ಯತ್ನಿಸತಕ್ಕದ್ದು. ಒಳ್ಳೇ ನಡತೆನಡಾವಳಿಗಳು ಬಾಹ್ಯೋಪಾಯುಗಳಿಂದ ಸಾಧಿಸುವದು ದುಃಸಾಧ್ಯವು ಅಸಾಧ್ಯವೆಂದರೂ ಸಲ್ಲುವದು. ಕೆಲವು ತತ್ವಗಳ ಅನುರೋಧದಿಂದ ಅಂತರೋಪಾಯುಗಳನ್ನು ತಕ್ಕೊಂಡರೆ ಇದು ಸುಸಾಧ್ಯವು ಆ ತತ್ವಗಳು ಯಾವವೆಂದರೆ :— ೧ ಸಹಚರ್ಯ, ೨ ರೂಢಿ, ೩ ನಿಕಾಗ್ರತಾ, ೪ ಪೋಷಣ.

ವಿದ್ಯಾರ್ಥಿಗಳು ಮಾಡುವ ಕಾರ್ಯಗಳೆಲ್ಲ ಪ್ರವೃತ್ತಿಫಲಗಳಾಗಿರುತ್ತವೆ. ಒಳ್ಳೇ ಪ್ರವೃತ್ತಿಗಳಿಂದ ಒಳ್ಳೇ ಕಾರ್ಯಗಳು ಘಟಿಸುತ್ತವೆ. ಕೆಟ್ಟ ಪ್ರವೃತ್ತಿಗಳಿಂದ ಕೆಟ್ಟ ಕಾರ್ಯಗಳು ಘಟಿಸುತ್ತವೆ. ಶಿಕ್ಷಕನು ತನ್ನ ಸ್ವಂತ ಆಚರಣದಿಂದಲೂ, ಉಪದೇಶದಿಂದಲೂ, ನಿಗ್ರಹಾನುಗ್ರಹದಿಂದಲೂ ವಿದ್ಯಾರ್ಥಿಗಳಲ್ಲಿರುವ ದುಷ್ಟ ಪ್ರವೃತ್ತಿಗಳನ್ನು ಮುರಿಬಡಿದು ಸತ್ಪ್ರವೃತ್ತಿಗಳನ್ನು ಬಲಿಸಬೇಕು.

(ಹ) ಶಾರೀರ ಗುಣಗಳು :—ಶಿಕ್ಷಕನು ಕೆಲವು ಆಟಗಳಲ್ಲಿ ಕನಿಷ್ಠ ಪಕ್ಷಕ್ಕೆ ಒಂದಾದರೂ ಶಾರೀರಶ್ರಮದ ಆಟದಲ್ಲಿ ನಿಪುಣನಾಗಿರಬೇಕು ಆ ಆಟಗಳನ್ನು ವಿದ್ಯಾರ್ಥಿಗಳಿಂದ ಆಡಿಸಿ ತಾನು ಅವರ ಕೂಡ ಆಡಿ ತನ್ನ ಶರೀರಸಂವರ್ಧನ

ವನ್ನು ಮಾಡಿಕೊಳ್ಳುವದಲ್ಲದೆ ಅವರ ಶರೀರಸಂವರ್ಧನವ
ನ್ನಾದರೂ ಮಾಡಬೇಕು. ಆಟದ ಸ್ಥಳದಲ್ಲಿ ವಿದ್ಯಾರ್ಥಿಗಳ
ನೈಸರ್ಗಿಕ ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ.
ಅವುಗಳನ್ನು ಸಕಾಲದಲ್ಲಿ ಯಥೋಚಿತವಾಗಿ ತಿದ್ದಲಿಕ್ಕೆಬೇ
ಕು. ಅದಕ್ಕಾಗಿ ಮಾಸ್ತರನ ಕಣ್ಣು ಕಿವಿಗಳು ತೀಕ್ಷ್ಣವಾ
ಗಿರಬೇಕು. ನಡೆದ ಸಂಗತಿಗಳಲ್ಲಿ ಬಂದು ಸಹ ಅವನನ್ನು
ಮೀರಿ ಉಳಿಯಕೂಡದು. ಅವನ ಧ್ವನಿಯು ಕರ್ಣಕಟು
ವಾಗುವಷ್ಟು ಗಟ್ಟಿಯಾಗಿರಬಾರದು ಕೇಳಿಸದಷ್ಟು ಸಣ್ಣ
ಗಿಯೂ ಇರಬಾರದು. ಆದರೆ ತಕ್ಕಷ್ಟು ಗಟ್ಟಿಯಾಗಿಯೂ
ಮನೋಹರವಾಗಿಯೂ ಅಧಿಕಾರಯುಕ್ತವಾಗಿಯೂ ಇರ
ಬೇಕು. ಕೆಲ ಶಿಕ್ಷಕರು ವರ್ಗದಲ್ಲಿ ವ್ಯವಸ್ಥೆಯನ್ನು ಕಾ
ಯ್ದುಕೊಳ್ಳುವದಕ್ಕಾಗಿ ಧ್ವನಿಯ ಉಪಯೋಗವನ್ನು ಮೇ
ಲಿಂದಮೇಲೆ ಮಾಡುತ್ತಾರೆ. ಇದು ಸರಿಯಲ್ಲ. ಗದ್ದಲ
ಮಾಡುವ ಶಿಕ್ಷಕನ ವರ್ಗದಲ್ಲಿ ಗದ್ದಲವು ತಪ್ಪದು. ವ್ಯವ
ಸ್ಥೆಗಾಗಿ ಕಣ್ಣು ಕೈಗಳೇ ಪ್ರಧಾನ ಸಾಧನಗಳು, ಧ್ವನಿಯು
ಗೌಣಸಾಧನವಾಗಿದೆ. ಇದನ್ನು ಮರೆಯಕೂಡದು. ಶಿಕ್ಷ
ಕನು ತನ್ನ ಕೆಲಸವನ್ನು ಆಸ್ಥೆಯಿಂದಲೂ ಉತ್ಸಾಹದಿಂದ
ಲೂ ಸಾಗಿಸಬೇಕಾಗುವದು ಅದಕ್ಕೆ ಶಾರೀರಬಲವು ಅವ
ಶ್ಯವು. ಈ ಶಾರೀರಬಲವನ್ನು ಸಾಧಿಸಲಿಕ್ಕೆ ಅನುಕೂಲ
ವಾದ ಗುಣಪ್ರವೃತ್ತಿಗಳನ್ನು ಅನುಲಕ್ಷಿಸಿ ಅವುಗಳನ್ನು ಕೈ
ಕೊಂಡು ವಿದ್ಯಾರ್ಥಿಗಳು ಶಾರೀರಬಲವನ್ನಾದರೂ ಸಾಧಿಸ
ಬೇಕು ಅಂದರೆ ಅದರಿಂದ ಸುಖವೂ ಕೀರ್ತಿಯೂ ಪ್ರಾಪ್ತ
ವಾಗುವದು.

ರೋಜನಿಶಿ :— ಪ್ರತಿ ಒಬ್ಬ ಹೊಸ ಶಿಕ್ಷಕನು ರೋಜನಿಶಿ
ಯನ್ನು ಇಡುವದು ವಿಹಿತವು. ವರ್ತಕರಿಗೆ ಕೀರ್ದಿಯಿಂದ
ಆಗುವ ಪ್ರಯೋಜನವೇ ಶಿಕ್ಷಕನಿಗೆ ಇದರಿಂದಾಗುವದು.
ಇದರಲ್ಲಿ ಶಿಕ್ಷಕನು ಕಲಿಸುವ ಪ್ರತಿ ಬಂದು ವಿಷಯವನ್ನು
ವಿದ್ಯಾರ್ಥಿಗಳಿಗೆ ನೇಮಿಸಿಕೊಟ್ಟ ಪ್ರತಿ ಬಂದು ದಿನದ ಪಾಠ
ವನ್ನು ಕಾಣಿಸಲಿಕ್ಕೆಬೇಕು. ಇದಲ್ಲದೆ ಇದರಲ್ಲಿ ತನ್ನ ಸಂ
ಬಂಧದಿಂದ ಮುಖ್ಯ ಶಿಕ್ಷಕನ ಅಭಿಪ್ರಾಯಗಳನ್ನೂ ಪರೀಕ್ಷೆ
ಯ ಪರಿಣಾಮಗಳನ್ನೂ ನಮೂದಿಸಿಡಬೇಕು.

ಈ ರೋಜನಿಶಿಯಿಂದ ತನ್ನ ಕೆಲಸದ ಗುಣದೋಷಗಳು ನಾಸ್ತರನಿಗೆ ಕಂಡುಬರುವವಲ್ಲದೆ ಯಶಾಪಯಶದ ಕಾರಣಗಳಾದರೂ ಗೋಚರವಾಗುವವು. ಅಸ್ಥಿ ಉತ್ಸಾಹಗಳ ಬೆಳವಣಿಗೆಗೂ ಸ್ವಾಭಿಮಾನಾಭಿವೃದ್ಧಿಗೂ ಸಹಾಯವಾಗುವದು. ಇದರಿಂದ ಸ್ವಾವಲಂಬನವೂ ಮುಂಜಾಗ್ರತೆಯೂ ಪರಿಣಾಮವೂ ಬಲಗೊಂಡು ಹಿಡಿದ ಕೆಲಸದ ಪೂರ್ಣತ್ವಕ್ಕೂ ಸಿದ್ಧಿಗೂ ಅನುಕೂಲಿಸುವದು

ಪಾಠದ ಟಿಪ್ಪಣಿಗಳ ಚರ್ಚೆಗಳನ್ನು ನಮೂದ ಮಾಡಲಿಕ್ಕೆ ಮತ್ತೊಂದು ಪುಸ್ತಕ ಮಾಡಬೇಕು. ಈ ಪುಸ್ತಕವನ್ನು ಕಾದಿಡಬೇಕಾದುದರಿಂದ ಇದರ ರಟ್ಟಾದರೂ ಗಟ್ಟಿಯಾಗಿರಬೇಕು. ಈ ಪುಸ್ತಕದಲ್ಲಿ ಕೆಳಗೆ ತೋರಿಸಿದಂತೆ ಮನೆಗಳನ್ನು ಮಾಡಿ ಅದರಲ್ಲಿ ಆಯಾ ಸಂಗತಿಗಳನ್ನು ಸಮಾವೇಶ ಮಾಡಬೇಕು. ಹ್ಯಾಗಂದರೆ :—

ತಾರೀಖು.	ಸಿದ್ಧತೆ	ಮುಖ್ಯ ಶಿಕ್ಷಕರು ಕೊಟ್ಟ ಗುಣಗಳೂ ಅಭಿಪ್ರಾಯಗಳೂ.	ಟಿಪ್ಪಣಿ ಪಾಠದ ವಿಷಯ.	ಟೀಕೆಯು.	ಪರೀಕ್ಷೆಯೂ ಪರಿಣಾಮವೂ.

TEACHER'S WORK & DUTY (*Communicated*)

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(೨೪೪ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಪ್ರಕಾರ ಶಿಕ್ಷಕನ ಕೆಲಸವು ನಿಜವಾಗಿ ಪವಿತ್ರವಾದದ್ದೂ, ಗೌರವವುಳ್ಳದ್ದೂ ಇದ್ದು, ಈಗಿನ ಕಾಲದಲ್ಲಿ ಅದಕ್ಕೆ ಮಹತ್ವ ದೊರೆಯದ್ದನ್ನು ನೋಡಿದರೆ ಆಶ್ಚರ್ಯವಾಗುವದು. ಆದರೆ ಈಗಿನ ಜನರಲ್ಲಿರುವ ನಿಜವಾದ ವಿದ್ಯಾಭಿರುಚಿಯನ್ನೂ, ಈಗಿನ ಸಾಮಾನ್ಯ ಗುರುಗಳ ಯೋಗ್ಯತೆಯನ್ನೂ ಪರಿಶೋಧಿಸಿದರೆ ಈ ಆಶ್ಚರ್ಯವು ಕೆಲಮಟ್ಟಿಗಾದರೂ ಭ್ರಾಮ

ಕವಾಗಿ ತೋರದೆ ಹೋಗದು. ಪ್ರಾಚೀನ ಕಾಲದಲ್ಲಿ ಕೇವಲ ಜ್ಞಾನಸಂಪಾದನೆಗಾಗಿ ತನುಮನಧನ ಪ್ರಾಣಗಳನ್ನು ಅರ್ಪಿಸಿ ವಿದ್ಯಾಭ್ಯಾಸವನ್ನು ಕೈಕೊಳ್ಳುವವರು ಬಹು ಜನರು ದೊರೆಯುತ್ತಿದ್ದರು. ವಿದ್ಯಾರ್ಜನೆಯಲ್ಲಿ ಎಷ್ಟು ವಿಘ್ನಗಳೊದಗಿದರೂ ಅವರು ತಮ್ಮ ಕರ್ತವ್ಯವನ್ನು ಬಿಡುತ್ತಿದ್ದಿಲ್ಲ. ಈ ಪ್ರಕಾರ ಕಷ್ಟಾರ್ಜಿತವಾದ ವಿದ್ಯೆಯು ಅವರ ಸೊತ್ತು ಆದ್ದರಿಂದ ಅದನ್ನು ಅವರು ಜಾಗ್ರತೆಯಾಗಿ ಕಾಯ್ದುಕೊಂಡು, ಮುಂದೆ ತಮ್ಮ ಸ್ವಂತ ಉದ್ಯೋಗದಿಂದ ಅದನ್ನು ವೃದ್ಧಿಗೊಳಿಸಿ ಜಗತ್ತಿನ ಕಲ್ಯಾಣಕ್ಕೆ ಕಾರಣಗಳಾದ ಹಲವು ಕೃತಿಗಳನ್ನು ಮಾಡಿದರು. ತಮ್ಮ ಜ್ಞಾನಾರ್ಜನೆಗೆ ಜ್ಞಾನ ಜನ್ಯ ಆನಂದವೇ ಪ್ರತಿಫಲವೆಂದು ಅವರು ಎಣಿಸಿದ್ದರಿಂದ ದ್ರವ್ಯಲೋಭ ಮೊದಲಾದ ವಿಘ್ನಗಳಿಗೆ ಒಳಗಾಗದೆ ನಿಷ್ಕಾಮದಿಂದ ಅವರು ತಮ್ಮ ಜ್ಞಾನವನ್ನು ಬೆಳಿಸಿದರು ಇದಕ್ಕೆ ಈ ದೇಶದಲ್ಲಿಯೂ, ಪರದೇಶದಲ್ಲಿಯೂ ಹಲವು ಉದಾಹರಣೆಗಳು ದೊರೆಯಬಹುದು ಕೃಷ್ಣನಂಥ ವಿಭವಶಾಲಿಯಾದ ಅರಸನು ಕಟ್ಟಿಗೆ ಹೊರೆ ಹೊತ್ತು ಸಾಂದೀಪನೆಂಬ ಬ್ರಾಹ್ಮಣನ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿದನು ದೇವಗುರುವಾದ ಬೃಹಸ್ಪತಿಯ ಸುಗ ಕಚನು ತನ್ನ ವೈರಿಗಳಾದ ದೈತ್ಯರ ಬಾಧೆಗಳನ್ನು ಎಣಿಸದೆ, ದೈತ್ಯಗುರುವಾದ ಶುಕ್ರಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿದನು ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದ ಮಹಾತ್ಮರು ಜ್ಞಾನಸಂಪಾದನೆಗಾಗಿ ಕಷ್ಟತರವಾದ ಬ್ರಹ್ಮಚರ್ಯ ಸನ್ಯಾಸಾಶ್ರಮಗಳನ್ನು ಸ್ವೀಕರಿಸಿದರು. ಈ ಪ್ರಕಾರ ಜ್ಞಾನಸಂಪಾದನೆಗಾಗಿ ಹಲವು ಕಷ್ಟಗಳನ್ನು ಅನುಭವಿಸಿದವರ ಉದಾಹರಣೆಗಳು ನಮ್ಮ ಪುರಾಣೇತಿಹಾಸಗಳಲ್ಲಿ ಹಲವು ದೊರೆಯುವವು. ಯಾವದೊಂದು ರಾಷ್ಟ್ರವು ಜ್ಞಾನಸಂಪನ್ನವಾಗಹತ್ತಿತೆಂದರೆ ಅದಕ್ಕೆ ವಿದ್ಯಾಭಿರುಚಿಯು ಉತ್ಪನ್ನವಾಗಿ ಆ ರಾಷ್ಟ್ರವು ಸಾವಿರಾರು ತೊಂದರೆಗಳನ್ನು ಬದಿಗೊತ್ತಿ ತನ್ನ ಕೋರಿಕೆಗಳನ್ನು ನೆರವೇರಿಸಿಕೊಳ್ಳುತ್ತದೆ. ಈ ಸ್ಥಿತಿಯು ನಮ್ಮ ಪ್ರಾಚೀನ ಆರ್ಯರ ಕಾಲದಲ್ಲಿ ಇದ್ದದ್ದರಿಂದ ಅವರು ಮೇಲೆ ಹೇಳಿದಂತೆ ವಿದ್ಯಾರ್ಜನೆಗಾಗಿ ಯತ್ನಿಸಿದರು. ಈ ನಿಯ

ಮತ್ತು ಸಾರ್ವತ್ರಿಕವಾದ್ದರಿಂದ ಬೇರೆ ದೇಶಗಳಲ್ಲಾದರೂ ಇಂಥ ಉದಾಹರಣೆಗಳು ದೊರೆಯುವವು. ಗ್ರೀಸ ದೇಶದ ಅರಸನಾದ ಪ್ರಸಿದ್ಧ ಶಿಕಂದರಬಾದಶಹನ ಗುರು ಅರಿಸ್ತಾತ ಲನೆಂಬ ತತ್ವಜ್ಞಾನಿಯು ಹಿಂದಕ್ಕೆ ಆಗಿಹೋದನು. ಆತನು ವಿದ್ಯಾಭ್ಯಾಸ ಮಾಡುವದಕ್ಕಾಗಿ ತನ್ನ ಊರಬಿಟ್ಟು ಎಷ್ಟೋ ಹರದಾರಿ ದೂರ ಇರುವ ಅಥೇನ್ಸ ಪಟ್ಟಣಕ್ಕೆ ಹೋಗಿ ಪ್ಲೇಟೋನ ವಿದ್ಯಾಲಯದಲ್ಲಿ ನಿಂತನು. ಭೂಮಿತಿ ಶಾಸ್ತ್ರಪ್ರವರ್ತಕನಾದ ಯುಕ್ಲೀಡನು ಮೈಗಾರಾ ಪ್ರಾಂತದಲ್ಲಿರುತ್ತಿದ್ದನು ಈ ಪ್ರಾಂತದವರಿಗೂ ಅಥೇನಿಯನ್ ಜನರಿಗೂ ದ್ವೇಷವಿದ್ದದ್ದರಿಂದ ಬಂದು ಸಂಸ್ಥಾನದೊಳಗಿನ ಮನುಷ್ಯರು ಎರಡನೆಯ ಸಂಸ್ಥಾನದಲ್ಲಿ ಹೋದರೆ ಅವನನ್ನು ಕೊಲ್ಲುವ ನಿಯಮವಿತ್ತು. ಆದರೆ ಇಂಥ ಭಯಂಕರ ಪ್ರಸಂಗದಲ್ಲಾದರೂ ಯುಕ್ಲೀಡನು ತನ್ನ ಗುರುವಾದ ಸಾಕ್ರೇತೀಸನ ಬಳಿಗೆ ರಾತ್ರಿಯು ಸ್ತ್ರೀವೇಷದಿಂದ ಹೋಗಿ ವಿದ್ಯಾಭ್ಯಾಸ ಮಾಡಿ ಬೆಳಗಾಗುವದರೊಳಗೆ ಬರುತ್ತಿದ್ದನು. ಈ ಪ್ರಕಾರದ ಉದಾಹರಣೆಗಳು ರೋಮನ್ನ ಜನರೆಲ್ಲಾದರೂ ಹಲವು ದೊರೆಯುವವು ಈ ಜನರ ಶಸರೊ ಎಂಬ ವಿಖ್ಯಾತ ವಕ್ತಾರನು ಕೇವಲ ಗ್ರೀಕ ವಿದ್ಯೆಗಳನ್ನು ಕಲಿಯುವದಕ್ಕಾಗಿ ಹನ್ನೆರಡು ವರ್ಷ ಗ್ರೀಸ ದೇಶದಲ್ಲಿ ನಿಂತಿದ್ದನು. ರೋಮನ್ನ ಜನರ ಪ್ರಜಾಸತ್ತಾತ್ಮಕ ರಾಜ್ಯದ ಅತ್ಯಂತ ಅಭಿಮಾನಿಯಾದ ಕೇಟೋ ಎಂಬವನು ಮುದುಕನಾಗುವವರೆಗೆ ಗ್ರೀಕ ವಿದ್ಯೆಗಳನ್ನೂ, ಸುಧಾರಣೆಗಳನ್ನೂ ತಿರಸ್ಕರಿಸುತ್ತಿದ್ದನು. ಆದರೆ ಕಡೆಯಲ್ಲಿ ಅವನ ಈ ವಿಚಿತ್ರವಾದ ಹಟಮಾರಿತನವು ಹೋಗಿ ಅರವತ್ತು ವರ್ಷದ ವಯಸ್ಸಿನಲ್ಲಿ ಗ್ರೀಕ ವಿದ್ಯೆಯ ಅಭಿರುಚಿಯು ಅವನಲ್ಲಿ ಉತ್ಪನ್ನವಾಯಿತು. ಇದೇ ಪ್ರಕಾರ ಬೇರೆ ಬೇರೆ ರಾಷ್ಟ್ರಗಳ ಉದಾಹರಣೆಗಳು ದೊರೆಯಬಹುದು ಸಾರಾಂಶ ಪ್ರಾಚೀನ ಕಾಲದ ಜನರು ವಿದ್ಯಾಭಿರುಚಿಯಲ್ಲಿ ಇತರ ಸುಖೋಪಭೋಗದ ಅಭಿರುಚಿಯನ್ನು ಬಹುತರ ಮರೆತುಬಿಡುತ್ತಿದ್ದರು.

(ಸಶೇಷ).

DEPARTMENTAL NOTICE.
ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ—ಮಿ. ಎಲ್ ಜಯೆರಾವ ಮುಕ್ಕಾಮು ಮೈಸೂರ ಇವರು ರಚಿಸಿದ "ಅಲ್ಲಾಉದ್ದೀನ್ ಮತ್ತು ಅದ್ಭುತದೀಪ" ಎಂಬ ಪುಸ್ತಕವನ್ನು ಮೆ. ಡಾಯರೆಕ್ಟರ ಸಾಹೇಬ ಬಹದ್ದೂರವರು ಶಾಲೆಗಳ ಲಾಯಬ್ರರಿಗಾಗಿ ಮಂಜೂರ ಮಾಡಿದ್ದಾರೆ.

ಧಾರೂಾಡ ಟ್ರೇ. ಕಾಲೇಜ. } S. K. Rodda,
ತಾ॥ ೯ - ೧೨ - ೧೯೦೧ } ಪ್ರಿನ್ಸಿಪಾಲ.

CORRESPONDENCE.
ಪತ್ರವ್ಯವಹಾರ.

ಸವಣೂರ ಸಂಸ್ಥಾನದೊಳಗಿನ ನಾಯಿಕೆರೂರಿಂದ ಬಂದ ಪತ್ರದ ಸಾರಾಂಶವು ಕೆಳಗೆ ಬರದಂತೆ—ಈ ಊರ ಗಾವಠಿ ಶಾಲೆಗೆ ಹೂವಿನಸಿಗ್ಗಲಿಯ ಕುಲಕರ್ಣಿಯೂ ಧಾರವಾಡ ಕಲೆಕ್ಟರ ಕಚೇರಿಯ ಕ್ಲಾರ್ಕರೂ ಆದ ರಾ. ತಮ್ಮಾಜಿ ಶ್ರೀನಿವಾಸ ಕುಲಕರ್ಣಿಯೆಂಬವರು ಊರೊಳಗಿನ ನಾಲ್ಕು ಮಂದಿ ಸಭ್ಯಗೃಹಸ್ಥರಿಂದೊಡಗೂಡಿ ಹಿಂದು ಹುಡುಗರನ್ನು ಪರೀಕ್ಷಿಸಿ ವ್ಹಿ. ಬುಕ್ಕಿನಲ್ಲಿ ಉತ್ತಮವಾದ ಅಭಿಪ್ರಾಯವನ್ನು ಬರೆದಿರುವದಾಗಿ ತಿಳಿಯುತ್ತದೆ. ಮುಖ್ಯವಾಗಿ ರೈತರಿಗೆಲ್ಲ ಓದಬರಹವು ಬರಬೇಕೆಂದು ಸರಕಾರದವರ ಪ್ರಧಾನ ಉದ್ದೇಶವುಂಟು. ಈ ಉದ್ದೇಶವು ಕೈಗೂಡಲಿಕ್ಕೆ ಗಾವಠಿ ಶಾಲೆಗಳಾದರೂ ಮೇಲಾದ ಸಾಧನಗಳಾಗಿರುವವು. ಆದರೆ ಈ ಶಾಲೆಗಳು ಚನ್ನಾಗಿ ನಡೆದರೆ ಒಳ್ಳೇ ಪರಿಣಾಮ ವಾಗಬಹುದು ಈ ಶಾಲೆಯು ನೆಟ್ಟಗೆ ನಡೆದಿರುವದನ್ನು ಕೇಳಿ ನಮಗೆ ಸಮಾಧಾನವಾಗುತ್ತದೆ.

II

ರಾವ ಸಾ॥ ಕನ್ನಡ ಶಾಲಾಪತ್ರಕದ ಎಡಿಟರ ಪ್ರಾಂತ ದಕ್ಷಿಣಭಾಗ ಧೊರೆಗಳ ಸನ್ನಿಧಾನಕ್ಕೆ.

ವಿ. ವಿ. ಕೆಳಗೆ ಬರೆದ ಸಂಗತಿಗಳನ್ನು ತಮ್ಮ ಸುಂದರ

ವಾದ ಮಾಸಿಕ ಪುಸ್ತಕದಲ್ಲಿ ಮುದ್ರಿಸಿ ಪ್ರಕಟ ಮಾಡುವಿ ರೆಂದು ಆಶಿಸುತ್ತೇವೆ.

ವಿಜಾಪೂರ ಜಿಲ್ಲೆಯೊಳಗಿನ ಮುದ್ದೇಬಿಹಾಳ ತಾಲೂಕ ಕನ್ನಡ ಶಾಲೆಯ ವಾರ್ಷಿಕ ಪರೀಕ್ಷೆಯು ತಾ॥ ೧೦।೧೧।೧೯೦೧ ಇಸವಿಯ ದಿವಸ ಮುಗಿದು ಇದರ ಸಂಬಂಧದಿಂದ ಬಹ್ಮೀಸ ಕೊಡುವ ಸಮಾರಂಭವು ತಾ॥ ೧೯।೧೧।೧೯೦೧ ಇಸವಿಯ ದಿವಸವಾಯಿತು. ಈ ಸಮಾರಂಭಕ್ಕೆ ರಾವ ಸಾ॥ ಡಿ. ಎ ಇ. ಅಂಕಲೆಯವರೂ ಅ. ಡಿ. ಯವರಾದ ಆನೆ ಖಿಂಡಿಯವರೂ ಮುದ್ದೇಬಿಹಾಳ ತಾ॥ ದ ರಾವ ಸಾ॥ ಸಬ್ ಜಜ್ಜರೂ ಮಾಮಲೇದಾರರೂ ಶಿರಸ್ತೇದಾರರೂ ಯಾವತ್ತು ವಕೀಲರೂ ಶ್ರೀಮಂತ ಬಸರಕೋಡ ಸರ ನಾಡಗೌಡರೂ ಊರೊಳಗಿನ ಶ್ರೇಷ್ಠ ಸಾವಕಾರರೂ ಸಭ್ಯ ಗೃಹಸ್ಥರೂ ಬಂದಿದ್ದರು. ಸಮಾರಂಭ ಸಭೆಯ ಅಧ್ಯಕ್ಷಸ್ಥಾನವನ್ನು ರಾವ ಸಾ॥ ಹನುಮಂತರಾವ ದಾತಾರ ಮಾಮಲೇದಾರರು ಸ್ವೀಕರಿಸಿದ್ದರು.

ಇಲ್ಲಿ ಮೊದಲು ಗೊತ್ತು ಮಾಡಿದ ಪ್ರಕಾರ ಗಂಡು ಹುಡುಗರ ಡ್ರಿಲ್, ತಾಲೀಮು, ಚಿಕ್ಕ ಮಕ್ಕಳ ಸಂಗೀತ ಕವಾಯಿತು, ಗಂಡು ಹುಡುಗರು ರಾಗದ ಕಿಟ್ಟಗೆಯ ಸಂಗಡ ಪದಗಳನ್ನು ಹಾಡುವದೂ ಹೆಣ್ಣುಮಕ್ಕಳು ಪದಗಳನ್ನು ಅನ್ನುವದೂ ಮತ್ತು ಸದರಿ ಶಾಲೆಯ ೧ನೆಯ ಅ॥ ಮಾಸ್ತರರಾದ ಭಗವಾನ ವಾಸುದೇವ ಮುರಾತೆ ಇವರು ಕೆಲವು ಶಾಸ್ತ್ರೀ ವಿಷಯದ ಪ್ರಯೋಗಗಳನ್ನು ಪ್ರೇಕ್ಷಕರಿಗೆ ನೋಡಬೇಕೆಂ ಬ ಕುತೂಹಲ ಹೆಚ್ಚಾಗುವಂತೆ ಮಾಡಿ ತೋರಿಸುವದೂ ಮುಗಿದ ನಂತರ ಇಲ್ಲಿಯ ಹೆಡ್‌ಮಾಸ್ತರರಾದ ಗೋವಿಂದ ಮಹಾದೇವ ಜೋಸಿ ಇವರು ಈ ಶಾಲೆಯ ಸ್ಥಿತಿಯನ್ನು ಕುರಿತು ಬರೆದ ನಿಬಂಧವನ್ನು ಓದಿದರು. ಅದರಲ್ಲಿ "ಈ ಶಾಲೆಯು ಸ್ಥಾಪಿಸಲ್ಪಟ್ಟು ೫೫ ವರ್ಷಗಳಾದವು. ಮೊದಲು ಇದು ಸಾಧಾರಣ ಸ್ಥಿತಿಯಲ್ಲಿತ್ತು. ಆದರೆ ರಾ. ರಾ. ರಾಣೂ ದೇವಜಿ ಮೋರೆ ಇವರು ಬಂದ ಬಳಿಕ ಹುಡುಗರ ಸಂಖ್ಯೆ ೬೦೫ ರ ವರೆಗೆ ಬೆಳೆದು ಅಭ್ಯಾಸ ಚನ್ನಾಗಿ ಸಾಗೆ ಹತ್ತಿತು. ಸದ್ಯಕ್ಕೆ ಈ ಶಾಲೆಯಲ್ಲಿ ೩೦೦ ಹುಡುಗರು ಇದು

ಕ್ತಾರೆ. ಅವರಲ್ಲಿ ೫೦ ಹೆಣ್ಣುಮಕ್ಕಳಿದ್ದಾರೆ. ಹೆಣ್ಣುಮಕ್ಕಳಿಗೆ ಕೂಡ್ರಲಿಕ್ಕೆ ಪ್ರತ್ಯೇಕ ಮರ್ಯಾದಿತ ಸ್ಥಳ ಬೇಕಾಗಿದ್ದು ಅದನ್ನು ಕಟ್ಟಿಸಿ ಕೊಡುವ ಬಗ್ಗೆ ರಾವ ಸಾ॥ ಸಬ್‌ಜಜ್ಜರು ಪ್ರಯತ್ನ ನಡಿಸಿದ್ದಾರೆ ಅದಕ್ಕೆ ಇಲ್ಲಿಯ ಸದ್ಗೃಹಸ್ಥರು ಸಹಾಯ ಮಾಡಬೇಕೆಂತಲೂ ಈ ಜಿಲ್ಲೆಗೆ ಹೊಸದಾಗಿ ವರ್ಗಾಗಿ ಬಂದ ಉಭಯ ಡಿಪುಟಿಯವರು ಸಣ್ಣ ಹುಡುಗರ ನೀತಿಯನ್ನೂ ಬುದ್ಧಿಯನ್ನೂ ನಡೆನುಡಿಗಳನ್ನೂ ತಿದ್ದುವಲ್ಲಿ ಯೋಜಿಸಿದ ಉಪಾಯಗಳು ಸ್ತುತ್ಯವಾದವುಗಳೆಂತಲೂ ' ಬರೆದಿತ್ತು. ತರುವಾಯ ಕೆಲವು ಸಭ್ಯಗೃಹಸ್ಥರು ಸ್ತ್ರೀಶಿಕ್ಷಣವು ಅವಶ್ಯಕವಾಗಿರುವದೆಂದು ಸ್ಥಾಪಿಸಿದರು. ಅವರಲ್ಲಿ ಕೆಲವರ ಸಂಭಾಷಣವನ್ನು ಕಳಗೆ ಕೊಟ್ಟಿದ್ದೇವೆ.

ರಾ. ರಾ. ಜೇ. ಕೇ. ಹರಕಾರೆ—ಸುಖವು ಎಲ್ಲರಿಗೂ ಬೇಕು. ಸುಖವು ಬೇಕಾದರೆ ಸರ್ವಾನುಕೂಲವಾದ ಸಂಸಾರ ವಿರಬೇಕು. ಇಂಥ ಸಂಸಾರವಿರಬೇಕಾದಲ್ಲಿ ಗಂಡಹೆಂಡರಿಬ್ಬರು ವಿದ್ಯಾವಿಶಾರದರಿರಲಿಕ್ಕೆ ಬೇಕು. ಆದರೆ ಸಂಸಾರರಥದೆರಡು ಗಾಲಿಗಳಾದ ಸ್ತ್ರೀಪುರುಷರಿಬ್ಬರಲ್ಲಿ ಪುರುಷನೆಂಬ ಗಾಲಿಯು ವಿದ್ಯಾಪೂರ್ಣತೆಯೆಂಬ ಗಟ್ಟಿ ನೆಲದ ಮೇಲೆ ಸಾಗಿ ಸ್ತ್ರೀಯೆಂಬ ಎರಡನೆಯ ಗಾಲಿಯು ಅವಿದ್ಯಾವಯವ ರೂಪವಾದ ಪಂಕದಲ್ಲಿ ಸಿಗಬೀಳಲು ಆ ರಥವು ಹೇಗೆ ಸಾಗುವದು? ಈ ಕೊರತೆಯನ್ನು ವಿದ್ಯಾಮಯ ದಿವಾಕರನಿಂದ ದೂರ ಮಾಡಬೇಕೆಂದು ರಾ. ರಾ. ಹೆಡ್‌ಮಾಸ್ತರರು ಆಲೋಚಿಸಿ ಇಲ್ಲಿ ಗರ್ಲ್‌ಸ್ಕೂಲವನ್ನು ಸ್ಥಾಪಿಸಿದ್ದಾರೆ ಅದಕ್ಕೆ ಎಲ್ಲರೂ ಯಾವ ತರದ ಸಂಶಯಗಳನ್ನು ಮನಸ್ಸಿನಲ್ಲಿ ತಾರದೆ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಬೇಕು.

ಮ ರಾ ರಾ. ವೆಂಕಟರಾವ ಗೋಕ ವಕೀಲ — ಈಗಿನ ಮಾಸ್ತರರು ಇಲ್ಲಿಗೆ ಬಂದು ೭।೮ ತಿಂಗಳುಗಳಾದವು. ಈ ಸ್ವಲ್ಪ ಅವಧಿಯಲ್ಲಿ ೫೦ ಗಂಡು ಹುಡುಗರ ಸಂಖ್ಯೆ ಹೆಚ್ಚಿಸಿ ೫೦ ಹೆಣುಮಕ್ಕಳ ಕ್ಲಾಸ ಸ್ಥಾಪಿಸಿದ್ದಲ್ಲದೆ ೭।೮ ತಿಂಗಳಲ್ಲಿ ೧೪ ಹೆಣ್ಣುಮಕ್ಕಳ ೧ನೆಯ ಇಯತ್ತೆಯಂತೆ ಅಭ್ಯಾಸ ಮುಗಿಸಿದ್ದನ್ನೂ ಶಾಲೆಯ ಸ್ಥಿತಿ ಊರ್ಜಿತಾವಸ್ಥೆಯಲ್ಲಿ ತಂದದ್ದ

ನ್ನೂ ವಿದ್ಯಾಭಿವೃದ್ಧಿಗೆ ಉತ್ತೇಜನ ಕೊಡುವ ಡಿಪುಟಿಯವರು ಈ ಜಿಲ್ಲೆಗೆ ಬಂದಿರುವದನ್ನೂ ೫೫ ವರ್ಷದಲ್ಲಿ ಎಂದೆಂದೂ ನೋಡದ ಈ ಶಾಲೆಯ ಸಂಬಂಧದ ವಾರ್ಷಿಕೋತ್ಸವದ ಸಮಾರಂಭದ ದಿನಸವನ್ನೂ ಕಂಡು ಮನಸ್ಸಿಗೆ ಅತ್ಯಾನಂದ ವಾಯಿತು. ಇನ್ನು ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಿದರೆ ಅವರ ನೀತಿ ಕೆಡುತ್ತದೆಂದು ಎಷ್ಟೋ ಜನರ ಗೃಹಿಕೆಯಾಗಿ ಅವರನ್ನು ಶಾಲೆಗೆ ಕಳಿಸುವದಿಲ್ಲ. ಆದರೆ ಈ ಗೃಹಿಕೆಯು ತಪ್ಪಾದದ್ದು. "ತನ್ನೊಳಗೆ ತಾನೇ ಶೋಧಿಸಲೊಂದು ಸ್ನಾನ" ಎಂಬ ದಾಸ ನುಡಿಯಂತೆ ಮನೆಯೊಳಗಿನ ಹಿರಿಯರು ತಮ್ಮ ನಡತೆಯನ್ನು ತಿದ್ದಿದರೆ ಹೆಣ್ಣು ಹುಡುಗರ ನಡತೆಯು ತನ್ನಿಂದ ತಾನೇ ತಿದ್ದಲ್ಪಡುತ್ತದೆ ಅದಕ್ಕೆ ಶಾಲೆಯೊಳಗಿನ ಶಿಕ್ಷಣವು ಸಹಾಯ ಮಾಡುವದಲ್ಲದೆ ಹೆಣ್ಣುಮಕ್ಕಳ ನೀತಿಯನ್ನು ಎಂದೂ ಕೆಡಿಸದು. ಆ ಕಾರಣ ಎಲ್ಲರೂ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಬೇಕು.

ರಾ ರಾ. ಅಣ್ಣಾರಾವ ಮನಗೋಳಿ—ಸ್ತ್ರೀಯರಿಗೆ ವಿದ್ಯೆ ಬರುತ್ತಿದ್ದರೆ ಅವರ ಮಕ್ಕಳು ಮರಿಗಳು ಸಹ ವಿದ್ವಾಂಸರೂ ಕೀರ್ತಿವಂತರೂ ಆಗುತ್ತಾರೆಂಬದಾಗಿ ತಕ್ಕ ಎರಡೆರಡು ಪೌರಾಣಿಕ ಐತಿಹಾಸಿಕ ದೃಷ್ಟಾಂತಗಳನ್ನು ಕೊಟ್ಟರು.

ರಾವ ಸಾ ಡಿ ಏ. ಇಡಗುಂಬೀಕರ ಸಬ್‌ಜಜ್ಜರು—ಬಾಲಕೀ, ನೀವು ಮಾಡುವ ಕೆಲಸ ಮನಸ್ಸುಗೊಟ್ಟು ಮಾಡಬೇಕು ಏಕಂದರೆ ಈಗ ಊರ್ಜಿತ ಸ್ಥಿತಿಯನ್ನು ಪಡೆದವರು ಮನಸ್ಸುಗೊಟ್ಟು ಕೆಲಸ ಮಾಡಿದ್ದರಿಂದಲೇ ಈ ಹೆಚ್ಚಿನ ಯೋಗ್ಯತೆಯನ್ನು ಹೊಂದಿರುತ್ತಾರೆ. ಯಾವದೊಂದು ಕೆಲಸ ಮನಸ್ಸುಗೊಟ್ಟು ಮಾಡುವದರಿಂದ ಅದು ಚನ್ನಾಗಿಯಾಗುವದಲ್ಲದೆ ಮನಸ್ಸು ಸಮಾಧಾನವನ್ನು ಹೊಂದುತ್ತದೆ. ಆ ಕಾರಣ ಈ ಚಿಕ್ಕತನದಲ್ಲಿ ಲಕ್ಷಗೊಟ್ಟು ಅಭ್ಯಾಸ ಮಾಡಿ ಕೀರ್ತಿಯನ್ನು ಹೊಂದಿರಿ

ಮೆ ರಾ. ರಾ. ಅಣ್ಣಾರಾವ ವಕೀಲ, ಬಾಪುರಾವ ವಕೀಲ, ಕೃಷ್ಣರಾವ ವಕೀಲರೂ ಮತ್ತೂ ಕೆಲವು ಸಭ್ಯಗೃಹಸ್ಥರೂ ಸ್ತ್ರೀ ಶಿಕ್ಷಣ ಅವಶ್ಯವಾದದ್ದೆಂದು ಕುರಿತು ಮಾತನಾಡಿದರು.

ರಾವ ಸಾ॥ ಅಧ್ಯಕ್ಷರು—ಮೆ. ಬೇಕರ ಸಾ. ಬ. ಅಸಿಸ್ಟಂ

ಟು ಕಲೆಕ್ಟರ ಇವರ ಶರಾದ ಪ್ರಕಾರ ಇಲ್ಲಿ ಗರ್ಲಕ್ಲಾಸೆ ಸ್ಥಾಪಿತವಾದದ್ದನ್ನೂ ಶಾಲೆಯ ಸ್ಥಿತಿಯನ್ನೂ ನೋಡಿ ನನಗೆ ಬಹಳ ಆನಂದವಾಯಿತು. ಇಂಗ್ಲಿಷರ ಆಳಿಕೆಯಲ್ಲಿ ಈ ಪ್ರಕಾರದ ಆನಂದದ ದಿವಸಗಳು ನಮಗೆ ದೊರಿಯುತ್ತಿರುವದರಿಂದ ಈಗಿನ ಚಕ್ರವರ್ತಿಯಾದ ೭ನೆಯ ಎಡ್ವರ್ಡ ಧೊರೆಗಳ ಆಳಿಕೆಯು ಯಾವಾಗಲೂ ಇರಲೆಂತಲೂ ಇವರ ಆಯುರಾರೋಗ್ಯವು ಹೆಚ್ಚಾಗಲೆಂತಲೂ ಇವರ ವಂಶದವರಿಗೆ ಸುಖವಾಗಲೆಂತಲೂ ದೇವರನ್ನು ಪ್ರಾರ್ಥಿಸಿ ಹಿಪ್ ಹಿಪ್ ಹ್ಯುರೇ ಎಂಬ ಆಂಗ್ಲ ಶಬ್ದದಿಂದ ೩ ಸಾರೆ ಜಯಜಯಕಾರ ಮಾಡಿದರು.

ತರುವಾಯ ಹೆಣ್ಣುಮಕ್ಕಳಿಗೆ ಖಣಗಳನ್ನೂ ಗಂಡು ಹುಡುಗರಿಗೆ ಪುಸ್ತಕಗಳನ್ನೂ ಇನಾಮು ಕೊಟ್ಟು ಎಲ್ಲ ವಿದ್ಯಾರ್ಥಿಗಳಿಗೆ ಬೆಂಡು ಬತ್ತಾಸು ಹಂಚಿದ ತರುವಾಯ ಸಭಾಸದರರಿಗೆ ಸುಗಂಧ ದ್ರವ್ಯ ಹಚ್ಚಿ ಎಲಿಯಡಿಕೆ ಹೂವುಗಳನ್ನು ಕೊಟ್ಟ ಮೇಲೆ ಸಾನಂದದೊಡನೆ ಸಭಾ ವಿಸರ್ಜನವಾಯಿತು.

ಎಡಿಟರ ಧೊರೆಗಳೇ, ಪತ್ರವಿಸ್ತಾರಕ್ಕೆ ಕ್ಷಮಿಸಬೇಕು.

ತಾ. ನಿ-ಗಿಲಿ-ಗಿಂ. } ಬಸಲಿಂಗಪ್ಪಾ ಬಸಪ್ಪಾ ಅಮರಣ್ಣವರ,
ಸ್ಕೂಲ ಪಯಿಂಟದಾರ ಮುಬ್ದೀಹಾಳ.

WURTH PRIZE EXAMINATION
QUESTION PAPER, I
ವರ್ಥಪ್ರಾಯಿಜ ಪರೀಕ್ಷೆಯ ಪ್ರಶ್ನಗಳು.
೧ನೇ ಕಾಗದ.

(೧) ಕನ್ನಡ ಭಾಷೆಯು ಯಾವ ಶತಮಾನದಲ್ಲಿ ಅತ್ಯುನ್ನತ ಸ್ಥಿತಿಯಲ್ಲಿತ್ತು. ಈಗ್ಗೆ ಅದಕ್ಕೆ ಅಂಥ ಸ್ಥಿತಿ ಬರುವದಕ್ಕೆ ರಾಜಕೀಯ ಸಾಮಾಜಿಕ ಮುಂತಾದ ಕಾರಣಗಳು ಯಾವವು ಒದಗಿದವು. ಮುಂದೆ ಅದು ನಿಜ್ಜೀವ ಸ್ಥಿತಿಗೆ ಬರಲಿಕ್ಕೆ ಕಾರಣಗಳು ಯಾವವು ಸಂಘಟಿಸಿದವು. ಅದನ್ನು ಸುಧಾರಿಸುವದಕ್ಕೆ ಈಗಿನ ರಾಜಕೀಯ ಸ್ವಾಭಾವಿಕ ಅಡಚಣಿಗಳು ಯಾವವು? ಎಂಬ ಬಗ್ಗೆ ನಿಬಂಧವನ್ನು ಬರೆಯಿರಿ

(೨) ಹುಲಿಗೆ ಸರಿಯಾಗಬೇಕೆಂಬ ಹೆಮ್ಮೆಯಿಂದ ಬಂದ
ನರಿಯು ತನ್ನ ವ್ಯೆಯನ್ನು ಸುಟ್ಟುಕೊಂಡು ಸತ್ತು ಹೋಯಿ
ತು. ಈ ಕಥೆಯನ್ನು ಪದ್ಯದಿಂದ ವರ್ಣಿಸಿ ಅದರಿಂದ ಊಹಿ
ಸತಕ್ಕ ಉಪದೇಶವನ್ನಾದರೂ ಪದ್ಯದಿಂದಲೇ ವರ್ಣಿಸಿರಿ.

(೩) ಕಾವ್ಯರಸಗಳು ಯಾವವು? ಸ್ಥಾಯಿಭಾವರಸವೇ
ದರೇನು? ಮುಖ್ಯ ಮುಖ್ಯ ಶಬ್ದಾಲಂಕಾರಗಳ ಹೆಸರುಗ
ಳನ್ನು ಹೇಳಿರಿ.

(೪) ಉಪಮಾ, ದೃಷ್ಟಾಂತ ಈ ಅಲಂಕಾರಗಳ ಸಾಮ್ಯ
ವೈಲಕ್ಷಣ್ಯಗಳನ್ನು ಪ್ರತಿಪಾದಿಸಿರಿ.

(೫) ಅರ್ಥಾಂತರನ್ಯಾಸ, ಅಪನ್ಹುತಿ, ವಾಲೋಪಮಾ,
ಅನನ್ವಯ ಈ ಅಲಂಕಾರಗಳ ಲಕ್ಷಣಗಳನ್ನು ಹೇಳಿ ಉ
ದಾಹರಣ ಕೊಡಿರಿ.

(೬) ಕೆಳಗೆ ಬರೆದ ಪದ್ಯಗಳ ಭಾವಾರ್ಥವನ್ನು ಹೊಸಗ
ನ್ನಡದಲ್ಲಿ ಬರೆದು ಅವುಗಳ ರಸಗಳನ್ನೂ ಅಲಂಕಾರಗಳ
ನ್ನೂ ಹೇಳಿರಿ.

(ಅ) ಮೃಗರಾಜಂ ವಿಕ್ರಮದಿಂ । ಖಗರಾಜಂ ಸ್ವಾಮಿಭಕ್ತಿ
ಯಿಂ ನಗರಾಜಂ । ಮಿಗಿಲಾದ ಕೆಂಪಿನಿಂ ಪ । ನ್ನಗರಾ
ಜಂ ಸ್ಥೈರ್ಯಗುಣದಿನಾಹವಸಿಂಹಂ ॥

(ಬ) ಒತ್ತರಿಸಿದುನ್ನತ ಪ್ರಾಸಾದದಬಲೆಯರ । ವೃತ್ತವದನ
ದಸುಮಂದಸ್ಮೇರಚಂದ್ರಿಕೆಯೊ । ಳುತ್ತುಂಗ ದೇವಾಲ
ಯದ ಗೋಪುರದ ಮಾಣಿಕದ ಕಲಶದೆಳೆವಿಸಿಲೊಳು ॥
ಕತ್ತಲೆಪರಿವುದಲ್ಲದೀನಗರದೊಳ್ಬೀರೆ । ಮತ್ತೆ ಸೋ
ಮಾದಿತ್ಯ ಕಿರಣಂಗಳೈದುವವೆ । ಸುತ್ತಲುಂ ಮುಗಿಲ
ಮುಟ್ಟಿದ ಕೋಟೆಗಳ ವೆಳಯವಣುಗನೋಡಬಚ್ಚರಿ
ಯನು ॥ ೧ ॥

(ಕ) ತೊಳಗುವ ಚಿನ್ನಪೂಗಳಲಕಾವಳಿಯೊಳ್ ಮಿರುಗಲ್
ಕಪೋಲಮುಂ । ಡಲತಲದೊಳ್ತೆರಂ ಬೊಳೆಯಿಸಿಕೋ
ಮಲಪಲ್ಲವಕರ್ಣಪೂರಮುಂ । ಜುಳಮಣಿಕುಂಡಲಂ
ಖಿಗಲೊಳಾಡೆಮುರಳ್ದಿವೆಯಿಕ್ಕಲಾಂ ಮನಂಗೊಳಿಪ
ಮುನೀಂದ್ರನಾನನಮುನೀಕ್ಷಿಸುತಂ ಪೊಡೆವಟ್ಟೆನಳ್ಕರಿಂ
॥ ೧ ॥

(ಡ) ಚಂದ್ರಕಾಂತ ಶಿಲೆಯಲ್ಲಿ ನವಶ್ರೀಖಂಡಮನಿಟ್ಟುಕೆ
ಸ್ಸಿದಿಂ ಚಂದ್ರಕಾಲಸದಪಾಂಗೆಯರುದ್ಯತ್ಸೌರಭ
ನಿಶ್ವಸಿತಾಂಗಿಯರ್‌॥ ಸಾಂದ್ರಚಂದನದಘಟ್ಟಗೆನೀರಂ
ಪೋರದೆ ಮಾಳ್ಪುದನೀಕ್ಷಿಸು। ತ್ತಿಂದ್ರನಂದನನಪೋಲ್ವ
ಭುಜಂಗರ್ ಕೌತುಕದಿಂತಲೆ ದೂಗುವರ್ ॥ ೧ ॥

(೭) ಕೆಳಗೆ ಕೊಟ್ಟವುಗಳನ್ನು ಹೊಸಗನ್ನಡದಿಂದ ಬರೆಯಿರಿ.

ಮತ್ತಮಾತಂ ಕೈಕೊಂಡುದರಿಂ ಋಷಿವೇಷಕ್ಕಗ್ರಾ
ಮ್ಯತೆಯುಂ ಆತನಂ ಪೊದ್ದಿದ ಜವ್ವನಕ್ಕೆ ಸೌಂದ
ರ್ಯಮುಂ ಆತನ ಕಿವಿಗವತಂ ಸವೂದ ಪಾರಿಜಾತ
ಕುಸುಮ ಮುಂಜರಿಗೆ ಮನೋಹರತೆಯು ಮಾತನಿ
ರವಿಂದಮೆ ಸುರಲೋಕಕ್ಕೆ ರಮಣೀಯತೆಯು ಮಾ
ತನರೂಪಸಂಪತ್ತಿಯಿಂ ಕುಸುಮಾಯುಧಂಗೆ ದು
ರ್ಜಯತ್ವಮು ಮಾದುದೆಂದು ಬಗೆಯುತ್ತಮಾ ಸೌ
ಭಾಗ್ಯನಿಧಿಯ ವಿಯೋಗದಿಂ ಜೀವವಿಯೋಗ ಮಾಗ
ದಿಕ್ಕೆಂದು ತಗುಳ್ಚಿದ ರಕ್ಷಾವಳಿಯಂತೆ ಕೊರಲೊ
ಳಿಕ್ಕಿದರ್ಕ್ಷಾವಳಿಯುಂ ಆತನ ರಹಸ್ಸಾಲಾಪದಂತೆ
ಕಿವಿಗೆವಂದು ರಾಜಿಸುವೆ ಪಾರಿಜಾತ ಕುಸುಮಮುಂ
ಜರಿಯುಮಾತನ ಕರತಲಸ್ಪರ್ಶಸುಖದಿಂ ಕಪೋಲ
ತಲ ಕದಂಬಮುಕುಳ ಕರ್ಣಪೂರದಂತುಣ್ಮಿದ್ದ
ಪುಳಕಮುಂ ಬೆರಸುಗದ್ಗದಚಿತ್ತೆಯಿನೇಕಾಕಿಯಾಗಿ
ಪ್ಪರ್ದುಮನ್ನೆಗವೆನ್ನ ತಾಂಬೂಲಕರಂಕವಾಹಿನಿಯ
ಕರಿಕೆಯೆಂಬಳ್ ಕರಗೆಕರಿದುಬೇಗಂ ಬಾಯಲೆಂದು
ನಿಂದನಂತರಂ ಮತ್ಸವಿಾಪಕ್ಕೆ ಬಂದು ಮೆಲ್ಲನಿಂತೆಂ
ದಳ್ ॥

ವೃತ್ತ.

ತೊಡಸಿದನಾವನೀ ಕುಸುಮಮುಂಜರಿಯುಂ ನಿನಗಾತನಕ್ಕ
ತ। ನ್ನೊಡವರುತಿರ್ದ ತಾಪಸ ಕುಮಾರನನಾಗಳೆ ನಂ
ಚಿಸಲ್ಕತ । ಕ್ಕಿಡಿದ ಲತಾಪ್ರತಾನದೊಳ ಪೊಕ್ಕುಳಿದೊ
ಯ್ಯನೆಸಾರ್ದುಮೆಲ್ಲೊಡಂ । ಬಡೆಬೆಸಗೊಂಡನೆನ್ನ ನನು
ರಾಗದೆನೆಯ್ದಿ ಭವತ್ಪ್ರಪಂಚಮುಂ ॥

ಸಿದ್ಧನಾಥ ಪಾಠನ ಮಂದಿರ.
ಶಾಲಾಪತ್ರಿಕೆ

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ।
ಜಯಸಮೃತ್ಸಂ ಪ್ರತಿಭಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಜಯದಿಂದಿತ್ತವೆವೋದುವರ್ಗಸುಗುಣಂ ಪೋರಲ್ಕೆಕೈಕೊಂಬುದೈ।
ದಯೆಯಿಂದೋಷಪತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ ॥೧

ಪುಸ್ತಕ ೩೮]　　ಫೆಬ್ರುಆರಿ ೧೯೦೨.　　[ಸಂಚಿಕೆ ೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇದುವರೆಗೆ ಭೂಮಿಯ ದಕ್ಷಿಣಧ್ರುವವನ್ನು ಗೊತ್ತು ಹಚ್ಚುವದಕ್ಕಾಗಿ ಚಿಕ್ಕ ದೊಡ್ಡ ಪ್ರಯತ್ನಗಳು ಬಹಳ ಮಾಡಲ್ಪಟ್ಟವು. ಆದರೆ ಅಂತಾರ್ಕಿಕ ಮಹಾಸಾಗರದಲ್ಲಿ ಧ್ರುವ ಪ್ರದೇಶದ ನೆರೆಯಲ್ಲಿದ್ದ ಬರ್ಫವನ್ನು ದಾಟಿ ಹೋಗುವ ಪ್ರಯತ್ನವನ್ನು ತಕ್ಕ ಉಪಕರಣಗಳನ್ನು ಕೂಡಿಸಿ ಸರ್ವ ಸನ್ನಾಹದಿಂದ ಈ ವರೆಗೆ ಯಾರೂ ಮಾಡಲಿಲ್ಲ. ಇಂದಿಗೆ ಅರುವತ್ತು ವರ್ಷಗಳ ಮೊದಲು ಸರ್ ಜೇಮ್ಸ್ರಾಸ್ ಎಂಬ ನಾವಿಕನೊಬ್ಬನು ಮಾತ್ರ ಈ ಕೆಲಸಕ್ಕೆ ಕೈಹಾಕಿದ್ದನು. ಆದರೆ ಅವನ ಬಯಕೆಯು ಕೈಗೂಡಲಿಲ್ಲ. ಅಂದಿನಿಂದ ಈ ಘನಕಾರ್ಯವನ್ನು ನಿಗ್ರಹದಿಂದ ಸಾಗಿಸುವ ಹವ್ಯಾಸಕ್ಕೆ ಯಾರೂ ಬೀಳಲಿಲ್ಲ. ಆದರೆ ಪ್ರಸ್ತುತಕ್ಕೆ ಗ್ರೇಟಬ್ರಿಟನ್ ಹಾಗು ಜರ್ಮನಿಯ ಸಾಹಸಿಗಳೂ ಅರಸರೂ ಈ ಕೆಲಸದಲ್ಲಿ ಮನಸು ಹಾಕಿರುವರು. ಕಳೆದ ಜನವರಿ ತಿಂಗಳಲ್ಲಿ ಗ್ರೇಟಬ್ರಿಟನ್ನಿನವರು ದಕ್ಷಿಣಧ್ರುವದ ಶೋಧಕ್ಕಾಗಿಯೇ 'ಡಿಸ್ಕವ್ಹರೀ' ಎಂಬ ಹಡಗವನ್ನು ತಯಾರಿಸಿರುವದಲ್ಲದೆ, ಹೋಗುವ ಮಂಡಲಿಗಾಗಿ ಬೇಕಾಗುವ ಎಲ್ಲ ಬಗೆಯ ಸಾಮಾನಿಯನ್ನು ಮಾಡಿಕೊಟ್ಟರುವರು. ಈ ಹಡಗವು ಸ್ಕಾಟ್ಲಂಡದೊಳಗಿನ "ಲಿಟಲ್ಟನ್" ಎಂಬ ಬಂದರದಿಂದ

ಹೊರಡುವದು. ಗ್ರೇಟಬ್ರಿಟನ್ನಿನಂತೆ ಜರ್ಮನಿಯವರೂ ಹಡಗ ಹಣಗಳ ಅನುಕೂಲವನ್ನು ಮಾಡಿಕೊಟ್ಟಿರುವರು. ಈ ಹಡಗದ ಹೆಸರು "ಗಾಸ" ಎಂದಿಟ್ಟಿರುವರು. ಇದು "ಕ ಗ್ನೆೀಲಾನ" ಎಂಬ ನತುಗಡ್ಡಿಗಳ ಗುಂಪಿನೊಳಗಿನ "ದೀ ಆಯುಲಂಡ ಹಾರ್ಬರ" ಎಂಬ ಬಂದರದಿಂದ ಹೊರಡುವದು ಈ ಉಭಯ ಶೋಧಕ ಮಂಡಳಿಯವರು ಒಬ್ಬರಿಗೊಬ್ಬರು ಪ್ರತಿಕಷ್ಟಿಗಳಾಗಿ ನಡೆಯುವವರಲ್ಲ. ಆದರೆ "ಡಿಸ್ಕವ್ಹರೀ" ಎಂಬ ಹಡಗವು "ಕೌಜ" ಬಂದರದಿಂದ ಹೊರಡುವ ಕಾಲಕ್ಕೆ ಪಿನೇ ಎಡ್ವರ್ಡ ಬಾದಶಹರು ನುಡಿದಂತೆ ಜ್ಞಾನಸಂಗ್ರಹವನ್ನು ಬೆಳಿಸುವ ಕೆಲಸದಲ್ಲಿ ಒಬ್ಬರಿಗೊಬ್ಬರು ನೆರವಾಗತಕ್ಕವರಿರುತ್ತಾರೆ. ಈ ಧ್ರುವದ ಶೋಧನವನ್ನು ನಡಿಸುವ ಕೆಲಸದಲ್ಲಿ ಅರಸರ ಸಹಾಯವನ್ನು ಪಡೆಯುವ ಉಪಕ್ರಮವು ೧೮೯೫ರೀಪ ನಡಿಸಲ್ಪಟ್ಟಿತು. ಆರಂಭದಲ್ಲಿ ಇದಕ್ಕೆ ತಕ್ಕ ಆಶ್ರಯವು ದೊರೆಯಲಿಲ್ಲ. ಆದರೆ ೧೮೯೮ ರಲ್ಲಿ ರಾಯಲ್ ಸೊಸಾಯಿಟಿಯವರೂ, ರಾಯಲ್ ಜಾಗ್ರಫಿಕಲ್ ಸೊಸಾಯಿಟಿಯವರೂ ಒಟ್ಟಾಗಿ ೪೫೦೦೦ ಪೌಂಡುಗಳನ್ನು ವಂತಿಗೆಯಿಂದ ಕೂಡಿಸಿ ಬಾಲ್ಫರ ಎಂಬ ಪ್ರಮುಖ ಮಂತ್ರಿಯು ನೆರವನ್ನು ಪಡೆದು ಉದ್ಯೋಗ ನಡಿಸಲು, ಸರಕಾರದವರು ಒಟ್ಟಿಗೊಂಡು ವಂತಿಗೆಯಿಂದ ಕೂಡಿದಷ್ಟು ಹಣವನ್ನು, ನಾಲ್ಕು ಮಂದಿ ಹಡಗುಪಡೆಯ ಅಧಿಕಾರಿಗಳನ್ನು, ಕೆಲವು ಚಿಕ್ಕ ಅಧಿಕಾರಸ್ಥರನ್ನು ಕೊಡಲಿಕ್ಕೆ ಸಮ್ಮತಿಸಿದರು. ಬಳಿಕ ಶೋಧದ ಕೆಲಸಕ್ಕೆ ಎಲ್ಲ ಬಗೆಯಿಂದ ಅನುಕೂಲವಾದಂಥ ಬರ್ಫದಲ್ಲಿ ನಡಿಸಲಿಕ್ಕೆ ಬರುವಂಥ "ಡಿಸ್ಕವ್ಹರೀ" ಎಂಬ ಹಡಗವು "ಡಂಡೀ" ಪಟ್ಟಣದಲ್ಲಿ ಕಟ್ಟಲ್ಪಟ್ಟಿತು. ಜರ್ಮನಿಯ ಶೋಧಕ ಮಂಡಲಿಯವರಿಗೂ ಅವರ ಅರಸನ ಆಸರವು ಶಿಕ್ಕಿರುವದು. ಜರ್ಮನಿಯ ಅರಸನು ಒಬ್ಬ ಹೆಸರಾದ ಮನುಷ್ಯನಿಗೆ ಹಡಗದ ಮುಖ್ಯಸ್ಥನನ್ನು ಮಾಡಿರುವದಲ್ಲದೆ ಹಡಗದೊಳಗಿರುವ ಎಲ್ಲ ಆಳುಗಳ ಸಂಬಳವು ತನ್ನ ಬಂಡಾರದೊಳಗಿಂದಲೇ ಸಲುವದೆಂದು ಹೇಳಿರುವನು

ಶೋಧದ ಸೌಕರ್ಯಕ್ಕಾಗಿ ಧ್ರುವಪ್ರದೇಶದಲ್ಲಿ ನಾಲ್ಕು
ಭಾಗಗಳನ್ನು ಮಾಡಿರುವರು ಅವು—(೧) ವಿಕ್ಟೋರಿಯಾ
ಕ್ವಾಡ್ರನ್ಟ್ ಅಂದರೆ ಪೂರ್ವರೇಖಾಂಶ ತೊಂಬತ್ತರಿಂದ
೧೮೦ ರ ವರೆಗೆ (೨) ರಾಸ್ ಕ್ವಾಡ್ರಂಟ್ ಅಂದರೆ ೧೮೦ ನೇ
ರೇಖಾಂಶದಿಂದ ಪಶ್ಚಿಮರೇಖಾಂಶ ತೊಂಬತ್ತರವರೆಗೆ (೩)
ಪೆಡಲ್‌ಕ್ವಾಡ್ರಂಟ್ ಅಂದರೆ ೯೦ ನೇ ಪಶ್ಚಿಮರೇಖಾಂಶದಿಂದ
ಗಾಜಿ ರೇಖಾಂಶದವರೆಗೆ (೪) ಎಂಡರಬಿ ಕ್ವಾಡ್ರಂಟ್ ಅಂದರೆ
ಗಾಜಿ ರೇಖಾಂಶದಿಂದ ತೊಂಬತ್ತನೇ ಪೂರ್ವರೇಖಾಂಶದವ
ರೆಗೆ ಮೊದಲಿನವೆರಡು ವಿಭಾಗಗಳ ನಾಮವಿನ ಪ್ರದೇಶವ
ನ್ನು ಬ್ರಿತಿಶರೂ ಕಡೆಯವೆರಡು ವಿಭಾಗದೊಳಗಿನ ಪ್ರದೇ
ವನ್ನು ಜರ್ಮನಿಯವರೂ ಗೊತ್ತು ಹಚ್ಚತಕ್ಕದ್ದೆಂದು
ರ್ಣಯವಾಗಿರುವದು.

ಈ ಉದ್ಯೋಗದ ಉದ್ದೇಶಗಳು ಹಲವುಂಟು. ಆದರೆ
ವುಗಳಲ್ಲಿ ಮುಖ್ಯವಾದವುಗಳು ಎರಡು ಅವೆ. ೧ ಧ್ರುವ
ಪ್ರದೇಶದೊಳಗಿನ ನೆಲದ ವಿಸ್ತಾರವನ್ನೂ ಸ್ವರೂಪವನ್ನೂ
ಲಕ್ಷಣವನ್ನೂ ಗೊತ್ತು ಹಚ್ಚುವದು. ೨ ನಾಲ್ವತ್ತನೇ ದಕ್ಷಿ
ಅಕ್ಷಾಂಶದ ಕೆಳಗಡೆಯ ಅಂದರೆ ದಕ್ಷಿಣದ ಲೋಹ
ಂಬಕಸ್ಥಿತಿಯನ್ನೂ ನಭಸ್ಥಿತಿಯನ್ನೂ ಸಾಗರಸ್ಥಿತಿಯ
ನ್ನೂ ಭೂಗರ್ಭಸ್ಥಿತಿಯನ್ನೂ ಪಶುಪ್ರಾಣಿಸ್ಥಿತಿಯನ್ನೂ ಸ್ಯಾ
ತಿಕಸ್ಥಿತಿಯನ್ನೂ ಗೊತ್ತು ಹಚ್ಚುವದು

ಬ್ರಿತಿಶ ಮಂಡಳಿಯ ಮುಖ್ಯಸ್ಥರು ಕ್ಯಾಪ್ಟನ್ ಸ್ಕಾಟ್, ಲೆ
ನಂಟ ಅರ್ನೆಸ್ಟ್ ಶೀಜ ಎಂಬವರು; ಜರ್ಮನ್ ಮಂಡಳಿಯ
ಮುಖ್ಯಸ್ಥರು ಎರಿಕ್ ವಾನ್ ಡ್ರ್ಯಾಯ ಗಾಲಸ್ಕಿ ಎಂಬವರು.
ದೇವರು ಈ ಎದೆಗಾರರ ಸಾಹಸವನ್ನು ಕೈಗೂಡಿಸಿಕೊ
ರೆ ಲೋಕಕ್ಕೆಲ್ಲ ಹಿತವಾಗುವದಿಷ್ಟೇ ಅಲ್ಲ ಈವೊತ್ತಿನ
ರೆಗಾದ ಶೋಧಗಳಿಂದ ಕೂಡಿಬಿದ್ದ ಜ್ಞಾನಭಾಂಡಾರವು
ಳೆಯುವದು. ಈ ಎದೆಗಾರರ ಹೆಸರುಗಳು ಇತಿಹಾಸದ
ಚಿರಕಾಲ ಹೊಳೆಯುವವು.

ಸರ್ ವಾಲ್ಟರ್ ಬಾಲ ಎಂಬ ಹೆಸರಿನ ಹೆಸರಾದ ಇಂಗ್ಲಿಷ ಜ್ಯೋತಿರ್ವಿದನು ಸೂರ್ಯಗೋಲವನ್ನು ಕುರಿತು ಅನ್ನುವದೇನಂದರೆ :— ಶಕೆಯು ಒಂದೇ ಪದಾರ್ಥವನ್ನು ಹಿಡುಕೊಂಡು ಕೂಡ್ರುವದಿಲ್ಲ ಕಾದ ಪದಾರ್ಥಕ್ಕಿಂತ ಆರಿದ ಪದಾರ್ಥವು ಕಿರಿದಾಗುವದು. ಕಬ್ಬಿಣದ ಕಾದ ಹಳಿಯು ಆರಿದ ಬಳಿಕ ಹತ್ತಿಯಾಗುವದನ್ನು ಬಹು ಜನರು ನೋಡಿರಬಹುದು. ಈ ಎರಡು ಸಿದ್ಧಾಂತಗಳಿಗನುಸಾರವಾಗಿ ಸೂರ್ಯಗೋಲದೊಳಗಿರುವ ಶಕೆಯು ಕ್ರಮಕ್ರಮವಾಗಿ ಕಡಿಮೆಯಾಗುತ್ತ ನಡೆದಿರಬೇಕೆಂತಲೂ ಅದರಿಂದ ಆ ಗೋಲದ ಆಕಾರವು ಸಣ್ಣದಾಗುತ್ತ ಸಾಗಿರಬೇಕೆಂತಲೂ ಗೊತ್ತಾಗುತ್ತದೆ ಈ ಮಾತಿನ ದಿಟವನ್ನು ಮನಗಾಣುವದು ಬಿಗಿಯಲ್ಲ. ದುರ್ಬೀನಿನ ಸಹಾಯದಿಂದ ಸೂರ್ಯಗೋಲದ ಈ ಹೊತ್ತಿನ ವ್ಯಾಸವನ್ನೂ ನಾಳಿನ ವ್ಯಾಸವನ್ನೂ ಅಳೆದು ನೋಡಿದರೆ ಸಹಜವೇ ತಿಳಿಯುವದು. ದಿನಬಂದಕ್ಕೆ ಒಂಭತ್ತು ಇಂಚು ವ್ಯಾಸವು ಕಡಿಮೆಯಾಗುತ್ತ ನಡೆದಿರುವದು. ಈ ಲೆಕ್ಕದಿಂದ ಒಂದು ವಾರದಲ್ಲಿ ಸೂರ್ಯನು ಸುಮಾರು ೫ ಫೂಟು ಸಂಕುಚಿತನಾಗುವನೆಂದು ಗೊತ್ತಾಗುವದು. ಇದರಂತೆ ಸುಮಾರು ೨೦ ವರ್ಷಕ್ಕೆ ಸೂರ್ಯಗೋಲದ ವ್ಯಾಸದಲ್ಲಿ ಒಂದು ಮೈಲು ಅಂತರ ಬೀಳುವದೆಂಬದು ಸ್ಪಷ್ಟವದೆ.

ಇದನ್ನು ಓದಿ ಕೆಲವರಿಗೆ ನಾವಿರುವದರೊಳಗೇ ಸೂರ್ಯನು ಇಲ್ಲದಂತಾಗುವನೋ ಎಂಬ ಬೆದರಿಕೆಯು ಉಂಟಾಗಬಹುದು ಆದರೆ ಈ ಬೆದರಿಕೆಯನ್ನು ಹಚ್ಚಿಕೊಂಡು ಸೊರಗುವ ಕಾರಣವಿಲ್ಲ. ಸದ್ಯಕ್ಕೆ ಸೂರ್ಯನ ವ್ಯಾಸವು ಎಂಟು ಲಕ್ಷ ೭೦ ಸಾವಿರ ಮೈಲು ಇರುವದು. ಇಪ್ಪತ್ತು ಸಾವಿರ ವರ್ಷಗಳಾದ ಬಳಿಕ ಒಂದು ಸಾವಿರ ಮೈಲುಗಳಷ್ಟು ಸೂರ್ಯಗೋಲವು ಸಂಕುಚಿತವಾಗಬಹುದು. ಈ ಲೆಕ್ಕದಿಂದ ಸೂರ್ಯಗೋಲವು ತೀರ ಇಲ್ಲದಂತಾಗಲಿಕ್ಕೆ ಒಂದೂ ಮುಕ್ಕಾಲುಕೋಟಿ ವರ್ಷಗಳು ಬೇಕಾಗುವವು. "ನಂದೋ ರಾಜಾಭವಿಷ್ಯತಿ."

ಅಭಯಗಾಣ ಜನರ ದಾನತವು (ಸತ್ವಶಾಲಿತ್ವವು.)

ಈ ಜನರ ದಾನತವು ಅಥವಾ ಸತ್ವಶಾಲಿತ್ವವು ಅವರಿಗೆ ನೀಯುವಾಗಿರುವದು ಈ ಗುಣವನ್ನು ಕಾಯ್ದುಕೊಳ್ಳುವ ದಕ್ಕಾಗಿ ಅವರು ಜೀಕಾದ ಸಾಹಸವನ್ನು ಮಾಡುವದಕ್ಕೂ ಹಿಂಜರಿಯುವದಿಲ್ಲ. ಒಮ್ಮೊಮ್ಮೆ ತಮ್ಮ ಜೀವವನ್ನು ಸಹ ಕೊಡುವರು. ಆದರೆ ತಮ್ಮ ಸತ್ವಶಾಲಿತ್ವವನ್ನು ಕಳಕೊಳ್ಳ ಲಾರರು. ಈ ಸತ್ವರಕ್ಷಣದ ಹಲವು ಬಗೆಗಳಲ್ಲಿ ಕೆಳಗೆ ವಿವರಿಸಿದ ಮೂರು ಬಗೆಗಳು ಮೇಲಾದವುಗಳಿರುತ್ತವೆ.

(೧) ಶರಣಾಗತರಕ್ಷಣ (ಮರೆ ಹೊಕ್ಕವನನ್ನು ಕಾಪಾಡುವದು)

(೨) ಅಪರಾಧಿ ಶಾಸನ (ಕೇಡು ಮಾಡಿದವನ ಶೇಡು ತೀರಿಸಿಕೊಳ್ಳುವದು.)

(೩) ಅತಿಥಿ ಸತ್ಕಾರ (ಮನೆಗೆ ಬಂದವನ ಪರಾಮರಿಕೆ)

ಈ ಮೊದಲಿನ ನೇಮವನ್ನು ಇವರು ತಮ್ಮ ಜೀವದ ಅಂಜಿಕೆಯನ್ನು ಸಹ ಹಿಡಿಯದೆ ಪಾಲಿಸುತ್ತಾರೆ ಯಾವ ನೊಬ್ಬನು ತನ್ನ ಹಗೆಯು ಅಂಜಿಕೆಯಿಂದ "ಬೆನ್ನು ಬಿದ್ದಿ ದ್ದೇನೆ. ನನ್ನನ್ನು ಕಾಯಬೇಕು" ಎಂದು ತಮ್ಮ ಮನೆಯ ಕಟ್ಟೆಯನ್ನು ಹತ್ತಿದರೆ ಸಾಕು. ಕೂಡಲೇ ಆ ಮನೆಯೊಡ ಯನಾದ ಪಠಾಣನು ಶರಣು ಬಂದವನಿಗೆ ಅಭಯ ಕೊಟ್ಟು ಅವನ ಶತ್ರುವನ್ನು ಇಲ್ಲದಂತೆ ಮಾಡಲಿಕ್ಕೆ ತನ್ನ ಕೈಯಿಂದಾ ಗುವ ಎಲ್ಲ ಉಪಾಯಗಳನ್ನು ಕೈಕೊಳ್ಳುವನು. ನೀಗದ ಪಕ್ಷದಲ್ಲಿ ತನ್ನ ಜೀವವನ್ನಾದರೂ ಕೊಡುವನಲ್ಲದೆ ಜೆನ ಬಿದ್ದವನನ್ನು ಕೊಡಲಾರನು.

(೨) ಪಠಾಣರು, ತನಗೆ ಅವಮಾನವನ್ನು ಮಾಡಿದಂಥ ಇಲ್ಲವೆ ತನಗೆ ಹತ್ತಿಹೊಂದಿದವರನ್ನು ಕೊಂದಂಥ ಶತ್ರುವ ಬೇಕಾದಷ್ಟು ಬಲ್ಲಿದನಿದ್ದರೂ, ಶೇಡು ತೀರಿಸಿಕೊಳ್ಳದೆ ಬಿಡ ರು. ಅವಮಾನವು ಕ್ಷುಲ್ಲಕವಿದ್ದರೂ ಚಿಂತೆ ಇಲ್ಲ. ತತ್ಪ್ರೀಕಾರಕ್ಕಾಗಿ ಹಗೆಯನ್ನು ಕೊಲ್ಲುವದೇ ಅತ್ಯಂತ ಮುಖ್ಯ ತ್ವವದ ಕರ್ತವ್ಯವೆಂದು ತಿಳಿಯುವರು. ಈ ದೇಶದೊಳಗಿನ ಬ್ರಿತಿಶ ಸರಕಾರದ ದಂಡಿನಲ್ಲಿ ಆಳಾಗಿ ದುಡಿಯುತ್ತಿದ್ದ

ಎಷ್ಟೋ ಮಂದಿ ಅಫಘಾಣ ಶಿಪಾಯರು ಮನೆಯಲ್ಲಿ ಕೆಲಸ ವದೆಂದು ನೆವಹೇಳಿ, ರಜೆಯನ್ನು ಪಡಕೊಂಡು ತಮ್ಮ ದೇ ಶಕ್ಕೆ ಹೋಗಿ ಹಗೆಯನ್ನು ಕೊಂದು ಕೇಡು ತೀರಿಸಿಕೊಂಡು ಬಂದ ಉದಾಹರಣೆಗಳಿವೆ್ಟೇ ಉಂಟು

(೩) ತಮ್ಮ ಮನೆಗೆ ಬಂದ ಅತಿಥಿಯನ್ನು ಅತ್ಯಾದರದಿಂ ದ ಪಗಾಮುರಿಸುವಲ್ಲಿ ಈ ಜನರೇ ಹೆಚ್ಚಿನವರೆಂದು ಹೇಳಲಿ ಕ್ಕೆ ಅಡ್ಡಿಯಿಲ್ಲ. ಈ ಕಾರ್ಯವು ಮಾನವಪ್ರಾಣಿಯ ಮುಖ್ಯ ಕರ್ತವ್ಯವೆಂದು ಅವರು ತಿಳಿಯುವರು ಸ್ವಜಾತಿಯ ಅತಿಥಿಯನ್ನೇ ಸತ್ಕರಿಸುತ್ತಾರಂತಲ್ಲ. ಅತಿಥಿಯಾಗಿ ಬಂದ ವನು ಬೇಕಾದ ಜಾತಿಯವನಿದ್ದರೂ ಅವನ ಸತ್ಕಾರವನ್ನು ಅತ್ಯುತ್ಸಾಹವಾಗಿ ಮಾಡುವರು ಆದರೆ ಮನೆಗೆ ಬಂದವರ ನ್ನು ಪರಾಮುರಿಸುವದು ದೊಡ್ಡ ಮಾತಲ್ಲ. ತಮ್ಮ ಊರಿಗೆ ಬಂದ ಹೊಸಬನನ್ನು ಸಹ ಚನ್ನಾಗಿ ಸತ್ಕರಿಸುವರು. ಆ ನಾಡಲ್ಲಿ ಬಂದು ಸೋಜಿಗದ ಸಾಂಪ್ರದಾಯವುಂಟು. ಊರಿಗೆ ಬಂದ ಹೊಸ ಮನುಷ್ಯರ ಆತಿಥ್ಯಕ್ಕಾಗಿ ಪ್ರತಿ ಒಬ್ಬ ಅಫಘಾಣನು ತಲೆಗೆ ಇಷ್ಟಿಷ್ಟು ಹಣ ಕೊಡಬೇಕೆಂದು ಕಟ್ಟಳೆ ಮಾಡಿರುವರು. ಈ ಹಣಕ್ಕೆ "ಆತಿಥ್ಯಕರ" ವೆಂ ಬ ಹೆಸರು. ಈ ಕರವನ್ನು ಯಾವನೂ ತಪ್ಪಿಸಲಾರನು. ಈ ಉತ್ಪನ್ನದಿಂದ ಬಂದ ಗೃಹಸ್ಥರ ಆದರಸತ್ಕಾರವು ನಡಿಯುವದು. ಬಾಗಿಲಿಗೆ ಬಂದ ಅಥಿತಿಯನ್ನು ಅನ್ನ ನೀರುಗಳನ್ನು ಕೊಡದೆ ಹಿಂತಿರಿಗಿ ಕಳಿಸುವದು ಮರಣ ಸದೃಶ್ಯವೆಂದು ಇವರು ಬಗೆಯುವರು ಮನೆಮಾರುಗಳು ಮಾರಿ ಹೋದರಪ್ಪೇ ಹೋಯಿತು ಸತ್ಪಶಾಲಿತ್ವವು ನಷ್ಟವಾಗ ಬಾರದೆಂದು ಇವರು ಯಾವಾಗಲೂ ಹವಣಿಸುವರು.

MANUAL OF METHOD.

ಶಿಕ್ಷಾಕ್ರಮ.

(೧೦ ನೇ ಪುಟದಿಂದ ಮುಂದೆ ಸಾಗಿದ್ದು.)

ಅಂದರೆ ಮರವು ತಪ್ಪು ತಿಳುವಳಿಕೆಗಳಿಗೆ ಅಸ್ಪದವೇ ಉಳಿಯುಲಿಕ್ಕಿಲ್ಲ, ಈ ಮೂರು ಲಕ್ಷಣಗಳು ಯಾರಲ್ಲಿ

ಯೂ ಇರುವದು ಸರಿಯಲ್ಲ. ಹೊಸಶಿಕ್ಷಕರಲ್ಲಿ ಅಂತೂ ಇರಲೇಬಾರದು.

ಅಭ್ಯಾಸದ ವಹಿಗಳು—ಅಭ್ಯಾಸದ ವಹಿಗಳಿಂದ ಕೆಳಗೆ ಬರೆದ ಪ್ರಯೋಜನಗಳು ಸಾಧಿಸುತ್ತವೆ. ಅವು ಯಾವವೆಂದರೆ:—

೧. ಕಲಿತ ಪಾಠದ ಪ್ರತ್ಯುತ್ಪತ್ತಿಯು

೨. ಗಣಿತ ವ್ಯಾಕರಣ, ನಿಬಂಧ ಮುಂತಾದ ಪಾಠಗಳ ಪರಿಶೀಲನವು—

೩ ಪಾಜ್ಞ ಟಿಪ್ಪಣಿಗಳು

೪ ಸ್ಫುಟ ಟಿಪ್ಪಣಿಗಳು

ಮೊದಲಿನ ಮೂರು ವಹಿಗಳು ಪುನರಾವರ್ತನಕ್ಕೂ ಸಮಯ ವಿಶ್ಲೇಷಣಲ್ಲಿ ನೋಡಿಕೊಂಡು ಕಾಠಿಣ್ಯನಿರ್ವಾಹವನ್ನು ಮಾಡಿಕೊಳ್ಳಲಿಕ್ಕೂ ಉಪಯೋಗಿಸುತ್ತವೆ ಅದೇ ಮೇರೆಗೆ ಶಾಲಾವ್ಯವಸ್ಥಾಪಕರಿಗೂ ಇನಸ್ಪೆಕ್ಟರರಿಗೂ ಹೊಸಶಿಕ್ಷಕನು ಒಂದು ವರ್ಷದೊಳಗೆ ಮಾಡಿದ ಕೆಲಸವನ್ನು ಕುರಿತು ಮನಗಾಣಲಿಕ್ಕೂ ಇವುಗಳಿಂದ ಅನುವಾಗುತ್ತದೆ ಈ ವಹಿಗಳು ವಿಷಯಕ್ಕೆ ಒಂದರಂತೆ ಇಡುವದು ವಿಹಿತವು; ಮತ್ತು ಅವುಗಳಲ್ಲಿ ಬರೆದ ಪಾಠಗಳಿಗೆ ತಾರೀಖು ಹಾಕುವದು ಶ್ರೇಯಸ್ಕರವು. ಈ ವಹಿಯಲ್ಲಿ ಬರೆದ ಪಾಠಗಳು ಸುವಾಚ್ಯವಾಗಿಯೂ ಕ್ರಮಬದ್ಧವಾಗಿಯೂ ನಿರ್ಮಲವಾಗಿಯೂ ಚಂದವಾಗಿಯೂ ಪರೀಕ್ಷಿಸಲಿಕ್ಕೆ ಅನುಕೂಲವಾಗಿಯೂ ಇರಬೇಕು ಅಂದರೆ ಅವುಗಳಿಂದ ಕಲಿಸಲಿಕ್ಕೂ ಪರೀಕ್ಷೆಯ ವೇಳೆಯಲ್ಲಿ ಅವುಗಳಸಂಬಂಧದ ಪ್ರಶ್ನೆಗಳ ಉತ್ತರಗಳನ್ನು ಬರೆಯಲಿಕ್ಕೂ ಸುಲಭವಾಗುತ್ತದೆ.

ಶಿಕ್ಷಣದ ಸಹಾಯಗಳು—ಕಲಿಸುವ ವಿಷಯವನ್ನು ಆರಿಸಿ ಅದರ ಭಾಗೋಪಭಾಗಗಳನ್ನು ಕ್ರಮಗೊಳಿಸಿದ ತರುವಾಯ ಅದನ್ನು ವಿದ್ಯಾರ್ಥಿಗಳ ಮುಂದೆ ಯಾವ ಬಗೆಯಿಂದ ಇಡಬೇಕೆಂಬದನ್ನು ಕುರಿತು ಆಲೋಚಿಸುವದು ಶಿಕ್ಷಕನ ಎರಡನೇ ಕರ್ತವ್ಯವು. ಏನು ಕಲಿಸಬೇಕೆಂಬದನ್ನು ನಿರ್ಣಯಿಸಿದ ನಂತರ ಅದನ್ನು ಹ್ಯಾಗೆ ಕಲಿಸಬೇಕೆಂಬದನ್ನು ಆ

ಲೋಚಿಸುವದು ಅವಶ್ಯವು. ನಿರೀಕ್ಷಣ ಪ್ರಯೋಗಗಳ ಸಾಧನದಿಂದ ಕಲಿಸಬೇಕೋ? ವ್ಯಾಖ್ಯೆ, ವರ್ಣನೆ, ವಿವರಣೆಗಳ ಸಾಧನಗಳಿಂದ ಕಲಿಸಬೇಕೋ? ಇವುಗಳಲ್ಲಿ ಅನುಕೂಲವಾದವುಗಳನ್ನು ಆರಿಸಿ ಅವುಗಳಿಂದ ಕಲಿಸಬೇಕೋ? ಅಥವಾ ಇವೆಲ್ಲವುಗಳ ಸಹಾಯದಿಂದ ಕಲಿಸಬೇಕೋ ಎಂಬದನ್ನು ನಿಶ್ಚಯಿಸಲಿಕ್ಕೆಬೇಕು ಇದಲ್ಲದೆ ವಿವಕ್ಷಿತ ಅಂಶವು ವಿದ್ಯಾರ್ಥಿಗಳಿಗೆ ತಿಳಿಯಲಿಕ್ಕೆ ಅವಶ್ಯವಾದ ಪ್ರಶ್ನೆಗಳನ್ನೂ ಅವುಗಳ ಕ್ರಮ ಶಿಸ್ತುಗಳನ್ನೂ ಆಲೋಚಿಸುವದೂ ವಿದ್ಯಾರ್ಥಿಗಳು ಕೊಟ್ಟ ಉತ್ತರಗಳಲ್ಲಿ ಸರಿಯಾದವುಗಳನ್ನೂ ಸರಾಸರಿ ಸಮವಾದವುಗಳನ್ನೂ ಸ್ವೀಕರಿಸುವದೂ ಅಬದ್ಧವಾದವುಗಳನ್ನು ಅಲ್ಲಗಳೆಯುವದೂ ಅತ್ಯವಶ್ಯವು ಕಲಿಸಿದಪಾಠದ ಪ್ರತ್ಯುತ್ಪತ್ತಿಯನ್ನು ಪರೀಕ್ಷಾಸಾಧನದಿಂದ ಮಾಡಿಸುವದು ವಿಹಿತವಾಗಿರುವದರಿಂದ ಪರೀಕ್ಷಾ ಕ್ರಮವನ್ನಾದರೂ ಆಲೋಚಿಸತಕ್ಕದ್ದು ಇವೆಲ್ಲ ಸುಶಿಕ್ಷಣದ ಸಾಧನಗಳು ಇವೇ ಶಿಕ್ಷಕನ ಕೈದುಗಳು. ಮೇಲಾದ ಕೆಲಸವನ್ನು ಮಾಡಬೇಕಾದರೆ ತಕ್ಕ ಕೈದುಗಳನ್ನು ತಕ್ಕ ಕಾಲಕ್ಕೆ ತಕ್ಕ ರೀತಿಯಿಂದ ಉಪಯೋಗಿಸುವದು ಅವಶ್ಯವು.

ತರಗತಿಗಳ ಪರೀಕ್ಷೆ—ಪರೀಕ್ಷೆಯು ಸುಶಿಕ್ಷಣದ ಸಾಧನಗಳಲ್ಲಿ ಒಂದಾಗಿರುವದು ಅದನ್ನು ತಕ್ಕ ರೀತಿಯಿಂದ ಉಪಯೋಗಿಸಿದರೆ ಅದರಿಂದ ಒಳ್ಳೇ ಫಲವು ದೊರೆಯುವದು. ಬಹುತರವಾಗಿ ಎಲ್ಲ ಶಿಕ್ಷಕರು ವರ್ಷದಲ್ಲಿ ಕೆಲವು ಸಾರೆ ನಿಯತಾವಧಿಯಿಂದ ಪರೀಕ್ಷೆಗಳನ್ನು ತಕ್ಕೊಳ್ಳುವರು. ಈ ಪರೀಕ್ಷೆಯ ಪರಿಣಾಮಗಳನ್ನು ಎಚ್ಚರದಿಂದ ಬರೆದಿಡುವದಲ್ಲದೆ, ಆಗಾಗ್ಗೆ ಒಂದಕ್ಕೊಂದು ತರಿಮಾಡಿ ನೋಡಿ ಸುಧಾರಿಸಿದವನಿಗೆ ಉತ್ತೇಜನ ಕೊಟ್ಟು ಹಿಂದುಳಿದವನಿಗೆ ಹುರಿದುಂಬಿಸಿ ವಿದ್ಯಾಭಿರುಚಿಯನ್ನು ನೆಲೆಗೊಳಿಸಬೇಕು ಪರೀಕ್ಷಾ ಪ್ರಶ್ನೆಗಳು ಯೋಗ್ಯವಾಗಿಯೂ ಯಥಾರ್ಥವಾಗಿಯೂ ಇದ್ದರೆ ಪರೀಕ್ಷೆಯಿಂದ ನಿರ್ದಿಷ್ಟವಾದ ಕೊರತೆಗಳನ್ನು ತಿಳಕೊಂಡು ಶಿಕ್ಷಣದ ಕ್ರಮವನ್ನು ತಿದ್ದಲಿಕ್ಕೆ ಅನುಕೂಲವಾಗುತ್ತದೆ.

1. ಬಗೆಗಳು—ಪರೀಕ್ಷೆಯ ಬಗೆಗಳು ಮುಖ್ಯವಾಗಿ ಮೂ

ರಿರುತ್ತವೆ. ೧. ಬರಹಮೂಲಕ ಪರೀಕ್ಷೆ ೨. ವಾಙ್ಮೂಲಕ ಪರೀಕ್ಷೆ. ೩ ಉಭಯವಿಧ ಪರೀಕ್ಷೆ ಈ ಮೂರು ಬಗೆಯ ಪರೀಕ್ಷೆಗಳ ಗುಣದೋಷಗಳನ್ನು ಕೆಳಗೆ ವಿವರಿಸುವ.

II. ಬರಹಮೂಲಕ ಪರೀಕ್ಷೆಯ ಗುಣಗಳು.

೧ ಪರರ ಸ್ವಹಾಯವಿಲ್ಲದೆ ಸ್ವಬುದ್ಧಿಯಿಂದ ವಿದ್ಯಾರ್ಥಿಗಳಿಗೆ ಉತ್ತರಕೊಡಬೇಕಾಗುತ್ತದೆ. ಇದೇ ಈ ಬಗೆಯ ಮುಖ್ಯ ಲಾಭವು.

೨ ಪ್ರಶ್ನಗಳಿಗೆ ಸರಿಯಾದ ಉತ್ತರಗಳನ್ನು ಬರಹ ಮೂಲಕವಾಗಿ ಕೊಡುವ ಪ್ರಸಕ್ತಿಯಲ್ಲಿ ಪಾಠಗಳನ್ನು ಲಕ್ಷ್ಯ ಗೊಟ್ಟು ಎಚ್ಚರದಿಂದ ಓದಬೇಕಾಗುತ್ತದೆ. ಇದರಿಂದ ಲಕ್ಷ್ಯ ಜಾಗ್ರತೆಗಳ ಚಟಹತ್ತುತ್ತದೆ.

೩ ವಾಕ್ಯ ರಚನೆಯ ಅಭ್ಯಾಸವು ಬೆಳೆಯುತ್ತದೆ

ದೋಷಗಳು.

೧. ವಾಕ್ಯ ರಚನಾನೈಪುಣ್ಯವು ಕೆಲವರಲ್ಲಿ ಸ್ವಾಭಾವಿಕವಾಗಿರುತ್ತದೆ. ಕೆಲವರಿಗೆ ಅಭ್ಯಾಸದಿಂದ ಸಾಧ್ಯಮಾಡಿಕೊಳ್ಳಬೇಕಾಗುತ್ತದೆ. ಆದರೆ ವಾಕ್ಯರಚನಾ ಕೌಶಲ್ಯವಿಲ್ಲದವರು ಆರಂಭದಲ್ಲಿ ಕೈ ಸೋತು ಎದೆಗುಂದುವ ಸಂಭವವುಂಟು. ಈ ಪ್ರಸಂಗಗಳನ್ನು ಶಿಕ್ಷಕನು ಗೊತ್ತುಹಚ್ಚಿ ಉತ್ಸಾಹ ಹೀನರಾದವರಿಗೆ ಯುಕ್ತಿಪ್ರಯುಕ್ತಿಯಿಂದ ಹುರಿದುಂಬಿಸಿ ಹಾದಿಗೆ ತರಬೇಕು

೨ ಇದಕ್ಕೆ ವೇಳೆಯು ಬಹಳ ಹತ್ತುತ್ತದೆ.

೩. ಅನುಮಾನಕ್ಕೆ ಅವಕಾಶದೊರೆಯುತ್ತದೆ ಪರೀಕ್ಷೆಯಲ್ಲಿ ಬಹುತರವಾಗಿ ಕೇಳಬಹುದೆಂದು ತೋರುವ ಭಾಗಗಳನ್ನೆಷ್ಟೇ ವಿದ್ಯಾರ್ಥಿಗಳು ಸಿದ್ಧಮಾಡುವರು. ಈ ಅನುಮಾನದ ಚಟವು ಬಹಳ ಹಾನಿಕರವಾದದ್ದು.

೪ ನಿಸ್ಸಾರವಾದ ರಗಳೆಯ ಚಟವು ಹತ್ತುವೆದು. ವಿದ್ಯಾರ್ಥಿಯು ಅಪದ್ಧ ಸುಪದ್ಧವನ್ನು ಬಹಳವಾಗಿ ಬರೆದು ಅದರಲ್ಲಿ ತನ್ನ ಅಜ್ಞಾನವನ್ನು ಅಡಿಗಿಸುವ ಪ್ರಯತ್ನಮಾಡುವನು.

III ವಾಙ್ಮೂಲಕ ಪರೀಕ್ಷೆಯ ಗುಣದೋಷಗಳು.

ಗುಣಗಳು.

೧. ಪರೀಕ್ಷೆಯು ಅಲ್ಪವೇಳೆಯಲ್ಲಿ ಆಗುತ್ತದೆ.

ಎ ಉದ್ದೇಶವು ಕಾಯ್ದುಕೊಳ್ಳಲ್ಪಡುತ್ತದೆ.

೩. ಆಯಾ ವಿದ್ಯಾರ್ಥಿಗಳಿಗೆ ಯಥಾನ್ಯಾಯವಾಗಿ ಪರೀಕ್ಷೆಯನ್ನು ತೆಗೆದುಕೊಳ್ಳಲಿಕ್ಕೆ ಅನುವಾಗುತ್ತದೆ. ವರ್ಗದೊಳಗಿನ ವಿದ್ಯಾರ್ಥಿಗಳು ಎಲ್ಲರು ಬುದ್ಧಿಯಿಂದ ಸಮಾನರಾಗಿರುವದಿಲ್ಲ. ಆದಕಾರಣ ಎಲ್ಲರಿಗೂ ಒಂದೇ ಪ್ರಕಾರದ ಪರೀಕ್ಷೆಯು ನ್ಯಾಯ್ಯವಾಗಲಾರದು. ವಿದ್ಯಾರ್ಥಿಗಳಯೋಗ್ಯತೆಯ ಮೇರೆಗೆ ಪರೀಕ್ಷಾಪ್ರಶ್ನೆಗಳಲ್ಲಿ ಹೆಚ್ಚು ಕಡಿಮೆಯಾಗಲಿಕ್ಕೇಬೇಕು. ಈ ಕೆಲಸವು ವಾಜ್ಮೂಲಕ ಪರೀಕ್ಷೆಯಲ್ಲಿ ಸಾಧ್ಯವಾಗುತ್ತದೆ.

ದೋಷಗಳು

೧. ಶಿಕ್ಷಕನು ಚತುರನಿರದೆ ಮಂದನಾಗಿದ್ದರೆ ಸೋಮಾರಿಯಾದ ಹುಡುಗರು ಉದ್ಯೋಗಿಗಳೂ ಚತುರರೂ ಆದ ತಮ್ಮ ಜೋತೆಯವರ ಹಿಂದೆ ಅಡಗುವರು.

೨. ಈ ಬಗೆಯ ಪರೀಕ್ಷೆಯಲ್ಲಿ ಬಹುಜನ ವಿದ್ಯಾರ್ಥಿಗಳು ಒನ್ಮೆಲೆ ಉತ್ತರಕೊಡುವ ಸಂಭವವುಂಟು. ಈ ನಡತೆಯನ್ನು ತಿದ್ದಬೇಕಾದರೆ ಶ್ರಮವೂ ವೇಳೆಯೂ ನಿಷ್ಕಾರಣವಾಗಿ ಹೆಚ್ಚಾಗುವದಲ್ಲದೆ ಬುದ್ಧಿವಂತ ಹುಡುಗರ ಉತ್ಸಾಹ ಭಂಗವಾಗುವ ಸಂಭವವುಂಟು. ಅನುಮಾನದ ದುಷ್ಟಟವೂ ವಿದ್ಯಾರ್ಥಿಗಳಿಗೆ ಹತ್ತುತ್ತದೆ.

IV ಉಭಯವಿಧ ಪರೀಕ್ಷೆ —

೧. ಈ ಬಗೆಯು ಬಹಳ ಪ್ರಯೋಜನಕರವಾದದ್ದು ಇದರಿಂದ ವಿದ್ಯಾರ್ಥಿಗಳ ನೈಪುಣ್ಯವು ಸ್ಪಷ್ಟವಾಗಿ ಬೆಳಿಗೆ ಬರುತ್ತದೆ.

೨. ಇದು ಬಹುಸಮ್ಮತವಾದದ್ದು.

೪ ಪ್ರಶ್ನೆಗಳು

I ಫಲ ಪ್ರಾಪ್ತಿಯ ನಿಯಮಗಳು.

ಶಿಕ್ಷಕನ ಯೋಗ್ಯತೆಯು ಇದರಿಂದ ವ್ಯಕ್ತವಾಗಪ್ಪದು ತಪ್ಪ್ಯತರಿಂದಲೂ ಆಗುವದಿಲ್ಲ. ಪ್ರಶ್ನಚಾತುರ್ಯವು ಸುಸಾಧ್ಯವಲ್ಲ. ಎಲ್ಲರಲ್ಲಿಯೂ ಕಾಣಬಹುದಾದಂಥದ್ದೂ ಅಲ್ಲ, ಹೊಸ ಶಿಕ್ಷಕರಲ್ಲಂತು ಅಪರೂಪವಾಗಿ ಕಂಡು ಬರುತ್ತದೆ.

ಮೇಲಾದ ಮಾದರಿಗಳನ್ನು ಕಂಡು ನೋಡಿ ಅನುಕರಿಸಿದ ಹೊರ್ತು ಚಾತುರ್ಯವುಬಾರದು. ಮೇಲಾದ ಮಾದರಿಗಳಲ್ಲದೆ ಪ್ರಥಕ್ಕರಣ ವರ್ಗೀಕರಣ ಸಾಮರ್ಥ್ಯಗಳೂ ಸುಸಂಗತತೆ ವಿಸಂಗತತೆಗಳನ್ನು ಅರಿತುಕೊಳ್ಳುವ ಸಾಮರ್ಥ್ಯಗಳೂ ಸುಸಂಗತತೆಯನ್ನು ಕಾಯ್ದುಕೊಳ್ಳುವ ಸಾಮರ್ಥ್ಯವೂ ವಿಷಯವನ್ನು ಸಮರ್ಪಕವಾಗಿ ವಿವರಿಸುವ ಸಾಮರ್ಥ್ಯವೂ ಬೇಕಾಗುತ್ತವೆ, ಆದ್ದರಿಂದ ಮೇಲಾದ ಮಾದರಿಗಳನ್ನರಿಯದ ಹೊಸಶಿಕ್ಷಕರಲ್ಲಿ ಪ್ರಶ್ನಮಾಡುವ ಚಾತುರ್ಯವು ಇರುವದಿಲ್ಲೆಂಬದೇನು ದೊಡ್ಡಮಾತಲ್ಲ. ಹೊಸಶಿಕ್ಷಕರು ಈ ಸಾಮರ್ಥ್ಯಗಳನ್ನು ಪರಿಶ್ರಮದಿಂದ ಸಾಧ್ಯಮಾಡಿಕೊಂಡು ಅಭ್ಯಾಸದಿಂದ ಅವುಗಳನ್ನು ಬೆಳಿಸಿಕೊಳ್ಳಲಿಕ್ಕೆಬೇಕು.

II. ಪಶ್ನಗಳ ಉದ್ದೇಶಗಳು.

ಈ ಉದ್ದೇಶಗಳು ಸ್ಪಷ್ಟವಾಗಿರುತ್ತವೆ. ಆದರೆ ಅವುಗಳೊಳಗಿನ ಮುಖ್ಯವಾದವುಗಳು ಯಾವವೆಂದರೆ.

೧ ವಿದ್ಯಾರ್ಥಿಗಳಿಗೆ ಗೊತ್ತಿದ್ದದ್ದನ್ನು ಕಂಡು ಹಿಡಿಯುವದು ಇದು ಶಿಕ್ಷಕನಿಗೆ ಬಹಳ ಅವಶ್ಯವಾದದ್ದು. ಇದನ್ನು ತಿಳಿಕೊಂಡು ಮಾಡಿದ ಕೆಲಸವು ದೃಢವೂ ಚಂದವೂ ಆಗುವದು. ಇದರಂತೆ ಕಾಲಕಾಲಕ್ಕೆ ಕಲಿಸುವ ಪಾಠಗಳಲ್ಲಾದರೂ ಆಗಾಗ್ಗೆ ಮಾಡುವದು ವಿಹಿತವು,

೨ ವಿದ್ಯಾರ್ಥಿಗಳ ಲಕ್ಷವನ್ನೂ ಉತ್ಸಾಹವನ್ನೂ ಕಾಯ್ದುಕೊಳ್ಳುವದು ವಿದ್ಯಾರ್ಥಿಗಳ ಲಕ್ಷವು ನಡೆದ ಕೆಲಸದ ಕಡೆಗಿರುವದೋ, ಶಿಕ್ಷಕನು ಹೇಳಿದ್ದನ್ನು ಅವರು ಆದರದಿಂದ ಕೇಳುವರೋ, ವಿದ್ಯಾರ್ಥಿಗಳ ಮನಸ್ಸು ಉತ್ಸಾಹವುಳ್ಳದ್ದಿರುವದೋ, ಮುಂತಾದ ಸಂಗತಿಗಳನ್ನು ಶಿಕ್ಷಕನು ಎಚ್ಚರದಿಂದ ನೋಡಶಿಕ್ಕೆಬೇಕು ಇವುಗಳ ಕಡೆಗೆ ದುರ್ಲಕ್ಷವಾದರೆ ವಿಕಲ್ಪನೆಗಳಿಗೂ ತಪ್ಪು ತಿಳುವಳಿಕೆ ತಪ್ಪುಗ್ರಹಿಕೆಗಳಿಗೂ ಅಸ್ಪದವಾಗುವದಲ್ಲದೆ ಶಿಕ್ಷಕನು ಮಾಡಿದ ಶ್ರಮವು ವ್ಯರ್ಥವಾಗುವದು.

III ಪ್ರಶ್ನಮಾಡುವ ಮೆಟ್ಟುಗಳು.

೧. ಪಾಠದ ಆರಂಭದಲ್ಲಿ

೨. ಪಾಠದ ಅಂತ್ಯದಲ್ಲಿ?
೩. ಪಾಠದ ಮುಖ್ಯಭಾಗದ ಅಂತ್ಯದಲ್ಲಿ
೪. ಶಿಕ್ಷಕನು ಹೇಳುವ ಯಾವದೊಂದು ಸಂಗತಿಯು ಸರಿಯಾಗಿ ವಿದ್ಯಾರ್ಥಿಗಳಿಗೆ ತಿಳಿದಿರುವದಿಲ್ಲೆಂದು ಸಂಶಯ ಬಂದಲ್ಲಿ.

TEACHER'S WORK & DUTY (*Communicated*)

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(೧೩ನೇ ಪ್ರಟದಿಂದ ಮುಂದೆ ಸಾಗಿದ್ದು.)

ಇನ್ನು ಈಗಿನ ಜನರ ವಿದ್ಯಾಭಿರುಚಿಯನ್ನು ಕುರಿತು ವಿಚಾರಮಾಡುವಾ? ಮೇಲೆ ವಿವರಿಸಿದ ಪ್ರಾಚೀನ ಕಾಲದ ವಿದ್ಯಾಭಿರುಚಿಯಿಂದ ಭಿನ್ನವಾದ ವಿದ್ಯಾಭಿರುಚಿಯು ಈಗಿನ ಜನರಲ್ಲಿರುತ್ತದೆ. ಪ್ರಾಚೀನ ಕಾಲದ ಬಹುಜನರು ವಿದ್ಯಾಭ್ಯಾಸಕ್ಕೋಸ್ಕರ ಇತರ ಸುಖೋಪಭೋಗಗಳನ್ನು ತುಚ್ಛೀಕರಿಸುತ್ತಿದ್ದರೆಂದು ಮೇಲೆ ಹೇಳಿದೆ ಆದರೆ ಈಗಿನವರು ಕೇವಲ ಸುಖೋಪಭೋಗದ ಪ್ರಾಪ್ತಿಗಾಗಿ ವಿದ್ಯಾಭ್ಯಾಸ ಮಾಡುವರು ಈಗಿನ ಸುಧಾರಣೆಯುಯೋಗದಿಂದ ವ್ಯಾಪಾರದ ವೃದ್ಧಿಯಾಗಿದೆ, ಜನರ ಸುಖೋಪಭೋಗದ ಮೋಹಕವಾದ ಸಾಧನಗಳು ಹೆಚ್ಚಾಗಿವೆ. ಕಾರಣ ಮನುಷ್ಯನು ಸುಖೋಪಭೋಗದ ಬಾಹ್ಯಸಾಧನಗಳಿಗೆ ಮರುಳಾಗಿ ತತ್ವಜ್ಞಾನಕ್ಕೆ ಬೇಸರಿಯುತ್ತಾನೆ. ದ್ರವ್ಯಸಂಪಾದನೆ ಮಾಡಿ ಸುಖಿಯಾಗಿರುವವನಿಗೇ ಈಗ ವ್ಯವಹಾರದಲ್ಲಿ ವಿಶೇಷ ಮಾನವಿರುವದರಿಂದ ಆ ಮಾನಕ್ಕೆ ಭಂಗಬರಲು ಕೇವಲ ನಿಷ್ಕಾಮದಿಂದ ಜ್ಞಾನಸಂಪಾದನೆ ಮಾಡುವ ಉತ್ಸಾಹ ಧೈರ್ಯಗಳು ಈಗಿನ ಜನರಲ್ಲಿ ಬಹುತರ ಹುಟ್ಟದಿರುವದು ಸ್ವಾಭಾವಿಕವು ಸರಕಾರದವರು ಒಳ್ಳೆಯ ಉದ್ದೇಶದಿಂದ ವಿದ್ಯಾದಾನ ಮಾಡುತ್ತಿದ್ದಾಗ್ಯೂ ಜನರು ಕೇವಲ ದ್ರವ್ಯಸಂಪಾದನೆಯ ವಿಶೇಷವಾಗಿ ಸರಕಾರಿ ನೌಕರಿಯ ಉದ್ದೇಶದಿಂದ ವಿದ್ಯಾಭ್ಯಾಸ ಮಾಡುತ್ತಿರುವದರಿಂದ ಈಗ ನಿಜವಾದ ವಿದ್ಯಾಭಕ್ತ

ವೇ ವಿದ್ಯಾರ್ಥಿಗಳಾಗುವ ನಿಯಮವಿಲ್ಲ. ಕಾಟತೀರಿಸುವದ
ರಿಂದ ಯಾವಕೆಲಸವೂ ಚನ್ನಾಗಿ ಆಗುವದಿಲ್ಲ ಅದರಂತೆ ಸ
ರಕಾರಿ ನೌಕರಿಯ ಉದ್ದೇಶದಿಂದ ಹ್ಯಾಗಾದರೂ ಮಾಡಿ
ಜಪ್ತಿಂಟು ವರ್ಷಗಳಲ್ಲಿ ವಿಷಯುಗಳನ್ನು ಕಲಿತು ಸರಟೀಫಿ
ಕೇಟು ಇಲ್ಲವೆ ಪದವಿದೊರಕಿಸಿ ಕೆಲಸದೊರೆತ ಮೇಲೆ ವಿ
ದ್ಯಾವ್ಯಾಸಂಗವನ್ನು ಬಿಟ್ಟು ಬಿಡುವವರ ಎಲ್ಲ ವಿಷಯುಗಳು
ಮರೆತು ಹೋಗುವದು ಅನುಭವದವಾತಾಗಿರುವದು. ಬೇ
ಗ ಕಾಯುವ ಪದಾರ್ಥವು ಬೇಗ ಆರುತ್ತದೆಂಬ ನಿಯಮ
ದಂತೆ ಆಗುವ ಈ ಜನರ ಸ್ಥಿತಿಯು ಬಹಳ ದುಃಖಕರ
ವಾಗಿರುವದು. ಇಂಥಜನರು ತಮ್ಮ ಉದರಪೋಷಣ ಮಾ
ಡಿಕೊಂಡು ಕೃತಕೃತ್ಯರಾದೆವೆಂದು ತಿಳಿದರೂ ಇವರಿಂದ
ಲೋಕಹಿತವೂ ನಿಜವಾದ ವಿದ್ಯಾವೃದ್ಧಿಯೂ ಆಗುತ್ತವೆಂದು
ತಿಳಿಯಲಾಗದು ಇತ್ತಿತ್ತಲಾಗಿ ಸರಕಾರೀ ಕೆಲಸಗಳು ದೊ
ರೆಯುವದು ದುರ್ಲಭವಾಗಲು ಎಷ್ಟೋಜನರು "ನಮ್ಮ
ಹುಡುಗರು ಕಲಿತು ಮಾಡುವದೇನು? ಬಿ. ಏ. ಎಮ್ಮ.
ಏ. ಆದವರೇ ಕೆಲಸವಿಲ್ಲದೆ ಕೂತಿದ್ದಾರೆ, ಇತ್ಯಾದಿ ಉ
ದ್ಗಾರಗಳನ್ನು ಹೊರಗೆಡವುತ್ತ ತಮ್ಮ ಮಕ್ಕಳ ವಿದ್ಯಾ
ಭ್ಯಾಸಕ್ಕಾಗಿ ಉದಾಸೀನರಾಗುತ್ತಾರೆ ಇಂಥ ಲಶಿಬುರಕ್ಷ
ಸ್ಥಿತಿಯಿಂದ ವಿದ್ಯೆಯ ಉನ್ನತ ಉದ್ದೇಶಗಳು ಹ್ಯಾಗೆ ನೆ
ರವೇರುವವು? ಕೇವಲ ಹಣಗಳಿಸುವ ವಿಚಾರದಲ್ಲಿ ಮು
ಗ್ಧರಾದ ಈಗಿನ ಜನರಿಗೆ ಹಣಗಳಿಸತಕ್ಕ ಒಂದು ಅನಿ
ಶ್ಚಿತಸಾಧನವಾದ ವಿದ್ಯೆಯ ಮತ್ತು ಅದನ್ನು ಕಲಿಸುವ ಶಿಕ್ಷ
ಕನ ಮಹತ್ವವು ಹೇಗೆ ತಿಳಿಯಬೇಕು? ಆದರೆ ಈ ವರ್ಣ
ನೆಯುಮೇಲಿಂದ ಈಗ ವಿದ್ಯೆಯ ನಿಜವಾದ ಮಹತ್ವವು ಕಡಿ
ಮೆಯಾಗಿರುತ್ತದೆಂತಲೂ, ನಿಜವಾದ ವಿದ್ಯಾಭಿಮಾನಿಗಳು
ಇಲ್ಲೆಂತಲೂ ತಿಳಿಯಲಾಗದು. ವಿದ್ಯೆಯಮಹತ್ವವನ್ನು ಬಲ್ಲ
ಹಾಗೂ ಕೇವಲ ವಿದ್ಯಾಸಂಗದಲ್ಲಿಯೇ ಹೊತ್ತುಗಳೆಯುವ
ಮಹಾತ್ಮರು ವಿದ್ಯೆಗೂ ಚಲೋ ಶಿಕ್ಷಕನಿಗೂ ಮಾನಕೊ
ಟ್ಟೇಕೊಡುವರು. ಈಗಿನ ಕಾಲದಲ್ಲಿಯೂ ವಿಖ್ಯಾತರಾದ ವಿ
ದ್ವಾಂಸರು ನಮ್ಮ ದೇಶದಲ್ಲಿ ಸಹ ಹಲವರಿರುವರು ಆದರೆ
ಹೋದವಿಷ್ಟೇ ಪ್ರಾಚೀನಕಾಲದಲ್ಲಿ ವಿದ್ಯಾವ್ಯಾಸಂಗ ಮಾಡಿದ

ಜನರು ಕಡಿಮೆಯಿದ್ದು, ಅವರು ಕೇವಲ ವಿದ್ಯಾವ್ಯಸನಿಗಳಾ
ಗಿದ್ದರು. ಈಗಿನ ಕಾಲದಲ್ಲಿ ವಿದ್ಯೆಕಲಿತ ಜನರು ಹೆಚ್ಚಾಗು
ತ್ತ ನಡೆದಿದ್ದು ಅದರಲ್ಲಿ ಬಹುತರ ವಿದ್ಯಾವ್ಯಸನದ ಅಭಾ
ವವು ಮಾತ್ರ ದೃಷ್ಟಿಗೆ ಬೀಳುತ್ತದೆ.

ಈ ಪ್ರಕಾರ ಪ್ರಾಚೀನಕಾಲದ ಜನರ ವಿದ್ಯಾಭಿರುಚಿ
ಗೂ ಈಗಿನಕಾಲದ ಜನರ ವಿದ್ಯಾಭಿರುಚಿಗೂ ಇರುವ ವೆ
ಲಕ್ಷಣ್ಯವನ್ನು ಮೇಲೆ ವಿವರಿಸಲಾಯಿತು. ಇನ್ನು ಪ್ರಾಚೀ
ನಕಾಲದ ಗುರುಗಳ ಸ್ಥಿತಿಯಲ್ಲಿಯೂ, ಈಗಿನ ಕಾಲದ
ಗುರುಗಳ ಸ್ಥಿತಿಯಲ್ಲಿಯೂ ಇರುವ ಅಂತರವನ್ನು ವಿವರಿಸು
ವಾ. ಪ್ರಾಚೀನಕಾಲದಲ್ಲಿ ಗುರುತ್ವದ ಪದವಿಯು ಯೋಗ್ಯ
ಜನರಿಗೆ ಮಾತ್ರ ದೊರೆಯುತ್ತಿತ್ತು. ಯಾಕಂದರೆ ಆ ಕಾಲ
ದ ನಿಜವಾದ ವಿದ್ಯಾಭಿಮಾನಿಗಳು ಯೋಗ್ಯ ಗುರುವನ್ನು
ಅರಿಸಿಕೊಳ್ಳುತ್ತಿದ್ದರು. ಆಗಿನ ಗುರುಗಳು ವಿದ್ಯಾ ವಿಕ್ರಯ
ಮಾಡುವದು ಪರಮ ಪಾಪವೆಂದು ತಿಳಿಯುತ್ತಿದ್ದರು ಜ್ಞಾ
ನಾನಂದದಲ್ಲಿ ಮುಳುಗಿರುವವರಾದ್ದರಿಂದ ಅವರಿಗೆ ನಶ್ವರವಾದ
ಐಹಿಕ ಸುಖೋಪಭೋಗಗಳು ಬಾಧಿಸುತ್ತಿದ್ದಿಲ್ಲ. ಅದರಿಂ
ದ ಅವರು ಲೋಭರಹಿತರೂ, ಸದಾಚಾರಿಗಳೂ ಆಗಿದ್ದರು.
ಶಿಷ್ಯಸಂಪತ್ತೇ ಅವರ ಸಂಪತ್ತಾಗಿರುವದು. ವಿದ್ಯೆಯಲ್ಲಿಯೇ
ಅವರ ವ್ಯಸನವು ತೋರುವದು. ಪರೋಪಕಾರದಲ್ಲಿಯೇ
ಅವರ ಮನಸ್ಸು ತೊಡಗಿರುವದು. ನಿಸ್ಪೃಹತೆಯು ಅವರ
ಬಿರುದಾಗಿರುವದು. ಇಂಥ ಸದ್ಗುಣಮಂಡಿತರಾದ ಗುರುಗ
ಳ ಪ್ರಖರವಾದ ವಿದ್ವತ್ಪರ್ಷತ್ಸಿಗೆ ಈಗಿನ ಕಾಲದಲ್ಲಿಯಾ
ದರೂ ಮಾನಸಿಗಲಿಕ್ಕಿಲ್ಲವೋ ? ಅಂದಬಳಿಕ ವಿದ್ಯಾವ್ಯಸನಿ
ಗಳಾದ ಆಗಿನ ವಿದ್ಯಾರ್ಥಿಗಳಿಗೆ ಇಂಥ ಮಹಾತ್ಮರಾದ ಗು
ರುಗಳು ಪರಬ್ರಹ್ಮಸ್ವರೂಪವಾಗಿ ತೋರುವದೇನಾಶ್ಚ
ರ್ಯವು ? ಆ ಶಿಷ್ಯರು ಗುರುದಕ್ಷಿಣೆಗಾಗಿ ತಮ್ಮ ಪ್ರಾಣ
ವನ್ನು ಸಹ ಕೊಡಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದಿಲ್ಲ.
ಆದರೆ ಈಗಿನಕಾಲದಲ್ಲಿ ಈ ಸ್ಥಿತಿಯು ಗುರುಗಳನ್ನು ಹುಡು
ಕಿದರೆ ಎಷ್ಟು ಜನರು ದೊರೆಯಬಹುದು ? ಈಗಿನ ಗುರು
ವರ್ಗವು ವಿದ್ಯೆಯು ತಮ್ಮ ಕೇವಲ ಉಪಜೀವನದ ಸಾಧ

ನನೆಂದು ತಿಳಿದು ಅದನ್ನು ಸಂಪಾದಿಸಿರುವದರಿಂದ ಅವರ ಇಚ್ಛೆಯ ಪ್ರಕಾರ ಅವರಿಂದ ಉದರಂಭರಣದ ಹೊರತು ಉನ್ನತ ಹೇತುಗಳು ಬಹುತರ ಸಿದ್ಧಿಸಲಾರವು. ಅಂದಬಳಿಕ ಹೊಟ್ಟೆ ಬಟ್ಟೆಗಳಿಗಾಗಿ ಬಡೆದಾಡುವ ಈಗಿನ ಗುರುವರ್ಗಕ್ಕೆ ಶಿಷ್ಯರಿಂದಲೂ, ಜನಸಮಾಜದಿಂದಲೂ ಅತ್ಯುಚ್ಚತರ ಗೌರವದ ಮಾನವು ಹ್ಯಾಗೆ ದೊರೆಯಬೇಕು? ಇಂಥವರಿಗೂ ಕೂಡ ಆ ಗೌರವದ ಮಾನವು ದೊರೆತರೆ ಶ್ರೇಷ್ಠ ಗುರುತ್ವದ ಅಪಮಾನವಾದಂತಾಗಲಿಕ್ಕಿಲ್ಲವೋ? ಈಗಿನ ಗುರುಗಳ ಮಾನವು ತಿಂಗಳೊಂದಕ್ಕೆ ಇಂತಿಷ್ಟು ರೂಪಾಯಿಗಳೆಂದು ಗೊತ್ತಾಗಿರುವದರಿಂದ ಅವರು ಹೆಚ್ಚಿನ ಮಾನವನ್ನು ಬೇಡುವ ಕಾರಣವೇನು? ಜನರು ಆ ಹೆಚ್ಚಿನ ಮಾನವನ್ನು ಕೊಡವಿದ್ದರೆ ವ್ಯಸನಪಟ್ಟು ಅದನ್ನು ಬಯಸಲಿಕ್ಕೆ ಹಕ್ಕಾದರೂ ಯಾವದು? ಇನ್ನು ರಾಜಕೀಯ ಅಧಿಕಾರಿಗಳಿಗೆ ದೊರೆಯುವಂಥ ಮಾನವು ಶಿಕ್ಷಕರಿಗೆ ಎಪ್ಪು ಮಾತ್ರವೂ ದೊರೆಯದ ಹಾಗಿದ್ದದರಿಂದ ಅದನ್ನು ನೋಡಿ ತಮ್ಮನ್ನು ಹಳಿದುಕೊಳ್ಳುವವನು ಗುರುತ್ವವನ್ನು ಬಿಟ್ಟು ಅವಿಶಿಷ್ಟ ರಾಜಕೀಯ ಅಧಿಕಾರವನ್ನು ಸಂಪಾದಿಸತಕ್ಕದ್ದು. ಹಾಗೆ ಮಾಡದಿದ್ದರೆ ಪಲ್ಲಕ್ಕಿಯಲ್ಲಿ ಕುಳಿತು ಕಲ್ಲು ಹುಡುಕುವವರಂತೆ ಅವರ ಸ್ಥಿತಿಯು ಲಜ್ಜಾಸ್ಪದವಾಗುವದು ಆಶ್ಚರ್ಯವಲ್ಲ, ಹಿಂದಿನ ಗುರುಗಳ ಕೀರ್ತಿಯನ್ನು ಕೇಳಿ ಅವರಿದ್ದೆಡೆಗೆ ಶಿಷ್ಯರು ಹೋಗಿ ಅವರನ್ನು ಸೇವಿಸುತ್ತಿದ್ದರು. ಈಗಿನ ಕೆಲಗುರುಗಳು ಶಿಷ್ಯರ ಮನೆ ಮನೆಗೆ ಹೋಗಿ ಶಿಷ್ಯವರ್ಗವನ್ನು ಸೇವಿಸಬೇಕಾಗಿರುವದು; ಆದರೆ ಇದು ಗುರುತ್ವದ ದೋಷವಿರವೆ ಗುರುತ್ವವನ್ನು ಸಂಪಾದಿಸಿದ ಮನುಷ್ಯನ ಹಾಗು ವಿದ್ಯಾರ್ಥಿಗಳ ದೋಷವಿರುತ್ತದೆ. ಮೊದಲು ಗುರುತ್ವವು ಬಹು ಪ್ರಯಾಸದಿಂದ ದೊರೆಯುತ್ತಿದ್ದು, ಅದನ್ನು ಪಡಿಸುವ ಕೆಲಸವಾದರೂ ಬಹು ದುರ್ಧರವಾಗಿತ್ತು. ಆದರೆ ಈಗ ತಿಂಗಳಿಗೆ ಏಳು ರೂಪಾಯಿಕೊಟ್ಟರೆ ತೀರ ಸಾಧಾರಣ ಮನುಷ್ಯನಾದರೂ ಗುರುತ್ವವನ್ನು ಸಹಜವಾಗಿ ವಹಿಸುವನು. ಅಂದಬಳಿಕ ರತ್ನಗಳಂತೆ ಹೊಳೆಯುತ್ತಿದ್ದ

ಪ್ರಾಚೀನ ಕಾಲದ ಮಹಾತ್ಮರಾದ ಗುರುಗಳ ಮಾನವೆತ್ತ, ಕಾಡುಕಲ್ಲಿನಂತೆ ಸರ್ವಸಾಧಾರಣವಾದ ಈಗಿನ ಶಿಕ್ಷಕವರ್ಗದ ಮಾನವೆತ್ತ? ಆದರೆ ಈ ಮಾನದ ಏರಿಳಿತಗಳಿಗೆ ಕೇವಲ ಜನ ಸಮಾಜವಾಗಲಿ ಶಿಕ್ಷಕನ ಕೆಲಸವಾಗಲಿ ಕಾರಣವಿರದೆ ಶಿಕ್ಷಕನ ಕೆಲಸನನ್ನು ವಹಿಸಿದವನ ಜ್ಞಾನನೀತಿಗಳ ಪರಿಮಾಣವು ಕಾರಣವಾಗಿರುತ್ತದೆ ಸರ್ವವ್ಯಾಪಕನಾದ ದೇವರ ಕೃಪೆಯು ಆರಾಧಕರ ಯೋಗ್ಯತೆಯಂತೆ ಹೆಚ್ಚುಕಡಿಮೆ ದೊರೆಯುವ ಹಾಗೆ ಶಿಕ್ಷಕನ ಕೆಲಸದ ಅಬಾಧಿತವಾದ ಉಜ್ವಲಮಾನವು ಶಿಕ್ಷಕರ ಯೋಗ್ಯತೆಯಂತೆ ಹೆಚ್ಚುಕಡಿಮೆಯಾಗಿ ದೊರೆಯುವದು. ಇದು ಕೇವಲ ಉಪಾಧಿಯ ದೋಷವಲ್ಲದೆ ಅಧಿಷ್ಠಾನದ ದೋಷವಲ್ಲವು ಸಾರಾಂಶ ಶಿಕ್ಷಕನ ಕೆಲಸಕ್ಕೆ ಮಾನವಿಲ್ಲೆಂದು ಎಷ್ಟು ಮಾತ್ರವೂ ತಿಳಿಯಲಾಗದು. ಜ್ಞಾನಸಂಪನ್ನನಾದ ಸದಾಚರಣೆಯ ಸದ್ಗುರುವಿಗೆ ಈಗಿನ ಕೇವಲ ಅಜ್ಞಾನಿಯಾದರೂ ಮಾನಕೊಡದೆ ಇರನು. ಯಾಕಂದರೆ ಅತ್ಯಂತ ಪವಿತ್ರವೂ, ಗೌರವಪುಳ್ಳದ್ದೂ ಆದ ಜ್ಞಾನ ಧನಕ್ಕೆ ಅಬಾಧಿತವಾದ ಉಚ್ಚತರ ಮಾನವು ಸ್ವಯಂ ಸಿದ್ಧವಾಗಿರುವದು.

DEPARTMENTAL NOTICES.

ನೋಟೀಸುಗಳು.

ಜಾವಕ ನಂಬರ ೪೩೦.

ಕ್ಯುರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಇವರಿಂದ ಸನ್ ೧೯೦೧ನೇ ಇಸವಿಯ ದಿಸಂಬರದ ಅಂತ್ಯಕ್ಕೆ ಮುದ್ರಿಸಿ ಮಾರಾಟಕ್ಕಾಗಿ ಸಿದ್ಧವಾದ ಪುಸ್ತಕಗಳು ಯಾವವೆಂದರೆ:—

ಕನ್ನಡ		ಬೆಲೆ	ರೂ.	ಆ.	ಪೈ
ಲಘುವ್ಯಾಕರಣ		,,	೦	೧	೦
ಕರ್ನಾಟಕದ ಇತಿಹಾಸ		,,	೦	೫	೦
ಸಂಸ್ಕೃತ					
ಕಾವ್ಯಪ್ರಕಾಶ		,,	೫	೪	೦

ಮುಂಬಯಿ ಸಂಸ್ಕೃತಸಿರೀಜ ನಂ
ಬರ೧೬ವಿಕ್ರಮೋರ್ವಶೀನಾಟಕ „ ೦ ೦ ೦

W. N. Patwardhan,
ಮುಂಬಯಿ
ತಾ॥ ೬-೧೧-೧೯೦೨. } ಎ. ಕ್ಯೂರೇಟರ ಗವ್ಹರ್ನಮೆಂಟ ಸೆಂಟ್ರಲ್
ಬುಕ್ಕ ಡಿಪೋ ಮುಂಬಯಿ

ಪ್ರಕಟನೆ.

ಸನ್ ೧೯೦೨ನೇ ಇಸವಿಯ ಫೆಬ್ರುವರಿ ತಿಂಗಳ ಕನ್ನಡ ಶಾಲಾಪತ್ರಕದ ೫೯-೪೦ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಥಪ್ರೈಜ" ಎಂಬ ಇನಾಮುಗಳ ಸಲುವಾಗಿ ಪರೀಕ್ಷೆಯು ಕನ್ನಡದಲ್ಲಿ ಧಾರವಾಡ ಟ್ರೇನಿಂಗಕಾಲೇಜದೊಳಗೆ ತಾರೀಖು ೮ನೇ ದಿಸಂಬರ ೧೯೦೨ನೇ ಇಸವಿ ದಿವಸ ಕೆಳಗೆ ಸಹಿ ಮಾಡಿದವರಿಂದ ತೆಗೆದುಕೊಳ್ಳಲ್ಪಡುವದು. ೪೦ ರೂ. ಗಳ ಇನಾಮು ಬಂದು ಮತ್ತು ೨೦ ರೂ. ಗಳ ಇನಾಮು ಬಂದು ಈ ಪ್ರಕಾರ ಎರಡು ಇನಾಮುಗಳು ಇವೆ. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಾರೀಖು ೨೦ನೇ ನವೆಂಬರ ೧೯೦೨ನೇ ಇಸವಿಯ ಒಳಗಾಗಿ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳಿಸಬೇಕು. ಪರೀಕ್ಷೆಯು ಮುಂಜಾನೆ ೧೧ ಘಂಟಗೆ (ಮದ್ರಾಸ ಟಾಯಿಮು) ಸರಿಯಾಗಿ ಪ್ರಾರಂಭವಾಗುವದು.

ಧಾರವಾಡ
ತಾ॥ ೬-೧೧-೧೯೦೨. } B. R. Sahasrabudhe,
ಎ. ಇ. ದಕ್ಷಿಣಭಾಗ.

ಮುಂಬಯಿ ವೆಟರಿನರಿ ಕಾಲೇಜಿದ ಮೂರು ವರ್ಷಗಳ ಅಥವಾ "ಡಿಪ್ಲೋಮಾ" ಶಿಕ್ಷಣಕ್ರಮವೆಂದ ಸಂಬಂಧದ ಪ್ರಸಿದ್ಧಿ ಪತ್ರಿಕೆಯು

ಗೋವೈದ್ಯರೆಯು.

ಪ್ರಸ್ತಾವನೆ.

೧. ಸರಕಾರಿ ನೌಕರಿಯ ಸಲುವಾಗಿ, ಖಾಸಗಿ ರೀತಿಯಿಂ

ದ ಧಂದೆ ನಡಿಸುವ ಸಲುವಾಗಿ, ದೇಶೀ ಸಂಸ್ಥಾನಗಳಲ್ಲಿ ನೌಕರಿ ಮಾಡುವ ಸಲುವಾಗಿ ಮತ್ತು ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ ಲೋಕಲಬೋರ್ಡು ಮುಂತಾದ ಸಂಸ್ಥೆಗಳ ಕೆಳಗಿರುವ ಸ್ಪೆಶಲ ಜಾಗೆಗಳನ್ನು ನಡಿಸುವ ಸಲುವಾಗಿ ಲಾಯಖ ವೈದ್ಯರನ್ನು (ಜನಾವರಗಳ ಬಗ್ಯೆ) ತಯಾರ ಮಾಡಬೇಕೆಂಬುವದೇ ಈ ಕಾಲೇಜದ ಮುಖ್ಯ ಉದ್ದೇಶವಿರುತ್ತದೆ

೨. ಈ ಕಾಲೇಜದ ವರ್ಷವು ೪ನೇ ಜಾನೆವರಿಗೆ ಸುರು ಆಗುತ್ತದೆ. ಮೂರು ತಿಂಗಳ ಸೂಟಿ ಇರುತ್ತಿದ್ದು ಅದು ೧ನೇ ಎಪ್ರಿಲಿನ ದಿವಸ ಸುರು ಆಗುತ್ತದೆ.

೩. ಕಾಲೇಜದ ವೇಳ್ಯೆವು ಬೆಳಿಗ್ಯೆ ೧೦ ಘಂಟೆಯಿಂದ ಸಂಜೆ ೪ ಘಂಟೆಯ ವರೆಗೆ ಇರುತ್ತದೆ

೪. ಈ ವರ್ಗಕ್ಕೆ ಇಂಗ್ರೇಜಿಯಲ್ಲಿ ಕಲಿಸುವದರಲ್ಲಿ ಬರುತ್ತದೆ.

ಪರೀಕ್ಷೆಗಳು

೫. ಈ ಕಾಲೇಜದ ಗ್ರಾಜುಯಿಟನೆಂತ ಡಿಪ್ಲೋಮಾ ಬೊರಕಿಸಲಿಕ್ಕೆ ವಿದ್ಯಾರ್ಥಿಗೆ ಮೂರು ವರ್ಷ ಕಲಿಯಬೇಕಾಗುತ್ತದೆ ಮತ್ತು ಅಭ್ಯಾಸದ ಆ ಆ ವರ್ಷದ ತಿಶೆಂಬರ ತಿಂಗಳಲ್ಲಿ, ಮೊದಲನೇ, ಎರಡನೇ ಮತ್ತು ಮೂರನೇ ಹೀಗೆ ಮೂರು ಧಂದೆಯ ಪರೀಕ್ಷೆಗಳಲ್ಲಿ ಅವನು ಪಾಸಾಗಲಿಕ್ಕೆ ಬೇಕು ಈ ಪರೀಕ್ಷೆಗಳು ಸಂಪೂರ್ಣವಾಗಿ ತೊಂಡಿ (ಬಾಯಿಮಾತಿನಿಂದ) ಪರೀಕ್ಷೆಗಳಿದ್ದು ಸರಕಾರದವರು ನೇಮಿಸಿದ ಬೋರ್ಡಿನ ಕಡೆಯಿಂದ ತೆಗೆದುಕೊಂಬುವವರಲ್ಲಿ ಇಂದಾವು

೬. ಪರೀಕ್ಷೆಗಳ ನಿಕಾಲಿನ ಪ್ರಕಾರ ವಿದ್ಯಾರ್ಥಿಗಳಿಗೆ ಇನಾಮು ಕೊಡುವದರಲ್ಲಿ ಬಂದೀತು ಮತ್ತು ಮೂರನೇ ಧಂದೆಯ ಪರೀಕ್ಷೆದುಲ್ಲಿ ಪಾಸಾಗುವ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ದೊರಕುವದು

೭. ಗ್ರಾಜುಯಿಟರಿಗೆ ನೌಕರಿ ದೊರೆಯುವ ಬಗ್ಯೆ ಸರಕಾರದವರು ಯಾವದೇ ಬಾಬತಿಯೆಂದ ಕಟ್ಟಳೆಕೊಡ್ಲುವದಿಲ್ಲ. ಆದರೆ ಹುಶಾರ ಗ್ರಾಜುಯಿಟರಿಗೆ ಅವರ ಕರ್ತೃತ್ವಶಕ್ತಿ ಮತ್ತು ನೌಕರಿಯ ಮುದ್ದತಿಯ ಪ್ರಕಾರ ಪ್ರತಿ ತಿಂಗಳಕ್ಕೆ

೫೦ ರೂಪಾಯಿಯಿಂದ ೬೦೦ ರೂಪಾಯಿಗಳ ವರೆಗಿನ ಸಂಬಳದ ಜಾಗೆ ದೊರಕುವ ಸಂಭವವು ಬಹಳೇ ಇರುತ್ತದೆ.

೪. ಯಾವ ವಿದ್ಯಾರ್ಥಿಯು ಧಂದೆಯ ಮೊದಲನೇ ಪರೀಕ್ಷೆಯಲ್ಲಿ ಮೂರು ಸಾರಿ ನಾಪಾಸ ಆಗುತ್ತಾನೋ ಅವನಿಗೆ ಆ ಪರಿಕ್ಷೆಕ್ಕೆ ತಿರಿಗಿ ಕೂಡಗೊಡುವದರಲ್ಲಿ ಬರಲಿಕ್ಕಿಲ್ಲ.

೯. ಕಾಲೇಜದಲ್ಲಿ ತೆಗೆದುಕೊಂಬುವ-ಬಾಬತಿಯ ಅರ್ಜಿಗಳು ಪ್ರಿನ್ಸಿಪಾಲನ ಹೆಸರಲೇ ಇರಬೇಕು.

ವಿದ್ಯಾರ್ಥಿಗಳನ್ನು ಕಾಲೇಜದಲ್ಲಿ ತೆಗೆದುಕೊಳ್ಳುವದನ್ನು ಕುರಿತು.

೧೦ ವಿದ್ಯಾರ್ಥಿಯಿಂತ ಕಾಲೇಜದಲ್ಲಿ ಹೋಗಲಿಚ್ಛಿಸುವ ಉಮೇದಾರನು ಕೆಳಗೆ ಬರೆದ ದಾಖಲೆಗಳನ್ನು ಹಾಜರ ಪಡಿಸಬೇಕು.

(ಅ) ವಯಸ್ಸಿನ ದಾಖಲೆ (೧೬ ವರ್ಷಗಳಕಿಂತ ಕಡಿಮೆ ವಯಸ್ಸಿನ ಅರ್ಜಿದಾರನಿಗೆ ವಿದ್ಯಾರ್ಥಿ ಎಂತ ಕಾಲೇಜದಲ್ಲಿ ತೆಗೆದುಕೊಳ್ಳೋಣಾಗಲಿಕ್ಕಿಲ್ಲ).

(ಬ) ಅರ್ಜಿದಾರನು ೧೪ ವರ್ಷಗಳಕಿಂತ ಕಡಿಮೆ ವಯಸ್ಸಿನವನಿದ್ದರೆ. ವಿದ್ಯಾರ್ಥಿ ಎಂತ ಕಾಲೇಜದಲ್ಲಿ ಹೋಗೋಬಗ್ಗೆ ತಾಯಿತಂದೆ ಅಥವಾ ಪಾಲನ ಮಾಡುವವರ ಪರವಾನಗಿಯಿದ್ದ ಬಗ್ಗೆ ದಾಖಲೆ.

(ಕ) ಶಾರೀರಿಕ ಮತ್ತು ನೈತಿಕ ಲಾಯಖಿಯ ದಾಖಲೆಯು.

(ಡ) ಇಂಗ್ರೇಜಿ ೬ನೇ ಯುತ್ತೆಯ ವರೆಗೆ ಕಲತ ಬಗ್ಗೆ ದಾಖಲೆಯು

ಯಾವದಾದರೂ ಯುನಿವ್ಹರ್ಸಿಟಿಯ ಮ್ಯಾಟ್ರಿಕ್ಯುಲೇಶನ ನ ಅಥವಾ ಸ್ಕೂಲ ಫಾಯನಲ ಪರೀಕ್ಷೆಯ ದಾಖಲೆಯು ಅರ್ಜಿದಾರನ ಸಾಮಾನ್ಯ ಶಿಕ್ಷಣದ ಬಗ್ಗೆ ಸಾಕಷ್ಟು ಪುರಾವೆಯಬೆ ಎಂತ ತಿಳಿಯಲಾದೀತು; ಉಳಿದ ಉಮೇದವಾರರ ಬಾಬತಿಯಲ್ಲಿ, ಕಾಲೇಜದ ಅಮಲದಾರರ ಕಡೆಯಿಂದ ಕೆಳಗೆ ಬರೆದ ವಿಷಯಗಳಲ್ಲಿ ಪ್ರವೇಶ ಪರೀಕ್ಷೆ ತೆಗದುಕೊಳ್ಳುವದರಲ್ಲಿ ಬಂದೀತು:—

(೧) ಫಿಟ್ಟಯಾಗಿ ಓದುವದು, ಶುದ್ಧ ಲೇಖನ, ಇಂಗ್ರೇಜಿ ವ್ಯಾಕರಣ ಮತ್ತು ಪಾರ್ಸಿಂಗ.

(೨) ಯಾವದಾದರೊಂದು ಸುಲಭ ವಿಷಯದ ಮೇಲೆ ೪೦ ಸಾಲಿನ ನಿಬಂಧವು.

(೩) ಆಮೋದವಾರನ ಜನ್ಮಭಾಷೆಯ ೨೫ ೧೦ ಸಾಲಿನ ಇಂಗ್ರೇಜಿಯೆಲ್ಲಿ ಭಾಷಾಂತರ ಅಥವಾ ಇಂಗ್ರೇಜಿ ಕವಿತೆ ಯೊಳಗಿನ ೧೦ ಸಾಲಿನ ಪ್ಯಾರಾಫ್ರೇಜ

(೪) ಹಿಂದುಸ್ಥಾನದ ಇತಿಹಾಸವು.

(೫) ಯುರೋಪದ ಮತ್ತು ಆಶಿಯಾದ ಭೂಗೋಲು.

(೬) ಅಂಕಗಣಿತ—ತ್ರೈರಾಶಿಕ ಮತ್ತು ಪಂಚರಾಶಿಕ ಹಾಗೂ ವ್ಯವಹಾರಿಕ ಮತ್ತು ದಶಾಂಶ ಅಪೂರ್ಣಾಂಕ.

ಕಾಲೇಜದಲ್ಲಿ ಕಲಿಸಲ್ಪಡುವ ವಿಷಯಗಳು ತಿಳಿಯುವ ಷ್ಟು ಶಿಕ್ಷಣವು ದೊರತ ಬಗ್ಗೆ ಯಾವ ಉಮೇದವಾರನ ಕಡೆಯಿಂದ ಸಾಕಷ್ಟು ಖಾತ್ರಿ ಮಾಡಿಕೊಡೋಣಾಗುವದಿ ಲ್ಲವೋ ಅವನಿಗೆ ಕಾಲೇಜದಲ್ಲಿ ವಿದ್ಯಾರ್ಥಿ ಎಂತ ತೆಗಿದು ಕೊಂಬುವದರಲ್ಲಿ ಬರಲಿಕ್ಕಿಲ್ಲ. ವಿದ್ಯಾರ್ಥಿಗಳನ್ನು ತೆಗೆದು ಕೊಂಬುವಾಗ್ಗೆ ಜಾತಿ ಮುಂತಾದ್ದರ ಸಂಬಂಧದಿಂದ ಯಾ ವದಾದರೂ ಹರಕತು ತೆಗೆದುಕೊಳ್ಳುವದರಲ್ಲಿ ಬರಲಿಕ್ಕಿಲ್ಲ.

೧೧. ವೈದ್ಯಕೆಯ ಗ್ರಾಜುಏಟರಿಗೆ ಮತ್ತು ಹಿಂದುಸ್ಥಾನ ದೊಳಗಿನ ಯಾವದಾದರೂ ಯುನಿವ್ಹರ್ಸಿಟಿಯ ಮೊದಲನೇ ಎಲ್. ಎಮ್. ಎಸ್. ದ ಪರೀಕ್ಷೆ ಪಾಸಾದ ಅಥವಾ ಹಾಸ್ಪಿ ಟಲ ಅಸಿಸ್ಟಾಂಟರ ಲಾಯಖಿಯ ಪರೀಕ್ಷೆ ಪಾಸಾದ ಅಂಡರ ಗ್ರಾಜ್ಯುಯಟರಿಗೆ, ಅಥವಾ ಸರಕಾರದವರು ಕಳೂಲ ಮಾ ಡಿದಂಥ ಆಗ್ರಿಕಲ್ಚರಲ ಕಾಲೇಜದೊಳಗಿಂದ ಅಥವಾ ಶಾಲೆ ಯೊಳಗಿಂದ ದೊರೆತ ಡಿಪ್ಲೋಮಾ ಅಥವಾ ಗ್ರಾಜ್ಯುಏಟ ಆದ ದಾಖಲೆ ಧಾರಣ ಮಾಡುವವರಿಗೆ ಮೊದಲನೇ ವರ್ಷದ ಅಭ್ಯಾಸ ಮಾಫು ಮಾಡಲಾದೀತು, ಆದರೆ ಕಾಲೇಜದೊಳ ಗಿನ ಅವರ ಮೊದಲನೇ ವರ್ಷದ ಅಬ್ಯೆರಕ್ಕೆ ಮೊದಲನೇ ಮತ್ತು ಎರಡನೇ ಈ ಎರಡೂ ವರ್ಷಗಳ ವಿಷಯಗಳಲ್ಲಿ ಅವರ ಪರಿಕ್ಷೆ ತೆಗೆದುಕೊಳ್ಳಲಾದೀತು.

೧೨ ಯಾವದಾದರೂ ವೆಟರಿನರಿ ಶಾಲೆಯೊಳಗೆ ಎರಡು ವರ್ಷದ ಅಭ್ಯಾಸವಾದ ಮತ್ತು ವೆಟರಿನರಿ ಅಸಿಸ್ಟಂಟ ಎಂ ಶ ಲಾಯಸಿಯ ದಾಖಲೆ ದೊರೆತ ಜನರಿಗೆ ಕಾಲೇಜದಲ್ಲಿ ಒಂದು ವರ್ಷದ ಶಿಕ್ಷಣವು ದೊರತ ನಂತರ, ಅವರಿಗೆ ಮೂ ರನೆ ಧಂದೆಯ (ಡಿಪ್ಲೊಮಾದ) ಪರಿಕ್ಷೆಕ್ಕೆ ಕೂಡಗೊಡುವದ ರಲ್ಲಿ ಬರುತ್ತದೆ. ಆದರೆ ದೇಶಿ ಭಾಷೆಯೊಳಗಿನ ಎರಡು ವರ್ಷದ ಶಿಕ್ಷಣಕ್ರಮವು ಪೂರಾ ಆದ ಯಾವ ಜನರಿಗೆ ಸದ ರಿ ಸವಲತಿಯ ಅವಶ್ಯಕತೆ ಇದ್ದೀತು ಅವರು ತಮ್ಮ ಯುನಿ ವರ್ಸಿಟಿಯ ಮ್ಯಾಟ್ರಿಕ್ಯುಲೇಶನದ ಅಥವಾ ಸ್ಕೂಲಫಾಯ ನಲದ ಪರಿಕ್ಷೆ ಆದ ಬಗ್ಗೆ ದಾಖಲೆಯನ್ನು ಹಾಜರು ಪಡಿಸ ಬೇಕು ಅಥವಾ ಕಾಲೇಜದ ಕಾನೂನುಗಳಲ್ಲಿ ಗೊತ್ತುಪಡಿ ಸಿದ ಪ್ರವೇಶ ಪರೀಕ್ಷೆ ಪಾಸಾಗಬೇಕು ಮತ್ತು ಐದು ವರ್ಷ ಗಳ ವರೆಗೆ ಧಂದೆ ನಡಿಸಿದ ಬಗ್ಗೆ ಪುರಾವೆಯನ್ನು ಹಾಜರ ಮಾಡಬೇಕು.

೧೩ ಕಾಲೇಜದ ಫೀಯು ವರ್ಷಕ್ಕೆ ೬೦ ರೂಪಾಯಿ ಇ ದ್ದು ಆರಾರು ತಿಂಗಳಿಗೆಮ್ಮೆ ಮುಂಗಡ ತುಂಬಬೇಕು.

ಅನಿಯಮಿತ ವಿದ್ಯಾರ್ಥಿಗಳ ಪ್ರತಿ ಒಂದು ಅಭ್ಯಾಸಕ್ರ ಮದ ಬಗ್ಯ ಪ್ರತಿ ಒಂದು ವರ್ಷದ ಫೀಯು ೧೫-೦೫ ರೂಪಾಯಿ ಇರುತ್ತದೆ. ಅಭ್ಯಾಸಕ್ರಮದ ಸ್ವರೂಪದ ಪ್ರಕಾರ ಈ ಫೀಯ ರಕಮು ಪ್ರತಿ ಒಂದು ಬಾಬತಿಯಲ್ಲಿ ಕಾಲೇಜದ ಪ್ರಿನ್ಸಿಪಾಲನು ಗೊತ್ತು ಪಡಿಸುವನು.

ಸ್ಕಾಲರಶಿಪ್ಪುಗಳು

೧೪ ಕಾಲೇಜದಲ್ಲಿ ಹತ್ತು ಹತ್ತು ರೂಪಾಯಿ ಕಿಮ್ಮತಿ ಯ ಮೂರು ವರ್ಷಗಳ ವರೆಗೆ ನಡಿಯುವಂಥ ಹದಿನೈದು ಸ್ಕಾಲರಶಿಪ್ಪುಗಳು ಅವೆ. ಈ ಸ್ಕಾಲರಶಿಪ್ಪು ದೊರೆಯು ವ ವಿದ್ಯಾರ್ಥಿಗಳಿಗೆ ಕಾಲೇಜದಲ್ಲಿ ಪುಗಸಟ್ಟೆ ಶಿಕ್ಷಣ ಪಡ ಕೊಳ್ಳಲಿಕ್ಕೆ ಹಕ್ಕು ಆದೆ.

ಈ ಸಂಬಳದ ವಿದ್ಯಾರ್ಥಿಗಳನ್ನು ಇಲಾಖೆಯ ಜೇರ ಜೇರೆ ಜಿಲ್ಲೆಯೊಳಗಿಂದ ಪಾಳೀಪಾಳೀಲೆ ಆರಿಸಿ ತೆಗೆದುಕೊ

ಳುವದರಲ್ಲಿ ಬಂದೀತು; ಹ್ಯಾಗಂದರೆ, ಈ ಕಾನೂನಿನನ್ವಯ ಸಾಧಾರಣತಃ ಪ್ರತಿ ಒಂದು ಜಿಲ್ಹೆಯ ಒಬ್ಬೊಬ್ಬ ವಿದ್ಯಾರ್ಥಿಯು ಒಂದು ವೇಳ್ಯಕ್ಕೆ ಕಾಲೇಜದಲ್ಲಿ ಅಭ್ಯಾಸ ಮಾಡುತ್ತಿರಬೇಕು. ಕಾಲೇಜದ ಪ್ರಿನ್ಸಿಪಾಲನ ಪಸಂದಿಯ ಸಲುವಾಗಿ ತಮ್ಮ ತಮ್ಮ ಜಿಲ್ಹೆಯೊಳಗಿನ ಯಾವದಾದರೂ ಶಾಲೆಯಲ್ಲಿಯ ಜನರ ಶಿಫಾರಸು ಮಾಡುವ ಬಗ್ಯೆ ಕಲೆಕ್ಟರರಿಗೆ ಹೇಳುವದರಲ್ಲಿ ಬಂದೀತು. ಈ ಜನರ ಕೊನೆಯ ಆರಿಸುವಿಕೆಯು, ಸದರಿ ಪ್ರಿನ್ಸಿಪಾಲ ಇವರ ಕಡೆಯಿಂದ, ಸಿವ್ಹಿಲ ವೆಟರಿನರಿ ಡಿಪಾರ್ಟಮೆಂಟಿನ ಸುಪರಿಂಟೆಂಡೆಂಟ ಮತ್ತು ಮುಂಬಯಿ ಇಲಾಖೆಯ ಡೆಪ್ಯುಟಿ ಡಾಯರೆಕ್ಟರ ಆಫ ಆಗ್ರಿಕಲ್ಚರ ಇವರ ಸಲ್ಲೆಯಿಂದ ಮಾಡುವದರಲ್ಲಿ ಬಂದೀತು. ಸಾಧಿಸಿದರೆ, ಶಿಫಾರಿಸಲ್ಪಟ್ಟ ಉಮೇದವಾರರು ಆರಿಸುವಿಕೆಯ ಸಲುವಾಗಿ ಪ್ರಿನ್ಸಿಪಾಲನ ಎದುರಿಗೆ ಸ್ವತಃ ಹಾಜರಾಗಬೇಕು

ಸರಕಾರಿ ಸ್ಕಾಲರಶಿಪ್ಪುಗಳ ಬಗ್ಯೆ ಉಮೇದವಾರರನ್ನು ಆರಿಸುವಾಗ್ಗೆ, ಯಾರು ಯುನಿವ್ಹರ್ಸಿಟಿಯ ಮ್ಯಾಟ್ರಿಕ್ಯುಲೇಶನದ ಅಥವಾ ಸ್ಕೂಲಫಾಯನಲ ಪರಿಕ್ಷೆಯನ್ನು ಇಳದಿದ್ದು ಭೂಮಿಯನ್ನು ಧಾರಣ ಮಾಡುವವರ ಮಕ್ಕಳಿದ್ದಿದ್ದಾರು ಅಥವಾ ಯಾರು ಪ್ರತ್ಯಕ್ಷ ರೀತಿಯಿಂದ ಹೊಲದ ಕೆಲಸ ಮಾಡುತ್ತಿದ್ದು ದನಗಳೊಳಗೆ ಓಡ್ಯಾಡುತ್ತಿದ್ದಾರು ಅವರನು ಉಳದ ಜನರಕಿಂತ ಮೊದಲು ಆರಿಸುವದರಲ್ಲಿ ಬಂದೀತು ಇಂಥ ಉಮೇದವಾರರ ವಯಸ್ಸು ೧೪ ರಕಿಂತ ಕಡಿಮೆ ಅಥವಾ ೨೫ ರಕಿಂತ ಹೆಚ್ಚು ಇರಬಾರದು. ಹಾಗೆಯೇ ಅವರ ಎತ್ತರವು ಮತ್ತು ಎದೆಯ ಅಗಲಳತೆಯು ಗೊತ್ತುಪಡಿಸಿದ ಪ್ರಮಾಣದಪ್ಪು ಇದ್ದು ಅವರು ಶಾರೀರಿಕ ಪ್ರಕೃತಿಯ ಸಂಬಂಧದೀದ ಪ್ರತಿ ಒಂದು ರೀತಿಯಿಂದ ವೆಟರಿನರಿ ಕೆಲಸಕ್ಕೆ ಯೋಗ್ಯರಿರಬೇಕು ವ್ಯವಹಾರಿಕ ಶಿಕ್ಷಣದ ವರ್ಗಗಳಲ್ಲಿ ಹಾಜರಿರೋ ಸಂಬಂಧದಿಂದ ಸಂಬಳದ ವಿದ್ಯಾರ್ಥಿಗಳ ಕಡೆಯಿಂದ ಯಾವದೇ ಪ್ರಕಾರದ ಫಿಲಾಯಿಯಾದರೆ ಅವರು ತಮ್ಮ ಸ್ಕಾಲರಶಿಪ್ಪುಗಳನ್ನು ಮತ್ತು ಫೀಯ ಮಾಫಿಯನ್ನು ಪೋಗಲಾಡಿಸುವದಕ್ಕೆ ಪಾತ್ರರಾಗುವರು.

೧೫. ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ಆ ಬಗ್ಗೆ ಪ್ರಿನ್ಸಿಪಾಲ, ಮುಂಬಯಿ ವೆಟರಿನರಿ ಕಾಲೇಜ, ಇವರ ಕಡೆಗೆ ಕಳಿಸಿ ಮಾಡಬೇಕು.

ಮುಂಬಯಿ ವೆಟರಿನರಿ ಕಾಲೇಜಿನ ಎರಡು ವರ್ಷದ ಶಿಕ್ಷಣ ಕ್ರಮವು "ಸಲುತ್ರಿ" ಯೆ ವರ್ಗದ ಸಂಬಂಧದ ಪ್ರಸಿದ್ಧಿಪತ್ರಿಕೆಯ ಗೊತ್ತುಪಾರೆಯು.

೧. ಈ ವರ್ಗದ ವರ್ಷವು ಜನೇ ಜ್ಞಾನೇವರಿಯ ದಿವಸ ಸುರು ಆಗುತ್ತದೆ. ಸೊಟಿಯು ಮೂರು ತಿಂಗಳ ಇದ್ದು ಏನೇ ಎಪ್ರಿಲಿನ ದಿವಸ ಸುರು ಆಗುತ್ತದೆ.

೨. ಈ ವರ್ಗದೊಳಗಿನ ವಿಷಯಗಳು ಸುಲಭು ಹಿಂ ದುಸ್ತಾನಿ ಮತ್ತು ಮರಾಠಿ ಭಾಷೆಯಲ್ಲಿ ಕಲಿಸುವದರಲ್ಲಿ ಬರುತ್ತವೆ ಮತ್ತು ಆ ಬಗ್ಗೆ ಏನೂ ಫೀ ಬೀಳುವದಿಲ್ಲ.

೩ ವರ್ಗದ ವೇಳ್ಯವು ಬೆಳಿಗ್ಗೆ ೧೦ ಘಂಟೆಯಿಂದ ಸಂ ಜೆಯ ೪ ಘಂಟಿಯು ವರೆಗೆ ಇರುತ್ತದೆ.

೪. "ಸಲುತ್ರಿ" ಯ ದಾಖಲೆಯನ್ನು ಪಡಕೊಳ್ಳಲಿಕ್ಕೆ ವಿದ್ಯಾರ್ಥಿಗಳಿಗ ಎರಡು ವರ್ಷ ಅಭ್ಯಾಸ ಮಾಡಬೇಕಾಗು ತ್ತದ್ದು ಪ್ರತಿ ವರ್ಷದ ಡಿಸೆಂಬರ ತಿಂಗಳಲ್ಲಿ ಒಂದೊಂದು ಹೀಗೆ ಮೊದಲನೇ ಮತ್ತು ಎರಡನೇ ಪರೀಕ್ಷೆಯನ್ನು ಅವ ರು ಪಾಸಾಗಲಿಕ್ಕೆ ಬೇಕು. ಈ ಪರೀಕ್ಷೆಗಳು ಫಕ್ತತೊಂಡಿ (ಬಾಯಿಮಾತಿನವು) ಮತ್ತು ವ್ಯವಹಾರಿಕ ಇರುವವು.

೫. ಅಖೈರದ ಅಥವಾ ಎ ಡನೇ ಪರೀಕ್ಷೆಯು ಪಾಸಾ ಯಿತೆಂದರೆ ಸರಕಾರಿ ನೌಕರಿ ಸಿಗಲಿಕ್ಕೆ ಹಕ್ಕು ಪ್ರಾಪ್ತ ವಾಗುತ್ತದೆಂತ ತಿಳಿಯಬಾರದು. ಆದರೆ ಇಂಥ ಪರೀಕ್ಷೆ ಯು ದಾಖಲೆ ಇದ್ದ ಜನರಿಗೆ, ಸುಮಾರಾತೆಗೆ ೫೦ ರೂಪಾಯಿ ಕಿಂತ ಹೆಚ್ಚು ಇಲ್ಲ ಇಂಥ ಯೋಗ್ಯ ಸಂಬಳುಳ್ಳ ಕೆಲಸದ ಮೇಲೆ ಇರುವದಕ್ಕೆ ಲೋಕಲ ಜೋಡ್ರುಗಳಿಗೆ. ಮ್ಯುನಿಸಿ ಪಾಲಿಟಿಗಳಿಗೆ ಮತ್ತು ದೇಶಿ ಸಂಸ್ಥಾನದವರಿಗೆ ಬಿನ್ನಹಿಸು ವದರಲ್ಲಿ ಬಂದೀತು.

೬. ವರ್ಗದಲ್ಲಿ ತೆಗಿದುಕೊಂಬುವ ಬಗ್ಯೆ ವಿದ್ಯಾರ್ಥಿಗಳು ಮಾಡತಕ್ಕ ಎಲ್ಲ ಅರ್ಜಿಗಳು ಪ್ರತಿ ವರ್ಷ ಡಿಸೆಂಬರ ತಿಂಗಳಿನ ೧೫ನೇ ತಾರೀಖಿನ ಪೂರ್ವದಲ್ಲಿ ಪ್ರಿನ್ಸಿಪಾಲನ ಕಡೆಗೆ ಸಾದರ ಮಾಡಬೇಕು

೭. ೧೪ ವರ್ಷಗಳಕಿಂತ ಕಡಿಮೆ ವಯಸ್ಸಿನ ಯಾವನಾ ವರೂ ಉಮೇದವಾರಿಕೆಗೆ ಕಾಲೇಜದೊಳಗೆ ತೆಗೆದುಕೊಳ್ಳು ವದರಲ್ಲಿ ಬರಲಿಕ್ಕಿಲ್ಲ; ಮತ್ತು ಪ್ರತಿ ಒಬ್ಬ ಉಮೇದವಾರ ನಿಗೆ ತಾರೀಕಿನ ಲಾಯಖಿಯ ಮತ್ತು ಒಳ್ಳೆ ನಡತೆಯ ದಾಖಲೆಗಳನ್ನು ಹಾಜರ ಮಾಡಲಿಕ್ಕೆ ಬೇಕಾದೀತು, ಮತ್ತು ಅರಂಭದ ಸಾಮಾನ್ಯ ಶಿಕ್ಷಣವು ಸಾಕಷ್ಟು ಶಿಕ್ಕಿದ್ದರ ಬಗ್ಯೆ ಅವರು ಖಾತ್ರಿ ಮಾಡಿಕೊಡಬೇಕು. ವರ್ಗದಲ್ಲಿ ತೆಗದುಕೊಳ್ಳಲ್ಪಡುವ ಮೊದಲು ಅವನು ತನಗೆ ಜನಾವರಗಳನ್ನು ನಡಿಸಿಕೊಳ್ಳಲಿಕ್ಕೆ ಬರುತ್ತಿದ್ದು ಅತ್ತಕಡೆ ಸ್ವಾಭಾವಿಕವಾಗಿ ತನ್ನ ಲಕ್ಷ್ಯವದೆಂಬುವದನ್ನು ತೋರಿಸುವದರ ದೆಶೆಯಿಂದ ಒಂದು ಪರೀಕ್ಷೆಯನ್ನು ಪಾಸಾಗಲಿಕ್ಕೆ ಬೇಕು. ಹಾಗೆಯೇ ಅವನು ಹಿಂದುಸ್ಥಾನಿ ಅಥವಾ ಮರಾಠಿ ಐದನೇ ಯತ್ತೆಯನ್ನು ಇಳಿದಿದ್ದರ ಬಗ್ಯೆ ದಾಖಲೆಯನ್ನು ಹಾಜರ ಪಡಿಸಲಿಕ್ಕೆ ಬೇಕು. ಅಥವಾ ವರ್ಗದಲ್ಲಿ ಕೊಡುವದರಲ್ಲಿ ಬರುವ ಶಿಕ್ಷಣವು ಚಲೋ ರೀತಿಯಿಂದ ತಿಳಿಯುವಷ್ಟು ಮತ್ತು ಕಲಿಸಿದ ಪಾಠಗಳ ಸೊಟ್ಟುಗಳನ್ನು (ಪಪ್ಪಣಿಗಳನ್ನು) ಚಲೋ ರೀತಿಯಿಂದ ತೆಗದುಕೊಳ್ಳಲಿಕ್ಕೆ ಬರುವಷ್ಟು ಸದರೀ ಭಾಷೆಗಳ ಶೈಕಿ ಒಂದು ಭಾಷೆಯ ಜ್ಞಾನವು ಇದ್ದ ಬಗ್ಯೆ ಕಾಲೇಜದ ಅಧಿಕಾರಿಗಳ ಖಾತ್ರಿ ಮಾಡಿಕೊಡಬೇಕು

೮ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ಆ ಬಗ್ಯೆ ಪ್ರಿನ್ಸಿಪಾಲ, ಮುಂಬಯಿ ವೆಟರಿನರಿ ಕಾಲೇಜ, ಇವರ ಕಡೆಗೆ ಅರ್ಜಿ ಮಾಡಬೇಕು.

ಯಾವತ್ತೂ ಜನರ ಮಾಹಿತಿಗಾಗಿ ಪ್ರಸಿದ್ಧಿಸಲ್ಪಟ್ಟಿದೆ.

ತಾ॥ ೫೬-೧೨-೧೯೦೧. } B. R. Shastrabudhe,
ಎ. ಇನಸ್ಪೆಕ್ಟರ ದಕ್ಷಿಣಭಾಗ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯತೋತ್ಕರ್ಷಮುಂ।
ಲಯಸುತ್ತಂ ಪ್ರತಿಪಾದಿಸಲ್ವಿಂದೀಪತ್ರಮಂ ಪಾಡ್ರಿಸಿ॥
ನಯಬಿಂದಿತ್ತವೆಪ್ಪೋದುವರ್ಗಸುಗುಣಂ ಶೋಭಿಪ್ಪಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಡುಗರ್ಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೮] ಮಾರ್ಚ್ ೧೯೦೨. [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯು ಹೋದ ವರ್ಷದ (೧೯೦೦-೧೯೦೧) ವಿದ್ಯಾಖಾತೆಯ ರಿಪೋರ್ಟು ಹೊರಬಿದ್ದಿದೆ. ಅದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ:—

೧ನೆಯ ಇಲಾಖೆಯೊಳಗಿನ ಸರಕಾರದ ಮೇಲ್ವಿಚಾರಣೆಗೆ ಬಳಪಟ್ಟ ಶಾಲೆಗಳಲ್ಲಿ ಕಲಿಯುವ ಗಂಡು ಹುಡುಗರ ಸಂಖ್ಯೆಯು ಹೋದ ವರುಷ ೪,೪೩,೯೦೪ ಇತ್ತು. ಈ ವರುಷ ೪೪೪೦೬ ಆಗಿರುತ್ತದೆ; ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರುಷ ೩೩೯೪ ಇತ್ತು, ಈ ವರುಷ ೪೧೦೫ ಆಗಿರುವದು. ಈ ಇಲಾಖೆಯಲ್ಲಿ ಯೂನತ್ತು ಪ್ರಕಾರದ ಖಾಸಗೀ ಸರಕಾರೀ ಶಾಲೆಗಳು ಹಿಂದಿನ ವರುಷ ೧೦೪೦ ಇದ್ದವು. ಈ ವರುಷ ೧೦೦೩ ಇವುತ್ತವೆ. ಸರಕಾರದವರ ಶಾಲೆಗಳು ೧೩೬೪, ಖಾಸಗೀ ಶಾಲೆಗಳು ೨೬೬೪ ಇದ್ದವು; ಆದರೆ ಈ ವರುಷ ಸರಕಾರೀ ಶಾಲೆಗಳು ೧೩೦೩, ಖಾಸಗೀ ಶಾಲೆಗಳು ೨೭೦೩ ಆಗಿರುತ್ತವೆ. ಹೋದ ವರುಷ ಕನಿಷ್ಠ ಪ್ರತಿಯು ದೇಶಭಾಷೆಯ ಸರಕಾರೀ ಶಾಲೆಗಳು ೧೧೦೪, ವಿದ್ಯಾರ್ಥಿಗಳು ೪೦೦೩೩ ಇದ್ದರು

೬. ವರ್ಗದಲ್ಲಿ ತೆಗಿದುಕೊಂಬುವ ಬಗ್ಯೆ ವಿದ್ಯಾರ್ಥಿಗಳು ಮಾಡತಕ್ಕ ಎಲ್ಲ ಅರ್ಜಿಗಳು ಪ್ರತಿ ವರ್ಷ ಡಿಸೆಂಬರ ತಿಂಗಳಿನ ೧ನೇ ತಾರೀಖಿನ ಪೂರ್ವದಲ್ಲಿ ಪ್ರಿನ್ಸಿಪಾಲನ ಕಡೆಗೆ ಸಾದರ ಮಾಡಬೇಕು

೭. ೧೪ ವರ್ಷಗಳಕಿಂತ ಕಡಿಮೆ ವಯಸ್ಸಿನ ಯಾವನಾದರೂ ಉಮೇದವಾರನಿಗೆ ಕಾಲೇಜದೊಳಗೆ ತೆಗೆದುಕೊಳ್ಳುವದರಲ್ಲಿ ಬರಲಿಕ್ಕಿಲ್ಲ; ಮತ್ತು ಪ್ರತಿ ಒಬ್ಬ ಉಮೇದವಾರನಿಗೆ ಶಾರೀರಿಕ ಲಾಯಖಿಯ ಮತ್ತು ಒಳ್ಳೆ ನಡತೆಯ ದಾಖಲೆಗಳನ್ನು ಹಾಜರ ಮಾಡಲಿಕ್ಕೆ ಬೇಕಾದೀತು, ಮತ್ತು ಅರಂಭದ ಸಾಮಾನ್ಯ ಶಿಕ್ಷಣವು ಸಾಕಷ್ಟು ಶಿಕ್ಕಿದ್ದರ ಬಗ್ಯೆ ಅವರು ಖಾತ್ರಿ ಮಾಡಿಕೊಡಬೇಕು. ವರ್ಗದಲ್ಲಿ ತೆಗದುಕೊಳ್ಳಲ್ಪಡುವ ಮೊದಲು ಅವನು ತನಗೆ ಜನಾವರಗಳನ್ನು ನಡಿಸಿಕೊಳ್ಳಲಿಕ್ಕೆ ಬರುತ್ತಿದ್ದು ಅತ್ತ್ಯಕಡೆ ಸ್ವಾಭಾವಿಕವಾಗಿ ತನ್ನ ಲಕ್ಷವದೆಂಬುವದನ್ನು ತೋರಿಸುವದರ ದೆಶೆಯಿಂದ ಒಂದು ಪರೀಕ್ಷೆಯನ್ನು ಪಾಸಾಗಲಿಕ್ಕೆಬೇಕು. ಹಾಗೆಯೇ ಅವನು ಹಿಂದುಸ್ಥಾನಿ ಅಥವಾ ಮರಾಠಿ ಐದನೇ ಯತ್ತ್ಯೆಯನ್ನು ಇಳಿದಿದ್ದರ ಬಗ್ಯೆ ದಾಖಲೆಯನ್ನು ಹಾಜರ ಪಡಿಸಲಿಕ್ಕೆಬೇಕು. ಅಥವಾ ವರ್ಗದಲ್ಲಿ ಕೊಡುವದರಲ್ಲಿ ಬರುವ ಶಿಕ್ಷಣವು ಚಲೋ ರೀತಿಯಿಂದ ತಿಳಿಯುವಷ್ಟು ಮತ್ತು ಕಲಿಸಿದ ಪಾಠಗಳ ನೋಟುಗಳನ್ನು (ಟಿಪ್ಪಣಿಗಳನ್ನು) ಚಲೋ ರೀತಿಯಿಂದ ತೆಗದುಕೊಳ್ಳಲಿಕ್ಕೆ ಬರುವಷ್ಟು ಸದರೀ ಭಾಷೆಗಳ ಸೈಕಿ ಒಂದು ಭಾಷೆಯ ಜ್ಞಾನವು ಇದ್ದ ಬಗ್ಯೆ ಕಾಲೇಜದ ಅಧಿಕಾರಿಗಳ ಖಾತ್ರಿ ಮಾಡಿಕೊಡಬೇಕು.

೮. ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ಆ ಬಗ್ಯೆ ಪ್ರಿನ್ಸಿಪಾಲ, ಮುಂಬಯಿ ವೆಟರಿನರಿ ಕಾಲೇಜ, ಇವರ ಕಡೆಗೆ ಅರ್ಜಿ ಮಾಡಬೇಕು.

ಯಾವತ್ತೂ ಜನರ ಮಾಹಿತಿಗಾಗಿ ಪ್ರಸಿದ್ಧಿಸಲ್ಪಟ್ಟಿದೆ.

ಕಾ॥ ೩೬-೧೨-೧೯೦೧. } B.R. Shasrabudhe,
ಎ. ಇನಸ್ಪೆಕ್ಟರ ದಕ್ಷಿಣಭಾಗ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಜಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಹಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩ಲ] ಮಾರ್ಚ್ ೧೯೦೨. [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಹೋದ ವರ್ಷದ (೧೯೦೦—೧೯೦೧) ವಿದ್ಯಾಖಾತೆಯ ರಿಪೋರ್ಟು ಹೊರಬಿದ್ದಿದೆ. ಅದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ :—

ನಮ್ಮ ಇಲಾಖೆಯೊಳಗಿನ ಸರಕಾರದ ಮೇಲ್ವಿಚಾರಣೆಗೆ ಒಳಪಟ್ಟ ಶಾಲೆಗಳಲ್ಲಿ ಕಲಿಯುವ ಗಂಡು ಹುಡುಗರ ಸಂಖ್ಯೆಯು ಹೋದ ವರುಷ ೪,೪೩,೧೦೪ ಇತ್ತು. ಈ ವರುಷ ೪೪೪೦೭ ಆಗಿರುತ್ತದೆ; ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರುಷ ೭೭೪೬೪ ಇತ್ತು, ಈ ವರುಷ ೮೦೦೩೪ ಆಗಿರುವದು. ಈ ಇಲಾಖೆಯಲ್ಲಿ ಯಾವತ್ತು ಪ್ರಕಾರದ ಖಾಸಗೀ ಸರಕಾರೀ ಶಾಲೆಗಳು ಹಿಂದಿನ ವರುಷ ೧೨೪೬ ಇದ್ದವು. ಈ ವರುಷ ೧೨೧೩ ಇರುತ್ತವೆ. ಸರಕಾರದವರ ಶಾಲೆಗಳು ೯೬೬, ಖಾಸಗೀ ಶಾಲೆಗಳು ೨೩೬ ಇದ್ದವು; ಆದರೆ ಈ ವರುಷ ಸರಕಾರೀ ಶಾಲೆಗಳು ೯೬೧, ಖಾಸಗೀ ಶಾಲೆಗಳು ೨೫೨ ಆಗಿರುತ್ತವೆ. ಹೋದ ವರುಷ ಕನಿಷ್ಠ ಪ್ರತಿಯು ದೇಶಭಾಷೆಯ ಸರಕಾರೀ ಸಾಲೆಗಳು ೯೧೧೪ ವಿದ್ಯಾರ್ಥಿಗಳು ೩೪೫೭ ಇದ್ದರು.

ಈ ವರುಷ ಅನುಕ್ರಮವಾಗಿ ೯೦೬೭ ಮತ್ತು ೫೧೪೯೦೦ ಇದ್ದಾರೆ.

ಈ ಇಲಾಖೆಯ ದಕ್ಷಿಣಭಾಗದ ಜನಸಂಖ್ಯೆಯು ೬೯೪೫೬೮೮ ಇರುತ್ತದೆ. ಮತ್ತು ಯಾವತ್ತು ಪ್ರಕಾರದ ಸಾಲಿಗಳು ೨೫೭೨, ವಿದ್ಯಾರ್ಥಿಗಳು ೧೫೭೨೪೪ ಇರುವರು. ಕನಿಷ್ಠ ಪ್ರತಿಯು ಗಂಡು ಹುಡುಗರ ಶಾಲೆಗಳು ೨೦೪೪, ವಿದ್ಯಾರ್ಥಿಗಳು ವಿದ್ಯಾರ್ಥಿನಿಯರೂ ಕೂಡಿ ೧೨೦೧೪೪ ಇರುವರು. ಹೆಣ್ಣುಮಕ್ಕಳ ಶಾಲೆಗಳು ೧೬೧, ವಿದ್ಯಾರ್ಥಿನಿಯರು + ೪೭೯೯ ಇರುವರು. ಇದಲ್ಲದೆ ಗಂಡು ಹುಡುಗರ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಸಂಖ್ಯೆಯು ೪೧೦೭ ಇರುವದು.

ಮುಂಬಯಿ ಇಲಾಖೆಯೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚು ೩೪೦೫೪೩ * ರೂಪಾಯಿ ಆಗಿರುತ್ತದೆ. ಈ ರಕಮಿನೊಳಗಿಂದ ಫೀ ಹಣ ೧೫೯೩೫೦ ರೂಪಾಯಿ ಮುಕ್ತು ವರ್ಗಣಿ ಮುಂತಾದ ಬಾಬುಗಳಿಂದಾದ ಉತ್ಪನ್ನ ೨೪೦೩೩೩ ರೂಪಾಯಿ ವಜಾ ಹೋಗಲಾಗಿ ಉಳಿದದ್ದರಲ್ಲಿ ಸರಕಾರಕ್ಕೆ ೧೯೯೫೮೦ ರೂಪಾಯಿ ಲೋಕಲ್ ಫಂಡಿಗೆ ೨೪೮೫೬ ರೂಪಾಯಿ ಮ್ಯುನಿಸಿಪಾಲಿಟಿಗಳಿಗೆ ೪೪೩೩೪ ರೂಪಾಯಿ ಖರ್ಚು ಬಿತ್ತು, ಕನಿಷ್ಠ ಪ್ರತಿಯ ಶಿಕ್ಷಣಕ್ಕೆ ಒಟ್ಟು ೪೪೩೩೪ ರೂ. ಖರ್ಚು ತಗಲಿತು ಇದರೊ

+ ಇದರಲ್ಲಿ ಹದಿನಾಲ್ಕು ಗಂಡುಹುಡುಗರು ಇರುವವು.

* ಸರಕಾರದ ಖರ್ಚಿನಿಂದಲೇ ನಡಿಯುವ ಸಾಲಿಗಳ ಬಗ್ಗೆ ೪೯೦೭೭ ರೂಪಾಯಿ ಲೋಕಲ್ ಬೋರ್ಡ ಸಾಲಿಗಳ ಬಗ್ಗೆ ೧೪೯೯೨೦೦ ರೂಪಾಯಿ ಮ್ಯುನಿಸಿಪಲ್ ಸಾಲಿಗಳ ಬಗ್ಗೆ ೩೩೦೯೯ ರೂಪಾಯಿಗಳು, ಸಂಸ್ಥಾನದೊಳಗಿನ ಸಾಲಿಗಳ ಬಗ್ಗೆ ೧೪೦೩೯೫ ರೂ. ಗ್ರಾಂಟ ಇನ್ ಏಡ್ ಸಾಲಿಗಳ ಬಗ್ಗೆ ೧೯೫೩೦೯ ರೂ. ಅನ್ ಏಡೆಡ್ ಸಾಲಿಗಳ ಬಗ್ಗೆ ೪೧೪೩೪ ರೂಪಾಯಿಗಳು. ಮತ್ತು ಇತರ ಖರ್ಚಿಗೆ ರೂ. ಗಳು ಅಂತು ೩೪೦೫೪೩ ರೂಪಾಯಿಗಳು.

ಳಗೆ ಫೀ ಉತ್ಪನ್ನ ೩೫೧೪೫೬ ರೂಪಾಯಿಗಳು ಮತ್ತು ಇತರ ಬಾಬುಗಳಿಂದ ಆದ ಉತ್ಪನ್ನ ೧೧೬೪೫೦೪ ರೂಪಾಯಿ ವಜಾ ಹೋಗಲಾಗಿ ಉಳಿದದ್ದರಲ್ಲಿ ಸರಕಾರಕ್ಕೆ ೪೧೪೫೦೯ ರೂಪಾಯಿ ಲೋಕಲ್‌ಫಂಡಿಗೆ ೪೫೦೦೫೧ ರೂಪಾಯಿ ಮ್ಯುನಿಸಿಪಾಲಿಟಿಗೆ ೩೬೫೫೦೦ ರೂಪಾಯಿ ವೆಚ್ಚ ಬಿತ್ತು.

ಕಳೆದ ವರ್ಷ ಮುಂಬಯಿ ಇಲಾಖೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ೫೬೧೭೦೪ ಇತ್ತು. ಈ ವರ್ಷ ೫೬೯೧೩೩ ಆಗಿರುವದು. ಇದರಲ್ಲಿ ಯುರೋಪಿಯನ್ ಮತ್ತು ಯುರೇಜಿಯನ್ ಜಾತಿಯ ವಿದ್ಯಾರ್ಥಿಗಳು ೪೦೬೩, ಪೋರ್ತುಗೀಜ ಮತ್ತು ನೇಟಿವ ಕ್ರಿಸ್ತಿಯನ್ನರು ೧೩೬೬೩, ಯಹುದಿಯರು ೧೪೪೦. ಪಾರ್ಸೀ ಜನರು ೧೫೯೦. ಮುಸಲ್ಮಾನರು ೯೬೦೫೩. ಹಿಂದು ಜನರು ೪೩೦೦೪. ಗುಡ್ಡಗಾಡ ಜಾತಿಯ ಜನರು ೬೬೪೩. ಇತರ ಜಾತಿಯ ವಿದ್ಯಾರ್ಥಿಗಳು ೧೯೯. ಇರುವರು.

ಮೇಲೆ ಕೊಟ್ಟ ಅಂಕಿಗಳಿಂದ ಪೋರ್ತುಗೀಜ ಹಾಗು ನೇಟಿವ ಕ್ರಿಸ್ತಿಯನ್ನರು ಮಾತ್ರ ಹೋದ ವರುಷಕ್ಕಿಂತ ಹೆಚ್ಚಾಗಿರುವರು. ಹಿಂದು ಜನರ ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ ಜನಸಂಖ್ಯೆಯ ಮಾನದಿಂದ ಅದೇನು ಅಷ್ಟು ದೊಡ್ಡ ಸಂಖ್ಯೆಯಿನಿಸದು ಮಿಕ್ಕ ಜಾತಿಗಳಲ್ಲಿ ಹೇಳಿಕೊಳ್ಳುವಂಥ ಹೆಚ್ಚು ಕಡಿಮೆಗಳೇನಿಲ್ಲ. ಕಡಿಮೇ ಜಾತಿಯ ವಿದ್ಯಾರ್ಥಿಗಳನ್ನು ಪ್ರೋತ್ಸಾಹಗೊಳಿಸಿ ಸಾಲೆಗೆ ಬರಮಾಡುವ ಉದ್ಯೋಗವು ನಡೆದದೆ; ಆದರೆ ಬರ ಪಿಡುಗುಗಳ ಮುಂದೆ ತೃಪಾಯವಿಲ್ಲ.

ಈ ವರ್ಷ ನಮ್ಮ ದಕ್ಷಿಣ ಭಾಗದಲ್ಲಿ ಬರ ಪಿಡುಗುಗಳು ಯಥಾಪ್ರಕಾರವಿದ್ದರೂ ಸಂಸ್ಥಾನದ ಶಾಲೆಗಳ ಹೊರತು ಮಿಕ್ಕ ಎಲ್ಲ ಶಾಲೆಗಳಲ್ಲಿಯ ವಿದ್ಯಾರ್ಥಿಗಳ ಸಂಖೆಯು ಹೆಚ್ಚಾಗಿರುವದು. ಹೋದ ವರುಷಕ್ಕಿಂತ ಈ ವರುಷ ೬೩ ಸಾಲೆಗಳು ಕಡಿಮೆಯಾಗಿದ್ದರೂ ವಿದ್ಯಾರ್ಥಿಗಳು ಸುಮಾರು ೯೦೦೦ ಮಂದಿ ಹೆಚ್ಚಾಗಿರುವರು. ಆದರೂ ೧೪೯೩೪ ನೇ ಇಸವಿಯ ಸಂಖ್ಯೆಯನ್ನು ಇನ್ನೂ ಮುಟ್ಟಲ್ಲ.

ಮುಂಬೈ ಜಿಲ್ಲಾವಿಯಲ್ಲಿ ೪ ಭಾಗಗಳಿರುತ್ತವೆ: ಆಯಾ ಭಾಗಗಳಿಗೆ ಸೇರಿದಂಥ ಶಾಲೆಗಳ ಹಾಗು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗಾಗುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

ಭಾಗ.		ಕ್ಷೇತ್ರಫಲ ಮೈಲು.	†ಜನಸಂಖ್ಯೆ.	ಸರಕಾರೀ ಮತ್ತು ಏಡೆಡ್ ಶಾಲೆಗಳು.	ಪದ್ಯಾರ್ಥಿಗಳು.	ಅನಾರೋಕ್ಷ ಗೈಲ್ಡ್ ಶಾಲೆಗಳು.	ವಿದ್ಯಾರ್ಥಿಗಳು.	ಚಾಲಗ ಹೋಗಲಿಚ್ಛಿಸುವ ಜ್ಯವರಾದ + ಹು. ಜ. ಸಂ ಶೇ. ಗಳಿಗೆ ರಂತೆ.	ಶಾ. ಹೋಗ ಹಾಗೂ ಹೋ ರುವ ಹು.
ಮುಖ್ಯ ಭಾಗ.	ಮುಂಬಯಿ.	೨೨	೭೭೦೦೮೪	೨೮೫	೫೧೭೫೫	೨೧೮	೮೫೫೨	೧೫೫೮೨೬	೫೪
	ಇತರಜಿಲ್ಲೆಗಳು (೬)	೩೮೪೯೦	೫೯೬೯೯೪೦	೨೦೫೧	೧೨೬೫೦೦	೨೫೫೫	೫೬೮೫೯	೬೪೪೯೧೧	೧೦
	ಸಂಸ್ಥಾನಗಳು (೫)	೩೮೫೫೩	೫೫೯೧೦೫	೧೭೯	೫೬೩೦	೧೫೫	೩೮೮೨	೫೫೫೦೫೫	೧೪
ಸಂಸ್ಥಾನಗಳ ಉಪಭಾಗ.	ಜಿಲ್ಲೆಗಳು (೬)	೧೨೮೦೦	೫೫೨೨೧೪೭೪	೧೫೬೦	೧೧೫೪೭೩೩	೪೦೧	೧೧೪೨೨೫	೫೨೮೨೨೧೧	೨೪
	ಸಂಸ್ಥಾನಗಳು (೮)	೩೦೪೯೦	೨೦೦೭೮೮೮೮	೬೦೧	೨೨೭೮೦೦	೧೮೪೪	೧೦೫೨೪	೩೦೧೮೨೪೦	೧೦
	ಕಾಂತೇವಾಡ	೨೦೫೫೫೯	೨೨೨೭೭೪೪೫೬	೩೭೭	೬೧೨೧೦	೨೨೬	೧೦೫೧೧	೫೯೧೧೫೫	೨೪
	ಜಿಲ್ಲೆಗಳು (೬)	೨೫೦೦೧	೫೦೦೬೯೯೯೬	೧೪೦೦	೧೦೧೨೨೭೭	೪೫೧	೨೬೦೦೫	೫೪೫೧೧೫೪	೨೪
	ಸಂಸ್ಥಾನಗಳು (೬)	೧೦೦೫೫	೧೯೭೨೭೭೬೬	೨೧೨	೨೬೬೬೭೪	೧೫೧	೨೬೦೦೫	೫೪೫೧೧೫೪	೨೪
	ಜಿಲ್ಲೆಗಳು (೫)	೪೬೦೫೫	೫೨೨೭೭೪೪೫೬	೩೭೭	೬೧೨೧೦	೨೨೬	೧೦೫೧೧	೫೯೧೧೫೫	೨೪
	ಸಂಸ್ಥಾನಗಳು	೨೦೫೫೫	೨೨೨೭೭೪೪೫೬	೩೭೭	೬೧೨೧೦	೨೨೬	೧೦೫೧೧	೫೯೧೧೫೫	೨೪
	ವಿಷಮ.	೨೫೦೦೧	೫೦೦೬೯೯೯೬	೧೪೦೦	೧೦೧೨೨೭೭	೪೫೧	೨೬೦೦೫	೫೪೫೧೧೫೪	೨೪
ಒಟ್ಟು:		೧೯೨೧೪೯	೨೫೪೪೮೮೭೫೪೮೧	೨೬೬೮	೫೬೯೫೩೭೭	೨೫೧೩೫	೬೭೭೨೭		

* ಡೀಸಾ. ಅಬೂ, ಬಡೋದಾ ಕ್ಯಾಂಪ ಸರುತ್ತ. † ಜನಸಂಖ್ಯೆಯು ಶೇಕಡಾ ೧೫ ಜನ ಶಾಲೆಗೆ ಹೋಗುವ ಪ್ರಮುಸ್ಸು ಹುಡುಗರಿರುತ್ತಾರೆಂದು ಬಹುವರ ಅಭಿಪ್ರಾಯವು ಇರುತ್ತದೆ.

ಇದೇ ವರುಷದ ಅಗಷ್ಟ ತಿಂಗಳಲ್ಲಿ ಮೈಸೂರ ಸಂಸ್ಥಾನದ ಒಡೆಯರಾದ ಶ್ರೀಯುತ ಕೃಷ್ಣರಾಜ ಒಡೆಯರ್ ಎಂಬವರಿಗೆ ಪಟ್ಟಾಭಿಷೇಕವಾಗುವದೆಂದು ತಿಳಿದದೆ. ಶ್ರೀಯುತ ಚಾಮರಾಜೇಂದ್ರ ಒಡೆಯರು ಸ್ವರ್ಗವಾಸಿಗಳಾಗಿ ೭ । ೪ ವರುಷಗಳಾದವು. ಈ ಅವಧಿಯಲ್ಲಿ ಮಹಾರಾಜರವರ ಧರ್ಮಪತ್ನಿಯಾದ ವಾಣೀವಿಲಾಸಮ್ಮನವರೇ ರೀಜಂಟರ ಸಹಾಯದಿಂದ ರಾಜ್ಯಶಕಟವನ್ನು ನಡಿಸುತ್ತಿದ್ದರು.

ಇನ್ನು ಮುಂದೆ ಶ್ರೀಯುತ ಕೃಷ್ಣರಾಜ ಒಡೆಯರು ರಾಜ್ಯಸೂತ್ರವನ್ನು ತಮ್ಮ ಕೈಯಲ್ಲಿತಕೊಳ್ಳುವರು. ಆದರೂ ಇವರ ಶಿಕ್ಷಕರಾಗಿದ್ದ ಮೆ. ಫ್ರೇಜರಸಾಹೇಬರು ಕಾರ್ಯಭಾರದಲ್ಲಿ ಈ ಬಾಲರಾಜರಿಗೆ ಮಂತ್ರಾಲೋಚನೆಯನ್ನು ಹೇಳುವದಕ್ಕೆ ಇರುವರೆಂದು ಗೊತ್ತಾಗಿದೆ ಈ ಸಮಾರಂಭವು ಬಹು ಸಡಗರದಿಂದ ನೆರವೇರುವದೆಂದು ತಿಳಿದದೆ. ನಾಮದಾರ ವ್ಹಾಯಿಸರಾಯ ಧೊರೆಗಳೂ ಈ ಸಮಾರಂಭಕ್ಕೆ ಬರುವರು. ಚಾಮರಾಜರಂತೆ ಇವರೂ ಪ್ರಜೆಗಳನ್ನು ಮಕ್ಕಳಂತೆ ಕಾಪಾಡಿ ಬಹು ದಿವಸ ಬಾಳಲೆಂದು ದೇವರನ್ನು ಬೇಡಿಕೊಳ್ಳುತ್ತೇನೆ.

EXCURSION TO HAMPI.

ಪಂಪಾಯಾತ್ರೆ.

(ಬರೆದು ಬಂದದ್ದು.)

(ಪೂರ್ವ ನೀ ಪುಟದಿಂದ ಮುಂದೆ ಸಾಗಿದ್ದು.)

ಹಾದಿಯಲ್ಲಿ ಕೊನೆನಾಯಿಕನ ಹಳ್ಳಿಯೆಂಬ ಎಂಟು ಹತ್ತು ಮನೆಯ ಊರುಹತ್ತುವದು. ಈ ಹಳ್ಳಿಯ ಹೆಸರಿನ ಅವಯವಾರ್ಥದಿಂದ ಇದು ಬಳ್ಳಾರಿಯ ಬೇಡಜಾತಿಯ ನಾಯಕನು ಕಡಿಉಕ್ಕಡದ ನಾಯಕನಿಗೆ ಉಂಬಳಿಯಾಗಿಕೊಟ್ಟ ಗ್ರಾಮವಿರಲಿ, ಇಲ್ಲವೆ ವಿಜಯನಗರದ ಒಂದು ಬದಿಯ ಉಕ್ಕಡದ ಕಾವಲುಗಾರನ ಸ್ಥಳವಿರಲಿ, ಇರಬಹುದುದೆಂಬ ತರ್ಕವು ಮನಪಲ್ಲಿ ಬರುವದು. ಹ್ಯಾಗೇ ಇರಲಿ, ಈಗ ಇದು ಒಂದು ಬೇರೆ ಗ್ರಾಮದೊಳಗೆ ಎಣಿಸಲ್ಪಡುತ್ತದೆ. ಈ ಊರಿಂದ ಹಂಪಿಯವರೆಗೆ ಗ್ರಾಮಗಳಿರುವದಿಲ್ಲ. ಎಡ ಬಲದಲ್ಲಿ ಕೆಲ

ವೆಡೆಯಲ್ಲಿ ತೋಟಪಟ್ಟಗಳು ಕಂಗೊಳಿಸುವವು. ಕೆಲವೆಡೆಯಲ್ಲಿ ಚಿಕ್ಕದೊಡ್ಡ ಗುಂಡುಗಲ್ಲುಗಳಿಂದ ತುಂಬಿದ ಹಾಳು ನೆಲವು ಕಣ್ಣಿಗೆ ಬೀಳುವದು. ಎಡಮಗ್ಗಲದ ಪಡಭೂಮಿಯಲ್ಲಿ ಕೆಲವು ಗೋರಿಗಳೂ ಮಸೀದೆಗಳೂ ಇರುವವು. ಇವು ದೇವರಾಜನ ಕಾಲದಿಂದ ವಿಜಯನಗರದಲ್ಲಿ ವಾಸವಾಡಿದ ಮುಸಲ್ಮಾನರ ಕುರುಹುಗಳಾಗಿರುತ್ತವೆ. ತೀರ ಹಂಪಿಯ ಬಾಗಿಲಿಗೆ ತಲಪಿದರೆ ತುರ್ತಕಾಲಿವೆಯೆಂಬ ತುಂಗಭದ್ರೆಯ ಕಾಲಿವೆಯು ಹತ್ತುವದು. ಇದು ಒಳ್ಳೆ ಇಳಿಜಾರಾದ ಪ್ರದೇಶದೊಳಗಿಂದ ಹರಿದು ಬರುವ ಕಾರಣ ಬಹು ಉತ್ತರದಿಂದ ಹರಿಯುತ್ತದೆ. ಆದ್ದರಿಂದ ಇದಕ್ಕೆ ಮೇಲಿನ ಅನ್ವರ್ಥಕನಾಮವು ಬಂದಿರುತ್ತದೆ. ಇದನ್ನು ದಾಟಿ ಮುಂದಕ್ಕೆ ಸಾಗಲು ಕೃಷ್ಣಾಪುರವೆಂಬ* ಹಾಳು ಗುಡಿಯು ಹತ್ತುವದು ದೇವರಿಲ್ಲದಂಥ, ಹಾಳಾದಂಥ, ಮುಂದಿಯಿಲ್ಲದ ಈ ಸ್ಥಳವು ರಣಗುಡುತ್ತಿರುವದು. ವಿಜಯಲು ಇದು ಶ್ರೀಗೋಪಾಲಕೃಷ್ಣನ ದೇವಾಲಯವಾಗಿತ್ತೆಂದು ಹೇಳುತ್ತಾರೆ. ಇದನ್ನು ದಾಟಿ ಮುಂದಕ್ಕೆ ನಡೆಯಲು ಒಂದೇ ಸಾಲಿನಲ್ಲಿರುವ ಕದಗಳಿಲ್ಲದ ಐದು ಅಗಸೆಗಳು ಹತ್ತುವವು ಹೊಸಪೇಟೆಯಿಂದ ಹಂಪಿಗೆ ಹೋಗುವ ಬಂಡಿಯು ಹಾದಿಯು ಕಡೇ ಅಗಸೆಯೊಳಗಿಂದಲೇ ಹೋಗುತ್ತದೆ. ಆ ಅಗಸೆಯನ್ನು ಈಗ ಕೆಡವಿದಾರೆ. ಉಳಿದವುಗಳು ಈಗಲೂ ನಿಂತಿರುತ್ತವೆ. ಇವು ಶ್ರೀ ವಿರೂಪಾಕ್ಷನ ಪ್ರಾಕಾರದ ವಿರಬಹುದೆಂತಲೂ ಇವುಗಳ ಸಂಖ್ಯೆಯಿಂದ ಈ ದೇವಾಲಯಕ್ಕೆ ಹೋಗಿ ಬರುವ ಜನರ ದಟ್ಟಣೆಯು ಬಹಳವಿತ್ತೆಂತಲೂ ಅನುಮಾನವಾಗುತ್ತದೆ. ಮುಂದೆ ಒಂದೆರಡು ಫರ್ಲಾಂಗ ಹಾದೀ ನಡೆಯಲು ಶ್ರೀವಿರೂಪಾಕ್ಷನ ಮೂಡಣದಿಕ್ಕಿನ ಹೆಬ್ಬಾಗಿಲಿಗೆ ತಲಪುವರು ಈ ಹೆಬ್ಬಾಗಿಲ ಮೇಲೆ ಹನ್ನೊಂದು ಅಂತಸ್ತಿನ ಗೋಪುರವುಂಟು. ಈ ಗೋಪುರವು ಮಾತಂಗ, ಋಷ್ಯಮೂಕ ಮುಂತಾದ ಶಿಖರಗಳಿಗೆ ಸಮಾನ ಎತ್ತರವಾಗಿ ಕಟ್ಟಲ್ಪಟ್ಟಿರುವದು. ಇದನ್ನು ಧಾರವಾಡ ಜೀ-

* ಇದು ಕೃಷ್ಣರಾಜನ ಕಾಲದಲ್ಲಿ ಕಟ್ಟಬಹುದು.

ಯೊಳಗಿನ ಮುಂಡರಗಿಯ ಹತ್ತರ ಇರುವ ರಂಗಾಪುರದ ಬಿಷ್ಟಪ್ಪಯ್ಯನವರೆಂಬ ಮಹಾಪುರುಷರು ಕಟ್ಟಿಸಿದರೆಂದು ಹೇಳುತ್ತಾರೆ. ಈ ಮಹಾಪುರುಷರ ವಂಶದವರು ಈಗಲೂ ರಂಗಾಪುರದಲ್ಲಿ ಇನಾಮು ಭೂಮಿಗಳನ್ನು ಉಣ್ಣುತ್ತಾ ಇರುವರು. ಬಿಷ್ಟಪ್ಪಯ್ಯನವರು ಗೋಪುರವನ್ನು ಕಟ್ಟಿಸಲಿಕ್ಕೆ ಆರಂಭಮಾಡಿ ಮೊದಲಿನ ಅಂತಸ್ತನ್ನು ಮುಗಿಸಿ ಎರಡನೇ ಅಂತಸ್ತನ್ನು ಕಟ್ಟಿಸಲಿಕ್ಕೆ ಹತ್ತಲು, ಅದು ನಿಲ್ಲದೆ ಆಗಾಗ್ಗೆ ಕಡಕೊಂಡು ಬೀಳಹತ್ತಿತಂತೆ; ಆಗ ಅವರು ಕೆಲಜನ ಪಂಡಿತರನ್ನು ಕೇಳಲು ಹಡೆಯಲಾದ ಒಬ್ಬ ಹೆಣ್ಣು ಮಗಳನ್ನು ಬಲಿಕೊಟ್ಟರೆ ನಿಲ್ಲುವದೆಂದು ಹೇಳಲಾಗಿ, ದುಗುಡದಿಂದ ಮನೆಗೆ ಬಂದು ಸಣ್ಣ ಮೋರೆಮಾಡಿಕೊಂಡು ಕೂಡಲು, ಅವರ ಹಿರೆ ಸೊಸೆಯು ಮಾವನ ಮನದಳಲನ್ನು ಅವರಿಂದಲೇ ತಿಳುಕೊಂಡು ತನ್ನನ್ನೇ ಆ ಗೋಪುರಕ್ಕೆ ಬಲಿಕೊಡಬೇಕೆಂತಲೂ ತಾವು ಮಾಡುವ ಸತ್ಕಾರ್ಯಕ್ಕಾಗಿ ತನ್ನೊಡಲು ಉಪಯೋಗಿಸಲ್ಪಡುವದರಿಂದ ತನ್ನ ಜನ್ಮವು ಸಾರ್ಥಕವಾಗುವದೆಂತಲೂ ಇದಕ್ಕಾಗಿ ತಾನು ತುಂಬಾ ಸಂತೋಷದಿಂದ ಸಿದ್ಧಳಿರುವೆನೆಂತಲೂ ನುಡಿದಳಂತೆ; ಇದೇ ಮೇರೆಗೆ ಬಿಷ್ಟಪ್ಪಯ್ಯನವರು ಗೋಪುರದ ಗೋಡೆಯಲ್ಲಿ ಪದರುಬಿಟ್ಟು ಆ ಪದರಿನಲ್ಲಿ ಬಾಣಂತಿತನಕ್ಕೆ ಬೇಕಾಗುವಷ್ಟು ಎಲ್ಲ ಒಡವೆಗಳನ್ನು ಸವರಣೆಮಾಡಿ ಇಡಿಸಿ ತಮ್ಮ ಸೊಸೆಯನ್ನು ಆ ಸ್ಥಳದಲ್ಲಿಯೇ ಕೂಡ್ರಿಸಿ ಗೋಡೆಗೆ ಇಟ್ಟಂಗಿಗಾರಗಳನ್ನೇರಿಸಿದರಂತೆ; ಅಲ್ಲಿಂದ ಗೋಪುರವನ್ನು ಕಟ್ಟುವ ಕಾರ್ಯವು ಯಥಾಸಾಂಗವಾಗಿ ಮುಗಿಯಿತೆಂತಲೂ ಮೊನ್ನೆಮೊನ್ನಿನವರಿಗೆ ಆ ಸ್ಥಳದಲ್ಲಿ ಜೋಗುಳದಸಪ್ಪಳವೂ ಕೂಸಿನ ಧ್ವನಿಯೂ ಕೇಳಬರುತ್ತಿತ್ತೆಂತಲೂ ಯಾರೋ ಒಬ್ಬರು ಆ ಧ್ವನಿಯನ್ನು ಕೇಳಿ "ಇನ್ನೂ ನಿನ್ನ ಸೊಲ್ಲು ಬೆಲ್ಲವಾಗಲಿಲ್ಲವೇ" ಎಂದು ನುಡಿದರೆಂತಲೂ ಅಂದಿನಿಂದ ಆ ಸಪ್ಪಳವು ಕೇಳಬರುವದಿಲ್ಲವೆಂತಲೂ ಅಲ್ಲಿಯವರು ಹೇಳುವರು. ಆದರೆ ಪ್ರಸ್ತುತಕ್ಕೆ ಎರಡನೇ ಅಂತಸ್ತಿನ ಒಂದು ಬದಿಯ ಗೋಡೆಯಲ್ಲಿ ಒಂದು ಶಿಲಾಮೂರ್ತಿಯು ಮಾತ್ರ ಕಾಣುವದು. ಅದಕ್ಕೆ

ಗೋಪುರದವ್ನನೆಂಬ ಹೆಸರು ಈ ಮೂರ್ತಿಗೆ ಮಕ್ಕಳಿಕರ ಕೊಂಡು ಹೋದವರು ಹಣ್ಣು ಕಾಯಿಗಳನ್ನು ಕೊಡುವ ರೂಢಿಯುಂಟು. ಇದರ ಎದುರಿಗೆ ಗಣಪತಿಯ ಮೂರ್ತಿ ಯುಂಟು. ಈ ಅಂತಸ್ತಿನ ನೆಲವು ಗಚ್ಚಿನದು. ಇಲ್ಲಿ ಸೊ ಗಸುಗಾರರು ಕೂತು ವಿಶ್ರಾಂತಿ ಹೊಂದಬಹುದು. ನೋಡ ಲಿಕ್ಕೆ ಬಂದ ಬಂದ ಜನರು ಇದ್ದಲಿಯಿಂದ ಇಲ್ಲವೆ ಸೀಸಕ ನಸಿಲಿನಿಂದ ಒರೆದ ತಪ್ಪು ಹೆಸರು ದಿವಸಗಳಿಂದ ಗೋಡೆ ಗಳು ತುಂಬಿ ಹೋಗಿವೆ. ಈ ಅಂತಸ್ತಿನಲ್ಲಿ ಅಂಗಾತ ಮ ಲಗಿದರೆ ಶಿಖರದವರೆಗಿನ ಪೊಳ್ಳುಪ್ರದೇಶವು ಕಾಣುತ್ತದೆ. ಬ್ಬೇರೆ ಬ್ಬೇರೆ ನೆಲೆಗಳಿಗೆ ಮಾಳಿಗೆಗಳಿಲ್ಲ. ಗೋಡೆಯು ಪಡಿ ಪದರಿನಲ್ಲಿ ಎರಡನೇ ನೆಲೆಗೆ ಹತ್ತುವ ಹಾದಿಯುಂಟು. ಈ ಹಾದಿಯು ಕತ್ತಲೆಯಿಲ್ಲ ಕಣ್ಣುಕಪ್ಪಡಿಗಳ ಮನೆಯಾಗಿರು ವದು. ಹತ್ತುವ ಮನುಷ್ಯನು ಚಿಪ್ಪಳಿಯನ್ನಿಕ್ಕುತ್ತ ಬಾ ಯಿಂದ ಹುಸ್ಸೆಂದು ಸಪ್ಪಳ ಮಾಡುತ್ತ ಹತ್ತುವದೇ ಲೇಸು. ಕಡೆ ನೆಲೆಯನ್ನೇರಿದವನು ಬಾಗಿಲೊಳಗಿಂದ ತಳನೆಲೆಯ ಮಾಳಿಗೆಯ ಮೇಲೆ ಅಂಗಾತ ಮಲಗಿದವನನ್ನು, ಮಲಗಿದವ ನು ಮೇಲಿನವನನ್ನು ನೋಡಲು, ಒಬ್ಬರಿಗೊಬ್ಬರು ಒಂದು ಮೊಳದಷ್ಟು ದೊಡ್ಡವರಾಗಿ ಕಾಣುವರು. ಮೇಲಿನವನ ಕ ಣ್ಣುಗಳು ತಿರುಗುವವು. ಕೆಳಗಿನವನು ಆ ಉನ್ನತವಾದ ಬೈಲಿನ ಭವ್ಯತ್ವದಿಂದ ದಂಗಾಗುವನು. ಈ ಗೋಪುರದ ಹೊಸ್ತಲದಿಂದ ಪಾದಗಟ್ಟೆಯ ಬಸವೇಶ್ವರನವರೆಗೆ ಸುಮಾ ರು ಅರ್ಧ ಮೈಲಿನ ಅಂತರವುಂಟು. ಇದೇ ತೇರ ಎಳೆಯು ವ ಹಾದಿಯು. ಈ ಪಾದಗಟ್ಟೆಯ ಬಸಪ್ಪನು ಕಾಲುಮಡಿಚಿ ಕೊಂಡು ಕೂತಿರುವನು ಆ ಕಾರಣದಲ್ಲಿ ಅವನೆಯನ್ನು ಹೋ ಲುವನು. ಈ ತೇರು ಎಳೆಯುವ ಮಾರ್ಗವು ವಿಸ್ತಾರವಾ ದದ್ದೂ ಎಡಬಲಗಲ್ಲಿ ಎರಡಂತಸ್ತಿನ ಕಲ್ಲಿನ ಪೌಳಿಗಳುಳ್ಳ ದ್ದೂ ಇರುವದು. ಆದರೆ ಸದ್ಯಕ್ಕೆ ಪೌಳಿಯ ಕೆಲವು ಭಾ ಗವು ನಾಮಶೇಷವಾಗಿದೆ. ಕೆಲವು ಆ ಹಾದಿಯನ್ನು ಹಿಡಿದಿ ರುವದು. ಮಹಾದ್ವಾರವನ್ನು ದಾಟಿ ಒಳಹೋಗಲು ಮೊದಲ

ನೇ ಪ್ರಾಕಾರವು ಹತ್ತುವದು. ಈ ಪ್ರಾಕಾರವು ಸುಮಾರು ೧೫೦ ಫೂಟು ಉದ್ದವೂ ಅಷ್ಟೇ ಅಗಲವೂ ಇರುವದು. ಸುತ್ತಲೂ ಲೋವಿಗಳುಳ್ಳ ಕಲ್ಲು ಪೌಳಿಗಳು ಕಂಗೊಳಿಸುವವು. ಈ ಪ್ರಾಕಾರದಲ್ಲಿ ಸುಮಾರು ೨ ಫೂಟು ಆಗಲಾದ ಒಂದು ಹೊಳನೀರು ಯಾವಾಗಲೂ ಹರಿಯುವ ತುಂಗಭದ್ರೆಯ ಕಾಲಿವೆಯು ಇರುವದು. ಒಂದು ಚಿಕ್ಕ ಭಾವಿಯಾಡರೂ ಇಲ್ಲಿಯೇ ಉಂಟು ಮಳೆಗಾಲದಲ್ಲಿ ನದಿಯನೀರು ರಾಡಿಯಾಗುವದರಿಂದ ಕಾವಲಿಯ ನೀರು ಕುಡಿಯಲಿಕ್ಕೆ ತಕ್ಕವಲ್ಲವೆಂದು ಈ ನೀರನ್ನು ಉಪಯೋಗಿಸುತ್ತಿರಬಹುದು ಈ ಪ್ರಾಕಾರವನ್ನು ದಾಟಿ ಒಳಗೊಂದು ಪ್ರಾಕಾರವಿರುವದು. ಆ ಒಳಗಿನ ಪ್ರಾಕಾರದ ಮಧ್ಯಭಾಗದಲ್ಲಿ ಶ್ರೀವಿರೂಪಾಕ್ಷನ ದೇವಾಲವುಂಟು. ಈ ಪ್ರಾಕಾರದ ಹೆಬ್ಬಾಗಲಮೇಲೆಯೂ ಒಂದು ಗೋಪುರವುಂಟು. ಇದು ಮೊದಲಿನ ವಿಜಯನಗರದ ಅರಸರಾದ ಅಚ್ಯುತರಾಯ, ಕೃಷ್ಣರಾಯರು ಕಟ್ಟಿಸಿದ್ದೆಂದ ಹೇಳುತ್ತಾರೆ. ಹಿಂದಿನ ಪ್ರಾಕಾರದಂತೆ ಈ ಪ್ರಾಕಾರದಲ್ಲಿಯೂ ವಿಸ್ತಾರವಾದ ಕಟ್ಟಿನ ಪೌಳಿಗಳು ಸುತ್ತಲೂ ಉಂಟು. ಗರ್ಭಗುಡಿಯು ಹಿಂದಿನ ಭಾಗದ ಪೌಳಿಯಲ್ಲಿ ಉಗ್ರಾಣವಿರುವದು. ಮುಖ್ಯ ದೇವಾಲಕ್ಕೆ ಎರಡು ಬಾಗಿಲಗಳುಂಟು. ಪೂರ್ವಕ್ಕೊಂದು; ಉತ್ತರಕ್ಕೊಂದು. ಉತ್ತರ ಬಾಗಿಲದ ಎದುರಿಗೆ ಪೌಳಿಯಲ್ಲಿ ಒಂದು ಮಹಾದ್ವಾರವಿರುವದು. ಆ ದ್ವಾರದ ಮೇಲೆ ಕನಕಗಿರಿಯ ಅಥವಾ ಕನಕೇರಿಯ ಅರಸನು ಕಟ್ಟಿಸಿದ ಒಂಭತ್ತು ನೆಲೆಯ ಗೋಪುರವುಂಟು. ಈ ಗೋಪುರದ ಒಂದೊಂದು ನೆಲೆಗೆ ಮಾಳಿಗೆಯುಂಟು. ಮಡಿಗೆಗೆ ಉಪಯೋಗಿಸಿದ ಕಟ್ಟಿಗೆಯು ತಾಳೀಮರದ್ದು; ಇಲ್ಲಿ ಮಂಗಗಳ ವಾಸ್ತವ್ಯ ಬಹಳ. ಒಬ್ಬಿಬ್ಬರೂ ಹುಡುಗರು ಹುಷ್ಪಡಿಯೂ ಹೋಗುವದು ಅಸಾಧ್ಯ. ಮುಖ್ಯ ದೇವಾಲಯದ ಮಧ್ಯರಂಗವು ವಿಸ್ತಾರವಾದದ್ದುಂಟು. ಅಲ್ಲಿ ಬ್ರಾಹ್ಮಣೇತರ ಜನರು ನಿಲ್ಲುವರು.

(ಸಶೇಷ)

IV ಮೇಲಾದ ಪ್ರಶ್ನಗಳನ್ನು ರಚಿಸುವದನ್ನು ಕುರಿತು ನಿಯಮಗಳು.

ಅ ವಿದ್ಯಾರ್ಥಿಕ ನಿಯಮಗಳು.

೧. ಪ್ರಶ್ನಗಳ ಭಾಷೆಯು ಸುಲಭವೂ ಸರಳವೂ ಪರಿಚಿತವೂ ಸಂಪ್ಷಿಪ್ತವೂ ವಿಷಯಕ್ಕೆ ಸಂಬಂಧಿಸಿದಂಥಾದ್ದೂ ಇರಬೇಕು

೨. ಪ್ರಶ್ನಗಳು ವರ್ಗದೊಳಗಿನ ವಿದ್ಯಾರ್ಥಿಗಳ ಯೋಗ್ಯತೆಗೆ ಅನುಗುಣವಾಗಿರಬೇಕು; ಅಂದರೆ ಅವರ ಆಕಲನ ಶಕ್ತಿಯನ್ನು ಮೀರಿದಂಥಾದ್ದಿರಬಾರದು. ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯಗಳಿಂದ ಅವರ ಯೋಗ್ಯತೆಯು ಗೊತ್ತಾಗುತ್ತದೆ. ಇದನ್ನು ಸರಿಯಾಗಿ ತಿಳಕೊಳ್ಳುವದು ಶಿಕ್ಷಕನಿಗೆ ಅತ್ಯವಶ್ಯವು. ಯೋಗ್ಯತಾ ನಿಧಾನದಲ್ಲಿ ತಪ್ಪಾದರೆ ಕೆಲಸವು ಕೆಡುತ್ತದೆ.

೩. ಪ್ರಶ್ನಗಳ ಪರಸ್ಪರ ಸಂಬಂಧವು ಶಾಸ್ತ್ರಸಿದ್ಧವಾಗಿರಬೇಕು ಅಂದರೆ ಅವು ಒಂದರಿಂದೊಂದು ಫಲಿತವಾಗಿರಬೇಕು.

೪. ಪ್ರಶ್ನಗಳು ವಿದ್ಯಾರ್ಥಿಗಳ ತಿಳುವಳಿಕೆಗೆ ಅನುಗುಣವಾಗಿರಬೇಕು; ಅಂದರೆ ಪ್ರಶ್ನದಲ್ಲಿ ವಿದ್ಯಾರ್ಥಿಗಳಿಗೆ ಗೊತ್ತಿಲ್ಲದಂಥ ಸಂಗತಿಗಳಾಗಲಿ ಗೊತ್ತಾಗಲಿಕ್ಕೆ ಅನುಕೂಲವಿಲ್ಲದಂಥ ಸಂಗತಿಗಳಾಗಲಿ ಇರಕೂಡದು. ಪ್ರಶ್ನಗಳು ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯವನ್ನು ಮೀರದಿದ್ದರೂ ಅವರಿಗಿದ್ದ ಜ್ಞಾನವನ್ನು ಮೀರಬಹುದು ಇಂಥ ಪ್ರಶ್ನಗಳನ್ನು ಮಾಡುವದು ಸರಿಯಲ್ಲ.

೫. ವಿದ್ಯಾರ್ಥಿಗಳಿಗೆ ಏನು ಬರುತ್ತದೆಂಬದನ್ನು ತಿಳಕೊಳ್ಳುವದೇ ಪ್ರಶ್ನದ ಮುಖ್ಯ ಉದ್ದೇಶವು. ಅವರಿಗೆ ಯಾವದು ಬರುವದಿಲ್ಲ ಅದನ್ನು ಗೊತ್ತು ಹಚ್ಚುವದು ಪ್ರಶ್ನದ ಉದ್ದೇಶವಲ್ಲ. ಈ ಮಾತನ್ನು ಶಿಕ್ಷಕರು ಯಾವಾಗಲೂ ಕಣ್ಣು ಮುಂದಿಡಬೇಕು ಅದನ್ನು ಮರೆ ಮಾಡಕೂಡದು.

(೫) ನಿಷೇದಾರ್ಥಕ ನೇಮಗಳು.

೧. ಪ್ರಶ್ನಗಳನ್ನು ತಿರಿಗಿ ತಿರಿಗಿ ನುಡಿದಂತೆ· ಅದರಲ್ಲಿ ಹೆಚ್ಚುಕಡಿಮೆಯಾಗಗೊಡಬಾರದು, ಅಂದರೆ ರೂಪ ಬದಲಾದರೂ ಅಭಿಪ್ರಾಯದಲ್ಲಿ ಹೆಚ್ಚುಕಡಿಮೆಯಾಗಕೂಡದು.

೨ ಸೂಚಕಪ್ರಶ್ನಗಳನ್ನು ಮಾಡಕೂಡದು ಅದೇ ಮೇರೆಗೆ ಉತ್ತರವನ್ನು ಸೂಚಿಸುವಂಥ ಪ್ರಶ್ನಗಳನ್ನು ‘ಮಾಡಕೂಡದು ಅಂದರೆ ಬುದ್ಧಿ ವೆಚ್ಚವಾಗದೆ ಉತ್ತರ ಹೊರಡುವಂಥ ಪ್ರಶ್ನಗಳು ಇರಬಾರದು.

೩ ಪ್ರಶ್ನಗಳು ಸಂದಿಗ್ಧವಾಗಿಯೂ ಅನಿಶ್ಚಿತವಾಗಿಯೂ ಇರಬಾರದು.

೪. ಬರೇ ಒಂದು ಶಬ್ದವಿದ್ದಾಗಲಿ ಶಬ್ದಸಮುಚ್ಚಯವನ್ನಾಗಲಿ ಪೂರೈಸುವದರಿಂದ ಪೂರ್ಣವಾಗುವಂಥ ಪ್ರಶ್ನಗಳಿರಬಾರದು ಇಂಥ ಪ್ರಶ್ನಗಳಿಂದ ಗೊಂದಲವು ಹೆಚ್ಚಾಗುವದೇ ಹೊರತು ಲಕ್ಷ್ಯದ ಚಟಿಯು ಬೆಳಿಯಲಾರದು. ಜ್ಞಾನವೂ ಹೆಚ್ಚಾಗಲಾರದು. ಚಟುವಟಿಕೆಯಿಂದ ಕೂಡಿದ ಸಂಗತಿಗಳನ್ನು ಹೊರಡಿಸುವಾಗ ಮಾತ್ರ ಇಂಥ ಪ್ರಶ್ನಗಳನ್ನು ಮಾಡಬಹುದು.

V ಊನ ಪ್ರಶ್ನಗಳು—ಮೇಲೆ ನಿವರಿಸಿದ ನೇಮಗಳನ್ನು ಅತಿಕ್ರಮಿಸುವ ಪ್ರಶ್ನಗಳೇ ಊನಪ್ರಶ್ನಗಳೆಂದು ಹೇಳಬಹುದು.

(೫) ಉತ್ತರಗಳು—ವಿದ್ಯಾರ್ಥಿಗಳು ಕೊಟ್ಟ ಉತ್ತರಗಳನ್ನು ಸ್ವೀಕರಿಸಿ ಅವುಗಳನ್ನು ಯುಕ್ತಿಯಿಂದ ಉಪಯೋಗಿಸಿ ಮೇಲಾದ ಮಾಸ್ತರನು ತನು ವಹಿಸಿದ ಕಾರ್ಯವನ್ನು ನಿರ್ವಹಿಸುವನು. ಆದರೆ ಉತ್ತರಗಳ ಸಂಬಂಧದ ಕೆಲವು ಮುಖ್ಯ ಮುಖ್ಯ ತತ್ವಗಳನ್ನು ಲಕ್ಷದಲ್ಲಿಟ್ಟು ತನ್ನ ಕೆಲಸ ಮಾಡುವನು ತಕ್ಕ ಮಟ್ಟಿಗೆ ಯಶವನ್ನು ಹೊಂದಬಹುದು.

ಆ ತತ್ವಗಳು ಯಾವವೆಂದರೆ

I ಉತ್ತರಗಳೂ ಅವುಗಳ ಪ್ರಯೋಜನವೂ.

ಶಿಕ್ಷಣದ ಕೆಲಸದಲ್ಲಿ ಉತ್ತರಗಳಿಂದ ಬಹಳ ಪ್ರಯೋಜನವಾಗುತ್ತದೆ.

೧. ಉತ್ತರವನ್ನು ಕೊಡಬೇಕಾದರೆ ಲಕ್ಷ ಕೊಡಲಿಕ್ಕೇ

ಜೀಕು. ಅದರಿಂದ ವಿದ್ಯಾರ್ಥಿಗಳ ಏಕಾಗ್ರತೆಯು ಚಟುವಟಿಕೆ ಬೆಳೆಯುವದು ಇದು ಮೊದಲನೇ ಲಾಭವು.

೨. ಉತ್ತರ ಕೊಡಬೇಕಾದರೆ ವಿಚಾರ ಮಾಡಬೇಕಾಗುತ್ತದೆ. ಅದರಿಂದ ವಿಚಾರಸಾಮರ್ಥ್ಯಕ್ಕೆ ಚಾಲನೆಯು ಶಿಗುತ್ತದೆ.

೩. ಸ್ಮರಣಸಾಮರ್ಥ್ಯವು ಪ್ರಯೋಗಿಸಲ್ಪಟ್ಟು ಬೆಳೆಯುತ್ತದೆ.

೪. ಮನಸ್ಸಿನ ಚಟುವಟಿಕೆಯು ಬೆಳೆದು ಬುದ್ಧಿಯು ಚುರುಕಾಗುತ್ತದೆ.

೫. ಪಾಠಜ್ಞಾನವು ವಿದ್ಯಾರ್ಥಿಗಳಿಗೆ ಎಷ್ಟುಮಟ್ಟಿಗೆ ಆಗಿರುತ್ತದೆಂಬದು ಗೊತ್ತಾಗುತ್ತದೆ.

೬ ಶಕಸ್ಪೋಕ್ತ ೧ ನುಸಂಧಾನದ ಶಿಕ್ಷಣವು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಘಟಿಸುತ್ತದೆ.

II ಸರಿಯಾದ ಉತ್ತರಗಳ ಲಕ್ಷಣಗಳು ಯಾವವೆಂದರೆ-

ವಿಚಾರವಂತಿಕೆ - ಸರಿಯಾದ ಉತ್ತರವನ್ನು ಕೊಡಬೇಕಾದರೆ ವಿಚಾರ ಮಾಡಲಿಕ್ಕೆಬೇಕು. ಒಮ್ಮೊಮ್ಮೆ ವಿಚಾರಕ್ಕಾಗಿ ಅವಕಾಶ ಬೇಕು. ಆದರೆ ತಾತ್ಕಾಲಿಕವಾಗಲಿ ತಡವಾಗಿಯಾಗಲಿ ಕೊಟ್ಟ ಸರಿಯಾದ ಉತ್ತರದಲ್ಲಿ ಈ ಲಕ್ಷಣವು ಇರಲಿಕ್ಕೇಬೇಕು.

೨ ಸ್ಪಷ್ಟೋಕ್ತಿ ಅಥವಾ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವದು—ಕೇಳಿದ ಪ್ರಶ್ನೆಗೆ ತಕ್ಕಷ್ಟೇ ಅಂದರೆ ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲದಷ್ಟೇ ಉತ್ತರವನ್ನು ಸ್ಪಷ್ಟವಾಗಿ ಬಿಡಿಸುಡಿಯುವದು ಅಥವಾ ಹೇಳುವದು. ಉತ್ತರದ ಭಾಷೆಯಾದರೂ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಬೇಕಾದಷ್ಟೇ ಇರತಕ್ಕದ್ದು, ಹೆಚ್ಚಿನ ಶಬ್ದಗಳು ಇರಕೂಡದು

೩. ನಿಜವಾದ ತಿಳುವಳಿಕೆ—ಇದು ವಿಚಾರವಂತಿಕೆ ಬುದ್ಧಿಸಾಮರ್ಥ್ಯಗಳ ಫಲಿತವಾಗಿರುವದು ಸಮರ್ಥರಾದ ವಿದ್ಯಾರ್ಥಿಗಳು ಕೇಳಿದ ಪ್ರಶ್ನವನ್ನು ಎಚ್ಚರದಿಂದ ವಿಚಾರಿಸುವರು ಆದ್ದರಿಂದ ಅವರಿಗೆ ಪ್ರಶ್ನದ ವಿಷಯದ ನಿಜವಾದ ತಿಳುವಳಿಕೆ ಹುಟ್ಟಿ ಸರಿಯಾದ ಉತ್ತರ ಅವರಿಂದ ಬರುವದು. ವಾಡಿಕೆ

ಯಾಗಿ ಪ್ರಶ್ನೆ ಕೇಳಿದ ಕೂಡಲೆ ಹುಡುಗರು ಉತ್ತರ ಕೂಡಲೆ ಕ್ಕೆ ಹಾತೊರೆದು ಮನೆಬಂದಂತೆ ಉತ್ತರ ಕೊಡುವರು. ಕೇಳಿದ ಪ್ರಶ್ನೆಕ್ಕೂ ಕೊಟ್ಟ ಉತ್ತರಕ್ಕೂ ತಾಳಿರುವದಿಲ್ಲ ಇದಕ್ಕೆ ನಿಜವಾದ ತಿಳುವಳಿಕೆಯ ಅಭಾವವೇ ಕಾರಣವು.

೪. ಒಳ್ಳೇ ಕ್ರಮ—ಈ ಲಕ್ಷಣವಾದರೂ ಮೇಲಿನ ಲಕ್ಷಣದಂತೆ ಬರೆದ ಉತ್ತರಗಳಲ್ಲಿ ವ್ಯಕ್ತವಾಗಿ ತೋರುವದು. ಒಂದು ಪ್ರಶ್ನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಸಮಾವಿಷ್ಟವಾಗಿದ್ದರೆ ಒಂದು ವಿಷಯಕ್ಕೆ ಸರಿಯಾದ ಉತ್ತರಗಳನ್ನು ಬೇರೆ ಬೇರೆಯಾಗಿ ಆಯಾ ಸದರಿನ ಕೆಳಗೆ ಬರೆಯಲಿಕ್ಕೆ ಬೇಕು. ಪಾಠಿಕೆಯಾಗಿ ಪ್ರಶ್ನೆಗಳಿಗೆ ಸ್ಪಷ್ಟವೂ ಸಂಕ್ಷಿಪ್ತವೂ ಆದಂಥ ಕ್ರಮಗೊಳಿಸಿದಂಥ ಉತ್ತರಗಳನ್ನು ಕೊಡಲಿಕ್ಕೆ ಅನುಕೂಲವಿರುತ್ತದೆ. ಆದರೆ ಇಂಥ ಪ್ರಸಕ್ತಿಗಳನ್ನು ಗೊತ್ತುಹಚ್ಚಿ ಕ್ರಮಬದ್ಧ ಉತ್ತರಗಳನ್ನು ಮೇಲಾದ ವಿದ್ಯಾರ್ಥಿಗಳು ಕೊಡುವರು.

೫. ಮಿತತ್ವ — ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದರೆ ಹೊತ್ತು ಇಂಬುಗಳಿಗೆ ಹವಣಿಯಾಗಿ ತಕ್ಕ ಭಾಷೆಯನ್ನು ಉಪಯೋಗಿಸಿ ಉತ್ತರವನ್ನು ಕೊಡಬೇಕು ಪ್ರಶ್ನೆಕ್ಕೆ ಹವಣಿಯಾದ ಉತ್ತರವನ್ನು ಕೊಡಲಾರದೆ ಕೇಳಿದ್ದಕ್ಕಿಂತ ಹೆಚ್ಚು ಉತ್ತರವನ್ನು ವಿದ್ಯಾರ್ಥಿಗಳು ಬಹ್ಮೊಮ್ಮೆ ಕೊಡುವರು ಇದು ಒಳ್ಳೇದಲ್ಲ. ಈ ಚಟವನ್ನು ಆಗ್ರಹದಿಂದ ಬಿಡಿಸಲಿಕ್ಕೆ ಬೇಕು.

III ನ್ಪೀಕರಿಸತಕ್ಕ ಉತ್ತರಗಳು.

೧ ಸರಿಯಾದ ಉತ್ತರಗಳು—ಇಂಥ ಉತ್ತರಗಳನ್ನು ನ್ಪೀಕರಿಸಿ, ಕೊಟ್ಟವರಿಗೆ ತಕ್ಕ ಉತ್ತೇಜನ ಕೊಡತಕ್ಕದ್ದು.

೨. ನಿರ್ವ್ಯಾಲೀಕವಾದ ಉತ್ತರಗಳು — ವಿದ್ಯಾರ್ಥಿಗಳು ಸ್ವಬುದ್ಧಿಯಿಂದ ಕೊಟ್ಟ ಉತ್ತರಗಳನ್ನು ಸರಿಯಿರಲಿ, ತಪ್ಪಿರಲಿ ನ್ಪೀಕರಿಸುವದು ಲೇಸು. ಅಕೃತ್ರಿಮವಾಗಿ ಸ್ವಬುದ್ಧಿಯನ್ನು ಪೇಕ್ಷವಾಡಿ ಪ್ರಶ್ನೆಕ್ಕೆ ಉತ್ತರವನ್ನು ಕೊಡುವ ಹವಣಿಕೆಯು ಶ್ಲಾಘನೀಯವಾದದ್ದು ಇದನ್ನು ಅಗತ್ಯವಾಗಿ ಪ್ರೋತ್ಸಾಹನಗೊಳಿಸತಕ್ಕದ್ದು. ವಿದ್ಯಾರ್ಥಿಗಳ ದುಡತವಾಗಲಿ ಅ

ತ್ತರದ ಸಮತ್ವವಾಗಲಿ ಅಲ್ಪಾಂಶದಿಂದಾದರೂ ಉಳ್ಳಂಥ ಉತ್ತರಗಳನ್ನು ನಿರಾಕರಿಸುವದು ಸರಿಯಲ್ಲ.

೩. ಸರಾಸರಿ ಸಮವಾದ ಉತ್ತರಗಳು— ಉತ್ತರವು ಪೂರ್ಣವಾಗಿಲ್ಲ, ಯಥಾರ್ಥವಾಗಿಲ್ಲ, ಚಂದವಾಗಿಲ್ಲ ಎಂಬ ನೆವಗಳಿಂದ ಅವುಗಳನ್ನು ನಿರಾಕರಿಸುವದು ಸರಿಯಲ್ಲ. ವಿದ್ಯಾರ್ಥಿಗಳ ಬುದ್ಧಿಯನ್ನು ಬೈಲಿಗೆಳೆಯುವದೇ ಉದ್ದೇಶವಾಗಿರುವದರಿಂದ ತಮಗೆ ಮನಬಂದಂತೆ ಅನಿಯಂತ್ರಿತವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಕೊಡುವದು ವಿಹಿತವು. ಉತ್ತರದಲ್ಲಿ ನಿಜತ್ವದ ಅಂಶವು ಸ್ವಲ್ಪವಿದ್ದರೂ ಸಾಕು.

IV ನಿರಾಕರಿಸುವ ಉತ್ತರಗಳು—

೧ ವಾಚಾಲವಾದ ಅಥವಾ ಎಚ್ಚರಗೇಡಿತನದ ಉತ್ತರಗಳು—

ಇಂಥ ಉತ್ತರಗಳನ್ನು ನಿರಾಕರಿಸುವದಲ್ಲದೆ ಅದರ ಮೂಲವನ್ನು ಪರಿಶೋಧಿಸಿ ಕೆತ್ತುಹಾಕುವದು ಅವಶ್ಯವು. ಇಂಥ ಉತ್ತರಗಳನ್ನು ಬೈಲಿಗೆ ತಂದು ದೋಷಾವಿಷ್ಕರಣ ಮಾಡುವದು ವಿಹಿತವು. ಇದರೆ ಉತ್ತರ ಕೊಟ್ಟವನನು ಬೆದರಿಸುವದೂ ಸಗೆಗೇಡು ಮಾಡುವದೂ ಸರಿಯಲ್ಲ ಇದರಿಂದ ಸುಪರಿಣಾಮವಾಗುವದಕ್ಕಿಂತ ಅನಿಷ್ಟವಾಗುವ ಸಂಭವವು ವಿಶೇಷವಾಗಿರುವದು.

೨. ಗಡಿಬಿಡಿ ಅಥವಾ ಅನಿಯಂತ್ರಿತ ಉತ್ತರಗಳು— ಇವುಗಳನ್ನಾದರೂ ನಿರಾಕರಿಸತಕ್ಕದ್ದು. ಆದರೆ ಇವುಗಳನ್ನು ಕುರಿತು ಶಿಕ್ಷಕನು ಸ್ವಲ್ಪ ಎಚ್ಚರಪಡಲಿಕ್ಕೆಬೇಕು. ಗಡಬಿಡಿಯು ಅಥವಾ ಅನಿಯಂತ್ರಿತನದ ಮೂಲವನ್ನು ಗೊತ್ತುಹಚ್ಚಿ ಅದಕ್ಕೆ ತಕ್ಕ ಉಪಾಯವನ್ನು ಕೈಕೊಳ್ಳಲಿಕ್ಕೆಬೇಕು.

೩ ಅಶುದ್ಧ ಉತ್ತರಗಳು— ಇವುಗಳನ್ನು ಶಿಕ್ಷಕರು ವಿಚಾರದಿಂದ ಗ್ರಹಿಸಬಹುದು ಇಲ್ಲವೆ ನಿರಾಕರಿಸಬಹುದು. ಉತ್ತರದಲ್ಲಿ ಬುದ್ಧಿಪೂರ್ವಕವಾದ ಯತ್ನವಾಗಲಿ ನಿಜತ್ವವಾಗಲಿ ತೋರಿದರೆ ಉತ್ತರದ ಶುದ್ಧಾಶುದ್ಧತೆಯನ್ನು ಲಕ್ಷಿಸದೆ

ಅದನ್ನು ಗ್ರಹಿಸಿ ಉತ್ತರ ಕೊಟ್ಟವನನ್ನು ಪ್ರೋತ್ಸಾಹನೆಗೊಳಿಸಬೇಕು.

೪. ತರ್ಕದಿಂದ ಕೊಟ್ಟ ಉತ್ತರಗಳು—

ಈ ಉತ್ತರಗಳು ವಾಡಿಕೆಯಾಗಿ ಸೋಮಾರಿತನದಿಂದಾಗಲಿ ದುರ್ಲಕ್ಷದಿಂದಾಗಲಿ ಕೊಡಲ್ಪಡುತ್ತವೆ; ಕಾರಣ ಇವುಗಳನ್ನು ನಿರಾಕರಿಸಲೇಬೇಕು. ಇವುಗಳನ್ನು ನಿರಾಕರಿಸುವದಲ್ಲದೆ ಬೇರೆ ಪ್ರಶ್ನೆಗಳನ್ನು ಮಾಡಿ ದೋಷಗಳನ್ನು ಬೈಲಿಗೆಳೆದು, ಕೊಟ್ಟವರು ತಾವಾಗಿ ನಾಚಿಕೊಳ್ಳುವಂತೆ ಮಾಡಬೇಕು. ಒಮ್ಮೊಮ್ಮೆ ಅಜ್ಞಾನದಿಂದಾಗಲಿ ಮೂಢತನದಿಂದಾಗಲಿ ಇಂಥ ಉತ್ತರಗಳನ್ನು ಕೊಡುತ್ತಾರೆ. ಇಂಥ ಪ್ರಸಕ್ತಿಯಲ್ಲಿ ಅವುಗಳನ್ನು ಕೈಕೊಂಡು ಉಪಾಯದಿಂದ ಸರಿಯಾದ ಉತ್ತರಗಳನ್ನು ಶಿಕ್ಷಕನು ಹೊರಡಿಸಬೇಕು.

೫. ಮೋಸದ ಉತ್ತರಗಳು—ಈ ಉತ್ತರಗಳು ಬರಹ ಮೂಲಕ ಪರೀಕ್ಷೆಯಲ್ಲಿ ವಿಶೇಷವಾಗಿ ತೋರುವವು. ಪ್ರಸ್ತಕದಿಂದ ನೋಡಿಕೊಂಡಾಗಲಿ, ನೆರೆಯವನಿಂದ ಕೇಳಿಕೊಂಡಾಗಲಿ, ನೋಟಬುಕ್ಕಿನಿಂದ ನೋಡಿಕೊಂಡಾಗಲಿ, ಬೇರೆ ಸಂಕೇತಗಳಿಂದಾಗಲಿ ಉತ್ತರಗಳನ್ನು ಬರೆದು ಮೋಸಗೊಳಿಸುವ ಪ್ರಯತ್ನವನ್ನು ವಿದ್ಯಾರ್ಥಿಗಳು ಮಾಡುವರು ಇಂಥ ಉತ್ತರಗಳನ್ನು ನಿರಾಕರಿಸಲಿಕ್ಕೇಬೇಕು.

TEACHER'S WORK & DUTY (*Communicated*).

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(ಕಾನೇ ವುಟದಿಂದ ಮುಂದೆ ಸಾಗಿದ್ದು.)

ಹೀಗಿದ್ದು ಶಿಕ್ಷಕರಾದ ನಾವು "ಶಿಕ್ಷಕನ ಕೆಲಸಕ್ಕೆ ಗೌರವವಿಲ್ಲ. ಅದರಲ್ಲಿ ಹೆಚ್ಚಿನ ಪ್ರಾಪ್ತಿಯಿಲ್ಲ, ×× ಕೂತ ಹೆಂಗಸು ಶಿಕ್ಷಕನನ್ನು ನೋಡಿ ಮೇಲಕ್ಕೇಳುವದಿಲ್ಲ." ಎಂಬ ಲಜ್ಜಾಸ್ಪದವಾದ ಉದ್ಗಾರಗಳನ್ನು ಹೊರಗೆಡವುತ್ತ, ಉಂಡ ಮನೆಯ ಗಳ ಎಣಿಸುವ ಪುಣ್ಯವಂತರಂತೆ ಕೃತಘ್ನರಾಗಿ ಕರ್ತವ್ಯ ಪರಾಙ್ಮುಖರಾಗಿ ಪಾಪಿಗಳಾಗುತ್ತೇವಲ್ಲ! "ಇರುವದು

ತಿಳ್ಳಿಯು ಮೇಲೆ ಮೇಲುಪ್ಪರಿಗೆಯಲ್ಲಿ ಉಳ್ಳಾಡಿದರೆಂ"ಬಂತೆ ನಮ್ಮ ಸ್ಥಿತಿಯಾಗುವದು. ನಮ್ಮ ಜ್ಞಾನವೆಷ್ಟು? ನಮ್ಮ ಕೆಲಸವೆಷ್ಟು? ನಾವು ಹೇಗೆ ಆಚರಿಸುವೆವು? ನಮ್ಮ ವಿಚಾರಗಳು ಎಷ್ಟು ಉನ್ನತವಾಗಿರುವವು? ನಾವು ಎಷ್ಟು ಮಾನಕ್ಕೆ ಪಾತ್ರರಿರುತ್ತೇವೆ? ನಮ್ಮಿಂದ ಜನರಿಗಾಗುವ ಹಿತವೆಷ್ಟು? ನಾವು ಮಾಡುವ ಕೆಲಸವೆಂಥಾದ್ದು? ನಮಗೆ ದೊರೆಯುವ ಮಾನವು ಯಾವ ಪ್ರಕಾರದ್ದು? ಇಷ್ಟೇ ಮೊದಲಾದ ಬಾಬುಗಳ ಸಂಬಂಧದಿಂದ ನಮ್ಮ ವಿಚಾರವನ್ನು ನಮ್ಮಲ್ಲಿ ನಾವೇ ನ್ಯಾಯದಿಂದ ಮಾಡದೆ, ವಶಿಷ್ಠರಷ್ಟು ಮಾನವನ್ನೂ, ಜಿಲ್ಲಾಧಿಕಾರಿಯಷ್ಟು ಪಗಾರವನ್ನೂ, ಲಂಚಗುಳಿಯು ಲಂಚವನ್ನೂ, ಪೋಲೀಸಿನವರ ದರ್ಪವನ್ನೂ, ಉಡಾಳನ ಧಾಂಭಿಕತನವನ್ನೂ, ಬಯಿಸಿದರೆ ಅವು ದೊರೆಯುವವೆ? ಬಯಸುವದಾದರೂ ನ್ಯಾಯವಾಗಬಹುದೆ? ಇದರಿಂದ ಬಯಸುವವನ ಆತ್ಮವು ವ್ಯಥೆಗೊಂಡು ಅವನು ನಿಸ್ತೇಜನೂ, ನಿರಭಿಮಾನಿಯೂ ಮಾತ್ರ ಆಗಬಹುದು. ಆದ್ದರಿಂದ ಶಿಕ್ಷಕವರ್ಗವು ಇಂಥ ಅಯೋಗ್ಯ ಬಯಕೆಗಳಿಗೆ ಎಷ್ಟು ಮಾತ್ರವೂ ಸ್ಥಳ ಕೊಡಲಾಗದು.

ಪ್ರೀಯಬಾಂಧವರೇ, ನಾವು ಶಿಕ್ಷಕನ ಹೊರೆಯನ್ನು ಕಯ್ಕೊಂಡಿರುವದರಿಂದ ಇಂಥ ನಮ್ಮ ನೀಚಸ್ಥಿತಿಯಲ್ಲಾದರೂ ನಮಗೆ ದೊರೆಯುವ ಮಾನ ಲಾಭಗಳು ಅಲ್ಪವಾವವಿರುವದಿಲ್ಲ. ಆದರೆ ಅವನ್ನು ನೋಡುವ ನಾವು ಕಣ್ಣುಮಾತ್ರ ತೆರೆಯಲಿಕ್ಕೆಬೇಕು. ಶಿಕ್ಷಕನ ಕೆಲಸವನ್ನು ಕಯ್ಕೊಂಡಿರುವವನ ಪದರಿನಲ್ಲಿ ಅವನ ಯೋಗ್ಯತೆಯ ಪ್ರಕಾರ ಮಾನ ಲಾಭಗಳು ಕಟ್ಟಿರುವವೆಂದು ಮೇಲೆ ಹೇಳಿದೆ. ಖೊಟ್ಟಿ ಬಾಜಾರವಲ್ಲದ್ದರಿಂದ ಶಿಕ್ಷಕನ ಕೆಲಸದಲ್ಲಿ ಯೋಗ್ಯತೆಗಿಂತ ಹೆಚ್ಚಿನ ನಿಜವಾದ ಮಾನಲಾಭಗಳು ದೊರೆಯವು ಹೀಗಿದ್ದೂ ನಮ್ಮ ಮನಸ್ಸು ಅಸ್ವಸ್ಥವಾದರೆ ಮೇಲಿನ ನಮ್ಮ ಮೂರು ಉದ್ಗಾರಗಳ ನಿಜಸ್ವರೂಪವನ್ನು ಸ್ಪಷ್ಟವಾಗಿ ವಿಚಾರಿಸುವದು ಹಾನಿಕರವಾಗದು.

ನಮ್ಮ ಮೊದಲನೆಯ ಉದ್ಗಾರವು "ಶಿಕ್ಷಕನ ಕೆಲಸದಲ್ಲಿ

ಗೌರವವಿಲ್ಲವು" ಎಂಬದಾಗಿದೆ. ವಿಚಾರಮಾಡಿ ನೋಡಿದ ಈ ಉದ್ಗಾರವು ಅಜ್ಞಾನ ಜನಿತವಾದದ್ದೆಂದು ಒಡಂಬಡಬೇಕಾಗುವದು. ಯಾಕಂದರೆ—"ಜಿಲ್ಲಾಧಿಕಾರಿಯು ಪಗಾರವು ದೊಡ್ಡದು, ಅವನ ಅಧಿಕಾರದಿಂದ ಜಿಲ್ಲೆಯು ನಡಗುವದು, ಲಂಚಕೊಳಿಯ ಲಂಚವು ಸವಿಯಾದದ್ದು, ಇವೆಲ್ಲ ನನಗೆ ಇದ್ದರೆ ನೆಟ್ಟಗಾಗುತ್ತಿತ್ತು" ಎಂದು ನಾವು ಬಯಸಬೇಕು. ಆದರೆ ಇವುಗಳ ಪ್ರಾಪ್ತಿಗೆ ಮೂಲ ಕಾರಣವಾದ ಜ್ಞಾನ ಸಂಪಾದನೆಯ ಆರಂಭವು ಪ್ರಾಥಮಿಕ ಶಾಲೆಗಳ ಶಿಕ್ಷಕರಾದ ನಮ್ಮಿಂದ ಮಾಡಲ್ಪಟ್ಟದ್ದು, ಅದು ಹೆಚ್ಚಿನ ಯೋಗ್ಯತೆಯು ಶಿಕ್ಷಕರಿಂದಲೇ ಬೆಳಿಸಲ್ಪಟ್ಟಿತೆಂಬ ಅಭಿಮಾನವನ್ನು ಮಾತ್ರ ಹಿಡಿಯಬಾರದು ಇದು ಯಾವ ನ್ಯಾಯವು? ತಾನು ಹಾಕಿದ ಬೀಜದ ಫಲಗಳು ತಾನು ಆಶ್ಚರ್ಯಪಡುವಂತೆ ದೊಡ್ಡವಾಗಲು ಅವನ್ನು ನೋಡಿ ಬೀಜಬಿತ್ತಿದವನು ತನ್ನ ಕೆಲಸದ ಗೌರವಕ್ಕೆ ಕುಂದನಿಡುವನೋ? ಇಡುತ್ತಿದ್ದರೆ ಅವನು ತಿಳಿಗೇಡಿಯಾದ ಶಿಕ್ಷಕನೇ ಎಂದು ಹೇಳಬಹುದು. ಇನ್ನು ಜ್ಞಾನವೃಕ್ಷದ ಅತ್ಯುಚ್ಚತರ ಫಲವು ಆನಂದವಾಗಿರುವದರಿಂದ ಅದರ ಅನುಭವವು ತನ್ನ ಹಾಗೂ ತನ್ನ ಜ್ಞಾನದ ಅಳತೆಯನ್ನು ಹಣದಿಂದ ಮಾಡುವ ನಮ್ಮಂಥ ಪಾಮರ ಶಿಕ್ಷಕರಿಗೆ ಆಗಲಾರದೆಂಬದು ನಿಜವು. ಆದ್ದರಿಂದ ಜ್ಞಾನದಾನದ ಕೆಲಸದ ಅಂದರೆ ಶಿಕ್ಷಕನ ಕೆಲಸದ ಗೌರವವು ನಮಗೆ ತಿಳಿಯದಿರುವದೂ ಸ್ವಾಭಾವಿಕವೇ? ಇದರಿಂದ ಶಿಕ್ಷಕನ ಕೆಲಸದ ಗೌರವಕ್ಕೆ ಏನೂ ಬಾಧೆಬಾರದೆ ಅದನ್ನು ತಿಳಿಯುವ ಯೋಗ್ಯತೆಯು ಮಾತ್ರ ನಮ್ಮಲ್ಲಿ ಇಲ್ಲೆಂದು ಒಡಂಬಡಬೇಕಾಗುವದು.

ಇನ್ನು ಎರಡನೆಯ ಆಕ್ಷೇಪವು ಅಂದರೆ "ಶಿಕ್ಷಕನಿಗೆ ಹೆಚ್ಚಿನ ಪ್ರಾಪ್ತಿಯಿಲ್ಲೆಂಬದು ವ್ಯವಹಾರಿಕ ಸ್ಥೂಲ ದೃಷ್ಟಿಯಿಂದ ನಿಜವಾಗಿ ತೋರಬಹುದು. ಆದರೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಈ ಆಕ್ಷೇಪವೂ ನಿರಾಧಾರವಾಗಿ ತೋರದೆ ಹೋಗದು. ಯಾಕಂದರೆ ಅಜಡವಾದ ಈ ಪವಿತ್ರ ಜ್ಞಾನಕ್ಕೆ ಜಡರೂಪವಾದ ಮೇರು ಸಮದ್ರವು ಬೆಲೆಯಾಗಲಾ

ರದು. ಅದರಿಂದಲೇ ಬರಿಯ ದ್ರವ್ಯದ ಬೆಲ್ಲದಿಂದ ಮನು
ಷ್ಯನು ಜ್ಞಾನವನ್ನು ಸಂಪಾದಿಸಲಾಸಲ್ಲ. ಕಾರಣ ಜ್ಞಾನ
ಬೆಲೆಯು ದ್ರವ್ಯವಾಗಿರದೆ ಆ ದ್ರವ್ಯವು ಕೊಡಕೊಳ್ಳುವವ
ಮುಖ್ಯವಾಗಿ ಕೊಡುವವರ ಬೆಲೆಯಾಗಿರುವದು ಇದೇ ಕಾ
ರಣದಿಂದ ಪ್ರಾಚೀನರು ಶಿಷ್ಯನಿಂದ ಕೊಡಲ್ಪಟ್ಟ ಹಣವು
ತಾದ್ದಕ್ಕೆ ಗುರುದಕ್ಷಿಣೆಯನ್ನುವರು. ದ್ರವ್ಯವು ಕೊಡು
ವನ ಬೆಲೆಯಾಗಿರುತ್ತದೆಂಬದರ ನಿಜತ್ವವನ್ನು ಕಂಡು ಕೊ
ಳ್ಳುವದು ಬಿಗಿಯಲ್ಲ. ಒಬ್ಬ ಶಿಕ್ಷಕನು ಒಬ್ಬ ದರಿದ್ರನಿಗೆ
ವಿದ್ಯಾದಾನಮಾಡಿದರೆ, ಅದಕ್ಕಾಗಿ ಆ ದರಿದ್ರ ಶಿಷ್ಯನು ಅನ
ನ್ಯಭಾವದಿಂದ ಗುರುವಿಗೆ ನಮಸ್ಕರಿಸಿ, ಕೃತಜ್ಞತೆಯಿಂದ
ಆತನನ್ನು ಕೊಂಡಾಡುವನು ಇದೇ ದರಿದ್ರ ಶಿಷ್ಯನಿಂದ ಆ
ಶಿಕ್ಷಕನಿಗೆ ದೊರೆತ ದಕ್ಷಿಣೆಯು. ಅದೇ ಶಿಕ್ಷಕನು ಅದೇ
ಜ್ಞಾನದಾನವನ್ನು ಒಬ್ಬ ಧನಿಕನ ದವಿದ್ಯಾರ್ಥಿಗೆ ಮಾಡಿದರೆ,
ಆ ಶಿಕ್ಷಕನಿಗೆ ಧನಿಕನಯೋಗ್ಯತೆಯಂತೆ ದ್ರವ್ಯರೂಪವಾದ
ಗುರುದಕ್ಷಿಣೆಯು ದೊರೆಯುವದು. ಇನ್ನು ಅದೇ ಶಿಕ್ಷಕ
ನಿಂದ ಆ ಜ್ಞಾನವು ಪೂರ್ವರಾಜಪುತ್ರನಿಗೆ ಕೊಡಲ್ಪಟ್ಟರೆ ಅದ
ರ ದಕ್ಷಿಣೆಯು ಭೂಮಿಸುವರ್ಣಗಳ ರೂಪದಿಂದ ದೊರೆ
ಯುವದು. ಚಮತ್ಕಾರವನ್ನು ನೋಡಿರಿ ಒಬ್ಬ ಶಿಕ್ಷಕ
ನು ಒಂದೇ ಪ್ರಕಾರದ ಜ್ಞಾನಕ್ಕೆ ಮೂರು ಬಗೆಯ ಫಲವ
ನ್ನು ಹೊಂದಿದನು. ಅದರಿಂದ ದ್ರವ್ಯವು ಜ್ಞಾನದ ಬೆಲೆಯಾ
ಗಿರದೆ ಅದನ್ನು ಜ್ಞಾನಕ್ಕಾಗಿ ಕೊಡುವವನ ಬೆಲೆಯಾಗಿರು
ತ್ತದೆಂಬದು ಮೇಲೆಯೇ ಕಾಣುತ್ತದೆ ಅಂದಬಳಿಕ ವಿದ್ಯಾ
ಭಿರುಚಿಯಿಲ್ಲದ ಈಗಿನ ರುಕ್ಷಸಮಾಜದಲ್ಲಿ ಹೆಚ್ಚಿನ ಗುರು
ದಕ್ಷಿಣೆಯನ್ನು ಬೇಡುವದು ರುಕ್ಷಭೂಮಿಯಲ್ಲಿ ನೀರನ್ನು
ಹುಡುಕುವಂತೆ ಅಲ್ಲವೋ? ಇದೂ ಅಲ್ಲದೆ ಶಿಕ್ಷಕರಾಗಿರು
ವ ನಾವು ನಮ್ಮ ಜ್ಞಾನ ಸಂಪಾದನೆಗೆ ಹಚ್ಚಿದ ಶ್ರಮ ವೆಚ್ಚ
ಗಳ ಕಡೆಗೂ ನಮಗೆ ಲಭಿಸಿದ ಜ್ಞಾನದ ಕಡೆಗೂ ಲಕ್ಷ್ಯಕೊ
ಡಬೇಕು. ಶ್ರಮಕ್ಕೆ ತಕ್ಕ ಫಲವು, ಬಂಡವಲಕ್ಕೆ ತಕ್ಕಲಾ
ಭವು. ಅನ್ಯ ಜಾತಿಯ ಜನರಿಗೆ ಹೆಚ್ಚು ಪ್ರಾಪ್ತಿಯು ದೊರೆ
ಯುತ್ತಿದ್ದರೆ ಅದು ಅವರ ಹೆಚ್ಚಿನ ಶ್ರಮದ ಫಲವೂ ಹೇರ

ಳವಾದ ಬಂಡವಲದ ಲಾಭವೂ ಆಗಿರಬಹುದು. ಈ ಪ್ರಕಾರದ ಶ್ರಮ ಬಂಡವಲಗಳನ್ನು ವೆಚ್ಚಮಾಡಿದ ಹೆಚ್ಚಿನ ಯೋಗ್ಯತೆಯು ಶಿಕ್ಷಕರಿಗೆ ಈಗಾದರೂ ಹೆಚ್ಚು ಪ್ರಾಪ್ತಿಯೂ ಗುವದಿಲ್ಲವೋ? ಆದ್ದರಿಂದ ಶಿಕ್ಷಕರಾದ ನಾವು ಕೇವಲ ಜನ ಸಮಾಜಕ್ಕೆ ದೋಷಕೊಡುತ್ತ ನಮ್ಮ ಕ್ಷುಲ್ಲಕತನವನ್ನು ಹೊರಗೆಡವದೆ ನಮ್ಮ ಯೋಗ್ಯತೆಯನ್ನು ಪರಿಶೋಧಿಸಿ ಅದನ್ನು ಪ್ರಯತ್ನ ಪೂರ್ವಕ ಬೆಳಿಸಿ ಹೆಚ್ಚಿನ ಪ್ರಾಪ್ತಿಗೆ ಪಾತ್ರರಾಗಬೇಕು. (ಸಶೇಷ).

DEPARTMENTAL NOTICE.
ನೋಟೀಸು.

ಈ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ—ಮೆ॥ ಡಾಯಿರೆಕ್ಟರ ಸಾಹೇಬ ಬಹದ್ದೂರವರು ಮಿ. ವೆಂಕಟೇಶ ತಿರಕೊ ಕುಲಕರ್ಣಿ ಗಳಗನಾಥ ಇವರು ರಚಿಸಿದ "ಲಘು ನಿಬಂಧ ಸಂಗ್ರಹ ಮತ್ತು ಪತ್ರವ್ಯವಹಾರ" ಎಂಬ ಪುಸ್ತಕವನ್ನು ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಿದ್ದಾರೆ.

ಧಾರವಾಡ ಟ್ರೇ. ಕಾಲೇಜ. } S K. Rodda,
ತಾ॥ ೮ - ೨ - ೧೯೦೨ } ಪ್ರಿನ್ಸಿಪಾಲ.

ತಪ್ಪು ತಿದ್ದುದು.

ಈ ವರ್ಷ ಫೆಬ್ರುವಾರಿ ತಿಂಗಳ ಶಾಳಾಪತ್ರಕ ಪುಟ ೬೦ - ೬೧ ರಲ್ಲಿ ಛಾಪಿಸಿದ ಕ್ಯುರೇಟರರ ನೋಟೀಸಿನ ಕೆಳಗೆ ಸಹಿಯು ನಜರ ಚೂಕಿಯಿಂದ ತಪ್ಪಾಗಿ ಛಾಪಿಸಲ್ಪಟ್ಟದೆ.

W. N. Patarandhan. ಅ. ಕ್ಯುರೇಟರ. } ಎಂಬವಕ್ಕೆ ಬದಲಾಗಿ { J. C. Dubash. ಕ್ಯುರೇಟರ.

ಎಂದಿರತಕ್ಕದ್ದು ಆ ರೀತಿ ತಿಳಿದುತಕ್ಕದ್ದು.

Raoji B Karandikar.
ಮ್ಯಾನೇಜರ ಕನ್ನಡ ಶಾ. ಪತ್ರಕ.

CORRESPONDENCE.

ಪತ್ರವ್ಯವಹಾರ.

ಗುರುವರ್ಯ ರಾವಸಾಹೇಬ ಕನ್ನಡ ಶಾಲಾಪತ್ರಿಕದ ಪಿಡಿಟರ ದೊರೆಗಳ ಸನ್ನಿಧಿಗೆ:—

ತಮ್ಮ ಅತ್ಯಂತ ನಮ್ರವಿದ್ಯಾರ್ಥಿನಿಯಾದ ರಮಾಬಾಯಿ ಗುರುನಾಥರಾವ ಪೂರಗಾಂವಕರ ಹೆಡ್‌ಮಿಸ್ಟ್ರೆಸ್ ಗರ್ಲ್ ಸ್ಕೂಲ ಮುಂಡರಗಿ ಈಕೆಯ ವಿನಂತಿಗಳು ತರುವಾಯ—

ಇದೇ ವರ್ಷದ ತಿಂಗಳ ೫ನೇ ತಾರೀಖಿನ ದಿವಸ ಧಾರವಾಡ ಜಿಲ್ಲೆಯ ತಿ ಡಿ ಇನ್ಸ್‌ಪೇಕ್ಟರ ದೊರೆಗಳಾದ ಎಂಆಮುಡಿ ವೆಂಕಟರಾಯನವರು ನಮ್ಮ ಶಾಲೆಗೆ ಬಂದು, ಶಾಲೆಯ ಸುಸ್ಥಿತಿಯನ್ನು ನೋಡಿ ಬಹು ಸಂತೋಷ ಪಟ್ಟರು. ಪೂರನೇ ದಿವಸ ನಮ್ಮ ಸಾ ಬ. ರವರ ಸಹಧರ್ಮಿಣಿಯವರಾದ ಶ್ರೀಮತಿ ಹ. ಕು ಶೋ ಸೌಭಾಗ್ಯವತಿ ಎಂಆಮುಡಿ ಪದ್ಮಾವತಿಬಾಯಿಯವರು ನಮ್ಮಾ ಹೆಣ್ಣುಮಕ್ಕಳ ಶಾಲೆಗೆ ಬಂದು "ಜಾಣತನದ ಉತ್ತರ" ಎಂಬ ಪಾಠವನ್ನು ತಿನೇ ಇಯತ್ತೆಯ ವಿದ್ಯಾರ್ಥಿನಿಯರಿಂದ ಓದಿಸಿ ಬಹುಮಾರ್ಮಿಕತೆಯಿಂದ ತಾವು ಮಾಡಿದ ಪ್ರಶ್ನೆಗಳಿಗೆ ಹುಡುಗಿಯರು ಕೊಟ್ಟ ಉತ್ತರಗಳನ್ನು ಕೇಳಿ ಆನಂದಪಟ್ಟರು. ಮತ್ತು ಸಾತಿವೃತ, ಸಂಬಂಧದ ಅಕ್ಕತಂಗಿಯರ ಸಂವಾದದ ಪದ್ಯವನ್ನು, ಕನಿಸೊತ್ರ ಮುಂತಾದ ನೈತಿಕ ಧರ್ಮಶಿಕ್ಷಣದ ಹಾಡುಗಳನ್ನು ಹಾಡಿಸಿದರು. ಇವರು ತಮ್ಮ ಯಜಮಾನರಂತೆಯೇ ನೀತಿಶಿಕ್ಷಣದ ವಿಷಯವಾಗಿ ಬಹಳವಾಗಿ ಪ್ರಯತ್ನಿಸುತ್ತಾರೆ. ತಾವು ಸ್ವತಃ ನೂಲಿನಿಂದ ಹೆಣೆದು ತಯಾರಿಸಿದ ವಸ್ತ್ರಗಳನ್ನು ಮಾದರಿಗಾಗಿ ನೋಡಲಿಕ್ಕೆ ನನಗೆ ಕೊಟ್ಟಿದ್ದರು ಈ ತರದಿಂದ ಇಂತಿಂಥ ದೊಡ್ಡ ದೊಡ್ಡ ಅಧಿಕಾರಿಗಳೂ ಅವರ ಹೆಂಡರೂ ವಿದ್ಯೆಯಲ್ಲಿ ಹಿಂದುಳಿದಿರುವ ನಮ್ಮಾ ಕರ್ನಾಟಕದ ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಗೆ ಉತ್ತೇಜನ ಕೊಡುವದರಿಂದ ನಾವು ಧನ್ಯರೇ ಸರಿ ಈ ಕೆಲಸವು ನಿರ್ವಿಘ್ನದಿಂದ ಸಾಗಬೇಕಾದರೆ ಮೆಹರ್ಬಾನ ಜೇ. ಫ್ರೇಲಿ ಮ್ಯೂರ ಸಾ. ಬ ರವರ ಈಗಿನ ನಮ್ಮ ವಿದ್ಯಾಖಾತೆಯ ಅತ್ಯುಚ್ಚ ಪದವಿಯು ಯಾವತ್ತು ಅಧಿಕಾರಸ್ಥರ ಕೈ

ನೆಯೇ ಕಾರಣವಾಗಿದೆ. ಈ ಎಲ್ಲ ಮಹಾತ್ಮರನ್ನು ನಮ್ಮ ವ್ಯವಸಾಯ ಭಗಿನಿಯರು ಹಗಲಿರಳು ನೆನಿಸತಕ್ಕದ್ದು. ಹುಡುಗೆಯರೂ ಅವರ ತಾಯಿ ತಂದೆಗಳೂ ಹಾಡಿ ಹರಸತಕ್ಕದ್ದು. ಶ್ರೀಮತಿ ಸೌಭಾಗ್ಯವತಿ ಎಣ್ಣಿಮಡಿ ಬಾಯಿಯವರು ಶಾಲೆಯ ಶರಾಪುಸ್ತಕದಲ್ಲಿ ಬರೆದದ್ದನ್ನು ನನ್ನ ಪ್ರಿಯಭಗಿನಿಯರು ನೋಡಿ ಸಂತೋಷ ಪಡಲೆಂದು ಇದಕ್ಕೆ ಹಾಗೆ ಇದರಡಿ ಕೊಟ್ಟಿರುವೆನು. ಪತ್ರವಿಸ್ತಾರಕ್ಕೆ ಗುರುವರ್ಯರು ಕ್ಷಮೆಯನ್ನೀಯುವರೆಂದು ನೆರೆನಂಬಿದ

ಮುಂಡಗಿ ಹೆ. ಮ. ಶಾಲೆ
ತಾ॥ ೨೮ - ೧೨ - ೧೯೦೨

ತಮ್ಮ ಅತ್ಯಂತ ವಿಧೇಯಶಿಷ್ಯಕಾದ
ರಮಾಬಾಈ ಗುರುನಾಥರಾವ ಪಾರಗಾವಕರ.

ನಕಲು.

ಮೀ ಹೀ ಶಾಳಾ ಆಜ ಸಕಾಳೀಂ ತಪಾಸಲೀ. ಹಾಜರೀ ಪಟಾವರ ೯೦ ಮುಲೀ ಅಸೂನ ಆಜ ೬೯ ಹಾಜರ ಆಹೇತ. ಮುಲೀ ನೀಟ ವಾಚತಾತ. ವೀಣಕಾಮ ಸುರೇಖ ಕರೀತಾತ. ಹೇ. ಮಿ. ರಮಾಬಾಈ ತ್ಯಾಂಚ್ಯಾ ನೀತಿ-ಶಿಕ್ಷಣಾ ಕಡೇ ಫಾರ ಲಕ್ಷ ದೇತಾತ. ರಮಾಬಾಈ-ಚ್ಯಾ ಹಾತಾಂತ ಹೀ ಶಾಳಾ ಪುಷ್ಕಳ ದಿವಸ ರಾಹೀಲ ತರ ಸ್ತ್ರೀ ಶಿಕ್ಷಣಾಚಾ ಚಾಂಗಲಾ ಪರಿಣಾಮ ಲೋಕಾಂನಾಂ ದಿಸೂನ ಯೇಈಲ. ರಮಾಬಾಈ ಫಾರ ಸುಶಿಕ್ಷಿತ ವ ಕುಲೀನ ಘರಾಣಾಂತಲ್ಯಾ ಆಹೇತ; ಫಾರ ಕಾಳಜೀನೇಂ ವ ಪ್ರೇಮ ಬುಧ್ಧೀನೇ ಕಾಮ ಕರೀತಾತ. ಯಾಂನಾಂ ಲವಕರ ಬಡತೀ ಮಿಳೇಲ ತರ ಜಾಸ್ತ ಮೇಹನತೀನೇಂ ಕಾಮ ಕರಣ್ಯಾಸ ಉತ್ತೇಜನ ಯೇಈಲ ಆಣಿ ತೀ ತ್ಯಾಂನಾಂ ಮಿಳೇಲ ಅಶೀ ಮಾಝೀ ಆಶಾ ಆಹೇ.

(Sd) ಪದ್ಮಾವತಿಬಾಈ ಯಣ್ಣೇಮಡಿ.

II

ತಡಕೋಡ (ತಾ॥ ಧಾರವಾಡ) ಶಾಲೆಯಲ್ಲಿ ಮುಲಖೀ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಸರಟಿಫಿಕೀಟುಗಳನ್ನು ಕೊಡುವ ಸಮಾರಂಭವು ಆ ಶಾಲೆಯ ಅಧ್ಯಾಪಕರಾದ ಮಿ. ನಾ. ಶಿ. ದೇಶಪಾಂಡೆಯವರಿಂದ ನೆರವೇ

ರಿಸಲ್ಪಟ್ಟಿತೆಂತಲೂ ಈ ಸಭೆಗೆ ಲೋ. ಬೋ. ವೆಂಬರವರೂ ಸ್ಕೂಲಕವಿಾಟದಾರರೂ ಇತರ ಸಭ್ಯ ಗ್ರಹಸ್ಥರೂ ನೆರೆ ಹೊರೆಯ ಗ್ರಾಮದ ಅಧ್ಯಾಪಕರೂ ಬಂದಿದ್ದರೆಂತಲೂ, ಕೆಲಜನರ ಸುಶ್ರಾವ್ಯವಾದ ಭಾಷಣಗಳಾದ ಬಳಿಕ ಬಕ್ಷಿಸಗಳು ಕೊಡಲ್ಪಟ್ಟವೆಂತಲೂ, ಆ ಊರಿಂದ ಬಂದ ಪತ್ರದಿಂದ ತಿಳಿಯುತ್ತದೆ. ಈ ಮಾದರಿಯ ಸಮಾರಂಭವನ್ನು ಎಲ್ಲ ಶಿಕ್ಷಕರು ವರ್ಷದಲ್ಲಿ ಒಂದು ಬಾರೆಯಾದರೂ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಕಲಿಯಬೇಕೆಂಬ ಹುರುಪೂ, ಗ್ರಾಮಸ್ಥರಲ್ಲಿ ವಿದ್ಯಾಭಿವೃದ್ಧಿಯ ಬಯಕೆಯೂ ಹುಟ್ಟುವವು. ಇದಲ್ಲದೆ ಮಾಸ್ತರನಿಗೂ ಊರವರಿಗೂ ಹೆಚ್ಚು ಬಳಿಕೆಯಾಗುವದರಿಂದ ಈರ್ವರಲ್ಲಿಯೂ ಪರಸ್ಪರ ಪ್ರೇಮವು ನೆಲೆಗೊಳ್ಳುವದು. ಇದೇ ಶಾಲೆಯ ಉತ್ಕರ್ಷದ ಮೂಲವು

III

ಸಿರೋಳ (ನೆಲಗುಂದ) ದಿಂದ ನಮಗೆ ಯಾರೋ ಒಬ್ಬರು ಒಂದು ಪತ್ರವನ್ನು ಬರೆದಿರುವರು. ಇಂಥ ಪತ್ರಗಳಿಗೆ ನಾವು ಎಂದೂ ಸ್ಥಳ ಕೊಡುತ್ತಿರುವದಿಲ್ಲ. ಆದರೆ ಸದ್ಯದ ಪತ್ರದೊಳಗಿನ ಸಂಗತಿಗಳಿಗೆ ಶಾಲಾಧಿಕಾರಿಗಳು ಲಕ್ಷ ಕೊಡುವದು ಅವಶ್ಯವಾಗಿರುವದೆಂದು ತೋರುತ್ತದೆ. ಆ ಊರ ಸಾಲಿಯ ಮಾಸ್ತರರು ಮುದುಕರು. ಇಬ್ಬರು ಅ. ರು ಮುಲ್ಕೀ ಪರೀಕ್ಷೆಯನ್ನು ಸಹ ಕೊಟ್ಟವರಲ್ಲ. ಇನ್ನೊಬ್ಬನು ಸ್ವಚ್ಛಂದವೃತ್ತಿಯವನಿರುವನು. ಸುಮಾರು ೧೦೫ ಹುಡುಗರಿರುವ ಇಂಥ ಸಾಲಿಯಲ್ಲಿ ಟ್ರೇಂಡ ಅ. ನೊಬ್ಬನಾದರೂ ಇರುವದು ವಿಹಿತವು. ಈಗಿರುವ ಮಾದರಿಯ ಅ. ರಿಂದ ಸಾಲಿಯ ಕೆಲಸವನ್ನು ಸರಿಯಾಗಿ ಸಾಗಿಸಲಿಕ್ಕೆ ವೃದ್ಧರಾದ ಮುಖ್ಯ ಶಿಕ್ಷಕರಿಗೆ ಅತಿ ಪ್ರಯಾಸವಾಗಬಹುದು. ಸ್ವಚ್ಛಂದವೃತ್ತಿಯ ಶಿಕ್ಷಕನ ಸಂಬಂಧವಾಗಿಯೂ ವಿಚಾರ ಮಾಡುವದು ಅವಶ್ಯವು. ಇಂಥವರಿಂದಲೂ ಶಾಲೆಯು ಉತ್ಕರ್ಷವನ್ನು ಪಡೆಯದೆಂಬದು ಸ್ಪಷ್ಟವದೆ.

WURTH PRIZE EXAMINATION QUESTION PAPER,

ವರ್ಥಪ್ರಾಯಿಜ ಪರೀಕ್ಷೆಯ ಪ್ರಶ್ನಗಳು.

೨ನೇ ಕಾಗದ.

(೧) ಬಸವಪುರಾಣವು ಯಾವ ಯಾವ ಭಾಷೆಯಲ್ಲಿರುವದು? ಅದರ ಕರ್ತರು ಯಾರು? ಅದು ಎಂದು ಮುಗಿಯಿತು? ಬಸವರಾಜನ ಚರಿತ್ರೆಯಲ್ಲಿ ಕಂಡು ಬರುವ ಅಲೌಕಿಕ ಸಂಗತಿಗಳು ಯಾವವು? ನಿಮ್ಮ ಮತವನ್ನು ಪ್ರಾಕ್ಟಾವ್ಯಮಾಲಿಕೆಯೊಳಗಿನ ಕವಿತೆಗಳಿಂದ ಸ್ಪಷ್ಟೀಕರಿಸಿರಿ.

(೨) "ತಾನೊಂದು ಎಣಿಸಿದರೆ ದೈವವೊಂದು ಎಣಿಸಿತು" ಎಂಬ ಗಾದೆಯ ಮಾತಿನ ಸಮರ್ಥನಕ್ಕೋಸುಗ ಪ್ರಾಕ್ಟಾವ್ಯಮಾಲೆಯಲ್ಲಿ ಬರೆದ ಒಂದು ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

(೩) ದರ್ಖಾನಕಾರರ ವಿಷಯದಲ್ಲಿ ರೆವ್ಹರಂಡ ವರ್ಥ ಸಾಹೇಬರು ಬರೆದ ಅಭಿಪ್ರಾಯವು ಯಾವದು? ಅದಕ್ಕೆ ನಿಮ್ಮ ಮತವೇನು?

(೪) ಸರ್ವಜ್ಞನ ಮತದಂತೆ ಹೀನ ಕಾರ್ಯಗಳನ್ನೂ ವೇದಾರ್ಥಗಳನ್ನೂ ವಿವರಿಸುವ ಪದ್ಯವನ್ನು ಬರೆಯಿರಿ.

(೫) ಅಂಶುಕ, ಶ್ಯೇಡಿ, ವೈಶ್ರವಣ, ಪಾರುಂಬಳೆ, ಕೆಳರು, ಗಜರು, ಕೈತವ, ಮುಕ್ಕಡ, ಉಳ್ಳು, ಕಂಕಾಳ ಇವುಗಳ ಅರ್ಥವನ್ನೂ ಜಾತಿಭೇದವನ್ನೂ ವಿವರಿಸಿರಿ.

(೬) ಕೆಳಗೆ ಬರೆದ ಗದ್ಯಪದ್ಯಗಳ ಪೂರ್ವಾಪರ ಸಂಬಂಧವನ್ನೂ ಅನ್ವಯಾರ್ಥವನ್ನೂ ಪದ್ಯಗಳ ಜಾತಿಗಳನ್ನೂ ಲಕ್ಷಣ ಸಹಿತ ಬರೆಯಿರಿ.

ಧರೆಯೊಳೂರಡಿಯಾದ ಕೊಳಗವ।
ಸರಿಯ ಸೊಲ್ಲಿಗೆ ಸಲ್ಲದಿಪ್ಪುದೆ।
ಪರಿಮಿತಾಕ್ಷರ ತಲೆಯೊಳಪರಿಮಿತಾರ್ಥರಚನೆಯಲೀ॥
ವಿರಚಿಸುವದದು ಕವಿಯ ಚತುರತೆ।
ಗುರುಬಸವನಂ ನೆನೆವ ಬಲ್ಪಿಂ।
ಸರಸ ಮೃದುಮಧುರೋಕ್ತಿಗಳುವಿಗೆ ರಚಿಸುವೆಂಕ್ಯೆತಿಯಾ॥೧।

ಗದ್ಯ—ಅಂತುತಾಗಲ್ ಅಕಲೆಯುಂ ಕಳಂಕಾಂಕಂ ಎಂಬು
ದ್ ಅತ್ ಅತಂ ರೋಹಿಣಿವೊದಲಾದ್ ಅಪ್ಸರ ಸ್ತ್ರೀ
ಯರ್ ಪಲಂಬರ್ ಇರ್ದು ತಾಪಸಪತ್ನಿಗಳುಪಿದಂ
ಚಂದ್ರಂ ದಾಯಿಯಂ ಬಿಡುವನಲ್ಲೆಂದು ಕೇಳಲು
ಯೊದಡ್ ಈ ಕನ್ಯೆಯಂ ಶಕ್ರನ ಸಮೀಪದೊಳ್
ಇರಿಸುವೆಂ ಎಂದಡೆ ಮಾಂಡವ್ಯಂ ಅಲ್ ಇರಿಸಲಾಗ
ದು ಆತನ ವೃತ್ತಾಂತಮುಂ ಕೇಳೆಂದು ಕೇಳಲ್‌ನೆಗ
ಳ್ದಂ ಅದ್ ಎಂತೆನೆ.

ವರವರ್ಣದಿಂದ ಶೋಭಿತವಾಗಿ ರೂಪವಿ ।
ಸ್ವರದಿಂದ ಚಲ್ವಾಗಿ ಮಧುರತರನವರ ಸೋ ।
ದರ ಭರಿತದಿಂದ ವಿಲಸಿತವಾಗಿಸುಮನೋನು ರಾಗದಿಂ
ಪ್ರಜುರವಾಗಿ ॥
ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ ।
ಕರಿಸುವ ಸುಲಲಿತ ಪಟ್ಪದಿಗಳಿಡೆ ಬಿಡದೆ ಯೋಂ ।
ಕರಿಸದಿರ್ಪವೆ ಬಂದು ನೆರೆದ ವಿತ್ಸದ್ವತ್ಸಭಾನೀರೇರುಹಾ
ಕರದೊಳು ॥ ೦ ॥
ವಾಸವನವರುಪೋಪಭೋಗದ ।
ವಿಾಸಲನುತಾಸುಂಡು ಪರ್ವತ ।
ವೇಷದಲಿ ಕಲ್ಪಾಂತ ಮೋಘದ ಘಾಳಿಮಳಿಗಳಲ್ಲಿ ॥
ಘಾಸಿಯಹಗೋಕುಲವ ಕರುಣಾ ।
ರಾಸಿಶೈಲಚ್ಛತ್ರವನು ಹಿಡಿ ।
ದೇಸುಧನ್ಯರೊ ? ರಕ್ಷೆಯಿನು ರಚಿಸಿದನು ಗೋಕು
ಲದಾ ॥ ೫ ॥
ಕಳವಳಿಸಿದಂ ಕಾಲನೆಡುಗಿದಂ ಭೂಗೋಲ ।
ನಳವಳಿದುದಜ್ಞಾ ವಿಳಿದುದಂ ಮುದಮಾನ ।
ವೊಳಗೊಳಗೆ ಕಾದಿದಳ್ ಮಾಯೆ ಪೋದುದಸೂಯೆ
ಷಡ್ವರ್ಗವೇನಾಯಿತೋ ॥
ಸತಿಕೆಟ್ಟುದಪಮೃತ್ಯು ।
ಚಲಿಸಿದುದುಭಯಬಿಮ್ಮ ।
ನೆಲೆಗುಂದಿದಳ್ ಮಾಂತೊಲಗಿತಘಚಯಭೂರಿ ।
ಲಲಿತಮುಕ್ತಿ ಸ್ವರೂಪಂ ಸತ್ಕಲಾಪನವತರಿಸಿದಾಕ್ಷಣ
ಮಿಳಿಯೊಳು ॥ ೪ ॥

ಶಾಲಾ ಪತ್ರಿಕೆ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ।
ಜಯಸುತ್ಸಂ ಪ್ರತಿಪಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ॥
ಭಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತೆದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೮] ಎಪ್ರಿಲ ೧೯೦೨. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ೨ ಸಂಬಂಧದ ವೃತ್ತಾಂತಗಳು.

ಲಾರ್ಡ ಕರ್ಜನ್ ದೊರೆಗಳು ಈ ದೇಶದ ರಾಜಸೂತ್ರಗಳನ್ನು ಸ್ವೀಕರಿಸಿ ಸುಮಾರು ಮೂರು ವರ್ಷಗಳಾದವು. ಇವರ ಕಾರ್ಯಪ್ರೀತಿಯೂ, ಕರ್ತವ್ಯನಿಷ್ಠೆಯೂ, ವಿದ್ಯಾಪಕ್ಷಪಾತಿತ್ವವೂ, ಸುಧಾರಣಾಪ್ರೇಮವೂ, ಬುದ್ಧಿಯ ತೀವ್ರತೆಯೂ, ಸತತೋದ್ಯೋಗವೂ, ಉತ್ಸಾಹವೂ, ಸರ್ವವಿಶ್ರುತವಾಗಿದೆ. ಆಡಳಿತದ ಎಲ್ಲ ಪ್ರಧಾನ ಅಂಗಗಳಿಗೆ ಇವರು ಸರಿಯಾಗಿ ಲಕ್ಷ್ಯವನ್ನು ಪೂರೈಸುವರು. ಕೆಲವು ದಿವಸಗಳ ಕೆಳಗೆ ವಿದ್ಯಾಖಾತೆಯ ಮುಖ್ಯ ಅಧಿಕಾರಿಗಳನ್ನೂ ವಿದ್ಯಾಪೀಠದ ಪ್ರಮಿತ ಸಭಿಕರನ್ನೂ ಬರಮಾಡಿಕೊಂಡು ಅವರೊಂದಿಗೆ ವಿದ್ಯಾಭಿವೃದ್ಧಿಯನ್ನು ಕುರಿತು ತಕ್ಕ ಆಲೋಚನೆಯನ್ನು ನಡಿಸಿದರು. ಆ ಕಾಲಕ್ಕೆ ಗೊತ್ತಾದ ಮೇರೆಗೆ ವಿದ್ಯಾಪೀಠದ ಸುಧಾರಣೆಯನ್ನು ಉದ್ದೇಶಿಸಿ ಒಂದು ಕಮಿಶನವನ್ನು ನೇಮಿಸಿದರು. ಆ ಕಮಿಶನದವರು ಮದ್ರಾಸಕ್ಕೆ ಹೋಗಿ ಅಲ್ಲಿಯ ವಿದ್ಯಾಪಕ್ಷಪಾತಿಗಳ ಅಭಿಪ್ರಾಯಗಳನ್ನು ತಿಳುಕೊಂಡು ಫೆಬ್ರುವರಿ ತಿಂಗಳ ಕೊನೆಗೆ ಪುಣೆಗೆ ಬಂದು, ಅಲ್ಲಿ ಒಂದು ದಿವಸ ನಿಂತು ಕಾಲೇಜಗಳನ್ನು ನೋಡಿ ಮುಖಂಡರ ಸಾಕ್ಷಿಗಳನ್ನು ತಕ್ಕೊಂಡು ಮುಂಬಯಿಗೆ ತೆರಳಿದರು. ಅಲ್ಲಿ

ಫೆಬ್ರುವರಿಯ ೨೮ನೆಯ ತಾರೀಖಿನಿಂದ ಮಾರ್ಚ್ ತಿಂಗಳ ೪ನೆಯ ತಾರೀಖಿನವರೆಗೆ ೪ ದಿವಸ ಪ್ರಮುಖ ಜನರ ಅಭಿಪ್ರಾಯಗಳನ್ನು ದೊರಕಿಸುವ ಕೆಲಸ ನಡೆಯಿತು ಬಳಿಕ ಕೆಲವು ಸಭಾಸದರು ಅಹಮ್ಮದಾಬಾದ ಮಾರ್ಗವಾಗಿ ಕೆಲವರು ನಾಗಪುರದ ಮಾರ್ಗವಾಗಿ ಕಲಕತ್ತೆಗೆ ಸೇರುವ ಉದ್ದೇಶದಿಂದ ಹೊರಟುಹೋದರು ಮುಂಬಯಿ ಇಲಾಖೆಯ ಪ್ರಮುಖ ಜನರ ಅಭಿಪ್ರಾಯಗಳಿಂದ ಮುಖ್ಯವಾಗಿ ಈ ಕೆಳಗಿನ ನಾಲ್ಕು ಮಾತುಗಳು ಬೈಲಿಗೆ ಬಂದಿರುವವು.

೧. ಸದ್ಯಕ್ಕೆ ವಿದ್ಯಾಪೀಠದಲ್ಲಿ ಕಲಿಸುವ ವ್ಯವಸ್ಥೆಯು ಸ್ವತಂತ್ರವಾದದ್ದಿಲ್ಲ ಆಯಾ ಕಾಲೇಜದಲ್ಲಿ ಪ್ರೊಫೆಸರರು ವ್ಯಾಖ್ಯಾನಗಳನ್ನು ಕೊಡುತ್ತಾರೆ. ಆದರೆ ಸ್ವತಂತ್ರವಾದಂಥ ವಿದ್ಯಾಪೀಠದ ವ್ಯಾಖ್ಯಾತರು ಯಾರೂ ಇಲ್ಲ.

೨. ವಿಚಾರಣಾ ಮಹಾಸಭೆಯು (ಸೆನೇಟು) ಚಿಕ್ಕ ಸಭೆಯು (ಸಿಂಡಿಕೇಟು) ಎಂಬ ವಿದ್ಯಾಪೀಠದ ಎರಡೂ ಸಭೆಗಳಲ್ಲಿ ಸುಧಾರಣೆಯಾಗತಕ್ಕದ್ದು ಅವಶ್ಯವಿರುತ್ತದೆ.

೩. ಅಭ್ಯಾಸಕ್ರಮಗಳಲ್ಲಿ ಕೆಲವು ದೋಷಗಳಿರುತ್ತವೆ. ಈ ದೋಷಗಳನ್ನು ತಿದ್ದುವದಕ್ಕೂ ಮೇಲಿಂದಮೇಲೆ ಇವುಗಳನ್ನು ಕುರಿತು ವಿಚಾರಿಸಲಿಕ್ಕೂ ಬೋರ್ಡ ಆಫ್ ಸ್ಟಡೀಜ ಎಂಬ ಮಂಡಲಿಯು ಇರತಕ್ಕದ್ದು.

೪. ಪರೀಕ್ಷಾಪ್ರಶ್ನಗಳ ಸಂಬಂಧದಿಂದ ವಿಚಾರ ಮಾಡಲಿಕ್ಕೆ "ಮಾಡರೇಟರ" ರೆಂಬ ಅಧಿಕಾರಿಗಳು ನೇಮಿಸಲ್ಪಡುತ್ತಾರೆ. ಆದರೆ ಈ ಸಂಬಂಧದಿಂದಲೂ ತಕ್ಕ ಏರ್ಪಾಡು ಆಗಬೇಕಾಗಿದೆ.

ಈ ಯಾವತ್ತು ಸಂಗತಿಗಳನ್ನು ಕುರಿತು ನಾಮದಾರ ಜಾಮಿಲ್ಸ ಸಾಹೇಬರು ಯೋಗ್ಯವಾದ ಅಭಿಪ್ರಾಯವನ್ನು ತಮ್ಮ ಸಾಕ್ಷ್ಯಿಯಲ್ಲಿ ಕೊಟ್ಟಿರುತ್ತಾರೆ. ಅದರೊಳಗಿನ ಮುಖ್ಯ ಮುಖ್ಯ ಮಾತುಗಳನ್ನು ಸಂಗ್ರಹಿಸಿ ಇದರಡಿಯಲ್ಲಿ ಕೊಡುತ್ತೇವೆ.

ಈ ಇಲಾಖೆಯಲ್ಲಿ ಕಾಲೇಜಗಳು ಸ್ವತಂತ್ರ ಸಂಸ್ಥೆಗಳಾಗಿದ್ದು ಅವುಗಳ ಸಂಖ್ಯೆಯು ಬಹಳಿಲ್ಲ. ರಾಜಾರಾಮ ಕಾಲೇಜವು ಹೊರ್ತಾಗಿ ಉಳಿದ ಕಾಲೇಜಗಳೆಲ್ಲ ಕೊನೆಯ

ಪರೀಕ್ಷೆಗಳ ವರೆಗೆ ಕಲಿಸುತ್ತವೆ. ಮುಂಬಯಿಯಲ್ಲಿ ೪ ಕಾಲೇಜಗಳು ಪುಣೆಯಲ್ಲಿ ೩, ಕರಾಚಿಯಲ್ಲಿ ೧, ಅಹೆಮ್ಮದಾಬಾದದಲ್ಲಿ ೧, ಬಡೋದೆಯಲ್ಲಿ ೧, ಭಾವನಗರದಲ್ಲಿ ೧, ಜುನಾಗಡದಲ್ಲಿ ೧, ಕೊಲ್ಹಾಪುರದಲ್ಲಿ ೧ ಈ ಮೇರೆಗೆ ಒಟ್ಟು ೧೪ ಕಾಲೇಜಗಳು ಇರುತ್ತವೆ ಇವು ದೂರದೂರವಾಗಿರುವದರಿಂದ ವಿದ್ಯಾಪೀಠದವರು ಪ್ರೋಫೆಸರರನ್ನು ನೇಮಿಸಲಾರರು ಅದೇ ಮೇರೆಗೆ ವಿದ್ಯಾಪೀಠದವರು ನೇಮಿಸಿದ ಶಿಕ್ಷಕರಿಂದ ತಕ್ಕಷ್ಟು ಉಪಯೋಗವೂ ಆಗಲಾರದು. ಆದ ಕಾರಣ ಆಯಾ ಕಾಲೇಜದಿಂದ ಕೊನೆಯ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಹೆಚ್ಚಿನ ಶಿಕ್ಷಣಕ್ಕಾಗಿ ವ್ಯವಸ್ಥೆಯನ್ನು ಮಾಡಿ ಅದಕ್ಕೆ ತಕ್ಕ ಪ್ರೋಫೆಸರರನ್ನು ವಿದ್ಯಾಪೀಠದವರು ನೇಮಿಸಬಹುದು.

ಅಥವಾ ಪುಣೆ, ಮುಂಬಯಿಗಳಲ್ಲಿ ಕಾಲೇಜಗಳು ಹಲವಿರುತ್ತವೆ. ಅಲ್ಲಿ ಕಾಲೇಜದ ಅಧಿಕಾರಿಗಳು ಒಟ್ಟಾಗಿ ಕೆಲವು ವಿಶಿಷ್ಟ ವಿಷಯಗಳನ್ನು ಒಂದೊಂದು ಕಾಲೇಜದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಕಲಿಸುವ ಏರ್ಪಾಡು ಮಾಡಬಹುದು. ಈಗಿನ ಸಿನೇಟ ಸಭೆಯು ಬಹಳ ದೊಡ್ಡದಿರುತ್ತದೆ. ಆದರೆ ಮುಂಬಯಿಯೊಳಗಿರುವ ಕೆಲವು ಜನರನ್ನು ಅನರರೀ ಫೆಲೋಗಳನ್ನಾಗಿ ನಿಂಗಡಿಸಿ, ಉಳಿದವರಲ್ಲಿ ವಿದ್ಯಾಪೀಠದಲ್ಲಿ ಮನಸ್ಸು ಹಾಕುವಂಥವರನ್ನು ಬಲ್ಲಂಥವರನ್ನು ಗ್ರಾಜ್ಯುಯೇಟ ಜನರು ಆರಿಸಿಕೊಟ್ಟಂಥ ಫೆಲೋ ಜನರನ್ನು ಒಟ್ಟುಗೂಡಿಸಿ ೧೫೦ ಜನರಿಗೆ ಮಿಗದಂತೆ ಹೊಸ ಸಭೆಯನ್ನು ಸ್ಥಾಪಿಸಬೇಕು.

ಸಿಂಡಿಕೇಟವು ಅಂದರೆ ಚಿಕ್ಕ ಸಭೆಯು ತಕ್ಕ ಮಟ್ಟಿಗೆ ವ್ಯವಸ್ಥಿತವಾಗಿರುತ್ತದೆ. ಆದರೆ ಅದರಲ್ಲಿ ಕೆಲವು ನ್ಯೂನತೆಗಳು ತೋರುತ್ತವೆ. ಅವುಗಳನ್ನಾದರೂ ತಿದ್ದಬಹುದು.

ಸದ್ಯಕ್ಕೆ ಪರೀಕ್ಷಾಪ್ರಶ್ನದ ಕಾಗದಗಳ ಮೇಲ್ವಿಚಾರಣೆಯು ಸಂಬಂಧವಾಗಿ ಮಾಡರೇಟರರನ್ನು ನೇಮಿಸಿರುತ್ತದೆ. ಮತ್ತು ಅಭ್ಯಾಸಕ್ರಮದ ಸಂಬಂಧದ ವಿಚಾರಣೆಯನ್ನು ಆಯಾ ಶಾಖೆಯ ಸಭಿಕರು ಮಾಡುತ್ತಾರೆ. ಆದರೆ ಬೋರ್ಡ

ಆಫ್ ಸ್ಟಡೀಜ ಎಂಬ ಒಂದು ಹೊಸ ಸಭೆಯನ್ನು ನಿರ್ಮಿಸಿ, ಅವರ ಕಡೆಗೆ ಈ ವಿಷಯದ ವಿಚಾರಣೆಯನ್ನು ಒಪ್ಪಿಸುವದು ನಮಗೆ ವಿಹಿತವಾಗಿ ತೋರುತ್ತದೆ. ಸಿನೇಟಿನ ಸುಧಾರಣೆಯನ್ನು ಮಾಡಿದನಂತರ ಅಭ್ಯಾಸಕ್ರಮದ ಸುಧಾರಣೆಯನ್ನು ಕೈಕೊಂಡರೆ ವಿಶೇಷ ಪ್ರಯೋಜನವಾಗುವದು. ಈಗಿನ ಅಭ್ಯಾಸಕ್ರಮವು ತಕ್ಕ ಮಟ್ಟಿಗೆ ನೆಟ್ಟಗಿರುತ್ತದೆ. ಮತ್ತು ವಿದ್ಯಾರ್ಥಿಯ ಯೋಗ್ಯತೆಯನ್ನು ನಿರ್ಣೈಸಲಿಕ್ಕೆ ಒಳ್ಳೇ ಸಾಧನವಾಗಿರುತ್ತದೆ. ಚಲೋ ಪರೀಕ್ಷಕರೂ ಯೋಗ್ಯವಾದ ಪ್ರಶ್ನೆಗಳೂ ಸುವಿಚಾರದಿಂದ ಉತ್ತರದ ಕಾಗದಗಳನ್ನು ನೋಡುವವರೂ ಈ ಮುಂತಾದ ಸಂಗತಿಗಳ ಸಂಬಂಧದ ವ್ಯವಸ್ಥೆಯು ಮೊದಲಿಗೆ ಬೇಕು.

ಪರೀಕ್ಷೆಯಲ್ಲಿ ಗೊತ್ತಾದ ಗುಣಗಳನ್ನು ದೊರಕಿಸುವವರು ಉತ್ಕೃತರಾಗುತ್ತಾರೆ. ಅದಕ್ಕೂ ಹೆಚ್ಚಿನ ಗುಣಗಳನ್ನು ಗೊರಕಿಸುವವರನ್ನು ಸಕೆಂಡಕ್ಲಾಸ್ ಫರ್ಸ್ಟಕ್ಲಾಸಗಳೆಂಬ ಬಹುಮಾನದ ಪಟ್ಟಿಯಲ್ಲಿ ಸೇರಿಸುತ್ತಾರೆ; ಆದರೆ ಇದು ಸರಿಯಾಗಿ ತೋರುವದಿಲ್ಲ. ಬಹುಮಾನದ ಪದವಿಯನ್ನು ಪಡೆಯುವ ಹವಣಿಕೆಯುಳ್ಳವರಿಗಾಗಿ ಸ್ವತಂತ್ರ ಪರೀಕ್ಷೆಯನ್ನೇ ತೆಗೆದುಕೊಳ್ಳುವದು ವಿಹಿತವು. ಇಂಥ ಜನರು ಸ್ವಲ್ಪವಾಗಿಯೇ ಇರುವರು. ಪುಣೆ ಮುಂಬಯಿ ಕಾಲೇಜಗಳಲ್ಲಿರುವಂಥ ಬಹುಮಾನದ ಪದವಿಗಳನ್ನು ಪಡೆಯಲಿಚ್ಛಿಸುವಂಥ ವಿದ್ಯಾರ್ಥಿಗಳ ಸಂಬಂಧದಿಂದ ಒಂದೇಕಡಿಗೆ ವ್ಯಾಖ್ಯಾನ ಕೊಡುವ ಏರ್ಪಾಡನ್ನು ಮಾಡಬಹುದು. ಈಗಿನ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಬಂದುಮಾಡಿ ಕೆಳಗೆ ಸೂಚಿಸಿದ ಮೇರೆಗೆ ತ್ರಿದ್ದಲ್ಪಟ್ಟ ಸ್ಕೂಲಫಾಯನಲ್ ಪರೀಕ್ಷೆಯೊಂದನ್ನೇ ತೆಗೆದುಕೊಳ್ಳಬಹುದು. ಈ ಪರೀಕ್ಷೆಗೆ (೧) ಇಂಗ್ಲಿಷ (೨) ಸ್ವಭಾಷಾ (೩) ಅಂಕಗಣಿತ (೪) ಇಂಗ್ಲಂದ ಹಿಂದುಸ್ತಾನಗಳ ಇತಿಹಾಸ ಭೂಗೋಲ ಇವು ನಾಲ್ಕು ಆವಶ್ಯಕ ವಿಷಯಗಳಾಗಿರಬೇಕು. ಇವುಗಳಲ್ಲದೆ ಎರಡು ಒಂದಕ್ಕೊಂದು ಸಂಬಂಧವುಳ್ಳ ವಿಷಯಗಳನ್ನೊತ್ತಟ್ಟಿಗೆ ಸೇರಿಸಿ ಕೆಲವು ಐಚ್ಛಿಕವಿಷಯಗಳನ್ನು ನೇಮಿಸಬಹುದು ಕಾಲೇಜಕ್ಕೆ ಹೋಗುವ ಮನಸ್ಸುಳ್ಳವರು ಭಾಷಾವಿಷಯವನ್ನು

ವ್ಯವಹಾರದಲ್ಲಿ ಮನಸ್ಸುಳ್ಳವರು ತಮಗೆ ಅನುಕೂಲವಾದ ಬೇರೆ ಐಚ್ಛಿಕ ವಿಷಯವನ್ನು ತೆಗೆದುಕೊಳ್ಳುವರು. ಈ ಪರೀಕ್ಷೆಯನ್ನು ವಿದ್ಯಾಖಾತೆಯವರು ತೆಗೆದುಕೊಳ್ಳತಕ್ಕದ್ದು.

ಮುಂಬಯಿ ಇಲಾಖೆಯ ವಿದ್ಯಾಪೀಠದ ಸಂಬಂಧದಿಂದ ಸುಧಾರಣೆಗೆ ಬಹಳ ಅವಕಾಶವುಂಟು. ಆದರೂ ಈ ವಿದ್ಯಾಪೀಠದಿಂದ ಬಹಳ ಪ್ರಯೋಜನವಾಗಿರುತ್ತದೆಂದು ನಮ್ಮ ಅಭಿಪ್ರಾಯವಿರುವದು. ಈ ವಿದ್ಯಾಪೀಠದಲ್ಲಿ ಹೆಸರಾದ ವಿದ್ಯಾರ್ಥಿಗಳು ಕೆಲವರಾದರು. ಇಲ್ಲಿ ಕಲಿತು ತಯಾರಾದ ಜನರು ಬಹುತರವಾಗಿ ಸುಶಿಕ್ಷಿತರೂ ಸುಶೀಲರೂ ಸುಸ್ವಭಾವದವರೂ ಇರುತ್ತಾರೆ. ನನ್ನ ಇಪ್ಪತ್ತೈದೊಂಬತ್ತು ವರ್ಷದ ಅನುಭವದಿಂದ ಮುಂಬಯಿ ವಿದ್ಯಾಪೀಠದ ಪದವೀಧರರು ಸರಕಾರದ ಉದ್ಯೋಗಗಳಿಗೂ ಬೇರೆ ಹೋರೆಗಳಿಗೂ ತಕ್ಕವರಾಗಿರುತ್ತಾರೆಂತಲೂ ಈ ವಿದ್ಯಾಪೀಠವು ಹಿಂದುಸ್ತಾನದ ಬೇರೆ ವಿದ್ಯಾಪೀಠಗಳಲ್ಲಿ ಸನ್ಮಾನನೀಯವಾಗಿರುತ್ತದೆಂತಲೂ ಅದರ ವ್ಯವಸ್ಥೆಯೂ ಪ್ರಯೋಜನವೂ ಸಮರ್ಪಕವೂ ಆಗಿರುತ್ತವೆಂತಲೂ ಖಂಡಿತವಾಗಿ ಹೇಳುತ್ತೇವೆ.

ಮಿದುಳಿನ ಆಕಾರವೂ ಬುದ್ಧಿಯ ವಿಕಾಸವೂ

ಮನುಷ್ಯನ ಬುದ್ಧಿವಿಕಾಸವು ಅವನ ಮಿದುಳಿನ ಆಕಾರಮಾನದಂತೆ ಇರುವದು. ಅಂದರೆ ಮಿದುಳು ದೊಡ್ಡದಿದ್ದರೆ ಬುದ್ಧಿಯು ವಿಶಾಲವಾಗಿಯೂ ಸಣ್ಣದಿದ್ದರೆ ಸಂಕುಚಿತವಾಗಿಯೂ ಇರುವದು. ಈ ಮಾತನ್ನು ಸಾಮುದ್ರಿಕ ಶಾಸ್ತ್ರಜ್ಞರು ಬಹು ದಿವಸದಿಂದ ಸಾರುತ್ತ ಬಂದಿರುವರು. ಆದರೆ ಕೋಧಕರು ಅದರ ನಿಜತ್ವವನ್ನು ಮನಗಾಣುವದಕ್ಕೆ ಹತ್ತಿ ಬಹಳ ದಿವಸಗಳಾಗಿಲ್ಲ. ಬಳಗಡೆಯಲ್ಲಿ ಅನೇಕ ಗುಣಗಣಗಳಿಂದ ಮಂಡಿತರಾದ ಮಹಾ ಪುರುಷರ ಮಿದುಳಿಗೂ, ಹುಚ್ಚರ ಮಿದುಳಿಗೂ ಬರೆ ಹಚ್ಚಿ ಪರೀಕ್ಷಿಸಿದರು ಆದರೆ ಸಾಮುದ್ರಿಕ ಶಾಸ್ತ್ರಜ್ಞರು ಸಾರಿದ ಸಂಗತಿಯು ನಿರ್ಬಾಧವಾಗಿ ಸಿದ್ಧವಾಲಿಗಲ್ಲ ಕೆಲವು ಮೂರ್ಖರ ತಲೆಗಳು ಜಾಣರ ತಲೆಗಳಿಗಿಂತ ದೊಡವಿದ್ದದ್ದು ಕಂಡುಬಂತು. ಆದರೆ ಇಷ್ಟರಿಂದ

ಲೇ ಶಾಸ್ತ್ರಜ್ಞರ ನಿಯಮವನ್ನು ಅಲ್ಲಗಳೆಯುವದು ಸರಿಯಲ್ಲ. ಎಲ್ಲ ನಿಯಮಗಳಿಗೂ ಅಪವಾದಗಳುಂಟು. ಅದರಂತೆ ಇಂಥ ಕೆಲ ಸಂಗತಿಗಳುದರೂ ಅಪವಾದಗಳೆಂದು ಹೇಳಬಹುದು ಶರೀರವಾನದಂತೆ ನೋಡಲು, ತಲೆ ದೊಡ್ಡದಿದ್ದವನುಷ್ಯನು ಜಾಣನಿರಲೇಬೇಕು. ಈ ಮಾತು ಎಷ್ಟೋ ಸಾರಿ ಮನದಟ್ಟಾಗಿದೆ.

ಕೆಲವು ಬುದ್ಧಿವಂತರಾದವರ ಮಿದುಳಿನ ತೂಕವನ್ನು ಕೆಳಗೆ ಬರೆದಿದ್ದೇವೆ.

ಕುವ್ಹಿಅರ	೬೪. ೫ ಔ.
ಡಾ. ಆಬರಕ್ರಾಂಬಿ	೬೩
ಡಾನಿಯಲ್ ವೆಬಸ್ಟರ	೫೩. ೫
ಅಾರ್ಡ ಕ್ಯಾಂಬೇಲ್	೫೩. ೫
ಡೀ ಮಾರ್ಗನ್	೫೦. ೭೫
ಸಾಸ	೫೦. ೬

ಯುರೋಪಿಯನ್ ಜನರ ಗಂಡಸರ ಮಿದುಳಿನ ಸರಾಸರಿ ತೂಕವು ೪೯ ಔ

ಹೆಣ್ಣು ಮಕ್ಕಳ ಮಿದುಳಿನ ತೂಕವು ೪೫ ಔ. ಇರುವದು.

ಹುಚ್ಚರ ಮಿದುಳಿನ ತೂಕವು ೨೭. ೨೫೭. ೨೨೭. ೧೯೭. ೧೮೭. ೧೫೭. ೧೫೭. ೧೫೭ ಔಂಸು ಇರುತ್ತದೆ.

ಹುಚ್ಚರ ಮಿದುಳಿನ ತೂಕವು ಜಾಣರ ಮಿದುಳಿನ ಸರಾಸರಿ ತೂಕಕ್ಕೆ ನೂರಕ್ಕೆ ಎರಡುವರಿಯಂತೆ ಕಡಿಮೆ ಇರುವದೆಂದು ಡಾ. ಥರನಾಮನೆಂಬುವನು ಹೇಳುತ್ತಾನೆ.

ಮಿದುಳಿನ ಆಕಾರವಾನವು ಹೆಚ್ಚು ಕಡಿಮೆ ಇದ್ದಂತೆ ಬುದ್ಧಿಯಲ್ಲಿಯೂ ಹೆಚ್ಚು ಕಡಿಮೆ ಇರುವದೆಂದು ಮೇಲೆ ಹೇಳಿದ್ದೇವೆ. ಈ ನಿಯಮವು ಮನುಷ್ಯರಿಗಷ್ಟೇ ಹತ್ತುವದೆಂದು ತಿಳಿಯಲಾಗದು. ಯಾವತ್ತೂ ಪ್ರಾಣಿಗಳಿಗೆ ಹತ್ತುತ್ತದೆ ಆದರೆ ಈ ನಿಯಮಕ್ಕಾದರೂ ಅಪವಾದವುಂಟು. ಜ್ಞಾನತಂತುಜಾಲವು ಬರೀ ಮಾನಸಿಕ ಕ್ರಿಯೆಯನ್ನೇ ಮಾಡುತ್ತದೆಂದು ತಿಳಿಯಲಾಗದು. ಮಾಂಸತಂತುಗಳಿಗೂ ಸ್ನಾಯುಗಳಿಗೂ ಯಾವಾಗಲೂ ನೆರವಾಗುತ್ತಿರುತ್ತದೆ.

ಇದರಿಂದ ಅವುಗಳ (ಜ್ಞಾನತಂತುಗಳ) ಶಕ್ತಿಯು ಕಡಿಮೆಯಾಗುತ್ತದೆ. ಯಾವ ಪ್ರಾಣಿಗಳ ಸ್ನಾಯುಗಳು ದೊಡ್ಡವಾಗಿಯೂ ಚಪಲವಾಗಿಯೂ ಇರುವವೋ ಆ ಪ್ರಾಣಿಯ ಮಿದುಳ್ಗಳಾದರೂ ದೊಡ್ಡದೂ ಚುರುಕೂ ಇರುವದು. ಪ್ರಾಣಿವರ್ಗದಲ್ಲಿ ಆನೆಯೇ ಎಲ್ಲಕ್ಕೂ ದೊಡ್ಡದು. ತಿಮಿಂಗಿಲವು ಇದರ ತರುವಾಯದಲ್ಲಿ ಬರುವದು ಆದ್ದರಿಂದ ಮನುಷ್ಯನ ಮಿದುಳಿಗಿಂತ ಇವುಗಳ ಮಿದುಳು ದೊಡ್ಡದಿರುವದು. ಆನೆಯ ಮಿದುಳಿನ ತೂಕವು ೪ ರಿಂದ ೧೦ ಪೌಂಡಿನ ವರೆಗೆ ಇರುವದು. ತಿಮಿಂಗಿಲದ ಮಿದುಳಿನ ತೂಕವು ೩ ರಿಂದ ೪ ಪೌಂಡಿನ ವರೆಗೆ ಇರುವದು. ಒಂದು ೫೩ ಫೂಟು ಉದ್ದವಾದ ತಿಮಿಂಗಿಲದ ಮಿದುಳಿನ ತೂಕವು ೫ ಪೌಂಡು ಇತ್ತು ಮತ್ತೊಂದು ೧೪ ಫೂಟು ಉದ್ದವಿದ್ದ ತಿಮಿಂಗಿಲದ ಮಿದುಳಿನ ತೂಕವು ೩ ಪೌಂಡು ೧೦ ಔಂಸ ಇತ್ತು. ಮತ್ತೊಂದು ಜಾತಿಯ ತಿಮಿಂಗಿಲದ ಮಿದುಳು ೩ ಪೌಂಡು ೧೪೩ ಔ ಇತ್ತು

ಶ್ವಾಸೋಚ್ಛ್ವಾಸ, ರುಧಿರಾಭಿಸರಣ, ಅನ್ನಪಚನ ಮುಂತಾದ ಜೀವನ ವ್ಯಾಪಾರಗಳಿಗಾದರೂ ಜ್ಞಾನತಂತುಗತ ಶಕ್ತಿಯು ವೆಚ್ಚವಾಗುತ್ತದೆ. ಜ್ಞಾನತಂತುಗಳ ಶಕ್ತಿಯು ಮಾನಸಿಕ ಅಥವಾ ಶಾರೀರಕ ಶಕ್ತಿಗಳಲ್ಲಿ ಭರದಿಂದ ವೆಚ್ಚವಾಗುತ್ತಿರುವಾಗ ಜೀವನವ್ಯಾಪಾರಗಳು ಮಂದವಾಗಿ ಸಾಗುತ್ತಿರುತ್ತವೆ.

ಸಾಮಾನ್ಯವಾಗಿ ಮನುಷ್ಯನ ಮಿದುಳಿನ ತೂಕವು ೪೮ ಔಂಸು ಇರುತ್ತದೆಂದು ಗೊತ್ತಾಗಿದೆ. ಗಿಡ್ಡನ ಮಿದುಳಿಗಿಂತ ಉದ್ದನ್ನವನ ಮಿದುಳು ಭಾರನಿರುತ್ತದೆ. ಕುಳ್ಳಿಅರನ ಮಿದುಳಿನಷ್ಟು ಅಂದರೆ ೬೪ ಔಂಸು ಮಿದುಳಿರುವದು ಅಪರೂಪ ಇವನ ಬುದ್ಧಿಶಕ್ತಿಯು ಮೇಲಾದದ್ದಿತ್ತು. ಸ್ಮರಣವೇ ಬುದ್ಧಿಸಾಮರ್ಥ್ಯದ ಮೂಲವೆಂದು ತಿಳಿದರೆ ಈ ಮಹಾ ಪುರುಷನ ಮಿದುಳಿನಲ್ಲಿ ಸಂಗ್ರಹಿಸುವ ಸಂಗತಿಗಳ ೨ ಸಂಗತಿಗಳು ಸಾಮಾನ್ಯ ಜನರ ಮಿದುಳಿನಲ್ಲಿ ಸಂಚಯವಾಗಬಹುದು. ಮಿದುಳು ಗಣಿತಪ್ರಮಾಣದಿಂದ ಬೆಳಿದರೆ

ಅದರ ಶಕ್ತಿಯು ಅಂದರೆ ಬುದ್ಧಿಯು ಭೂಮಿತಿ ಪ್ರಮಾಣ ದಿಂದ ಬೆಳೆಯುತ್ತದೆ. ಇದರಿಂದ ಮನುಷ್ಯನಿಗಿಂತ ಆನೆ ಮುಂತಾದ ಪ್ರಾಣಿಗಳ ಬುದ್ಧಿಯು ಹೆಚ್ಚು ಚುರುಕಾಗಿರ ಬೇಕೆಂದು ನೀವು ಆಲೋಚಿಸಬಹುದು. ಆದರೆ ಜ್ಞಾನತಂ ತುಗತವಾದ ಶಕ್ತಿಯು ಆ ಪ್ರಾಣಿಗಳ ಇತರ ಜೀವನವ್ಯಾ ಪಾರಗಳಲ್ಲಿ ವೆಚ್ಚವಾಗುತ್ತದೆ.

ನಮ್ಮ ದೇಶದಲ್ಲಿ ಸತ್ವರನ್ನು ಸುಡುವ ಪ್ರಚಾರವು ಬಹ ಳವಿರುವ ಕಾರಣ ಈ ಬಗೆಯ ಶೋಧವನ್ನು ಮಾಡಲಿಕ್ಕೆ ಅನುಕೂಲವಿಲ್ಲದಂತಾಗಿದೆ. ಆದರೂ ಅನ್ಯ ದೇಶದಲ್ಲಿ ಕಂ ಡುಬಂದ ದೃಷ್ಟಾಂತಗಳಿಂದ ಈ ದೇಶದಲ್ಲಿಯಾದರೂ ಹೀ ಗೇ ಇರಬಹುದೆಂಬ ಅನುಮಾನವು ತಪ್ಪಾಗದು.

ಎವೆಗಳಿಗೆ ಸಂಸ್ಕೃತದಲ್ಲಿ ನಿಮಿಷಗಳೆನ್ನುವರು. ಈ ಎವೆ ಗಳು ಯಾವಾಗಲೂ ಮೇಲೆ ಕೆಳಗೆ ಅಲ್ಲಾಡುತ್ತಿರುವವು. ಕನ್ನಡದಲ್ಲಿ "ತ್ರೀವ್ರ" "ಬೇಗ" ಎಂಬ ಅರ್ಥದಲ್ಲಿ ಕಣ್ಣುಮು ಚ್ಚಿ ಕಣ್ಣು ತೆರೆಯುವಷ್ಟು ಎಂಬ ಶಬ್ದವನ್ನು ಉಪಯೋಗಿ ಸುತ್ತಾರೆ. ಸಂಸ್ಕೃತ ಜನರಂತು ಕಾಲವನ್ನು ಎಣಿಸಲಿಕ್ಕೆ ಎವೆಗಳು ಅಲ್ಲಾಡುವ ಕಾಲವನ್ನು ಒಂದು ಮಾಪು ಮಾಡಿ ಕೊಂಡಿರುತ್ತಾರೆ. ಈ ಎವೆಯಾಟವು ನಿದ್ರೆಯು ಕಾಲಿಹೊ ತ್ತಾಗಿ ಉಳಿದ ಹೊತ್ತಿನಲ್ಲೆಲ್ಲ ಎಡೆಬಿಡದೆ ಸಾಗುತ್ತಿರಬೇ ಕೆಂದು ದೇವರ ಸಂಕೇತವ್ರಂಟು. ನಿಮಿಷವೆಂದರೆ ಎಷ್ಟು ಹೊತ್ತು? ಎಂಬುದನ್ನು ಕಂಡು ಹಿಡಿಯುವದಕ್ಕಾಗಿ ಒಬ್ಬ ಜರ್ಮನ್ ಶೋಧಕನು ಬಹಳ ದಾವತಿ ಮಾಡಿ ಕಡೆಯಲ್ಲಿ ಗೊತ್ತು ಹಚ್ಚಿದ್ದಾನೆ. ಅವನು ಕಣ್ಣೆವೆಗಳ ಕಡೆಯ ಭಾ ಗಕ್ಕೆ ಬಂದು ಕಾಗದದ ಚೂರನ್ನು ಹಚ್ಚಿ ಬಹಳ ಎಚ್ಚರ ದಿಂದ ಅವುಗಳ ಗತಿಯನ್ನು ಅವಲೋಕಿಸಿದನು. ಈ ಅವ ಲೋಕನದಿಂದ ಬೈಲಿಗೆ ಬಂದ ಸಂಗತಿಗಳು ಯಾವವೆಂದರೆ ಎವೆಯು ಕೆಳಗೆ ಬಲು ಬೇಗ ಬರುವದು. ಬಳಿಕ ತುಸು ಹೊತ್ತು ಅಲ್ಲಿಯೇ ನಿಂತು ಸಾವಕಾಶವಾಗಿ ಮೇಲಕ್ಕೆ ಹೋ ಗುವದು. ಅದಕ್ಕೆ ಕೆಳಗೆ ಬರಲಿಕ್ಕೆ ಸುಮಾರು ೦೭೫ ಸೇಕಂದಿನಷ್ಟು ಹೊತ್ತಿನಿಂದ ೦೯೧ ಸೇಕಂದಿನಷ್ಟು ಹೊತ್ತು ಹತ್ತುವದು. ಅದು ಕೆಳಗೆ ಬಂದು ಸುಮ್ಮನೆ ನಿಲ್ಲಲಿಕ್ಕೆ

ಸ್ವಲ್ಪವಾದರೆ ೧೧ ಸೇಕಂದು ಬಹಳವಾದರೆ ೧೩ ಸೇಕಂದು ಹತ್ತುವವು. ಮರಳಿ ಮುನ್ನಿನಂತೆ ಮೇಲೆ ಹೋಗಲಿಕ್ಕೆ ೧೩ ಸೇಕಂದು ಹತ್ತುವವು. ಒಟ್ಟಿಗೆ ಎವೆಯು ೬ ಸೇಕಂದುಗಳಲ್ಲಿ ಒಮ್ಮೆ ಅಲ್ಲಾಡುತ್ತದೆ. ಆದ್ದರಿಂದ ನಿಮಿಷವೆಂದರೆ ೪ ಸೇಕಂದು.

EXCURSION TO HAMPI.

ಪಂಪಾಯಾತ್ರೆ.

(ಬರೆದು ಬಂಡದ್ದು.)

(೧೦೯ ನೇ ಪುಟದಿಂದ ಮುಂದೆ ಸಾಗಿದ್ದು.)

ಅದನ್ನು ದಾಟಿ ಒಳಮಗ್ಗಲಿಗೆ ಬ್ರಾಹ್ಮಣರು ಮುಂತಾದ ಉಚ್ಚವರ್ಗದ ಮಡಿಯ ಜನರು ಹೋಗುವರು. ಅದನ್ನು ದಾಟಿ ಗರ್ಭಗುಡಿಯುಂಟು. ಶ್ರೀ ವಿರೂಪಾಕ್ಷನು ಸ್ವಯಂ ಭೂಲಿಂಗವೆಂದು ಹೇಳುತ್ತಾರೆ. ನೋಡಿದವರಿಗೂ ಹಾಗೇ ತೋರುತ್ತದೆ. ಹೆಬ್ಬಾಗಿಲಿನ ನೆಲಕ್ಕಿಂತ ಗರ್ಭ ಗುಡಿಯ ನೆಲವೂ ಅದಕ್ಕಿಂತ ಅದರ ಹಿಂದಿನ ಪೌಳಿಯ ನೆಲವೂ ಅದಕ್ಕೂ ಆ ಪೌಳಿಯ ಹಿಂದಿನ ನೆಲವೂ ಕ್ರಮವಾಗಿ ಹೆಚ್ಚು ಹೆಚ್ಚು ಎತ್ತರವಾಗಿರುತ್ತವೆ ಅದರಿಂದ ವಿರೂಪಾಕ್ಷನ ಹಿಂಬದಿಗಿರುವ ನದಿಯ ಕಾವಲಿಯಬೊಂದು ಟಿಸಿಲನ್ನು ಸ್ವಾಭಾವಿಕವಾದ ಕಲ್ಲುಹಾಸಿಗೆಯಲ್ಲಿ ಹರಿಯನ್ನು ತೋಡಿ ವಿರೂಪಾಕ್ಷನ ಮಾಳಿಗೆಗುಂಟ ಹಾಯಿಸಿದ್ದಾರೆ. ಈ ಭಾಗದಲ್ಲಿ ಕಲ್ಲು ಕಣಿಯು ಬಹಳ. ಅಂದರೆ ಇದೊಂದು ಗುಡ್ಡವೇ ಇರುವದು. ಆದ್ದರಿಂದ ಅತ್ತಲಿತ್ತಲು ಸುತ್ತು ಕಡೆಯಲ್ಲಿಯೂ ಕಲ್ಲು ಹಾಸಿಗೆಯನ್ನೂ ಅಪ್ರಮಾಣವಾದ ಬಂಡೆಗಲ್ಲುಗಳನ್ನೂ ನೋಡುವದು ಅರಿದಲ್ಲ. ಇಂಥ ಬಂದು ಸ್ವಾಭಾವಿಕ ಬಂಡೆಯಲ್ಲಿಯೇ ವಿರೂಪಾಕ್ಷನಲಿಂಗವನ್ನು ಹುಟ್ಟಿಸಿರಬಹುದು ಇದರಿಂದ ಹಲಜನ ಧರ್ಮಶ್ರದ್ಧೆಯುಳ್ಳವರು ನನ್ನ ಮೇಲೆ ಕತ್ತೀ ಕಿತ್ತಬಹುದು. ಆದರೆ ನಾವು ವಾಚಕರಿಗೆ ವಿನಯದೊಡನೆ ವಿನ್ನವಿಸುವದೇನಂದರೆ :— ನಾವು ನಾಸ್ತಿಕರಲ್ಲ; ಮೂಢಶ್ರದ್ಧೆಯನ್ನು ನಂಬುವವರೂ

ಅಲ್ಲ; ‘ಪುರಾಣಮಿತ್ಯೇವನಸಾಧುಸರ್ವಮ್’ ಎಂಬ ಕವಿಯ ಉಕ್ತಿಯಂತೆ ಸೃಷ್ಟಿಯೊಳಗಿನ ಕಾರ್ಯಗಳನ್ನು ಕಂಡು ಅದನ್ನು ಕುರಿತು ಸಾಧಾರಕಾರಣಗಳನ್ನು ಹುಡುಕಿ ವಿಚಾರದಿಂದ ನಿರ್ಣಯಿಸುವದು ಪ್ರತಿಯೊಬ್ಬ ಶೋಧಕನ ಮೊದಲನೇ ಕೆಲಸವಾಗಿದೆ. ಭೂಮಿಯಿಂದ ಶಿವನು ಶಿಲಾಲಿಂಗರೂಪದಿಂದ ಹೊರಬಿದ್ದನೆಂದು ಹೇಳುವದರಿಂದಲೂ ಇಂಥ ಸಂಗತಿಗಳನ್ನು ಕೇಳಿ ನಂಬುವದರಿಂದಲೂ ಜಗದೀಶ್ವರನ ಅಸ್ತಿತ್ವ, ಕರ್ತೃತ್ವ ಮಹತ್ವ ಮುಂತಾದ ಸಂಗತಿಗಳು ಮನದಲ್ಲಿ ನೆಲೆಗೊಳ್ಳುವವೆಂದು ತಿಳಿಯಲಾಗದು, ಮೂಢಶ್ರದ್ಧೆಯಿಂದ ಕೂತ ಭಕ್ತಿಯು ಒಪ್ಪೊತ್ತು ಬಹುದಿವಸವಿರಬಹುದು; ಆದರೆ ಯಾವದೊಂದು ಗಂಡಾಂತರದಲ್ಲಿ ಶಿಕ್ಷಾಗ ಬೇರೊಬ್ಬ ಮನುಷ್ಯನ ವಚನದಿಂದ ಅವನು ತನ್ನ ಮೊದಲಿನ ಶ್ರದ್ಧೆಯನ್ನು ಬಿಡಬಹುದು; ಆಪರೆ ವಿಚಾರದಿಂದ ಅರೆದಾಡಿ ಹೊರಟ ಸಿದ್ಧಾಂತವು ಬಹುತರವಾಗಿ ಜೀವ ಜಾರಿಹೋಗದು, ದೇವರು ಉತ್ಪನ್ನಮಾಡಿದ ಸೃಷ್ಟಿಯನ್ನು ನೋಡಿ ಪ್ರತಿ ಒಬ್ಬ ಮಾನವ ಪ್ರಾಣಿಯು ಮನಸ್ಸಿನೆಲ್ಲಿ ಆ ಭಗವಂತನ ಅಸ್ತಿತ್ವ, ಕರ್ತೃತ್ವ ಮಹತ್ವಗಳ ಸಲುವಾಗಿ ಪೂಜ್ಯ ಬುದ್ಧಿಯು ಹುಟ್ಟದೇ ಇರದು ಮನುಷ್ಯನು ಒಂದು ಕಡ್ಲೇ ಕಾಳಷ್ಟು ಮಣ್ಣಿನ್ನು ಸೃಷ್ಟಿಯು ಸಹಾಯವಿಲ್ಲದೆ ಮಾಡಲಾರನು; ಎಡೆಬಿಡದೆ ನಡೆಯುವ ಸೃಷ್ಟಿಯ ವ್ಯಾಪಾರಗಳನ್ನು ತಡೆಯಲಾರನು; ಹೊಸ ವ್ಯಾಪಾರಗಳನ್ನು ನಡಿಸಲಾರನು ಹೀಗಿರಲು ಈ ಒಡಿದುಕಾಣುವ ವಸ್ತು ವ್ಯಾಪಾರಗಳಿಂದ ಈಶ್ವರನ ಮಹಿಮೆಯನ್ನು ಕಂಡುಕೊಳ್ಳುವದು ಸಾಲದೆ ಬೇರೆ ಬೇರೆ ಅಮಾನುಷ ಅಥವಾ ಅಸಂಭವನೀಯ ಸಂಗತಿಗಳನ್ನು ಹುಟ್ಟಿಸುವದೂ ಅಂಥವುಗಳನ್ನು ನಂಬುವದೂ ತೀರ ತಿಳಿಗೇಡಿತನವೆಂದು ಹೇಳಬಹುದು, ಆದರೆ ಪುಣ್ಯಕ್ಷೇತ್ರಗಳಿಗೆ ಹೋಗುವದೂ ಅಲ್ಲಿರುವ ತೀರ್ಥಗಳಲ್ಲಿ ಸ್ನಾನಮಾಡುವದೂ ದೇವದರ್ಶನ ತಕ್ಕೊಳ್ಳುವದೂ ಮೊದಲಾದ ಕರ್ಮಗಳು ನಿರರ್ಥಕವಿರುವವೆಂತಲೂ ಇಂಥ ಕಾರ್ಯಗಳನ್ನು ಕರ್ಮಮಾರ್ಗಿಯು ಮಾಡುವದು ಸರಿಯೆಂ

ದು ಹಿರಿಯರೂ ಪುರಾಣಗಳೂ ಹೇಳುವ ಮಾತುಗಳು ಕೆಲಸಕ್ಕೆ ಬಾರದವುಗಳೆಂತಲೂ ನಮ್ಮ ಅಭಿಪ್ರಾಯವಿರುವದೆಂದು ತಿಳಿಯಲಾಗದು, ಭರತಖಂಡವು ಬಹು ವಿಸ್ತಾರವಾದದೇಶವು ಆಯಾ ಸ್ಥಳದ ಜನರನ್ನು ಒಲಿಸಿಕೊಳ್ಳುವದಕ್ಕಾಗಿಯಾಗಲಿ, ಪರಮಾತ್ಮನ ಸರ್ವವ್ಯಾಪಕತ್ವವನ್ನು ತಿಳಿಸುವದಕ್ಕಾಗಲಿ, ಸಂಸಾರದಲ್ಲಿ ಶಿಕ್ಕು ಒದ್ದಾಡುವ ಮಾನವರ ಮನಃ ಪರಿಪಾಕಕ್ಕಾಗಲಿ, ಇಂಥ ಸ್ಥಲ, ತೀರ್ಥ, ದೇವತಾ, ಆ ದೇವತೆಯ ಸಂಬಂಧದ ಮಹಾತ್ಮ್ಯ ಮುಂತಾದವುಗಳನ್ನು ಮುಂಚಿನ ಸೂಜ್ಞ ಜನರು ಉಂಟುಮಾಡಿರುತ್ತಾರೆ. ಇದಲ್ಲದೆ ಪುರಾಣಗಳ ಉದ್ದೇಶವೂ ಪುರಾಣದಲ್ಲಿ ವರ್ಣಿಸಿದ ಈ ಮಾದರಿಯ ಸಂಸ್ಥೆಗಳ ಉದ್ದೇಶವೂ ಇನ್ನೂ ಅನೇಕವುಂಟು. ಆದರೆ ಅದನ್ನು ಪ್ರಸ್ತಾಪಿಸುವದು ಸದ್ಯದ ಕೆಲಸವಲ್ಲ. ನಾವು ಮುಖ್ಯವಾಗಿ ಹೇಳುವದೇನೆಂದರೆ ಉದಾತ್ತ ವಿಚಾರದಿಂದ ಪರಮಾತ್ಮನ ಅಸ್ತಿತ್ವ, ಕರ್ತೃತ್ವ, ಮಹತ್ವಗಳನ್ನು ಅರಿತುಕೊಂಡು ಪರಾರ್ಥವನು ಸಾಧಿಸಿಕೊಳ್ಳುವದೇ ಜ್ಞಾನವುಳ್ಳ ಪ್ರಾಣಿಯಾದ ಮಾನವನು ಹಿಡಿಯುತಕ್ಕ ಮೇಲಾದ ಹಾದಿಯು. ಕೇವಲ ಮೂಢನಾಗಿ ಮುಂದಿ ತೋರಿಸಿದ ಹಾದಿಯನ್ನು ಹಿಂದೆ ಮುಂದೆ ನೋಡದೆ ಹಿಡಿಯುವದು ಸರಿಯುಲ್ಲ. ಇರಲಿ ಇನ್ನು ನಮ್ಮ ಪ್ರಸ್ತುತ ವಿಷಯದ ಕಡೆಗೆ ಹೊರಳುವ.

ಶ್ರೀವಿರೂಪಾಕ್ಷನ ಗುಡಿ ಇರುವ ಬೆಟ್ಟದ ಪ್ರದೇಶವು ಹೇಮಕೂಟವೆಂದು ಕರೆಯಲ್ಪಡುತ್ತದೆ. ಆದರೆ ಶ್ರೀಮತ್ಕೈಲಾಸನಾಥನು ತನ್ನ ಅಘೋರ ತತ್ಪುರುಷ ವಾಮದೇವಾದಿ ಪಂಚಮುಖಗಳಿಂದ ಅವತರಿಸಿರುವನೋ ಎಂಬಂತೆ ಮಧ್ಯಸ್ಥಾನದಲ್ಲಿರುವ ಶ್ರೀಪಂಪಾನಾಥನ ನಾಲ್ಕುದಿಕ್ಕಿಗೆ ಕೆಲವಂತರಲ್ಲಿ ಬೇರೆ ನಾಲ್ಕು ಪ್ರಾಣ ಪ್ರಸಿದ್ಧವಾದ ಶಿವಲಿಂಗಗಳು ಉಂಟು. ಮೂಡಣ ಬದಿಗೆ ಉಕ್ಕಸಾಗರದ ಹತ್ತಿರ ಕಿನ್ನರೇಶ್ವರನೆಂಬ ಶಿವಲಿಂಗವೂ ದಕ್ಷಿಣದಲ್ಲಿ ಹೊಸಕೋಟೆಗೆ ಮೂರು ಮೈಲುಗಳಅಂತರದಲ್ಲಿರುವ ಗುಡ್ಡಗಳಲ್ಲಿ ಜಂಬುಕೇಶ್ವರನ ಶಿವಲಿಂಗವೂ ಉತ್ತರದಲ್ಲಿ ಕನಕೇರಿಯ

ಹಾದಿಯಲ್ಲಿ ವಾಣಿಭದ್ರೇಶ್ವರನೆಂಬ ಶಂಭುಲಿಂಗವೂ ಪಶ್ಚಿಮ ದಲ್ಲಿ ಶ್ರೀಪುರದ ಗುಡ್ಡದ ಹತ್ತರ ಸೋಮೇಶ್ವರನೆಂಬ ಸಾಂ ಭುಲಿಂಗವೂ ಉಂಟು. ಈ ಸ್ಥಾನಗಳಾದರೂ ಬಹು ರಮ ಣೀಯವಾಗಿರುತ್ತವೆ.

(ಸಶೇಷ)

MANUAL OF METHOD.

ಶಿಕ್ಷಾಕ್ರಮಃ

(೬೩ ನೇ ಪುಟದಿಂದ ಮುಂದೆ ಸಾಗಿದ್ದು.)

(೩) ವ್ಯಾವೃತ್ತಿ ಅಥವಾ ವಿವರಣ: - ಕಲಿಸುವಾಗ ಪ್ರಸಂ ಗೋಪಾತ್ತವಾಗಿ ಶಬ್ದವನ್ನಾಗಲಿ ಶಬ್ದಸಮುಚ್ಚಯವನ್ನಾಗಲಿ ವಾಕ್ಯವನ್ನಾಗಲಿ ಸ್ಪಷ್ಟೀಕರಿಸಿ ಕಾರಿಣ್ಯವಳಿದು ಅರ್ಥವು ಮನದಟ್ಟಾಗುವಂತೆ ತಿಳಿಸಿಕೊಡಬೇಕಾಗುತ್ತದೆ. ಹೀಗೆ ತಿಳಿಸುವದೇ ವ್ಯಾವೃತ್ತಿ ಅಥವಾ ವಿವರಣವೆನಿಸುವದು. ಅ ರ್ಥವು ಮನಸಿಗೆ ಹೊಳೆಯದಿದ್ದರೆ ಅದು ವಿವರಣೆಯೆನಿಸ ಲಾರದು ಕಲಿಸುವ ಸಂಗತಿಯು ವಿಶದವಾಗಿ ತಿಳಿದುವಂತೆ ಹೇಳಬೇಕಾದರೆ ಅದನ್ನು ಸುಲಭರೂಪದಿಂದ ವಿದ್ಯಾರ್ಥಿ ಗಳ ಮುಂದೆ ಇಡಲಿಕ್ಕೆ ಬೇಕು. ಈ ಸಾಮರ್ಥ್ಯಕ್ಕೆ ಭಾಷಾಜ್ಞಾನವೂ ಸಮರ್ಪಕವಾದ ದೃಷ್ಟಾಂತಗಳನ್ನು ಕೊ ಡುವ ನೈಪುಣ್ಯವೂ ಬೇಕು. ಚಲೋ ಪುಸ್ತಕಗಳನ್ನು ಬಹ ಳವಾಗಿ ಓದಿದರೆ ಈ ಸಾಮರ್ಥ್ಯವು ಬರುವದು ಕೇವಲ ಶಬ್ದಕ್ಕೆ ಪ್ರತಿಶಬ್ದವನ್ನು ಹೇಳುವದೂ ಶಬ್ದಸಮುಚ್ಚಯಕ್ಕೆ ಸಮುಚ್ಚಯಾಂತರವನ್ನು ನುಡಿಯುವದೂ ವಿವರಣವೆನಿಸ ದು. ಸುಲಭತ್ವ ಸರಲತ್ವ ಸುಬೋಧತ್ವ ಈ ಮೂರು ಉತ್ತ ಮ ವಿವರಣದ ಕುರುಹುಗಳು.

ಕಲಿಸುವ ಪಾಠಗಳಲ್ಲಿ ವಿವರಿಸತಕ್ಕಂಥ ಸಂಗತಿಗಳು ಹಲವು ಇರುತ್ತವೆ. ಅವುಗಳಲ್ಲಿ ಒಂದನ್ನಾದರೂ ವಿವರಿಸದೆ ಬಿಟ್ಟರೆ, ಶಿಕ್ಷಕನು ತನಗೆ ದೊರೆತ ಸಂಧಿಯನ್ನು ವ್ಯರ್ಥವಾ ಗಿ ಕಳೆದಂತೆ ಆಗುತ್ತದೆ. ವಿವರಣದ ಸಂಧಿಗಳನ್ನು ಗೊತ್ತು ಹಚ್ಚಲಿಕ್ಕೂ ಅವುಗಳನ್ನು ಪ್ರಯೋಗಿಸಲಿಕ್ಕೂ ಎಚ್ಚರವ

ಡುವವನೇ ಮೇಲಾದ ಶಿಕ್ಷಕನು. ಪಾಠದ ಭಾಗಗಳು ಪರ್ವಳಿಯ ಗೊಣಸುಗಳಂತೆ ಬಂದಕ್ಕೊಂದು ಹೊಂದಿಕೊಂ ಡಿರುವವು. ಕಳಿಗಿದು ರೂಪದ ಒಂದು ಸಂಗತಿಯು ಸರಿ ಯಾಗಿ ತಿಳಿಯದಿದ್ದರೆ ವರ್ಗದೊಳಗಿನ ಕೆಲವು ವಿದ್ಯಾರ್ಥಿ ಗಳಿಗೆ ಇಡೀ ಪಾಠವೇ ನಿಷ್ಪ್ರಯೋಜನವಾಗುವದು.

ಶಿಕ್ಷಕರು ಪಾಠಾಂಶದ ಕಾಠಿಣ್ಯವನ್ನು ಕಳಿಯುಲೆಳಸಿ ಆ ಸಂಬಂಧದ ಶಬ್ದಜಾಲವನ್ನು ಬೆಳಿಸಿ, ಆ ಅಂಶವನ್ನು ಮೊದಲಿದ್ದದ್ದಕ್ಕಿಂತ ಕಠಿಣವಾಗಿ ಮಾಡುವರು. ಒಮ್ಮೊಮ್ಮೆ ಶಬ್ದಕ್ಕೆ ಹೇಳಿದ ಪ್ರತಿಶಬ್ದವು ಮೂಲಕ್ಕಿಂತ ಕಠಿಣವಾ ಗಿರುವದು. ಹ್ಯಾಗಂದರೆ :—ನೀರು ಅಂದರೆ ವಾರಿ, ಮನು ಷ್ಯನು ಎಂದರೆ ಅವಯವ ವಿಶಿಷ್ಟವಾದಂಥ ಇಂದ್ರಿಯ ಜನ್ಯ ಜ್ಞಾನವುಳ್ಳಂಥ ವಿಚಾರಸಾಮರ್ಥ್ಯವುಳ್ಳಂಥ ಸ್ವೇಚ್ಛಾವಿಹಾರಿ ಯಾದಂಥ ಪ್ರಾಣಿಯು. ಅಣಗಿಸೋಣವೆಂದರೆ ತನ್ನ ಶ್ರೇ ಷ್ಠತ್ವವನ್ನಾಗಲಿ ಬೇರೆ ಮನೋವಿಕಾರವನ್ನಾಗಲಿ ಸೂಚಿಸು ವಂತೆ ಮೋರೆಯನ್ನು ಸೊಟ್ಟ ಮಾಡೋಣ. ಈ ಮಾದರಿ ಯು ವಿವರಣದಿಂದ ವಿದ್ಯಾರ್ಥಿಗಳಿಗೆ ಅರ್ಥವು ತಿಳಿದು ಮತ್ತಿಷ್ಟು ತೊಂದರೆಯಾಗುವದೆಂಬದಕ್ಕೆ ಸಂದೇಹವಿಲ್ಲ. ಆದರೆ ಈ ರೀತಿಯ ವಿವರಣವು ಇತ್ತಲಾಗಿ ಬಹಳೇ ಕಡಿ ಮೆಯಾಗಿರುತ್ತದೆ. ಮುಖ್ಯ ಮಾತು ಯಾವದೆಂದರೆ, ಹುಡು ಗರ ಯೋಗ್ಯತೆಗೆ ಸರಿಯಾದ ಭಾಷೆಯಿಂದಲೂ ಸುಲಭವಾ ದ ಪದ್ಧತಿಯಿಂದಲೂ ಪಾಠಾಂಶವನ್ನು ತಿಳಿಸಿಕೊಡುವದು ಅವಶ್ಯವಾದದ್ದು.

(೩) ವರ್ಣನೆ :— ವಿವಕ್ಷಿತ ಸಂಗತಿಯನ್ನು ಶಬ್ದಗಳಿಂದಾ ಗಲಿ ಚಿನ್ಹಗಳಿಂದಾಗಲಿ ಎರಡೂ ಸಾಧನಗಳಿಂದಾಗಲಿ ಕ ಣ್ಮುಂದೆ ತಂದು ನಿಲ್ಲಿಸುವದು ವರ್ಣನೆಯೆನಿಸುವದು; ಇದಕ್ಕೆ ಶಬ್ದಚಿತ್ರವೆಂದರೂ ಸಲ್ಲುವದು. ಯಾವದೊಂದು ಸಂಗತಿ ಯ ಸ್ವರೂಪವನ್ನು, ಗುಣಗಳನ್ನು, ಶೀಲಸ್ವಭಾವಗಳನ್ನು ನಿವರಿಸಿ ಸರಿಯಾದ ಕಲ್ಪನೆಯನ್ನು ವಿದ್ಯಾರ್ಥಿಗಳ ಮನಸಿ ನಲ್ಲಿ ಹುಟ್ಟಿಸುವದು ವರ್ಣನೆಯ ಮುಖ್ಯ ಉದ್ದೇಶವು. ಇ

ದಕ್ಕೆ ಬೆಳಿಸಿದ ವ್ಯಾಖ್ಯೆಯಿಂತಲೂ ಪ್ರಕಾಶನದ ಬೇರೊಂದು ಸ್ವರೂಪವೆಂತಲೂ ಅನ್ನಬಹುದು. ವರ್ಣನ ನೈಪುಣ್ಯವು ಈ ಶ್ವರದತ್ತವು. ಆದರೆ ಶ್ರಮದಿಂದ ಈ ಜ್ಞಾನತನವು ಕೆಲವ ಟ್ಟಿಗೆ ಸಾಧ್ಯವಾಗಬಹುದು. ಮೇಲಾದ ವರ್ಣನಕ್ಕೆ ವರ್ಣಿ ಸುವವನ ಮನಸ್ಸಿನಲ್ಲಿ ವರ್ಣಿಸುವ ಪದಾರ್ಥದ ಯಥಾರ್ಥ ಚಿತ್ರವು ಬಿಂಬಿಸಿರಲಿಕ್ಕೆಬೇಕು ಆದರಲ್ಲಿ ಯಾವದೊಂದು ಅಂಶವು ಕಡಿಮೆಯಾದರೆ ವರ್ಣನವು ಅಪೂರ್ಣವಾಗುವದು ಅದೇ ಮೇರೆಗೆ ವರ್ಣಿಸುವ ಭಾಷೆಯೂ ವಿಚಾರಗಳೂ ವಿದ್ಯಾರ್ಥಿಗಳ ಜ್ಞಾನಾನುಭವಗಳಿಗೆ ವಿಾರಿದಂಥವು ಇರ ಕೂಡದು ಪ್ರಕಾಶನವು ವರ್ಣನದ ಬೇರೊಂದು ಸ್ವರೂ ಪವು. ಎಲ್ಲತರಪ ತಿಳುವಳಿಕೆಯ ತೊಡರುಗಳನ್ನು, ಮಸ ಮಸಕಾದ ಸಂಗತಿಗಳನ್ನು ಸ್ಪಷ್ಟವಾಗಿ ತಿಳಿಸುವದೇ ಇದರ ಮುಖ್ಯ ಉದ್ದೇಶವು. ಈ ಸಾಧನದಿಂದ ಅರ್ಥವು ಸುಬೋ ಧವಾಗುತ್ತದೆ ಆ ಕಾರಣ ವಿಚಾರಗಳನ್ನು ಕಲ್ಪನೆಗಳನ್ನು ವಿಶದವಾಗಿ ತಿಳಿಸುವ ಸಾಧನವೆಂತಲೂ ಇದಕ್ಕೆ ಅನ್ನಬಹು ದು. ಈ ಪ್ರಸಕ್ತಿಯಲ್ಲಾದರೂ ಭಾಷೆಯೂ ವಿಚಾರಗ ಳೂ ವಿದ್ಯಾರ್ಥಿಗಳ ಜ್ಞಾನಾನುಭವಗಳಿಗೆ ವಿಾರಿರಕೂಡದು.

(ಗ) ವ್ಯಾಖ್ಯೆ :- ವಸ್ತುವಿನ ಸಾಮಾನ್ಯ ಗುಣಗಳನ್ನಾಗ ಲಿ ಚಿಹ್ನಗಳನ್ನಾಗಲಿ ನಿರ್ದೇಶಿಸುವದೇ ವ್ಯಾಖ್ಯೆಯು ಇದ ರಿಂದ ವಿವಕ್ಷಿತಪದದ ಅರ್ಥವು ಪ್ರಕಾಶಿತವಾಗುವದು. ಒ ಮ್ಮೊಮ್ಮೆ ನಿದ್ದಾಂತರೂಪದಿಂದ ವ್ಯಾಖ್ಯೆಯನ್ನು ಮಾಡಬ ಹುದು ಈ ಪ್ರಸಕ್ತಿಯಲ್ಲಿ ವಿವಕ್ಷಿತಪದವು ಆಖ್ಯಸ್ಥಾನವ ನ್ನು ಪ್ರಕಾಶನವು ಆಖ್ಯಾತಸ್ಥಾನವನ್ನು ಆಕ್ರಮಿಸುವವು ಹ್ಯಾಗಂದರೆ.

ಆಖ್ಯೆ.	ಆಖ್ಯಾತ.
ಮನುಷ್ಯನು (ವಿವಕ್ಷಿತ ಪದವು)	ಆಹಾರವನ್ನು ಬೇಯಿಸಿ ತಿನ್ನುವ ಪ್ರಾಣಿಯು (ಪ್ರಕಾಶನವು)

ಪ್ರಸಂಗೋಪಾತ್ತಾಗಿ ವ್ಯತ್ಯಸ್ತಪದದಿಂದ ವಾಕ್ಯ ವನ್ನು ಕಟ್ಟಲಿಕ್ಕೆ ಅನುಕೂಲವಾಗುತ್ತದೆ. ವಿಶಿಷ್ಟ ಆಳಿಕೆಯು

ಸ್ವರೂಪದ ವ್ಯಾಖ್ಯೆಯನ್ನು ಕಟ್ಟಬೇಕಾದರೆ ಬೇರೆ ಬೇರೆ ಲಕ್ಷಣಗಳ ಸ್ವರೂಪಗಳಿಗೆ ಒರೆ ಹಚ್ಚಿ ತಕ್ಕ ವ್ಯಾಖ್ಯೆಯನ್ನು ಕಟ್ಟಬಹುದು ವ್ಯಾಖ್ಯೆಯನ್ನು ಕಟ್ಟಬೇಕಾದರೆ ಮುಖ್ಯವಾಗಿ ಮೂರು ಪದಗಳ ಜ್ಞಾನವಾಗಲಿಕ್ಕೆ ಬೇಕು ಈ ಪದಗಳ ಜ್ಞಾನವಾಗದಿದ್ದರೆ ವ್ಯಾಖ್ಯೆಯನ್ನು ಕಟ್ಟುವದು ದುಸ್ತರವು. ಆ ಪದಗಳು ಯಾವವೆಂದರೆ :—೧ ಜಾತಿ ೨ ವರ್ಗ ೩ ಜಾತಿ ವರ್ಗಗಳಲ್ಲಿರುವ ಅಭ್ಯಂತರವು

೧ ಜಾತಿ :—ವ್ಯಾಖ್ಯೆಯನ್ನು ಕಟ್ಟಬೇಕಾದ ಪದವೂ ಅದಕ್ಕೆ ಸರಿವಾಡಿ ನೋಡಿದ ಬೇರೆ ಪದಗಳೂ ಇವುಗಳಿಗೆ ಸಾಮಾನ್ಯವಾದ ವ್ಯಾಖ್ಯೆಯ ಭಾಗಕ್ಕೆ ಜಾತಿಯೆಂಬ ಹೆಸರು.

೨ ವರ್ಗ :—ವ್ಯಾಖ್ಯೆ ಕಟ್ಟಬೇಕಾದ ಪದವೇ ವರ್ಗವೆನಿಸುವದು.

೩ ವಿವಕ್ಷಿತ ಪದವನ್ನು ಸರಿವಾಡಿ ನೋಡಿದ ಪದಗಳಿಂದ ವಿಶೇಷಿಸುವ ಭಾಗವೇ ಈ ಮೂರನೇ ಅಂಶವು.

ಈ ಸಂಗತಿಗಳು ಕೆಳಗಿನ ಕೋಷ್ಟಕದಿಂದ ಹೆಚ್ಚು ಸ್ಪಷ್ಟವಾಗಿ ತಿಳಿಯುವವು.

ಅಭ್ಯಂತರ	ಜಾತಿ	ವರ್ಗ
ಇರಲಿಕ್ಕೆಂದು ಕಟ್ಟಿದ	ಇಮಾರತು	ಮನೆ
ಪೂಜಿಗೆಂದು ಕಟ್ಟಿದ	,,	ಗುಡಿ
ಹಣವಿಡುವದಕ್ಕೆಂದು ಕಟ್ಟಿದ	,,	ಬ್ಯಾಂಕು
ಆಟವಾಡಲಿಕ್ಕೆಂದು ಕಟ್ಟಿದ	,,	ನಾಟಕಗೃಹ
ಕಾಳುಗಳನ್ನಿಡುವದಕ್ಕೆಂದು ಕಟ್ಟಿದ	,,	ಧಾನ್ಯಾಗಾರ
ಕಲಿಯಲಿಕ್ಕೆಂದು ಕಟ್ಟಿದ	,,	ಸಾಲೆ
ಸಾಮಾನುಗಳನ್ನು ತಯಾರಿಸುವದಕ್ಕೆಂದು ಕಟ್ಟಿದ	,,	ಕಾರಖಾನೆ

ವ್ಯಾಖ್ಯೆಯ ನಿಯಮಗಳು :—ಮೇಲಾದ ವಿದ್ವಾಂಸರು ಇವುಗಳನ್ನು ವಿವರಿಸಿದ್ದು ಹ್ಯಾಗಂದರೆ,—

೧ ವ್ಯಾಖ್ಯೆಯುಳ್ಳಿ ವ್ಯಾಖ್ಯಾತಪದದ ಜಾತಿಯನ್ನು ಅದಕ್ಕೂ ವ್ಯಾಖ್ಯಾತ ಪದಕ್ಕೂ ಅಥವಾ ವರ್ಗಕ್ಕೂ ಇರುವ ಅಭ್ಯಂತರಗಳನ್ನು ಉಲ್ಲೇಖಿಸಿರಲಿಕ್ಕೆಬೇಕು. ಅಂದರೆ

ವಿವಕ್ಷಿತ ಪದದ ಮುಖ್ಯವಾದ ವಿಶೇಷಣಗಳನ್ನೆಲ್ಲ ವಿವರಿಸಿರಲಿಕ್ಕೆ ಬೇಕು.

೨ ವ್ಯಾಖ್ಯೆಯಲ್ಲಿ ವ್ಯಾಖ್ಯಾತ ಪದವನ್ನು ಸಮಾವೇಶಿಸಕೂಡದು.

೩ ವ್ಯಾಖ್ಯೆಯು ವಿಶಿಷ್ಟ ಪದವನ್ನು ಅಂದರೆ ವರ್ಗವನ್ನು ಪೂರ್ಣವಾಗಿ ಬೋಧಿಸುವಂಥಾದ್ದಿರಬೇಕು. ಅಂದರೆ ಆ ವಿಶಿಷ್ಟ ವರ್ಗದ ಪೂರ್ಣ ಬೋಧವಾಗಬೇಕೇ ಹೊರ್ತು ಸ್ವಲ್ಪಾದರೂ ಹೆಚ್ಚು ಕಡಿಮೆಯಾಗಕೂಡದು.

೪ ವ್ಯಾಖ್ಯೆಯಲ್ಲಿ ಕ್ಲಿಷ್ಟ ಭಾಷೆಯನ್ನಾಗಲಿ ಅಲಂಕಾರಿಕ ಭಾಷೆಯನ್ನಾಗಲಿ, ಸಂದಿಗ್ಧಭಾಷೆಯನ್ನಾಗಲಿ ಪ್ರಯೋಗಿಸಕೂಡದು. ನಕಾರಾತ್ ವಚನಗಳಿಂದ ವ್ಯಾಖ್ಯೆಯನ್ನು ಕಟ್ಟಲಿಕ್ಕೆ ಬರುವ ಪ್ರಸಂಗದಲ್ಲಿ ಪರೋಕ್ಷ ಅಥವಾ ನಿಷೇಧವಚನಗಳಿಂದ ವ್ಯಾಖ್ಯೆಯನ್ನು ಕಟ್ಟಬಾರದು.

(೫) ಪ್ರಯೋಗ, ನಿರೀಕ್ಷಣ, ವರ್ಗೀಕರಣ, ವಿಚಾರ ಈ ಸಂಗತಿಗಳು ಶಾಸ್ತ್ರದ ಮೂಲತತ್ವಗಳೆಂಬ ಅಧ್ಯಾಯದಲ್ಲಿ ವಿವೇಚಿಸಲ್ಪಡುವವು.

ಟಿಪ್ಪಣಿಯ ಪುಸ್ತಕಗಳು.

(೫) ಅವುಗಳ ಪ್ರಯೋಜನಗಳು.

೧. ಪಾಠವನ್ನು ಕಲಿಸುವಾಗ ತಿಳಿಸಿದ ತಪಶೀಲವನ್ನು ಇವುಗಳಲ್ಲಿ ಬರಕೊಳ್ಳಲಿಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಎಲ್ಲ ಸಂಗತಿಗಳನ್ನು ಸ್ಮರಣದಲ್ಲಿಡಲಿಕ್ಕೆ ಹವಣಿಸುವದು ಸರಿಯಲ್ಲ. ವಿದ್ಯಾರ್ಥಿಯು ಅಭ್ಯಾಸದಲ್ಲಿ ಮುಂದಡಿಯನ್ನಿಕ್ಕುತ್ತ ಸಾಗಿದಂತೆ ಸ್ಮರಣಶಕ್ತಿಗೆ ಹೆಚ್ಚು ಭಾರ ಬೀಳುವದಲ್ಲದೆ ದೊಡ್ಡ ಸಂಗತಿಗಳ ಹೊರೆಯೇ ಹೆಚ್ಚಾಗಿ ಸಣ್ಣ ಪುಟ್ಟ ಸಂಗತಿಗಳು ಅಡಿಗಿ ಹೋಗುತ್ತವೆ.

೨. ವಿದ್ಯಾರ್ಥಿಗಳು ಶಿಕ್ಷಕನನ್ನು ಅನುಕರಿಸುವರು ಅದರಿಂದ ಶಿಕ್ಷಕರ ಪದ್ಧತಿಯೇ ವಿದ್ಯಾರ್ಥಿಗಳಿಗೆ ಹತ್ತುವದು. ಈ ಟಿಪ್ಪಣಿಯ ಪುಸ್ತಕಗಳಿಂದ ಪದ್ಧತಿಯ ಸುಧಾರಣೆಗೆ ಸಹಾಯವಾಗುತ್ತದೆ.

೩. ಶಿಕ್ಷಕರು ಹೇಳಿದ ಪ್ರಧಾನ ಶಬ್ದಗಳನ್ನು ಬರಕೊಳ್ಳಲಿಕ್ಕೆ ಅನುವಾಗುತ್ತದೆ. ಈ ಶಬ್ದದಿಂದ ಪಾಠವು ನಿಶ್ಚಿತವಾಗಿ ಪ್ರತ್ಯುತ್ಪತ್ತಿಯು ಸುಲಭವೂ ಪೂರ್ಣವೂ ಆಗುತ್ತದೆ. ಪ್ರಧಾನ ಶಬ್ದಗಳು ಎಂದರೆ ಸೂಚಕ ಶಬ್ದಗಳು ಅಥವಾ ಸೂಚಕ ಶಬ್ದಸಮುಚ್ಚಯಗಳು; ಇವುಗಳ ಸಹಾಯದಿಂದ ವಿಧಾನಗಳನ್ನೂ ಶಬ್ದಗಳನ್ನೂ ಧ್ಯಾನದಲ್ಲಿಡಲಿಕ್ಕೆ ಸುಲಭವಾಗುತ್ತದೆ.

೪ ಟಿಪ್ಪಣಿಯ ಪುಸ್ತಕಗಳಿಂದ ಮನಸ್ಸಿನ ಏಕಾಗ್ರತ್ವವು ಬೆಳೆಯುತ್ತದೆ. ಪ್ರಯೋಜನಕರವಾದ ಟಿಪ್ಪಣಿಗಳನ್ನು ಬರೆಯಲಿಕ್ಕೆ ಸ್ಥಿರಚಿತ್ತವೂ ದೃಢಲಕ್ಷವೂಬೇಕು. ಮನಸ್ಸಿನ ಏಕಾಗ್ರತ್ವವನ್ನು ಸಾಧಿಸುವದೇ ಈ ಪುಸ್ತಕಗಳಿಂದಾಗುವ ದೊಡ್ಡಲಾಭವು.

೫. ಈ ಪುಸ್ತಕಗಳು ಲಕ್ಷವನ್ನು ದೃಢಗೊಳಿಸುತ್ತವೆ. ಪುನರಾವೃತ್ತಿಯ ಸೌಕರ್ಯವನ್ನು ಸಾಧಿಸುತ್ತವೆ. ಅದರಿಂದ ಇವು ಸ್ಮರಣಶಕ್ತಿಗೆ ನೆರವಾಗುತ್ತವೆಂದು ಹೇಳಬಹುದು.

೬. ಈ ಪುಸ್ತಕಗಳನ್ನಿಡುವದರಿಂದ ಬೇರೆ ಪುಸ್ತಕಗಳನ್ನು ಕೊಳ್ಳುವ ಕಾರಣ ಬೀಳುವದಿಲ್ಲ. ಅದರಿಂದ ದುಡ್ಡಿನ ಉಳತಾಯವಾಗುತ್ತದೆ.

೭. ಈ ಪುಸ್ತಕಗಳಿಂದ ವಿದ್ಯಾರ್ಥಿಗಳಿಗೆ ಪಾಠದ ಸಾರವನ್ನು ಸಂಕಲಿತವಾಗಿ ಬರೆಯುವ ಚಟಹತ್ತುತ್ತದೆ. ಅದರಿಂದ ಪ್ರಥಕ್ಕರಣ ಸಾಮರ್ಥ್ಯವೂ ಸಂಕ್ಷೇಪನ ಸಾಮರ್ಥ್ಯವೂ ಬೆಳೆಯುವವು.

೮. ಇದರಿಂದ ವಿದ್ಯಾರ್ಥಿಗಳ ಶಬ್ದ ಸಾಮಗ್ರಿಯೂ ಬೆಳೆಯುತ್ತದೆ. ವಾಕ್ಯರಚನಾ ಸಾಮರ್ಥ್ಯವಾದರೂ ಬಲಗೊಳ್ಳುತ್ತದೆ.

(೩) ಟಿಪ್ಪಣಿಯ ಪುಸ್ತಗಳಿಂದಾಗುವ ನಷ್ಟಗಳು.

೧. ಹಲವರು ಶಿಕ್ಷಕರು ತಾವು ತಯಾರಿಸಿದ ಟಿಪ್ಪಣಿಗಳನ್ನು ಬರಕೊಳ್ಳಲಿಕ್ಕೆ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಇ

ದರಿಂದ ಕಾಲಾಪವ್ಯಯವಾಗುವದೇ ಹೊರ್ತು ಪ್ರಯೋಜನ ವೇನೂ ಆಗುವದಿಲ್ಲ. ಟಿಪ್ಪಣಿಗಳಿಂದ ಪ್ರಯೋಜನವಾಗಬೇಕಾದರೆ ವಿದ್ಯಾರ್ಥಿಗಳೇ ಕಂಡು ಹಿಡಿದು ಅವುಗಳ ಸಹಾಯದಿಂದ ಪಾಠದ ಪ್ರತ್ಯುತ್ಪತ್ತಿಯಾಗುವಂತೆ ಅವನ್ನು ತಾವೇ ಬರಕೊಳ್ಳಲಿಕ್ಕೆ ಬೇಕು.

(ಸಶೀಷ.)

TEACHER'S WORK & DUTY *(Communicated)*.

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(ಟಿಪ್ಪನೇ ಪುಟದಿಂದ ಮುಂದೆ ಸಾಗಿದ್ದು.)

ಸೂಜ್ಞರಾದ ಬಂಧುಗಳೇ, ಶಿಕ್ಷಕನ ಕೆಲಸಕ್ಕೆ ಹಲವಂಶದಿಂದ ಅಯೋಗ್ಯರಾಗಿರುವ ನಮಗೆ ವಿದ್ಯಾಭಿರುಚಿಯು ತೀರ ಕಡಿಮೆ ಇರುವ ಸಮಾಜದಲ್ಲಿ ದೊರೆಯುವ ಈ ಅಲ್ಪ ಪ್ರಾಪ್ತಿಯಾದರೂ ಎಷ್ಟು ಸುಖಕರವಾಗಿರುತ್ತದೆಂಬದನ್ನು ನೋಡುವ; ಈ ಸೃಷ್ಟಿಯಲ್ಲಿ ಸುಖಪ್ರಾಪ್ತಿಗಾಗಿ ಪ್ರಾಣಿಮಾತ್ರಗಳು ಹೆಣಗುತ್ತಿರಲು, ಮನುಷ್ಯನು ಹಾಗೆ ಮಾಡುವದು ಆಶ್ಚರ್ಯವಲ್ಲ. ಯಾವನೊಬ್ಬ ಮನುಷ್ಯನಿಗಾಗುವ ಸುಖವು ಅವನ ಬಾಹ್ಯ ಸೌಂದರ್ಯಕ್ಕೆ ಸಮಪ್ರಮಾಣವಾಗಿರದೆ ಅವನ ಮನಸ್ಸಿನ ಪ್ರಸನ್ನತೆಗೂ ಆನಂದವೃತ್ತಿಗೂ ಸಮಪ್ರಮಾಣವಾಗಿರುವದು. ಬೇನೆಯಿಂದ ಇಲ್ಲವೆ ಶತ್ರುಬಾಧೆ ಮೊದಲಾದ ಸಂಕಟಗಳಿಂದ ತಳಮಳಿಸುವ ಅರಸನನ್ನು ನೋಡಿದರೆ ಈ ಮಾತಿನ ನಿಜತ್ವವು ತೋರುವದು ಅಂದಬಳಿಕ ಲಂಚಗುಳಿಯ ಲಂಚವು ಲಂಚಗುಳಿಗೂ, ಮಾಜಿಸ್ತ್ರೇಟನ ಪಗಾರವು ಮಾಜಿಸ್ತ್ರೇಟನಿಗೂ ಸರ್ವಾಂಶದಿಂದ ಸುಖಪ್ರದವಾಗಿರುವವೆಂದು ನಾವು ಎಣಿಸುತ್ತಿದ್ದರೆ ಅದು ಕೇವಲ ನಮ್ಮ ಭ್ರಮವಾಗಿರುವದು. ಯಾಕಂದರೆ ಲಂಚಗುಳಿಯ ಕಳ್ಳಕೆಲಸದಿಂದ ಅವನಿಗಾಗುವ ಮನಸ್ಸಿನ ಅಸಮಾಧಾನದ ಅನುಭವವು ನಮಗೆ ಆಗುವದಿಲ್ಲ. ಮತ್ತು ಮಾಜಿಸ್ತ್ರೇಟನಿಗಿರುವ ಜವಾಬದಾರಿಯು ಗೊಂದಲಡಕಡೆ

ಗೂ ನಮ್ಮ ಮನಸ್ಸು ಹೋಗುವದಿಲ್ಲ. ಆದ್ದರಿಂದ ನಾವು ಹೀಗೆ ಹೋಸ ಹೇಳುತ್ತೇವೆ. ಆದಿ ಕವಿಗಳೆಂದು ವಿಖ್ಯಾತರಾದ ವಾಲ್ಮೀಕಿ ಮುನಿಗಳು ಅಜ್ಞಾನಾವಸ್ಥೆಯಲ್ಲಿರುವಾಗ್ಗೆ ತಮ್ಮ ಸುಖದ ಕಡೆಗೆ ಲಕ್ಷ್ಯಕೊಡದೆ ಕೇವಲ ಕುಟುಂಬ ರಕ್ಷಣಾರ್ಥವಾಗಿ ಅನನ್ವಿತ ಕೃತ್ಯಗಳನ್ನು ಮಾಡಿ ದ್ರವ್ಯವನ್ನು ಸಂಪಾದಿಸಿದರು. ಆದರೆ ಆದ್ರವ್ಯವೇ ಅವರ ನಿಜವಾದ ಸುಖಕ್ಕೆ ಕಾರಣವಾಗಿದ್ದರೆ, ನಾರದರಂಥ ಸದ್ಗುರುಗಳ ಉಪದೇಶದಿಂದ ಅವರು ವಿರಕ್ತರಾಗುತ್ತಿದ್ದಿಲ್ಲ. ಮತ್ತು ಅವರು ಆದಿಕವಿಗಳೆಂಬ ಘನ ಕೀರ್ತಿಯನ್ನೂ ಹೊಂದುತ್ತಿದ್ದಿಲ್ಲ. ಸಾರಾಂಶ ಸುಖಕ್ಕೆ ದ್ರವ್ಯವೇ ಕಾರಣವಾಗಿರದೆ ಜ್ಞಾನವೂ ಕಾರಣವಾಗಿರುತ್ತದೆಂದು ತಿಳಿಯತಕ್ಕದ್ದು. ಜ್ಞಾನಾರ್ಜನೆಯನ್ನು ಮಾಡಲಿಕ್ಕೂ, ಜ್ಞಾನಜನ್ಯ ಆನಂದವನ್ನು ಹೊಂದಲಿಕ್ಕೂ ಶಿಕ್ಷಕನು ಇತರರಿಗಿಂತ ಹೆಚ್ಚು ಪಾತ್ರನಿರುತ್ತಾನೆಂದು ಹೇಳುವ ಕಾರಣವಿಲ್ಲ. ಅಂದಬಳಿಕ ದ್ರವ್ಯಪ್ರಾಪ್ತಿಯು ಕೆಲವಂಶದಿಂದ ಕಡಿಮೆಯಿದ್ದಾಗ್ಯೂ ಜ್ಞಾನಪಯೋಗದಿಂದ ನಾವು ಇತರರಿಗಿಂತ ಹೆಚ್ಚು ಆನಂದವನ್ನು ದೊರಕಿಸುವ ಸಂಭವವಿರುತ್ತದೆ. ಆದರೆ ಈ ಸಂಭವವು ಕಡಿಮೆ ಇರುವ ಇತರರಿಗೆ ಅಂದರೆ ಕೇವಲ ಲೌಕಿಕ ಕಾರ್ಯಗಳಲ್ಲಿಯೇ ಆಸಕ್ತರಾಗಿರುವವರಿಗೆ ಅವರ ಹೆಚ್ಚಿನ ಶ್ರಮ ಬಂಡವಲಗಳಿಗನುಸರಿಸಿ ಹೆಚ್ಚು ಧನಪ್ರಾಪ್ತಿಯಾದರೆ ನಮಗೆ ಅಸೂಯವೇಕೆ? ನಿಜವಾದ ಸುಖದ ತಿಳುವಳಿಕೆಯಾದ ಮೇಲೆ ಈ ದ್ರವ್ಯದ ಗೊಂದಲವು ಮನಸ್ಸನ್ನು ಎಪ್ಪು ಮಾತ್ರವೂ ನೋಯಿಸದು. ಇದಕ್ಕೆ ಪ್ರಾಚೀನಕಾಲದ ನಮ್ಮ ಪೂಜ್ಯಋಷಿಗಳ ಅರಣ್ಯವಾಸವು ಸಾಕ್ಷಿಯಾಗರುವದು. ಸಾರಾಂಶ ಸಮಾಜದ ವಿದ್ಯಾಭಿರುಚಿಗೂ, ಶಿಕ್ಷಕನ ಯೋಗ್ಯತೆಗೂ, ದೇಶಕಾಲಸ್ಥಿತಿಗೂ ಅನುಸರಿಸಿ ಶಿಕ್ಷಕರಿಗೆ ಯೋಗ್ಯವಾದ ಪ್ರಾಪ್ತಿಯು ದೊರೆಯುವದು. ಮತ್ತು ಜ್ಞಾನವನ್ನು ಸಂಪಾದಿಸಿ ನಿಜವಾದ ಸುಖವನ್ನು ದೊರಕಿಸಿಕೊಳ್ಳುವ ಮಾರ್ಗವು ಅವರಿಗೆ ಅನುಕೂಲವಾಗಿರುವದು. ಕಾರಣ ಇಲ್ಲದ್ದನ್ನು ಬಯಿಸಿ ಅವನು ವ್ಯಸನಪಡುವದು ಯೋಗ್ಯವಲ್ಲ.

ಇನ್ನು "xxx ಕೂತ ಹೆಂಗಸು ಸಹ ಶಿಕ್ಷಕನನ್ನು ಕಂಡು ಮೇಲಕ್ಕೆ ಏಳುವದಿಲ್ಲೆಂ"ದು ಹೊರಡಿಸುವ ಮೂರನೆಯ ಉದ್ಗಾರವು ಎಷ್ಟು ಲಜ್ಜಾಸ್ಪದವೂ, ಅಸಮಂಜಸವೂ ಆಗಿರುವದೆಂಬದನ್ನು ಎಷ್ಟು ಬರೆದರೂ ಸಮಾಧಾನವಾಗಲರಿಯದು! ಈ ಉದ್ಗಾರವನ್ನು ಶಿಕ್ಷಕರಂತೂ ಹೊರಗೆಡವಲಾಗದು. ಯಾಕಂದರೆ xx ಕೂತ ಹೆಂಗಸು ತನ್ನನ್ನು ಕಂಡು ಮೇಲಕ್ಕೇಳುವದಿಲ್ಲೆಂದು ಹೇಳುವ ಶಿಕ್ಷಕನು ತಾನು xx ಕೂತ ಹೆಂಗಸರನ್ನು ನೋಡುವ ನಾಚಿಕೆಗೇಡಿ ಮನುಷ್ಯನಿರುತ್ತೀನೆಂದು ಮೊದಲು ಬಡಂಬಟ್ಟಂತಾಗುವದು. ಅಂದ ಬಳಿಕ ಇಂಥ ನಾಚಿಕೆಗೇಡಿಗೆ ಮಾನವೆತ್ತಣದು? ಕಾಲಮಹಿಮೆಯು ವಿಚಿತ್ರವಾದದ್ದು. ಶಂಕರಾಚಾರ್ಯರ್ ಮಾಧವಾಚಾರ್ಯರಂಥ ಮಹಾತ್ಮರು ಆಚಾರ್ಯರೆಂಬ ಬಿರುದನ್ನೂ, ಕುಮಾರಿಲಭಟ್ಟರಂಥ ಮಹಾತ್ಮರು ಭಟ್ಟ ಎಂಬ ಬಿರುದನ್ನೂ ಪಂಡಿತರಿಂದ ದೊರಿಕಿಸಲಿಕ್ಕೆ ಯತ್ನ ಮಾಡುತ್ತ ಬಂದಿರುವ ಈ ಆರ್ಯಾವೃತ್ತದಲ್ಲಿ xx ಕೂತ ಹೆಂಗಸರಿಂದ ಮಾನವನ್ನು ದೊರಕಿಸುವಂಥ ಗುರುಗಳ ಉತ್ಪತ್ತಿಯಾಗಿರುವದು ಎಂಥ ದುಃಖದ ಸಂಗತಿಯು! ಅಜ್ಞಾನಿಗಳೂ, ಮಾನಗೇಡಿಗಳೂ ಆದ ಜನರಿಂದ ದೊರೆತ ಮಾನಕ್ಕೆ ಮಹತ್ವವಿರುವದೋ? ಶಿಕ್ಷಕನನ್ನು ನೋಡುವ ದೃಷ್ಟಿಯು ಅಂಥವರಲ್ಲಿರುವದೋ? ಇಂಥವರು ಶಿಕ್ಷಕನನ್ನು ತಮ್ಮ ಮನಸ್ಸಿಗೆ ಬಂದರೆ ದಿನಕ್ಕೆ ನೂರು ಸಾರೆ ಹೊಗಳುವರು. ಇಲ್ಲವೆ ಬೊಗಳುವರು. ಇಂಥವರ ಹೊಗಳುವಿಕೆಯಿಂದ ಉಬ್ಬುವ, ಬೊಗಳುವಿಕೆಯಿಂದ ಕೊರಗುವ ವಿಕಾರಕ್ಕೆ ಒಳಗಾಗದಿರುವದೇ ಯೋಗ್ಯ ಶಿಕ್ಷಕನ ಬಿರುದಾಗಿರುವದು. ಈ ವಿಕಾರಕ್ಕೆ ಒಳಗಾಗುವ ಶಿಕ್ಷಕನ ಸ್ಥಿತಿಯು ನಮ್ಮ ಒಬ್ಬ ಕನ್ನಡ ಸಾಧುವು ಅನ್ನುವಂತೆ "ತುಡುಗು ದನವಿನ ಕೊರಳು ಗುನ್ನೆ"ಯುತಾಗುವದು, ಆಶ್ಚರ್ಯವಲ್ಲ. ಮಾನದ ಆಶಿಬುರುಕರಾದ ನಾವು xx ಕೂತ ಹೆಂಗಸರೇ ಮೊದಲಾದ ಕ್ಷುಲ್ಲಕರು ಅಧಿಕಾರಸ್ಥರಿಗೆ ಕೊಡುವ ಮಾನವು ನಿಜವಾದ ಮಾನವಲ್ಲೆಂಬದನ್ನು ಲಕ್ಷದಲ್ಲಿಡತ

ಕ್ಕದ್ದು. ಶಿವ ವಿಷ್ಣು ಮೊದಲಾದ ಕಲ್ಯಾಣಕರವಾದ ದೇವತೆಗಳಿಗೆ ದೊರೆಯುವ ಮಾನವು ಅಬಾಧಿತವಾದದ್ದು. ಆದರೆ ದುರಗವ್ವ ಮರಿಯವ್ವ ಮೊದಲಾದ ಅಕಲ್ಯಾಣಕರವಾದ ದೇವತೆಗಳಿಗೆ ಪಿಡುಗು ಬರೆ ಮೊದಲಾದ ಸಂಕಟಗಳೊದಗಿದ್ದಾಗ್ಗೆ ಹೆಚ್ಚಿನ ಅಗಂತುಕ ಮಾನವು ದೊರೆಯುವದು.

(ಸಶೇಷ)

CORRESPONDENCE.

ಪತ್ರವ್ಯವಹಾರ.

ಗುರುವರ್ಯ ಮು॥ ರಾ॥ ರಾ॥ ಕನ್ನಡ ಶಾಲಾಪತ್ರಿಕೆಯ ವ್ಯವಸ್ಥಾಪಕರ ಚರಣ ಕಮಲಗಳಿಗೆ :—

ಎಡಿಟರ ಮಹಾರಾಯರೇ ತಮ್ಮ ಅಂದವಾದ ಪತ್ರಿಕೆಯಲ್ಲಿ ಶಿಷ್ಯನ ಎರಡು ಮಾತುಗಳಿಗೆ ಸ್ಥಳ ಸಿಕ್ಕೀತೆಂದು ಕೋರುತ್ತೇನೆ.

ಕನ್ನಡ ಅಕ್ಷರಗಳಲ್ಲಿ ಕೆಲವು ಅಕ್ಷರಗಳು ಅಂದರೆ :— ವ. ಪ ಮು. ಜ. ಡ ಮುಂತಾದವುಗಳು ಎರಡು ತರದಿಂದ ಬರೆಯಲ್ಪಡುತ್ತವೆ. ಎರಡೂ ಗಂಟು ಸಹಿತವಾಗಿ ಬರೆಯುವದು ಒಂದುತರ. ಒಂದು ಇಲ್ಲವೆ ಎರಡೂ ಗಂಟುಗಳನ್ನು ಲೋಪ ಮಾಡಿ ಬರೆಯುವದು ಮತ್ತೊಂದು ತರ. ಅಚ್ಚುಹಾಕಿದ ಪುಸ್ತಕಗಳಲ್ಲಿ ಮೊದಲನೇ ತರದ ಅಕ್ಷರಗಳು ಮಾತ್ರ ಇರುತ್ತವೆ. ಮೊದಲನೇ ತರದ ಅಕ್ಷರಗಳಿಗಿಂತ ಎರಡನೇ ತರದ ಅಕ್ಷರಗಳು ಸ್ವಲ್ಪು ಸ್ಥಳವನ್ನು ವ್ಯಾಪಿಸುವಂಥವೂ, ತೀವ್ರ ಬರಿಯಲಿಕ್ಕೆ ಬರುವಂಥವೂ ಆಗಿರುತ್ತವೆ. ವರ್ಣಗಳ ಉಚ್ಚ ನೀಚತ್ವಗಳ ಬಗ್ಗೆ ವಿಚಾರಮಾಡಿದರೆ, ಸ್ವಲ್ಪು ಸ್ಥಳವನ್ನು ವ್ಯಾಪಿಸುವಂಥವೂ ತೀವ್ರ ಬರೆಯಲಿಕ್ಕೆ ಬರುವಂಥವೂ ಉಚ್ಚಪ್ರತಿಯಲ್ಲಿ ಬರುತ್ತವೆ ಈ ಗುಣಗಳು ಎರಡನೇ ತರದ ಅಕ್ಷರಗಳಲ್ಲಿಯೇ ಹೆಚ್ಚಾಗಿರುವದಲ್ಲದೆ ಎರಡನೇ ತರದ ಅಕ್ಷರಗಳಿಂದ ಸಂದೇಹವೇನೂ ಬರುವದಿಲ್ಲ. ಆದ್ದರಿಂದ ಕೈ ಬರಹದಲ್ಲಿ ಮಾತ್ರ ರೂಢವಾಗಿರುವ ಈ ಎರಡನೇ ತರದ ಅಕ್ಷರಗಳನ್ನೇ ಎಲ್ಲ ಶಾಲೆಗಳಲ್ಲಿಯೂ ಅಚ್ಚುಹಾಕುವ ಪುಸ್ತಕಗಳಲ್ಲಿಯೂ

ಉಪಯೋಗಿಸಿ, ಮೊದಲನೆಯವುಗಳನ್ನು ಯಾಕೆ ತೆಗೆದು ಹಾಕಬಾರದು? ವರ್ಣಗಳನ್ನು ಬದಲು ಮಾಡುವ ಪದ್ಧತಿಯು ಬುನಾದಿಯಿಂದಲೇ ನಡೆದು ಬಂದಿರುತ್ತದೆ. ನಾವು ದರೂ ಆ ಪದ್ಧತಿಯನ್ನು ಅನುಸರಿಸುವದು ಯೋಗ್ಯವಲ್ಲ ವೋ ನೂರಿನ್ನೂರು ವರ್ಷಗಳ ಹಿಂದಿನ ಹ, ಅ, ಇ ಇತ್ಯಾದಿ ಕೆಲವು ವರ್ಣಗಳು ಈಗ ತೀರ ಬದಲಾಗಿ ಹ, ರ, ಳ ಎಂದು ರೂಢವಾಗಿವೆ. ಈ ಪ್ರಕಾರ ವರ್ಣಗನ್ನೇ ಈಗ ಬದಲಿಸಬೇಕೆಂದು ನಾನು ಹೇಳುವದಿಲ್ಲ. ಆದರೆ ರೂಢಿಯಲ್ಲಿದ್ದಂಥವುಗಳಲ್ಲಿಯೇ, ಉತ್ತಮವಾದವುಗಳನ್ನೇ ಪ್ರಚಾರದಲ್ಲಿ ತಂದು ಉಳಿದವುಗಳನ್ನು ತೆಗೆದು ಹಾಕುವದು ಸಯುಕ್ತಿಕವೆಂದು ತೋರುತ್ತದೆ. ಈ ಪ್ರಕಾರ ಮಾಡುವದರಿಂದ ಏನಾದರೂ ತೊಂದರೆಯುಂಟಾಗುತ್ತಿದ್ದರೆ; ಅದನ್ನು ನನ್ನ ವ್ಯವಸಾಯ ಬಂಧುಗಳಲ್ಲಿ ಯಾರಾದರೂ ತೀವ್ರ ತಿಳಿಸುವರೆಂದು ನಂಬಿದ್ದೇನೆ. ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು.

ತಮ್ಮ ಶಿಷ್ಯರಲ್ಲೊರ್ವ.

II

ನಿ. ವಿ. ಕೆಳಗಿನ ಲೆಕ್ಕವನ್ನು ಯಾರಾದರೂ ಅಂಕಗಣಿತದಿಂದ ಬಿಡಿಸಿ ತೋರಿಸುವರೆಂದು ನಂಬಿದ್ದೇನೆ.

೧. ಕೆಲವೊಂದು ಬಡ್ಡಿಯ ದಶದಂತೆ ೪೦೦ ರೂ. ಗಳನ್ನು ಸಾಲಾ ಒಯ್ದು, ಪ್ರತಿವರ್ಷ ೫೦ ರೂ. ದಂತೆ ೬ ವರ್ಷಗಳ ವರೆಗೆ ತಿರಿಗಿ ಕೊಡಲು ಬಡ್ಡಿಸಹಿತ ಸಾಲವೆಲ್ಲ ಹರಿಯಿತು ಆದರೆ ಬಡ್ಡಿಯ ದರವೇನು?

ಅಗರಖೇಡ
ತಾ|| ೨೯ ೧೦–೧೯೧೩.

ಶ್ರೀನಿವಾಸ ಅಪ್ಪಾಚಾರ್ಯ
ಅಗರಖೇಡ.

WURTH PRIZE EXAMINATION.
QUESTION PAPER,
ವರ್ಥಪ್ರಾಯಿಜ ಪರೀಕ್ಷೆಯ ಪ್ರಶ್ನಗಳು.
೩ನೇ ಕಾಗದ.

(೧) ವ್ಯಾಕರಣವೆಂದರೇನು? ವ್ಯಾಕರಣ ಶಬ್ದವು

ತ್ಪತ್ತಿಯನ್ನೂ ಪೂರ್ವದ ವ್ಯಾಕರಣಕಾರರು ಹೇಳಿದ ವ್ಯಾಕರಣದ ವ್ಯಾಖ್ಯೆಯನ್ನೂ ಹೇಳಿ, "ಶುದ್ಧವಾಗಿ ಬರೆಯಲಿಕ್ಕೂ ಓದಲಿಕ್ಕೂ ಮಾತಾಡಲಿಕ್ಕೂ ಕಲಿಸುವ ಶಾಸ್ತ್ರಕ್ಕೆ ವ್ಯಾಕರಣವೆಂಬ ಹೆಸರು." ಎಂಬ ವ್ಯಾಖ್ಯೆಯು ಯೋಗ್ಯಾಯೋಗ್ಯತೆಗಳನ್ನು ವಿವೇಚಿಸಿರಿ.

(೨) ಸಮಾಸವೆಂದರೇನು? "ಎರಡಾಗಲೀ ಕೆಲವಾಗಲೀ ಭಿನ್ನ ಪದಗಳು ಕೂಡಿ ಬೇರೊಂದು ಸಂಯುಕ್ತಾರ್ಥವನ್ನು ಹೇಳುವ ಒಂದು ಪದವಾದರೆ ಅದಕ್ಕೆ ಸಮಾಸವೆಂತಲೂ ಸಮಸ್ತಪದವೆಂತಲೂ ಅನ್ನುವರು" "ಸಮಾಸವೆಂದರೆ ಪದಗಳ ಸಂಕ್ಷೇಪವು" ಎಂಬ ಈ ವ್ಯಾಖ್ಯೆಗಳನ್ನು ಪರೀಕ್ಷಿಸಿ ಕೆಳಗೆ ಬರೆದವು ಸಮಾಸಗಳು ಅಹುದೋ ಅಲ್ಲೋ? ಅಹುದಾದರೆ ಯಾವ ಸಮಾಸಗಳು? ಅಲ್ಲವಾದರೆ ಯಾಕೆ ಅಲ್ಲ? ಎಂಬದನ್ನು ಬರೆಯಿರಿ.

ಸಂತೋಷಪಡು, ತುಡುಗು ಮೋಯು, ಮಾವಿನ ಮರ, ಮಾವಿನ ತಳಲು, ಊರಗೌಡ, ಬುತ್ತಿಯ ಗಂಟು, ಸಕ್ಕರೆ ತುಪ್ಪ ಅನಪಾನ, ಉತ್ತರಕಡೆ.

(೩) ಮೈಗ, ಸ್ಯ, ಹಾ, ಬಾನ್, ಪುಗಿ, ಪೊಗೆ, ಈ ಮೂಲ ಪ್ರಕೃತಿಗಳಿಂದ ಹುಟ್ಟಿದ ಎರಡೆರಡು ನಾಮಗಳನ್ನೂ; ಅಣ, ಅರ, ಆವಿ, ಗುಳ್, ತು. ಹ, ಈ ಪ್ರತ್ಯಯಗಳು ಧಾತುಗಳಿಗೆ ಹತ್ತಿ ಆದಂಥ ಎರಡೆರಡು ನಾಮಗಳನ್ನೂ ಬರೆಯಿರಿ.

(೪) ಕೆಳಗೆ ಬರೆದ ಶಬ್ದಗಳ ವ್ಯುತ್ಪತ್ತಿಯನ್ನು ಬರೆಯಿರಿ.

ಜೋಳ, ಮಂಡಿಗೆ, ಬಾಳಿಗೆ, ಸಂಡಿಗೆ, ವೈಯ್ಯಾರ, ಅಂಬಲಿ, ಸಂಬಳ, ಆರವಟ್ಟಿಗೆ, ಸಡ್ಡಕ, ನಾಗೊಂದಿಗೆ, ಬಚ್ಚಲಮನೆ, ಚಕ್ಕುಲಿ.

(೫) ಕೆಯ್, ಕೈ, ಮೆಯ್, ಮೈ, ಐದು, ಯ್ದಿದು, ಹೇಗೆ, ಹ್ಯಾಗೆ. ಏಕೆ, ಯಾಕೆ, ಆವ, ಯಾವ. ಈ ದ್ವಿವಿಧ ಪ್ರಯೋಗಗಳ ಯುಕ್ತಾಯುಕ್ತತೆಯನ್ನು ಪರೀಕ್ಷಿಸಿರಿ.

(೬) ಕೆಳಗೆ ಬರೆದ ವಾಕ್ಯಗಳೂ ಪ್ರಯೋಗಗಳೂ ಸ

ವಾಸೆಗಳೂ ಶುದ್ಧವೋ? ಅಶುದ್ಧವೋ? ಉತ್ತರವನ್ನು ಕಾರಣಸಹಿತ ಬರೆಯಿರಿ.

೧. ಆ ಟಳಿಕ ಒಂದೊಂದು ಕೂಸುಗಳನ್ನು ತೊಡೆಯಲ್ಲಿ ಟ್ಟುಕೊಂಡಿರುವ ಪೃಥ್ವೀ ಗಂಗಾದೇವಿಯರಿಂದ ಕೂಡಿ ಸೀತೆ ಬರುತ್ತಾಳೆ.

೨. ತಮ್ಮ ವರ್ಚಸ್ಸು ಎರಡನೆಯವರ ಮೇಲೆ ಬಿದ್ದು ಅವರ ಚಿತ್ತವು ತಮ್ಮ ಕಡೆಗೆ ಆಕರ್ಷಿಸಲ್ಪಡುವಂಥ ಮುತ್ತು ತಮ್ಮ ಮನಸ್ಸಿನೊಳಗಿನ ಅಭಿಪ್ರಾಯವು ಅವರ ಅಂತಃಕರಣದಲ್ಲಿ ಉತ್ತಮ ರೀತಿಯಿಂದ ಬಿಂಬಿಸುವಂಥ ಭಾಷಣದ ಅಸಾಧಾರಣ ಪ್ರಕಾರಕ್ಕೆ ವಕ್ತೃತ್ವವೆಂಬ ಹೆಸರು.

೩. ದೇಶಸ್ಥರು ಚೀನದೇಶದ ಕೊಡೆಗಳನ್ನು ಕಂಡೇನೆಂಬರೂ ಕಾಣುವದು ಅಪರೂಪ.

೪. ನಾವು ಮೂರು ಮಂದಿಗೆ ಸಾಲುವಷ್ಟು ಖಾದ್ಯವನ್ನು ಸಿದ್ಧಗೃಹಸ್ಥರಿಂದ ದೊರಕಿಸಿರುತ್ತೇನೆ.

೫. ನಂತರ ರಾಮಕೃಷ್ಣ ಮತ್ತು ಗೋವಿಂದನು ಊರಿಂದ ಬಂದರು.

೬. ದೊಡ್ಡವರಲ್ಲಿ ನಿಂದೆ ಹಾಗು ನೀಚ ಗುಣಗಳು ಇರಬಾರದು.

೭. ಮರಾಠಿ ಕನ್ನಡ ಭಾಷೆಗಳು, ಒಮ್ಮನಸ್ಸಿನವರು, ಹೊಲಗಷ್ಟ, ಕರಾರುಪತ್ರ.

(೭) (ಅ) ಗಳ್ ಎಂಬ ಆಗಮಕ್ಕೆ ಇರ್, ಅರ್, ದಿರ್, ವಿರ್ ಎಂಬ ಆದೇಶಗಳು ಎಲ್ಲೆಲ್ಲಿ ಬರುವವು ಇವುಗಳಲ್ಲಿ ಹೊಸಗನ್ನಡದಲ್ಲಿ ರೂಢವಾಗಿಲ್ಲದವು ಯಾವವು? ಈ ಆಗಮ ಪರವಾದಾಗ ಬಿಂದು ನಿತ್ಯವೆಲ್ಲಿ? ಅನಿತ್ಯವೆಲ್ಲಿ? ಉತ್ತರವನ್ನು ಉದಾಹರಣ ಸಹಿತ ಬರೆಯಿರಿ.

(ಬ) ಅಲ್ ಪ್ರತ್ಯಯವನ್ನು ಎಲ್ಲೆಲ್ಲಿ ಪ್ರಯೋಗಿಸುವರು. ಉದಾಹರಣ ಕೊಡಿರಿ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಟಸೋತ್ಕರ್ಷಮುಂ।
ಜಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ॥
ಭಯದಿಂದಿತ್ತವೆವೋದುವರ್ಗ ಸುಗುಣಂ ತೋರಲ್ಕೆ ಕೈಕೊಂಬುದೈ।
ಪ್ರಿಯಮಿಂದೋಷಪತಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೮] ಮೇ ೧೯೦೨. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ಹೋಳೀ ಹಬ್ಬದ ಸೂಟಿಯಲ್ಲಿ ಅಂದರೆ ಮಾರ್ಚ್ ತಿಂಗಳ ೨೬, ೨೭ನೇ ತಾರೀಖಿನ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನಾಲ್ಕೂ ಜಿಲ್ಲೆಗಳ ಅಧ್ಯಾಪಕರ ಪರಿಷತ್ತು ನೆರೆದಿತ್ತು. ಈ ಪರಿಷತ್ತನ್ನು ಕಾಲೇಜದ ಪ್ರಿನ್ಸಿಪಾಲರಾದ ರಾ. ಸಾ. ರೊದ್ದರಾಯರು ಮೆ. ಎಜ್ಯುಕೇಶನಲ್ ಇ. ದ. ಭಾ. ಸಾ. ಬ. ಇವರ ಅಪ್ಪಣೆಯನ್ನು ಪಡೆದು ಕೂಡಿಸಿದ್ದರು. ಮೊದಲೇ ಆಯಾ ಜಿಲ್ಲೆಗಳ ಡಿ. ಎಜ್ಯುಕೇಶನಲ್ ಇನಸ್ಪೇಕ್ಟರರಿಗೆ ಪತ್ರ ಬರೆದು ಸಭೆಯ ಉದ್ದೇಶವನ್ನು ತಿಳಿಸಿದ್ದಲ್ಲದೆ, ಸೂಟಿಯ ಅವಧಿಯಲ್ಲಿ ಸುಧಾರಣಾಪ್ರಿಯರಾದ ಕೆಲ ಜನ ಅಧ್ಯಾಪಕರನ್ನು ಕಳಿಸಿಕೊಡಬೇಕೆಂದು ಸೂಚಿಸಿದ್ದರು. ಅದೇ ಮೇರೆಗೆ ಆಯಾ ಜಿಲ್ಲೆಯ ವಿದ್ಯಾಧಿಕಾರಿಗಳು ಕೆಲವು ಜನ ಅಧ್ಯಾಪಕರನ್ನು ಕಳಿಸಿದ್ದರು. ವಿಜಾಪುರ ಜಿಲ್ಲೆಯಿಂದ ೨೩, ಧಾರವಾಡ ಜಿಲ್ಲೆಯಿಂದ ೪೮, ಬೆಳಗಾವ ಜಿಲ್ಲೆಯಿಂದ ೬ ಮತ್ತು ಕಾರವಾರ ಜಿಲ್ಲೆಯಿಂದ ಒಬ್ಬನು ಅಂತು ೭೮ ಮಂದಿ ಅಧ್ಯಾಪಕರು ಬಂದಿದ್ದರು.

ಯೂನಿಯನ್ ಇಯತ್ತೆಗಳನ್ನು ನಾವು ೧೯೦೦ನೇ ಇಸವಿಯ ಅಗಷ್ಟ, ಸಪ್ಟಂಬರ ತಿಂಗಳ ಮಹಪತ್ರಿಕೆಯಲ್ಲಿ ಮುದ್ರಿಸಿದ್ದೇವೆಂಬದು ವಾಚಕರಿಗೆ ಗೊತ್ತುಂಟು. ಮುಂದೆ ಆ ಇಯತ್ತೆಗಳ ಅಭ್ಯಾಸಕ್ರಮದ ಸಂಬಂಧದಿಂದ ಮೊದಲು ಧಾರವಾಡದಲ್ಲಿ ನಡೆದ ವಿದ್ಯಾಭಿಮಾನಿಗಳ ಪರಿಷತ್ತಿನಲ್ಲಿಯೂ ಬಳಿಕ ಪ್ರಣೆಯಲ್ಲಿ ಮೆ. ಡಾಯಿರೆಕ್ಟರ ಸಾಹೇಬರವರ ಅಧ್ಯಕ್ಷತೆಯ ಕೆಳಗೆ ನೆರೆದ ಇನಸ್ಪೆಕ್ಟರರ ಹಾಗು ಪ್ರಿನ್ಸಿಪಾಲರ ಪರಿಷತ್ತಿನಲ್ಲಿಯೂ ಚರ್ಚೆ ನಡೆದು ಕಡೆಯಲ್ಲಿ ಸರ್ವಾನುಮತದಿಂದ ಪ್ರಾಥಮಿಕ ಶಾಲೆಯ ಅಭ್ಯಾಸದ ಈಗಿನ ಇಯತ್ತೆಗಳು ಗೊತ್ತು ಮಾಡಲ್ಪಟ್ಟವು. ಈ ಮೊದಲು ಪ್ರಸಿದ್ಧಿಸಿದ ಅಭ್ಯಾಸದಲ್ಲಿ ಹೇಳತಕ್ಕಂಥ ಹೆಚ್ಚು ಕಡಿಮೆಗಳಾಗಿಲ್ಲ ಈ ಹೊಸ ಇಯತ್ತೆಗಳಲ್ಲಿ ಬಿನ್ನ ಇಯತ್ತೆಯಿಂದ ಏನೇ ಇಯತ್ತೆಯವರೆಗೆ ಯಾವತ್ತು ಇಯತ್ತೆಗಳಲ್ಲಿ ವಸ್ತು ಪಾಠಗಳನ್ನೂ ಶಾಸ್ತ್ರೀಯ ಪಾಠಗಳನ್ನೂ ಶೇರಿಸಿರುವರು. ಈ ವಿಷಯಗಳು ಬಹುಜನ ಮಾಸ್ತರರಿಗೆ ಹೊಸವೆನಿಸುವವು. ಇವುಗಳನ್ನು ಕಲಿಸುವ ಸರಿಯಾದ ಪದ್ಧತಿಯು ಯಾವದು? ಯಾವ ಯಾವ ಇಯತ್ತೆಗಳಿಗೆ ಯಾವ ಯಾವ ವಿಷಯದ ಪಾಠಗಳನ್ನು ಕಲಿಸಬೇಕು? ಪಾಠಾನುಕ್ರಮವು ಹ್ಯಾಗಿರಬೇಕು? ಮುಂತಾದ ಅಪರಿಚಿತ ಸಂಗತಿಗಳನ್ನು ಸಕಾಸ್ತವಾಗಿ ತಿಳಿಸಿಕೊಡಬೇಕೆಂಬದೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಆಯಾ ಜಿಲ್ಹೆಯ ಡೆಪೂಟಿ ಇನಸ್ಪೆಕ್ಟರರು ತಮ್ಮ ತಮ್ಮ ಜಿಲ್ಹೆಯಲ್ಲಿ ಸಂಚರಿಸುವಾಗ ಕೆಲವೊಂದು ಸ್ಥಳದಲ್ಲಿ ನಿಂತು ಸುತ್ತುಮುತ್ತಲಿನ ಅಧ್ಯಾಪಕರನ್ನು ಬರ ಮಾಡಿಕೊಂಡು ಈ ಪಾಠಗಳ ಸಂಬಂಧದಿಂದ ತಕ್ಕಷ್ಟು ಮಾಹಿತಿಯನ್ನು ಮಾಡಿಕೊಟ್ಟಿರುವರು. ಆದರೂ ಶಿಕ್ಷಣ ಪದ್ಧತಿಯು ವ್ಯಾಸಂಗವುಳ್ಳ ಕಾಲೇಜದ ಪ್ರಿನ್ಸಿಪಾಲರು ಈ ಕಾರ್ಯವನ್ನು ಕೈಕೊಂಡದ್ದು ಯೋಗ್ಯವೂ ಅಭಿನಂದನೀಯವೂ ಆದ ಸಂಗತಿಯೆಂದು ನಾವು ನಿರ್ವಿವಾದವಾಗಿ ಹೇಳುತ್ತೇವೆ.

ಈ ಸಭೆಯು ಸರ್ವ ಮಜಕೂರ ಮಾರ್ಚ ತಿಂಗಳ ತಾರೀ

ಬು ೨೬, ೨೭ ಈ ಎರಡು ದಿವಸ ಬೆಳಿಗಿನ ೧೧ ರಿಂದ ೫ ರ ವರೆಗೆ ನಡೆಯಿತು. ಮಧ್ಯದಲ್ಲಿ ಅಂದರೆ ೨ ರಿಂದ ೩ ರ ವರೆಗೆ ೧ ತಾಸು ವಿಶ್ರಾಂತಿ ದೊರೆಯುತ್ತಿತ್ತು. ಸಭೆಗೆ ಬಂದ ಅಧ್ಯಾಪಕರನ್ನು ಕಾಲೇಜದ ನೆರೆಯಲ್ಲಿರುವ ರಾ. ರೊದ್ದ ತಿರುಮಲರಾಯರ ಬಂಗಲೆಯಲ್ಲಿ ಇಳಿಸಿದ್ದರು. ಅವರ ಸ್ನಾನಾನ್ನಪಾನಾದಿಗಳು ಕಾಲೇಜದ ಬೋರ್ಡಿಂಗಿನಲ್ಲಿಯೇ ನಡೆಯುತ್ತಿದ್ದವು. ಈ ಬಗೆಯಿಂದ ವ್ಯವಸ್ಥಿತವಾಗಿ ಸಾಗಿದ ಸಭೆಯು ೨೭ನೇ ತಾರೀಖಿನ ರಾತ್ರಿಯ ೩ ಘಂಟೆಗೆ ಮುಗಿಯಿತು. ಮರುದಿವಸ ಬಂದ ಅಧ್ಯಾಪಕರೆಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ತಿರುಗಿ ಹೋದರು. ಧಾರವಾಡ ಸ್ಕೂಲ ಬೋರ್ಡ ಇನ್ಸ್‌ಪೆಕ್ಟರಮನ್‌ರು ತಮ್ಮ ಶಹರದೊಳಗಿನ ಯಾವತ್ತು ಅಧ್ಯಾಪಕರಿಗೂ ಈ ಸಭೆಗೆ ಹೋಗಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದರು.

ಮೊದಲನೇ ದಿವಸ (ತಾ. ೨೬ನೇ ಮಾರ್ಚ).

ಈ ದಿವಸ ಬೆಳಿಗಿನ ೧೦ ಘಂಟೆಗೆ ಸರಿಯಾಗಿ ಪ್ರಾಕ್ಟಿಸಿಂಗ ಸ್ಕೂಲಿನ ನಡುವಿನ ಕೋಣೆಯಲ್ಲಿ ಸಭೆಯು ನೆರೆಯಿತು. ಸಭಾಕಾರ್ಯವನ್ನು ಆರಂಭಿಸುವ ಮೊದಲು ಸಭೆಯ ಜನರೂ ಅಧ್ಯಕ್ಷರೂ ಆದ ರೊದ್ದರಾಯರು ನುಡಿದದ್ದೇನಂದರೆ :—ಅಧ್ಯಾಪಕರೇ! ನಾವು ಈ ಹೊತ್ತು ನಿಮ್ಮನ್ನೆಲ್ಲ ಇಲ್ಲಿಗೆ ಕರಿಸಿದ ಉದ್ದೇಶವು ನಿಮಗೆ ಬಹುತರ ಗೊತ್ತಿರಬಹುದು. ಸರ್ ೧೮೮೨ರಲ್ಲಿ ಗೊತ್ತು ಪಡಿಸಿದ ಅಭ್ಯಾಸದ ಇಯತ್ತೆಗಳಂತೆ ನೀವು ಈಗ ಕಲಿಸುತ್ತೀರಷ್ಟೇ. ಈ ವರ್ಗಶಿಕ್ಷಣವು ಪಾಶ್ಚಿಮಾತ್ಯರಿಂದ ಬಂದಂಥಾದ್ದು. ಈ ಪದ್ಧತಿಯು ದಯಾಳುಗಳಾದ ಇಂಗ್ಲಿಷ ಸರಕಾರದವರು ಈ ದೇಶದ ರಾಜಸೂತ್ರವನ್ನು ಕೈಕೊಂಡಂದಿನಿಂದ ಬಳಿಕೆಯಲ್ಲಿ ಬಂದಿರುತ್ತದೆ. ಆದರೂ ಆರಂಭದಲ್ಲಿ ಅಭ್ಯಾಸದ ಸಂಬಂಧದಿಂದ ಇಯತ್ತೆಗಳು ಗೊತ್ತು ಮಾಡಲ್ಪಟ್ಟಿದ್ದಿಲ್ಲ. ಮುಂದೆ ಕೆಲವು ದಿವಸಗಳಾದ ಬಳಿಕ ಇಯತ್ತೆಗಳು ಪ್ರಚಾರದಲ್ಲಿ ಬಂದವು. ಆದರೆ ದಿನದಿನಕ್ಕೆ ಲೋಕವು ಹೆಚ್ಚು ಹೆಚ್ಚು ಸುಧಾರಿಸುತ್ತ ನಡೆದಂತೆ ಜನರ ಮನಸ್ಸಿನಲ್ಲಿ ಹಾಗು ವಿದ್ಯಾ

ಖಾತೆಯ ಅಧಿಕಾರಿಗಳ ಮನಸ್ಸಿನಲ್ಲಿ ಶಿಕ್ಷಣ ಕ್ರಮದಲ್ಲಿಯೂ ವಿಷಯಗಳಲ್ಲಿಯೂ ಸುಧಾರಣೆಯ ಅವಶ್ಯಕತೆಯು ಮೊಳೆದೋರಿತು. ಅದರಿಂದಲೇ ಸರ್ ೧೯೦೧ನೇ ಇಸವಿಯಲ್ಲಿ ವಿದ್ವಾಂಸರಾದ ಹಲವು ಜನ ವಿದ್ಯಾಭಿಮಾನಿಗಳು ಒಟ್ಟುಗೂಡಿ ಹೊಸ ಇಯತ್ತೆಗಳನ್ನು ಸಿದ್ಧ ಮಾಡಿದರು. ಆ ಇಯತ್ತೆಗಳಲ್ಲಿ ಹಲವು ಚಿಕ್ಕ ಪುಟ್ಟ ಸಂಗತಿಗಳನ್ನು ತಿದ್ದಿ ೧೯೦೨ ೧೯೦೩ ಈ ಇಸವಿಯಿಂದ ಇವುಗಳನ್ನು ಒಳಿಕೆಯಲ್ಲಿ ತರುವದೆಂದು ಸರಕಾರದವರು ಗೊತ್ತು ಪಡಿಸಿದ್ದಾರೆ. ಇವುಗಳಲ್ಲಿ ವಸ್ತುಪಾಠಗಳನ್ನೂ ಶಾಸ್ತ್ರೀಯ ಪಾಠಗಳನ್ನೂ ಆರಂಭದಿಂದ ಏಳೂ ಇಯತ್ತೆಗಳಲ್ಲಿ ಕೇರಿಸಿರುವರಷ್ಟೇ. ಆದರೆ ಈ ವಿಷಯಗಳು ನಿಮಗೆ ಹೊಸವಾಗಿರುವವು. ಇವನ್ನು ಸಶಾಸ್ತ್ರವಾಗಿ ಹ್ಯಾಗೆ ಕಲಿಸಬೇಕೆಂಬದನ್ನು ನಿಮಗೆ ಈ ಎರಡು ದಿವಸದಲ್ಲಿ ತೋರಿಸುವವರಿದ್ದೇವೆ ಈ ವಸ್ತುಪಾಠವನ್ನು ಕಲಿಸುವದೂ ಕಲಿಯುವದೂ ಸಾಮಾನ್ಯವಾದದ್ದಲ್ಲ. ಸುಶಿಕ್ಷಣದಿಂದಲೇ ಪಾಶ್ಚಿಮಾತ್ಯರು ನಮಗಿಂತ ಶ್ರೇಷ್ಠರಾಗಿರುವರು. ಭೌತಿಕ ಶಾಸ್ತ್ರದಲ್ಲಿ ಅವರ ಬುದ್ಧಿ ಹರಿಯುವಂತೆ ನಮ್ಮದು ಹರಿಯುವದಿಲ್ಲ. ಅದರಿಂದಲೇ ನಾವು ಪರಿಪರಿಯ ವಿಪತ್ತುಗಳನ್ನು ಅನುಭೋಗಿಸುತ್ತೇವೆ ಈಗಿನ ಪದ್ಧತಿಯಿಂದ ಕೇವಲ ಮನಸ್ಸುಧಾರಣೆಯೂ ಬುದ್ಧಿಪ್ರಾಗಲ್ಭ್ಯವೂ ಆಗುತ್ತದೆ. ಮಾನವನ ಇಂದ್ರಿಯಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯವು ಹುಟ್ಟುವದಿಲ್ಲ. ಇನ್ನು ಈ ಪಾಠಗಳನ್ನು ಯಾವ ಕ್ರಮದಿಂದ ಕಲಿಸಬೇಕೆಂಬದನ್ನು ನಮ್ಮ ೧ನೇ ಅ. ರಾದ ಎಲ್ ಸಿ. ಈ. ರಾಮರಾಯರು ಹೇಳುವರು. ಅದನ್ನು ಚಿತ್ತಗೊಟ್ಟು ಕೇಳಿಕೊಳ್ಳಿರಿ. ಹಾಗು ಕಾಲೇಜದ ವಿದ್ಯಾರ್ಥಿಗಳು ಕಲಿಸುವ ಕ್ರಮವನ್ನು ಮನಮುಟ್ಟಿ ಪರೀಕ್ಷಿಸಿ ಅದರಲ್ಲಿ ಕಂಡುಬರುವ ಕುಂದುಕೊರತೆಗಳನ್ನೂ ಆಕ್ಷೇಪಗಳನ್ನೂ ಬೈಲಿಗಿಕ್ಕಿರಿ. ಅವುಗಳ ಸಂಬಂಧದಿಂದ ಚರ್ಚೆ ನಡಿಸಿ ಬಂದ ಸಂಶಯಗಳನ್ನು ಕಳಕೊಳ್ಳಿರಿ. ಈ ಪಾಠಗಳನ್ನು ಕಲಿಸುವ ಪದ್ಧತಿ ವಿಷಯಗಳನ್ನು ಸಿದ್ಧ ಮಾಡಿಕೊಳ್ಳುವ ರೀತಿ ಮುಂತಾದವುಗಳನ್ನು ನಿಃಸಂಶಯವಾಗಿ ಅರಿತುಕೊಳ್ಳಿ

ರಿ. ಇಷ್ಟು ಕೆಲಸವು ಕೈಗೂಡಲು ಈ ಸಭೆಯ ಉದ್ದೇಶವು ಸಫಲವಾಯಿತೆಂದು ತಿಳಿದುಬಿಡುವೆವು. ಇನ್ನು ಮಿ. ಕುಲಕರ್ಣಿ ಯವರು ಈ ಪಾಠಗಳ ಉದ್ದೇಶವನ್ನೂ ವಿಷಯಸಿದ್ಧತಾ ಕ್ರಮವನ್ನೂ ನಿಮಗೆ ಹೇಳುವರು.

ಬಳಿಕ ಎಲ್. ಸೀ. ಈ. ರಾಮರಾಯರು:— ನೆರೆದಿರುವ ಎಲ್ಲ ಅಧ್ಯಾಪಕರೇ ನಿಮ್ಮನ್ನು ಕಂಡು ನನಗೆ ಬಹು ಸಂತೋಷವಾಗಿರುತ್ತದೆ. ನಿಮ್ಮಲ್ಲಿ ಕೆಲವರು ನನ್ನ ಸ್ವಂತ ಶಿಷ್ಯರಾಗಿರುವರು. ಕೆಲವರು ಪರಂಪರೆಯಿಂದ ಶಿಷ್ಯರಿಸಿಕೊಳ್ಳುವರು. ಆದ್ದರಿಂದ ನಿಮಗೊದಗುವ ತೊಂದರೆಗಳನ್ನು ನೀಗಲಿಕ್ಕೆ ಕೈಲಾದಮಟ್ಟಿಗೆ ಯತ್ನಿಸುವದು ನನ್ನ ಕರ್ತವ್ಯವು. ಈ ಹೊತ್ತಿನ ಸಭೆಯ ಉದ್ದೇಶವನ್ನು ರಾ. ಸಾ. ರವರು ಮೊದಲೇ ಹೇಳಿರುವರು. ಆದರೆ ನಾನು ಈ ವಸ್ತುಪಾಠಗಳ ಉದ್ದೇಶವೇನೆಂಬದನ್ನು ಸ್ವಲ್ಪ ಶಬ್ದಗಳಲ್ಲಿ ಹೇಳಿ ಈ ಪಾಠಗಳನ್ನು ಕಲಿಸುವ ಕ್ರಮವನ್ನೂ ಪದ್ಧತಿಯನ್ನೂ ವಿಶದವಾಗಿ ಹೇಳುವೆನು. ಬಾಲಕರ ಇಂದ್ರಿಯಗಳನ್ನು ದುಡಿಯಹಚ್ಚಿ ಅವುಗಳ ಶಕ್ತಿಯನ್ನು ಬೆಳಿಸುವದೂ ಈ ಇಂದ್ರಿಯಶಕ್ತಿಯ ಸಹಾಯದಿಂದ ಅವರ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುವದೂ ವಸ್ತುಪಾಠಗಳ ಮುಖ್ಯೋದ್ದೇಶವು. ಸೃಷ್ಟಿಯನ್ನು ನೋಡಿ ಅದರಲ್ಲಿರುವ ಪದಾರ್ಥಗಳನ್ನು ಪರೀಕ್ಷಿಸಿ ಅವುಗಳ ಗುಣಧರ್ಮಗಳನ್ನು ಸಾಧ್ಯವಾದ ಮಟ್ಟಿಗೆ ಅರಿತುಕೊಳ್ಳುವದೂ ಸೃಷ್ಟಿಯ ವ್ಯಾಪಾರಗಳ ಕಾರ್ಯಕಾರಣಭಾವನ್ನು ಗೊತ್ತುಹಚ್ಚುವದೂ ವಿದ್ಯೆ ಎನಿಸುವದು. ಇದೇ ನಿಜವಾದ ಪ್ರಯೋಜನಕರವಾದ ಸುಖಸಾಧನದ ವಿದ್ಯವು. ಹಲವು ಸಂಗತಿಗಳನ್ನು ಬಾಯಿಪಾಠ ಮಾಡಿದರೆ ಕಾರ್ಯವು ಕೈಗೂಡದು. ಇದಕ್ಕೆ ಸ್ವಂತ ಪ್ರಯತ್ನ ಬೇಕು. ಒಂದು ವರೆ ವರ್ಷದ ವಯಸ್ಸಿನ ಮಕ್ಕಳು ತಮ್ಮ ಸುತ್ತಲಿರುವ ಪದಾರ್ಥಗಳನ್ನು ನೋಡಿ ಮಾತು ಬರದಿದ್ದರೂ ಸನ್ನೆಯಿಂದ ಇವು ಏನು? ಯಾಕೆ ಬೇಕು? ಮುಂತಾದ ಪ್ರಶ್ನೆಗಳನ್ನು ಬಾಲಕರಿಗೆ ಕೇಳುವದನ್ನು ನೋಡಿರುವಿರಿ ಇದಲ್ಲದೆ ಇದೇ ಬಾಲಕರೆ, ಕೈಯೊಳಗೆ ಸಿಕ್ಕ ಒಡಿವೆಗಳನ್ನು ಹಿಡಿದು, ಎತ್ತಿ,

ದೃಷ್ಟಿಸಿ, ನೆಕ್ಕಿ ಬಗೆದು ಅವುಗಳನ್ನು ಯಥಾಶಕ್ತಿ ಪರೀಕ್ಷಿಸುವದೂ ಕಂಡ ಮಾತಾಗಿರುವದು. ಆದರೆ ಈ ಈಶ್ವರದತ್ತ ಬಲವನ್ನು ಸರಿಯಾಗಿ ಬೆಳಿಸಿ ಬಾಲಕರ ಇಂದ್ರಿಯಶಕ್ತಿಯನ್ನೂ ಮಾನಸಿಕ ಸಾಮರ್ಥ್ಯವನ್ನೂ ಬೆಳಿಸುವ ಕೆಲಸವನ್ನು ಅಂದರೆ ಸುಶಿಕ್ಷಣವನ್ನು ಸರಿಯಾದ ಪದ್ಧತಿಯಿಂದ ಸಾಗಿಸುವ ಅಧ್ಯಾಪಕರು ಅಪರೂಪ ಈ ಸುಶಿಕ್ಷಣದಿಂದ ಮನುಷ್ಯನು ಪೂರ್ಣನಾಗುವನು. ಅವನಲ್ಲಿ ಸಾಮಾನ್ಯ ಸಿದ್ಧಾಂತಗಳನ್ನು ಸ್ಥಾಪಿಸುವ ಶಕ್ತಿ ಬರುವದು ಹೊಸ ಹೊಸ ಪ್ರಯೋಗಗಳನ್ನು ಮಾಡಿ ನೋಡುವ ಚಟ ಹತ್ತುವದು. ಮೂಢ ಶ್ರದ್ಧೆಯು ಓಡಿ ಹೋಗುವದು. ಉದ್ಯೋಗ ಮಾಡುವ ಹವ್ಯಾಸವೂ ಶಾಸ್ತ್ರೀಯ ಸಂಗತಿಗಳ ಜ್ಞಾನವೂ ಪ್ರಾಪ್ತವಾಗುವವು. ಸಾರಾಂಶ, ಈ ಪಾಠಗಳನ್ನು ಸರಿಯಾಗಿ ಕಲಿತ ವಿದ್ಯಾರ್ಥಿಯು ಇಹಪರ ಸುಖಗಳನ್ನು ಅಲ್ಪಾಯಾಸದಿಂದ ಗಳಿಸಿಕೊಳ್ಳುವನು.

ಇನ್ನು ಈ ಪಾಠಗಳನ್ನು ಕಲಿಸುವ ಮೊದಲು ಮಾಸ್ತರನು ಹುಡುಗರ ಯೋಗ್ಯತೆಯನ್ನು ಅರಿತುಕೊಳ್ಳುವದು ಅವಶ್ಯವು. ಇದಕ್ಕೆ ನಮ್ಮಲ್ಲಿ ಅಧಿಕಾರ ಲಕ್ಷಣವೆನ್ನುವರು. ಆ ಅಧಿಕಾರವು ಅವನಲ್ಲುಂಟೆಂದು ಗೊತ್ತಾದರೆ ಆ ವಿಷಯವನ್ನು ಹೇಳಬೇಕು. ಇಲ್ಲವಾದರೆ ಅದು ಅವನಿಗೆ ನಿಃಸಾರವಾಗಿ ನಿರರ್ಥಕವೆನಿಸುವದು. ಹಾಗು ಅವನ ಕಾಲಾಪವ್ಯಯವೂ ಆಗುವದು. ಅಥವಾ ಗಡಬಡಿಸಿ ಏನೂ ತಿಳಿಯದೆ ಬರಿದೆ ಹೊತ್ತು ಕಳಕೊಂಡಂತಾಗುವದು. ಆದ್ದರಿಂದ ಮಾಸ್ತರರು ಯಾವ ಇಯತ್ತೆಯ ಹುಡುಗರಿಗೆ ಯಾವ ವಿಷಯವನ್ನು ಎಷ್ಟುಮಟ್ಟಿಗೆ ಕಲಿಸತಕ್ಕದ್ದೆಂಬದನ್ನು ನಿರ್ಣಯಿಸಬೇಕು. ಇದಕ್ಕೇನು ವಿಶೇಷ ಶ್ರಮ ಪಡುವ ಕಾರಣವಿಲ್ಲ. ಅವರಿಗೆ ಪರಿಚಿತವಾದ ವಸ್ತುವನ್ನು ಎದುರಿನಲ್ಲಿಟ್ಟು ಅವರಿಂದ ಅದರ ಸಂಬಂಧವಾಗಿ ಗೊತ್ತಿದ್ದ ಸಂಗತಿಗಳನ್ನು ಕೇಳಿಕೊಂಡು ಅವುಗಳ ಸಹಾಯದಿಂದಲೇ ಗೊತ್ತಿಲ್ಲದ ಸಂಗತಿಗಳನ್ನು ಪ್ರಯೋಗ ಪರೀಕ್ಷಣಗಳಿಂದ ಅವರ ಮನವರಿಕೆಯಾಗುವಂತೆ ತಿಳಿಸಿಕೊಡಬೇಕು. ಅಲ್ಲದೆ ಯಾವ ವಿಷ

ಯವನ್ನು ಕಲಿಸತಕ್ಕದ್ದೆಂಬದನ್ನಾದರು ಗೊತ್ತು ಮಾಡಿಡು
ವದು ಅವಶ್ಯವು. ಆರಂಭದಲ್ಲಿ ಬಾಲಕರು ತಮ್ಮ ಎಡ
ಬಲದಲ್ಲಿರುವ ವಸ್ತುಗಳನ್ನು ಅರಿಯಲಪೇಕ್ಷಿಸುವರೆಂಬದು
ಸರ್ವಶ್ರುತವು. ಶಿಕ್ಷಕರಾದರೂ ಇದೇ ತತ್ವವನ್ನು ಅವಲಂ
ಬಿಸುವದು ಶ್ರೇಯಸ್ಕರವು. ಮಾಸ್ತರನು ಇವೆರಡು ಮಾ
ತುಗಳನ್ನು ಗೊತ್ತು ಮಾಡಿದ ಬಳಿಕ ತನ್ನ ಯೋಗ್ಯತೆಯನ್ನು
ನೋಡಿಕೊಳ್ಳಬೇಕು. ಅಂದರೆ ತಾನು ಕಲಿಸುವ ಪಾಠವ್ಯಾ
ವದು? ಅದಕ್ಕಾಗಿ ಬೇಕಾಗುವ ಉಪಕರಣಗಳಾವವು?
ಮಾಡತಕ್ಕ ಪ್ರಯೋಗಗಳೂ ಕೊಡತಕ್ಕ ದೃಷ್ಟಾಂತಗಳೂ
ವಿಷಯ ವಿವರಣೆಗೆ ಅನುರೂಪವಾದವುಗಳೂ ಸುಲಭವಾದ
ವುಗಳೂ ಇರುವವೋ? ಎಂಬ ಸಂಗತಿಗಳನ್ನು ನಿರ್ಣಯಿ
ಸಿ ಟಿಪ್ಪಣಿಯನ್ನು ತಯಾರಿಸುವದು. ಇದಕ್ಕೆ ಪೂರ್ವಸಿದ್ಧ
ತೆಯೆಂಬ ಹೆಸರು. ಆ ಮೇಲೆ ಯಾವ ಪದ್ಧತಿಯಿಂದ ಈ
ವಿಷಯವನ್ನು ಕಲಿಸಬೇಕೆಂಬದನ್ನು ವಿಚಾರಿಸಬೇಕು. ಪ್ರ
ಯೋಗಗಳಿಂದ ಸಿದ್ಧಾಂತಗಳನ್ನು ಅಥವಾ ವಿಶೇಷದಿಂದ ಸಾ
ಮಾನ್ಯತ್ವನ್ನು ಸ್ಥಾಪಿಸುವದಿದ್ದರೆ ಹಾಗೆ ಮಾಡಬೇಕು. ಇಲ್ಲ
ವೆ ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಯನ್ನು
ತಿಳುಕೊಳ್ಳುವದಕ್ಕೆ ಸಹಾಯ ಮಾಡಬೇಕು. ಮಾಸ್ತರನು
ಯಾವಾಗಲೂ ತಾನಾಗಿ ಏನೊಂದು ಹೇಳದೆ ಬಾಲಕರ ಇಂ
ದ್ರಿಯಗಳನ್ನೂ ವಿಚಾರ ಸಾಮರ್ಥ್ಯವನ್ನೂ ಕೆಲಸಕ್ಕೆ ಹಚ್ಚಿ
ಮಾರ್ಗದಲ್ಲಿ ಬರಗುವ ತೊಂದರೆಗಳನ್ನು ಅವರು ತಾವಾಗಿ
ದೂರ ಮಾಡಿಕೊಳ್ಳುವಂತೆ ನೆರವಾಗುವ ಕೆಲಸವನ್ನಷ್ಟೇ ಮಾ
ಡಬೇಕು. ಈ ಮೇರೆಗೆ ಕಲಿಸುತ್ತ ಹೋಗಲು ವಿದ್ಯಾರ್ಥಿ
ಗಳಲ್ಲಿ ನಿರೀಕ್ಷಣ, ತುಲನಾಸಾಮರ್ಥ್ಯಗಳೂ ನಿರ್ಣಯಶ
ಕ್ತಿಯೂ ಮೆಲ್ಲ ಮೆಲ್ಲಗೆ ಬಲಗೊಳ್ಳಹತ್ತುವವು. ಇದಲ್ಲದೆ
ಇಂದ್ರಿಯಗಳ ಜ್ಞಾನಶಕ್ತಿಯೂ ಆ ಇಂದ್ರಿಯಗಳನ್ನು ಸರಿ
ಯಾಗಿ ಉಪಯೋಗಿಸಿಕೊಳ್ಳುವ ಚಾತುರ್ಯವೂ ಅವರ
ಲ್ಲುಂಟಾಗುವವು. ಈ ಸ್ಥಿತಿಯನ್ನು ಬಿಕ್ಕ ಮಕ್ಕಳಲ್ಲುಂಟು
ಮಾಡಿದ ಮಾಸ್ತರನು ತನ್ನ ಕೆಲಸವನ್ನು ಸರಿಯಾಗಿ ಮಾಡಿ
ನೆಂದುಹೇಳಲಿಕ್ಕೆ ಅಡ್ಡಿ ಇಲ್ಲ. ಅವನು ಯಾವದೊಂದು

ವಿಷಯವನ್ನು ಸಮಗ್ರವಾಗಿ ಕಲಿಸುವದು ಅವಶ್ಯವಿಲ್ಲ. ಕಲಿಯುವ ಚಟವೂ ಸಾಮರ್ಥ್ಯವೂ ಅವರಲ್ಲಿ ಉಂಟಾದರೆ ಮಾಸ್ತರನು ಕಲಿಸುವದು ತೀರಿತೆಂದು ಹೇಳಬಹುದು. ಇನ್ನು ಈ ಪದ್ಧತಿಯು ಈಗ ಕಲಿಸಿ ತೋರಿಸುವ ಬಗೆಯಲ್ಲಿ ಎಷ್ಟು ಮಟ್ಟಿಗೆ ಸಾಧ್ಯವಾಗುವದೆಂಬದನ್ನು ನೀವೇ ಮನಗಾಣಬಹುದು.

ಇವೆರಡು ಭಾಷಣಗಳಾದ ಬಳಿಕ ಮಿ. ದೇಶಪಾಂಡೆ (ಪ್ರಾ ಸ್ಕೂ. ಮಾ) ಯವರು ನೀಸದ ಪಾಠದ ಸಂಬಂಧದ ಛಾಪಿಸಿದ ಟಿಪ್ಪಣಿಯ ಪ್ರತಿಗಳನ್ನು ಸರ್ವರಿಗೂ ಹಂಚಿದರು. ಬಳಿಕ ಜೇ. ಭೀ ಕುಲಕರ್ಣಿಯೆಂಬ ೨೦ನೇ ವರ್ಷದ ವಿದ್ಯಾರ್ಥಿಯು ಈ ವಿಷಯವನ್ನು ಕಲಿಸತೊಡಗಿದನು. ನಡುವೆ ತಪ್ಪಿದಲ್ಲಿ ಮಿ. ಕುಲಕರ್ಣಿಯವರು ತಿದ್ದುತ್ತಿದ್ದರು. ಇದಾದ ಬಳಿಕ ಬಂಡೆಪ್ಪನವರೆಂಬ ಮತ್ತೊಬ್ಬ ವಿದ್ಯಾರ್ಥಿಯು ಉಳ್ಳೀಗಡ್ಡಿಯ ಪಾಠವನ್ನು ಕಲಿಸಿದನು. ಈ ವಿಷಯದ ಟಿಪ್ಪಣಿಗಳಾದರೂ ಎಲ್ಲರಿಗೂ ಹಂಚಲ್ಪಟ್ಟಿದ್ದವು. ಇಷ್ಟಾಗುವದರೊಳಗೆ ವಿಶ್ರಾಂತಿಯ ಹೊತ್ತಾಯಿತು. ಮೂರು ಘಂಟೆಗೆ ಸರಿಯಾಗಿ ಎಲ್ಲರೂ ತಿರಿಗಿ ಬಂದಬಳಿಕ ಈಗ ಕಲಿಸಿದ ವಿಷಯಗಳ ಸಂಬಂಧದಿಂದ ಯಾರಿಗಾದರೂ ಏನಾದರೂ ಆಕ್ಷೇಪಗಳು ತೋರಿದ್ದರೆ ಹೇಳಬಹುದೆಂದು ಪ್ರಿನ್ಸಿಪಾಲರು ಸೂಚಿಸಿದರು. ಆಗ ಮಿ. ಚಿನಪನಹಳ್ಳಿ (ಅಗಡಿ ಶಾಲಾಧ್ಯಾಪಕರು) ಯವರು ಉಳ್ಳೀಗಡ್ಡಿಯ ಹೂವಿನ ಗಣಿಯನ್ನೂ ಹೂವನ್ನೂ ಹೇಳಿದ ಬಳಿಕ ಬೀಜವನ್ನು ಹೇಳಿ ತೋರಿಸಿ ಇವುಗಳಿಗೇ ಕರಿಬೀಜಗಳೆಂದೆನ್ನುವರು. ಈ ಬೀಜಗಳನ್ನು ಮಡಿಮಾಡಿ ಹಾಕಿ ಬೆಳಿಸುವರು ಮುಂತಾದ ಸಂಗತಿಗಳನ್ನು ಹೇಳಬೇಕೆಂದು ನುಡಿದರು. ಮಿ. ಜೋಶಿ (ಮುದ್ದೇಬಿಹಾಳ ಮಾಸ್ತರ) ಮುಂತಾದವರು ಕಲಿಸಲಿಕ್ಕೆ ಬರಿಸಿದ ವರ್ಗಕ್ಕೆ ಈಗ ಹೇಳಿದಷ್ಟೇ ಸಾಕು. ಇದಕ್ಕೂ ಹೆಚ್ಚಿನ ವರ್ಗಕ್ಕೆ ಈ ಮಾತು ಹೇಳಬಹುದು ಎಂತಲೂ ಮಿ ದೇಶಪಾಂಡೆ (ತಡಕೋಡ ಮಾಸ್ತರರು) ಮೊದಲಾದವರು ಈ ಸಂಗತಿಯನ್ನು ಹೇಳುವದು ಅವಶ್ಯವೆಂತಲೂ ಪ್ರತಿ

ಪಾದಿಸಿದರು. ಮಿ. ರಟ್ಟೀಹಳ್ಳಿಯವರು ಇದೊತ್ತೆಟ್ಟಿಗಿರಲಿ ಇದೇ ಪಾಠವನ್ನು ಇದಕ್ಕೂ ಮೇಲಿನ ವರ್ಗಕ್ಕೆ ಹ್ಯಾಗೆ ಕಲಿಸಬೇಕು? ಯಾವ ಯಾವ ಹೊಸ ಸಂಗತಿಗಳನ್ನು ಹೇಳಬೇಕು! ಇಂಥ ಮಾಹಿತಿಯು ಮಾಸ್ತರರಿಗೆ ಹ್ಯಾಗೆ ದೊರೆಯಬೇಕು? ಇದೇ ನಮಗೆ ತಿಳಿಯದ ಸಂಗತಿಯಾಗಿದೆ. ರಾ. ಸಾ. ರು ಹೇಳಿದಂತೆ ಈ ವಿಷಯವು ಹೊಸದೂ ಕಲಿಸಲಿಕ್ಕೆ ದುಃಸಾಧ್ಯವಾದದ್ದೂ ಅದೆ ಎಂದು ಆಕ್ಷೇಪಿಸಿದರು. ಇದಕ್ಕೆ ಸ್ವತಃ ಪ್ರಿನ್ಸಿಪಾಲರೂ ಕುಲಕರ್ಣಿ ಮಾಸ್ತರರೂ ಸಮಾಧಾನ ಹೇಳಿದರು. ಅದರ ಸಾರಾಂಶವೇನೆಂದರೆ :— ಬೀಜಗಳ ಸಂಬಂಧದಿಂದ ಹೇಳುವದು ಸದ್ಯಕ್ಕೆ ಅವಶ್ಯವಿಲ್ಲ ಯಾಕಂದರೆ ಪ್ರಸ್ತುತದ ಪದ್ಧತಿಯಲ್ಲಿ ಕೆಲವೊಂದು ವಸ್ತುವಿನ ಮಾಹಿತಿಯನ್ನು ಮಾಸ್ತರನು ಬಾಯಿಂದ ಮಾಡಿಕೊಡುವದಿರುವದಿಲ್ಲ. ಮುಖ್ಯವಾಗಿ ಪ್ರಯೋಗಪರೀಕ್ಷಣಗಳ ದ್ವಾರದಿಂದ ಬಾಲಕರ ಇಂದ್ರಿಯ ಶಕ್ತಿಯನ್ನೂ ಮಾನಸಿಕ ಸಾಮರ್ಥ್ಯವನ್ನೂ ಬೆಳಿಸತಕ್ಕದ್ದಿರುವದರಿಂದ ಬೀಜಗಳ ವಿಷಯವಾಗಿ ಹೇಳಬೇಕಾದರೆ ಅವುಗಳನ್ನು ಬಿತ್ತಿ ನೀರು ಹಾಕಿ ಅವುಗಳ ಮೊಳಿಕೆಗಳು ಹ್ಯಾಗೆ ಒಡೆಯುವವು ಹ್ಯಾಗೆ ಬೆಳೆಯುವವು ಮುಂತಾದವುಗಳನ್ನು ಪ್ರತ್ಯಕ್ಷ ಮಾಡಿ ತೋರಿಸಬೇಕಾದೀತು ಹೀಗೆ ಕಲಿಸುವದು ಪ್ರಸ್ತುತದ ವರ್ಗಕ್ಕೆ ಅವಶ್ಯವಿಲ್ಲ. ಹಾಗೂ ನಾವು ಅಂಥ ವರ್ಗವನ್ನು ಕಲಿಸಲಿಕ್ಕೆ ತಕ್ಕೊಂಡು ವಿಷಯವನ್ನು ಸಿದ್ಧಮಾಡಿಲ್ಲ. ಪ್ರಯೋಗವಿಲ್ಲದೆ ನಿರೀಕ್ಷಣ ಸಾಮರ್ಥ್ಯವು ಬೆಳೆಯದು; ಪ್ರಯೋಗವಿಲ್ಲದೆ ಬರೇ ಬಾಯಿಮಾತಿನಿಂದ ಮಾಸ್ತರನು ಅನೇಕ ಸಂಗತಿಗಳನ್ನು ಹುಡುಗರ ತಲೆಬುರಡಿಯಲ್ಲಿ ತುಂಬುವದೂ ಗಡಿಗೆಯೊಳಗೆ ಒಡವೆಗಳನ್ನು ತುಂಬುವದೂ ಒಂದೇ; ಅದರಿಂದ ಮನಸು ತುಂಬುವದಲ್ಲದೆ ಸಂಸ್ಕಾರವನ್ನು ಹೊಂದಲಾರದು. ಈ ತತ್ವವನ್ನನುಲಕ್ಷಿಸಿಯೇ ಈ ಹೊತ್ತಿನ ಎರಡು ಪಾಠಗಳು ಕಲಿಸಲ್ಪಟ್ಟವೆ. ಹೆಚ್ಚಿನ ಇಯತ್ತೆಗಳಿಗೆ ಬೇರೆ ಬೇರೆ ವಸ್ತುಗಳ ಸಂಬಂಧದಿಂದ ಶಾಸ್ತ್ರೀಯ ಸಂಗತಿಗಳನ್ನು ಮನಗಾಣಿಸಿಕೊಡಬೇಕು. ಉದಾಹರಣಾರ್ಥವಾ

ನಿ "ನೀರು" ಈ ವಿಷಯವನ್ನು ಚಿಕ್ಕ ಮಕ್ಕಳಿಗೆ ಕುಡಿಯಲಿಕ್ಕೆ ಬರುತ್ತದೆ, ಸ್ನಾನಕ್ಕೆ ಬರುತ್ತದೆ, ಹರಿಯುವಂಥಾದ್ದಾಗಿದೆ, ಪಾಕಿದ ಪಾತ್ರೆಯ ಆಕಾರದ್ದದೆ, ಸಮಸ್ಥಾತಳಿಯಲ್ಲಿರುವದಾಗಿದೆ ಮುಂತಾದ ಸ್ವಲ್ಪ ಸಂಗತಿಗಳನ್ನು ಮಾತ್ರ ಹೇಳಬಹುದು. ಅದಕ್ಕೂ ಹೆಚ್ಚಿನ ವರ್ಗಕ್ಕೆ ಅಂದರೆ ಇಷ್ಟು ಸಂಗತಿಗಳನ್ನು ಅರಿತ ಹುಡುಗರ ವರ್ಗಕ್ಕೆ ನೀರಿನ ಭಾರವೆತ್ತುವ ಶಕ್ತಿ, ಅದರಿಂದ ವಿಶಿಷ್ಟ ಗುರುತ್ವವನ್ನು ತೆಗೆಯುವ ಬಗೆ ಮುಂತಾದ ಹೆಚ್ಚಿನ ಸಂಗತಿಗಳನ್ನು, ಹಾಗೂ ಅದಕ್ಕೂ ಮೇಲಿನ ವರ್ಗಕ್ಕೆ ಘಟಕಗಳನ್ನು ತೆಗೆದು ತೋರಿಸುವದೂ ಆ ಘಟಕಗಳನ್ನು ಒಂದು ಮಾಡಿ ಮರಳಿ ಪೂರ್ವದ ಸ್ವರೂಪವನ್ನು ತಿಳಿಸುವದೂ ಆ ಘಟಕಪ್ರಮಾಣಗಳನ್ನು ಗೊತ್ತು ಮಾಡುವದೂ ಮುಂತಾದ ವಿಶೇಷ ಸಂಗತಿಗಳನ್ನು ಹೇಳಬೇಕು. ಇತ್ಯಾದಿ.

ಬಳಿಕ ಮಿ. ಪಶುಪತಿ ಎಂಬ ನಾಲ್ಕನೇ ವರ್ಷದ ವಿದ್ಯಾರ್ಥಿಯು ಕಿಂಡರಗಾರ್ಟನ್ ಪದ್ಧತಿಯದೊಂದು ಪಾಠವನ್ನು ಕಲಿಸಿದನು. ಈ ವಿಷಯಕ್ಕೆ ಉಪೋದ್ಘಾತರೂಪದಿಂದ ಮಿ. ಕುಲಕರ್ಣಿಯವರು ಈ ಪದ್ಧತಿಯನ್ನು ಪ್ರಚಾರದಲ್ಲಿ ತಂದವನು ಜರ್ಮನೀ ದೇಶದವನಾದ ಫ್ರೆಬೆಲ್ಲನು. ಇವನ ಶಿಕ್ಷಣದಲ್ಲಿ ಮುಖ್ಯವಾಗಿ ಮೂರು ಧೋರಣಗಳು ಒಡಿಪು ಕಾಣುವವು. ಚಿಕ್ಕ ಮಕ್ಕಳು ಅಥವಾ ಹಿರಿಯರು ಜ್ಞಾನವನ್ನೊಂದೇ ಸಂಗ್ರಹಿಸಬೇಕೆಂದು ಅಪೇಕ್ಷಿಸುವದಿಲ್ಲ. ಅದರಲ್ಲಿ ವಿಶೇಷವಾಗಿ ಚಿಕ್ಕ ಮಕ್ಕಳು ವೈಚಿತ್ರ್ಯದಿಂದುಂಟಾಗುವ ಆನಂದವನ್ನು ಬಯಸುವರು ಆದ್ದರಿಂದ ಅವರಿಗೆ ಕಲಿಸುವ ಪಾಠಗಳಲ್ಲಿ ಜ್ಞಾನವರ್ಧಕ ಗುಣವೂ ಆನಂದವರ್ಧಕ ಗುಣವೂ ವ್ಯವಹಾರೋಪಯುಕ್ತ ಗುಣವೂ ಇರಬೇಕು. ಈ ಕಾರಣದಿಂದ ಅವನು ಕೆಲವು ಕಟ್ಟಿಗೆ, ಕಾಗದ ಅಲ್ಲು ಮುಂತಾದ ಒಡಿವೆಗಳನ್ನು ಅವರ ಮುಂದಿಟ್ಟು ಅವರ ಕೈಯಿಂದ ಬೇರೆ ಬೇರೆ ಆಕೃತಿಗಳನ್ನು ಮಾಡಿಸುವನು. ಆಗ ಆ ಆಕೃತಿಗಳ ಜ್ಞಾನವನ್ನೂ ಅವುಗಳ ಸಹಾಯದಿಂದ ಗಣಿತದ ಜ್ಞಾನವನ್ನೂ ಮಾಡಿಕೊಡುವನು. ಬಳಿಕ ದುಡಿ

ತದಿಂದ ದಣಿದ ಮಿದುಳಿಗೆ ವಿಶ್ರಾಂತಿಯೂ ಆನಂದವೂ ದೊರೆಯಬೇಕೆಂದು ಕೆಲವು ವ್ಯವಹಾರೋಪಯುಕ್ತ ಪದಾರ್ಥಗಳನ್ನೂ ತಯಾರ ಮಾಡಿಸುವನು. ಈ ಜಟವು ಚಿಕ್ಕ ಮಕ್ಕಳಲ್ಲಿ ಇದ್ದೀಪಿರುವದು. ಅದರಿಂದ ಹುಡುಗರಿಗೆ ಆಟ ಆಡಿಸಿದಂತೆ ಆಗುವದಲ್ಲದೆ ವಿಷಯವನ್ನು ಸಶಾಸ್ತ್ರವಾಗಿ ಕಲಿಸಿದಂತೆ ಆಗುವದು. ಒಬ್ಬಿಗೆ ಫ್ರೆಬೆಲ್ಲನು ೦೦ ಪಾಠಗಳನ್ನು ಗೊತ್ತು ಮಾಡಿರುವನು. ಈ ಪಾಠಗಳಿಗೆ ಅವನು ಇನಾಮೆಂದು ಹೆಸರಿಟ್ಟಿರುವನು. ಈ ಕಲಿಸುವ ಪಾಠವು ೪ನೇದು ಇನ್ನು ಈ ವಿಷಯವು ಹ್ಯಾಗೆ ನಡೆಯುವದೆಂಬದನ್ನು ನೀವು ನೋಡಬಹುದು" ಬಳಿಕ ಮಿ. ಪಶುಪತಿಯವರು ತಮ್ಮ ವಿಷಯವನ್ನು ಕಲಿಸಿ ತೋರಿಸಿದನಂತರ ಸಭೆಯ ಕಾರ್ಯವು ಮುಗಿದು ಆ ಹೊತ್ತಿನ ಕೆಲಸವು ತೀರಿತು.

ಮರುದಿವಸ (ತಾ|೩೦|೩|೦೦) ಮತ್ತೆ ಸಭೆಯು ೧೦ ಘಂಟೆಗೆ ಸರಿಯಾಗಿ ನೆರೆಯಿತು. ಆರಂಭದಲ್ಲಿ ಸೊನ್ನೆಯ ಪಾಠವನ್ನು ಹೊರಹಟ್ಟಿ ಎಂಬವನು ಕಲಿಸಿದನು. ಇದರಲ್ಲಿ ಸೊನ್ನೆಯು ಪ್ರಕಾರಗಳನ್ನು ಮೊದಲು ಹೇಳಿ ಬಳಿಕ ಸೊನ್ನೆಯಿಂದ ಭಾಸವಾಗುವ ಕಾರ್ಯವನ್ನು ತಿಳಿಸಿದನು. ಶಕ್ತಿ ಭುಜ ಭಾರ ಭುಜಗಳನ್ನು ತಿಳಿಸಿಕೊಟ್ಟು ಶಕ್ತಿಭುಜವು ದೊಡ್ಡದಾದರೆ ಭಾರವು ಹೆಚ್ಚು ಬೇಕೆಂಬದನ್ನೂ ಭಾರ ಭುಜವು ದೊಡ್ಡವಾದರೆ ಶಕ್ತಿಯು ಹೆಚ್ಚು ಬೇಕೆಂಬದನ್ನೂ ಸಿದ್ಧಮಾಡಿಕೊಟ್ಟು ಭುಜಗಳೂ ಭಾರಶಕ್ತಿಗಳೂ ವ್ಯಸ್ತಪ್ರಮಾಣದಲ್ಲಿರುವವೆಂಬದನ್ನು ಪ್ರಯೋಗದಿಂದ ಮನಗಾಣಿಸಿ ಕೊಟ್ಟನು. ಆಮೇಲೆ ಮಿ. ಕಡಕೋಳನೆಂಬ ನಾಲ್ಕನೇ ವರ್ಷದ ವಿದ್ಯಾರ್ಥಿಯು ಉಷ್ಣತೆಯ ಯೋಗದಿಂದ ಪದಾರ್ಥಗಳು ಹಿಗ್ಗುತ್ತವೆಂಬದನ್ನು ಸಪ್ರಯೋಗ ತಿಳಿಸಿದನು. ಈ ಪ್ರಯೋಗವು ಒಂದು ಹಳ್ಳಿಯಲ್ಲಿ ಸಹ ಶಿಕ್ಕುವ ಪದಾರ್ಥಗಳಿಂದ ಮಾಡಲಿಕ್ಕೆ ಬರುವದನ್ನು ಮನಗಾಣಿಸಿ ಕೊಟ್ಟನು. ಇದೇ ಸಂಧಿಯಲ್ಲಿ ಬಂಕಾಪುರ ಹಾವೇರಿಗಳ ಮಾಸ್ತರರು ತಮ್ಮ ಕೈಯಿಂದ ತುಸು ಬೆಚ್ಚದಿಂದ ತಯಾರಿಸಿದ ವಾತಾಕರ್ಷಕ ವಾತಘರ್ಷಕ ಯಂತ್ರ ಮುಂತಾದ ಒಡವೆಗಳನ್ನು ನೆರ

ದವರೆಲ್ಲರಿಗೂ ತೋರಿಸಿದರು. ಇದರಿಂದ ಕರ್ತವ್ಯನಿಷ್ಠರಾದ ಮಾಸ್ತರರು ಉಪಕರಣಗಳಿಲ್ಲೆಂದು ಗೋಳಾಡುವದು ಸರಿಯಲ್ಲವೆಂಬದು ಬಹು ಜನರಿಗೆ ಮನದಟ್ಟಾಯಿತು. ಮನಸ್ಸಿದ್ದಲ್ಲಿ ಮಾರ್ಗವಿರುತ್ತದೆಂಬ ಮಾತು ಸುಳ್ಳಲ್ಲ. ಕಲಿಸುವ ಕೆಲಸವೇ ತನ್ನ ಜನ್ಮದ ಹೋರೆಯೆಂದು ತಿಳಿಯುವವರಿಗೆ ಇದೇನು ನೀಗದ ಮಾತಲ್ಲ, ಬಳಿಕ ವಿಶ್ರಾಂತಿಯು ಹೊತ್ತಾದ್ದರಿಂದ ಎಲ್ಲರೂ ಚಹ ತಕ್ಕೊಳ್ಳಲಿಕ್ಕೆ ಹೋದರು. ಬಳಿಕ ನಕಾಶ ತೆಗೆಯೋಣ, ಭೂಗೋಲದ ವ್ಯಾಖ್ಯೆಗಳನ್ನು ತಿಳಿಸೋಣ, ಕಾಗದ ಕತ್ತರಿಸೋಣ ಮುಂತಾದ ವಿಷಯಗಳನ್ನು ಆಯಾ ವಿದ್ಯಾರ್ಥಿಗಳು ಕಲಿಸಿ ತೋರಿಸಿದರು. ಇಷ್ಟರೊಳಗೆ ೪॥ ಯಾಗಲು ಕೆಲವರು ರೇಲ್ವೆಯ ಹೆಡ್ ಆಫೀಸನ್ನು ನೋಡಲಿಕ್ಕೆ ಹೋದರು. ಪ್ರಿನ್ಸಿಪಾಲರು ಅಲ್ಲಿಯ ಅಧಿಕಾರಿಗಳಿಗೆ ಪತ್ರ ಬರೆದು ಮೊದಲೇ ವ್ಯವಸ್ಥೆಯನ್ನು ಮಾಡಿದ್ದರು. ಆದಿನ ರಾತ್ರಿ ಒಂಬತ್ತು ಗಂಟೆಗೆ ಎಲ್ಲರೂ ಬೋರ್ಡಿಂಗಿನಲ್ಲಿಯೇ ಪಕ್ವಾನ್ನದಿಂದೊಡಗೂಡಿದ ಸುಭೋಜನವನ್ನು ಮಾಡಿದರು. ಊಟವು ೧೦' ಗೆ ಮುಗಿದ ಬಳಿಕ ಸಭೆಗೂಡಿದ ಸ್ಥಳದಲ್ಲಿ ಸರ್ವರು ನೆರೆದು ಗಾಯನ ವಾದನ ಮುಂತಾದ ಆನಂದದಾಯಕ ಕೆಲಸಗಳಲ್ಲಿ ಕೆಲವು ಹೊತ್ತನ್ನು ಕಳೆದರು. ಬಳಿಕ ವಿದ್ಯಾರ್ಥಿಗಳ ವತಿಯಿಂದ ಮಿ॥ ಕಡಕೋಳ ಎಂಬವರು ಬಂದ ಅಧ್ಯಾಪಕರಿಗೆಲ್ಲ—ತಮ್ಮ ಬರುವಿಕೆಯಿಂದ ಆನಂದವಾಯಿತೆಂತಲೂ ತಮ್ಮ ಉಪಚಾರದಲ್ಲಿ ಅನೇಕ ಕುಂದುಕೊರತೆಗಳು ಕಂಡುಬಂದಿರಬಹುದು, ತಾವು ಹಿರಿಯರಾದ ಕಾರಣ ಅವುಗಳನ್ನು ಕ್ಷಮಿಸಬೇಕೆಂತಲೂ ಬಿನ್ನವಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ—ಮಿ. ಕುಲಕರ್ಣಿ (ಬಂಕಾಪುರ ಸಾಲಿಯ ಮಾಸ್ತರರು) ಅವಿನಾಭಾವಿ (ನೆಗಳೂರ ಮಾಸ್ತರ) ಮಿ. ಜೋಶಿ (ಮುಂಡರಗಿ, ಮಾಸ್ತರ) ಮಿ ಮುದಕವಿ, ಬಾಳೆಕುಂದ್ರಿ ಪೂಜಾರ, ಜೋಶಿ (ಮುದ್ದೇಬೀಹಾಳ) ಸಂಗಮ, ಚನಪಟನಹಳ್ಳಿ ಮುಂತಾದವರು ಈ ಸಭೆಯನ್ನು ನೆರಸಿದ್ದಕ್ಕಾಗಿ ಪ್ರಿನ್ಸಿಪಾಲರನ್ನೂ ಕುಲಕರ್ಣೀ ಮಾಸ್ತರರನ್ನೂ ಬಹಳವಾಗಿ ಸ್ತುತಿಸಿದರು. ಹಾಗು ಇದೇ ಮೇರೆಗೆ

ವರ್ಷವರ್ಷಕ್ಕೆ ಸಭೆಯನ್ನು ನಿರಂತರ ಮಾಸ್ತರರಿಗೆ ಶಿಕ್ಷಣ ಪದ್ಧತಿಯ ವಿಶೇಷ ಜ್ಞಾನವಾಗುವದಲ್ಲದೆ ವಿಷಯಜ್ಞಾನವೂ ಸಂಶಯನಿವಾರಣವೂ ಆಗುವದು. ಆದ್ದರಿಂದ ಪ್ರತಿವರ್ಷ ಈ ಮಾದರಿಯ ಸಭೆಯನ್ನು ಕೂಡಿಸುವದು ಅವಶ್ಯವೆಂದು ತಮ್ಮ ಅಭಿಪ್ರಾಯವುಂಟೆಂದು ಹೇಳಿದರು. ಹಾಗೂ ಕಾಲೇಜದ ವಿದ್ಯಾರ್ಥಿಗಳು ನಮ್ಮನ್ನು ಚೆನ್ನಾಗಿ ಆದರಿಸಿದ್ದರಿಂದ ಅವರ ಆಭಾರವನ್ನು ನೆನಿಸುವದು ಅವಶ್ಯವೆಂದು ಹೇಳಿದರು. ಬಳಿಕ ಪ್ರಾ. ಸ್ಕೂಲ ಮಾಸ್ತರರು ಸಭೆಯಸಂಬಂಧದಿಂದ ಎರಡು ಮಾತುಗಳನ್ನಾಡಿದ್ದಲ್ಲದೆ ವೈಸ ಪ್ರಿನ್ಸಿಪಾಲರಾದ ರಾ ಸಾ. ಜೋಶಿಯವರು ವರ್ಗಾಗಿ ಹೋಗುತ್ತಾರೆಂಬಬಗ್ಗೆ ತುಸು ಪ್ರಸ್ತಾಪಿಸಿದರು. ಅದರಲ್ಲಿ ಅವರು ಜೋಶಿಯವರ ಯಥಾರ್ಥ ಗುಣಗಳನ್ನು ಒಡೆದು ಹೇಳಿ ಅವರನ್ನು ಬಹಳವಾಗಿ ಕೊಂಡಾಡಿದರು. ತರುವಾಯ ಮಿ ಕುಲಕರ್ಣಿಯವರು—ತನ್ನನ್ನು ಹೊಗಳಿದ್ದು ಸರಿಯಲ್ಲ; ನಾನು ಅಧ್ಯಾಪಕನು, ನೀವು ಶಿಷ್ಯರು; ನಿಮಗೊದಗುವ ತೊಂದರೆಯನ್ನು ಪರಿಹರಿಸುವದು ನನ್ನ ಮೊದಲನೇ ಕೆಲಸವು ಆದ್ದರಿಂದ ನಾನು ಆ ಕೆಲಸವನ್ನು ಮಾತ್ರ ಮಾಡಿದ್ದೇನಲ್ಲದೆ ಹೆಚ್ಚಿಗೆ ಏನೂ ಮಾಡಿಲ್ಲ. ಈ ಎರಡು ದಿವಸ ನೋಡಿದ್ದನ್ನು ಲಕ್ಷದಲ್ಲಿಟ್ಟು ಉತ್ಸಾಹದಿಂದ ಕೆಲಸ ಮಾಡಿದರೆ ಕೀರ್ತಿ ಬರುವದೆಂದು ನುಡಿದು ರಾ. ಸಾ ಜೋಶಿಯವರ ವಿಯೋಗದಿಂದುಂಟಾದ ತಮ್ಮ ಖೇದವನ್ನು ವ್ಯಕ್ತಪಡಿಸಿದರು. ಆಗ ಜೋಶಿಯವರು-ನನ್ನನ್ನು ಇಷ್ಟು ಕೊಂಡಾಡಲಿಕ್ಕೆ ನಾನೇನು ಅಂಥ ಗುಣಾಢ್ಯನಲ್ಲ; ಹಾಗು ಅಲೌಕಿಕ ಕಾರ್ಯವನ್ನೂ ಮಾಡಿಲ್ಲ. ಅಧ್ಯಾಪಕರು ಇರತಕ್ಕಂತೆ ಇದ್ದೇನೆ, ಮಾಡತಕ್ಕ ಕೆಲಸಗಳನ್ನು ಕೈಲಾದಷ್ಟು ಮಾಡಿದ್ದೇನೆ; ಮುಖ್ಯವಾಗಿ ಪ್ರಿನ್ಸಿಪಾಲರು ತಮ್ಮನ್ನು ಚೆನ್ನಾಗಿ ನಡಿಸಿಕೊಂಡರೆಂದು ಹೇಳಲಿಕ್ಕೆ ಆನಂದವಾಗುತ್ತದೆ. ಇ. ಆ ಮೇಲೆ ಪ್ರಿನ್ಸಿಪಾಲರು ಎದ್ದು ನಿಂತು ಸಭೆಯ ಸಂಬಂಧದಿಂದಲೂ ಮಿ. ಜೋಶಿಯವರ ಸಂಬಂಧದಿಂದಲೂ ಸುಶ್ರಾವ್ಯವಾಗಿ ಮಾತಾಡಿದರು. ಅದರ ಸಾರಾಂಶವು—ಶಿಕ್ಷಕರೆ, ಈಗ ಎರಡು ದಿವಸದಿಂದ ನಡೆದ ಶಿಕ್ಷಣ

ಬಂದ ನಿಮಗೆ ಅನೇಕ ಸಂಗತಿಗಳು ಗೊತ್ತಾಗಿರಬಹುದು. ಹಾಗು ಮುಂದೆ ಬರುವ ಇಯತ್ತೆಗಳಲ್ಲಿ ಶೇರಿಸಿದ ವಸ್ತು ಪಾಠಗಳನ್ನು ಯಾವ ಮಾರ್ಗದಿಂದ ಕಲಿಸಬೇಕೆಂಬದು ನಿಮಗೆ ಮನದಟ್ಟಾಯಿತು. ಪ್ರಯೋಗವಿಲ್ಲದೆ ಯಾವ ವಿಷಯವನ್ನು ಕಲಿಸಕೂಡದೆಂಬ ಮಾತು ನಿದರ್ಶನಕ್ಕೆ ಬಂತು. ಪ್ರಯೋಗಕ್ಕೆ ಬೇಕಾಗುವ ಸಾಮಾನುಗಳು ಹಳ್ಳಿಯಲ್ಲಿ ನಮಗೆಂತು ದೊರೆಯುವವು? ಎಂಬ ಸಂಶಯವು ದೂರಾಯಿತು. ನಾವು ತಕ್ಕೊಂಡ ಉಪಕರಣಗಳು ಮನುಷ್ಯ ವಸ್ತಿ ಇದ್ದಲ್ಲೆಲ್ಲ ಸಿಗುವಂಥವುಗಳೇ ಇರುವವು. ಇದಲ್ಲದೆ ಹಾವೇರಿ, ಬಂಕಾಪೂರ ಸಾಲೆಗಳ ಮಾಸ್ತರರು ಮಾಡಿತಂದ ಉಪಕರಣಗಳಾದರೂ ನಿಮ್ಮೊದುರಿನಲ್ಲಿ ಇರುವವು. ನೀವು ಕೇವಲ ಫಲಾಶೆಯನ್ನು ಮಾಡದೆ ಚಿಕ್ಕಮಕ್ಕಳ ಕಲ್ಯಾಣವನ್ನು ಬಯಸುತ್ತಾ ಇರ್ರಿ ಅದರಿಂದ ನಿಮ್ಮ ಕಲ್ಯಾಣವು ಆಗೇಆಗುವದು ನಾವೆಷ್ಟು ದುಡಿದರೂ ಫಲವಾಗಲಿಲ್ಲವಲ್ಲ ಎಂದು ನಿರಾಶೆಯುಳ್ಳವರಾದರೆ ನಿಮ್ಮ ಚೈತನ್ಯವೆಲ್ಲ ಅಳಿದು ಹೋಗಿ ನಿಮ್ಮಿಂದ ಯಾವ ಕೆಲಸವೂ ಆಗದು. ಕೆಲಸ ಮಾಡುವದು ಮನುಷ್ಯನ ಕರ್ತವ್ಯವೆಂದು ತಿಳಿದು ಮನಗೊಟ್ಟು ಮಾಡಿರಿ. ವಿಷಯಜ್ಞಾನವನ್ನು ಮಾಡಿಕೊಳ್ಳುವದು ಮಾಸ್ತರನ ಮೊದಲನೇ ಕೆಲಸವಾದ್ದರಿಂದ ನೀವು ಯಾವಾಗಲೂ ಚಲೋ ಚಲೋ ಪುಸ್ತಕಗಳನ್ನು ಓದಿರಿ. ಹಿಂದಕ್ಕೆ ಒಬ್ಬ ಕಾಲೇಜದ ವಿದ್ಯಾರ್ಥಿಯು ತನ್ನದೊಂದು ಪುಸ್ತಕವನ್ನು ಕಳಿಸಿ ಇದು ನಮಗೆ ಬೇಡ ಮಾರಿ ರೊಕ್ಕ ಕಳಿಸಿರಿ ಎಂದು ನನಗೆ ಪತ್ರ ಬರೆದಿದ್ದನು. ಇದು ಬಹು ಬೇವದ ಸಂಗತಿಯು. ಮಾಸ್ತರನು ವಿದ್ಯಾಭ್ಯಾಸವನ್ನು ಬಿಟ್ಟಕೂಡಲೆ ಅವನ ಕೆಲಸವು ಕೆಟ್ಟುಹೋಗುವದು. ಆದ್ದರಿಂದ ನೀವು ಯಾವಾಗಲೂ ಪುಸ್ತಕಗಳನ್ನೋದುತ್ತ ಬಲ್ಲವರೊಡನೆ ಚರ್ಚೆಯನ್ನು ನಡಿಸುತ್ತ ಇರ್ರಿ. ಆದರೆ ವಿದ್ಯಾವ್ಯಾಸಂಗಕ್ಕೆ ಲಕ್ಷ ಕೊಟ್ಟಂತೆ ನೀತಿಗಾದರೂ ಲಕ್ಷ ಕೊಡಿರಿ. ಚಲೋ ನಡತೆಯು ವಿದ್ವಾಂಸನ ಬೆಲೆಯನ್ನು ಬಹಳವಾಗಿ ಹೆಚ್ಚಿಸುತ್ತದೆಂಬದನ್ನು ಮರೆಯಬೇಡಿರಿ. ಪ್ರತಿವರುಷ ಇದೇ ಸಂ

ಧಿಯಲ್ಲಿಯೇ ಸಭೆಯನ್ನು ಕೂಡಿಸಬೇಕೆಂದು ಗೊತ್ತು ಮಾಡಿರುತ್ತೇವೆ. ಈ ಅವಧಿಯಲ್ಲಿ ನಿಮಗೆ ತಟ್ಟಿದ ಸಂಶಯಗಳನ್ನು ಗೊತ್ತುಮಾಡಿಕೊಂಡು ಬಂದು ಇಲ್ಲಿ ಆವುಗಳನ್ನು ಪರಿಹರಿಸಿಕೊಳ್ಳಿರಿ.

ಡಿ. ಯುವರು ನನ್ನ ವಿನಂತಿಯನ್ನು ಮಾನ್ಯ ಮಾಡಿ ಮಾಸ್ತರರನ್ನು ಕಳಿಸಿಕೊಟ್ಟಿದ್ದಕ್ಕಾಗಿ ಅವರ ಆಭಾರವನ್ನೂ ಈ ಕಾರ್ಯಕ್ಕೆ ತಮ್ಮ ಅನುಮತಿಯನ್ನಿತ್ತ ಇನಸ್ಪೇಕ್ಟರ ಸಾಹೇಬರವರ ಆಭಾರವನ್ನೂ ನೆನಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆಂದು ಹೇಳಿ ಕುಳಿತರು.

ಮರುದಿವಸ ಬಂದ ಅಧ್ಯಾಪಕರೆಲ್ಲ ತಮ್ಮ ತಮ್ಮ ಸ್ಥಳಕ್ಕೆ ಹೋದರು.

ಮೂರನೇ ದಿವಸ, ಮುಂಡರಗಿ, ಕಲಘಟಗಿ, ಕಿತ್ತೂರು, ಗುಳೇದಗುಡ್ಡಗಳಿಂದ ಬಂದ ಯಾವತ್ತು ಶಿಕ್ಷಕಿಯರಿಗೂ ಹೆಣ್ಣು ಮಕ್ಕಳ ಕಾಲೇಜದ ವಿದ್ಯಾರ್ಥಿನಿಯರಿಗೂ ಈ ವಿಷಯಗಳು ಕಲಿಸಿ ತೋರಿಸಲ್ಪಟ್ಟವು. ಆಗ ಜರ್ಮನ ಮಿಶನರಿಯಾದ ರೆ. ಮಿ. ಅರ್ನೆಸ್ಟ ಸಾಹೇಬರವರ ಪತಿಯವರು ಬಂದಿದ್ದರು.

ಒಟ್ಟಿಗೆ ಈ ಸಮಾರಂಭವು ಜನ್ಮಾಗಿ ನಡೆಯಿತೆಂದು ಹೇಳಲು ನಮಗೆ ತುಂಬಾ ಸಮಾಧಾನವೆನಿಸುತ್ತದೆ.

EXCURSION TO HAMPI.

ಪಂಪಾಯಾತ್ರೆ.

(ಬರೆದು ಬಂದದ್ದು.)

(೪೭ ನೇ ಪುಟದಿಂದ ಮುಂದ ಸಾಗಿದ್ದು.)

ಕಾಲ—ಈ ಕ್ಷೇತ್ರದ ವಾಸ್ತವ್ಯವು ಎಂದಿನಿಂದೆಂಬದನ್ನು ಹೇಳುವದು ಅಸಂಭವವು. ಶ್ರೀ ರಾಮನು ಸೀತೆಯನ್ನು ಕಳಕೊಂಡ ಬಳಿಕ ಆಕೆಯನ್ನು ಅರಸುತ್ತ ದಕ್ಷಿಣಕ್ಕೆ ಬಂದಾಗ ಪಂಪಾಸರೋವರದಲ್ಲಿ ಜಲಕ್ರೀಡೆಯನ್ನು ಆಡಿದನೆಂತಲೂ ಶ್ರೀ ಪಂಪಾಪತಿಯ ದರ್ಶನವನ್ನು ತಕ್ಕೊಂಡನೆಂತಲೂ ರಾಮಾಯಣದಲ್ಲಿ ಲೇಖವದೆ. ಇದರಿಂದ ಇದು ರಾಮನ

ಕಾಲದಲ್ಲಿ ಅಂದರೆ ಕಲಿಯುಗದ ಪೂರ್ವದಲ್ಲಿ ಅಂದರೆ ಸುಮಾರು ಐದು ಸಾವಿರ ವರ್ಷಗಳಾಚೆಗೆ ಇತ್ತೆಂದು ಊಹಿಸಲಿಕ್ಕಾಧಿಯುಂಟು.

ನೋಡತಕ್ಕಂಥ ಸ್ಥಳಗಳು.

ಶ್ರೀ ವಿರೂಪಾಕ್ಷನ ದೇವಾಲಯದ ಬೌಳಿಯೊಳಗೆ ಉತ್ತರ ಬದಿಯಲ್ಲಿ ಶ್ರೀ ಪಾರ್ವತಿಮ್ಮನವರ ಗುಡಿಯೂ ಭುವನೇಶ್ವರಿಯ ಗುಡಿಯೂ ಉಂಟು. ಈ ಪ್ರಕಾರದ ಹಿಂಬದಿಗೆ ನೂರಾರು ವರ್ಷಗಳ ಅಂತರದಲ್ಲಿ ಶಂಕರಾಚಾರ್ಯರ ಶಿಷ್ಯಪರಂಪರೆಯಲ್ಲಿ ಪೆಸರುವಾಸಿಯಾದಂಥ ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕೆ ಕಾರಣೀಭೂತರಾದಂಥ ವೈದಿಕ ಲೌಕಿಕ ವಿದ್ಯೆಗಳಲ್ಲಿ ಮೇಲಾದಂಥ ಶ್ರೀಮತ್ ವಿದ್ಯಾರಣ್ಯರ ಮಠವುಂಟು. ಕಟ್ಟಡವು ಅಷ್ಟು ದೊಡ್ಡದಲ್ಲದಿದ್ದರೂ ಚಂದವಿಲ್ಲದಿದ್ದರೂ ವಿದ್ಯಾರಣ್ಯರ ಶಿಲಾಮಯ ಮೂರ್ತಿಯನ್ನು ನೋಡಿದ ಕೂಡಲೆ ಅವರ ಸಂಬಂಧದ ಹಿಂದು ಮುಂದಿನ ವೃತ್ತಾಂತಗಳು ನೆನಪಾಗಿ ಪ್ರೇಕ್ಷಕನು ಆನಂದ ಭಕ್ತಿ, ಆಶ್ಚರ್ಯ ಮುಂತಾದ ಮನೋವಿಕಾರಗಳೊಳಗೆ ಮುಳುಗೇಳುವನು.

ವಶಿಷ್ಠಾಶ್ರಮ—ವಿರೂಪಾಕ್ಷನ ಉತ್ತರದ್ವಾರದೊಳಗಿಂದ ತುಂಗಭದ್ರೆಗೆ ಹೋಗುವ ಹಾದಿಯಲ್ಲಿ ಎಡಗಡೆಯಲ್ಲಿ ಎರಡು ಶಿವಾಲಯಗಳೂ ಬಲಗಡೆಯಲ್ಲಿ ಬಂದು ತಾವರೆಬಳ್ಳಿಯುಂದ ಕೂಡಿದ ಹೊಂಡವೂ ಆ ಹೊಂಡದ ದಂಡೆಯಲ್ಲಿ ಪೂಜಾರರ ಮನೆಯು ಸಾಲೂ ಇರ್ತ್ತುವು. ಮುಂದೆ ನೂರಾರು ಯಾಡ್ರುಗಳನ್ನು ದಾಟಿ ಹೋಗಲು ಹೊಳೆಯು ಹರ್ತ್ತುವದು. ಹೊಳೆಯ ದಂಡೆಯು ಮೇಲೂ ಹೊಳೆಯ ನೀರೊಳಗೂ ಹಲವು ಕಲ್ಲುಮಂಟಪಗಳುಂಟು. ಇವೇ ವಶಿಷ್ಠ ಋಷಿಗಳ ಆಶ್ರಮ ಸ್ಥಳಗಳೆಂದು ಹೇಳುತ್ತಾರೆ.

ಶ್ರೀ ರಾಮದೇವರ ಗುಡಿಯು—ವಿರೂಪಾಕ್ಷನ ಗುಡಿಯಿಂದ ಸುಮಾರು ಅರ್ಧ ಮೈಲಿನ ಮೇಲೆ ನದಿಯೊಳಗೆ ಬಂದು ತಿರುಗಣಿಯು ಮಾಡುವುಂಟು. ಅದಕ್ಕೆ ಚಕ್ರತೀರ್ಥವೆಂಬು

ಹೆಸರು. ಆದರೆ ಆ ಮಡುವಿನೊಳಗಿನ ನೀರಿನ ಚಕ್ರಾಕಾರ ಭ್ರಮಣವು ಈಗ ಕಡಿಮೆಯಾಗಿದೆ. ಅಲ್ಲಿ ಮಳಲಿನ ಒಟ್ಟಲ ವು ಬೆಳದಿರುವದು. ಎಡಬಲದಲ್ಲಿರುವ ಆನೆಯಂಥ ಕಪ್ಪಾದ ದೊಡ್ಡ ದೊಡ್ಡ ಬಂಡೆಗಳುಳ್ಳ ಎರಡು ಗುಡ್ಡಗಳ ನಡುವೆ ಹರಿ ಯುವಂಥ ಅಲ್ಲಲ್ಲಿ ಕಾಣುವ ಮಳಲ ರಾಸಿಗಳುಳ್ಳಂಥ ಬಂಡೆ ಗಲ್ಲುಗಳಿಂದ ಶಬ್ದಗೈಯುವಂಥ ನದಿಯ ಪ್ರವಾಹವು ಬಹು ಮನೋಹರವಾಗಿ ತೋರುವದು. ಈ ತೀರ್ಥದ ಹೊಂದಿಗೆ ಅಂದರೆ ನದಿಯ ದಂಡಿಯ ಮೇಲೆ ಎತ್ತರ ಪ್ರದೇಶದಲ್ಲಿ ಅಂ ದರೆ ಗುಡ್ಡದ ಇಳಕಲು ಪ್ರದೇಶದಲ್ಲಿ ಶ್ರೀ ರಾಮದೇವರ ಗು ಡಿಯುಂಟು. ಏಳೆಂಟು ಫೂಟು ಎತ್ತರದ ಒಂದೇ ಕರೇ ಬಂಡೆಯಲ್ಲಿ ಕೋದಂಡಧರರಾದ ಶ್ರೀರಾಮ ಲಕ್ಷ್ಮಣರ ಮೂ ರ್ತಿಯನ್ನೂ ಸೀತಾದೇವಿಯ ಮೂರ್ತಿಯನ್ನೂ ಪರಮ ಭಗ ವದ್ಭಕ್ತನಾದ ಜಗದ್ಗುರುವೆನಿಸಿದ ವಾಯುಸುತನ ಮೂರ್ತಿ ಯನ್ನು ನೋಡಿ ಮನಸ್ಸಿಗೆ ಪರಮಾಹ್ಲಾದವಾಗುತ್ತದೆ. ಸೀ ತಾದೇವಿಯ ಹೊರ್ತು ಮಿಕ್ಕ ಮೂವರು ಮಹಾ ಪುರುಷರು ಮಾನವ ದೇಹದೊಂದಿಗೆ ಈ ಸ್ಥಳದಲ್ಲಿ ವಿಹರಿಸಿದ ಕಾಲದ ಲ್ಲಿ ವಾಸ ಮಾಡಿದ ಪ್ರಾಣಿಯ ಭಾಗ್ಯವನ್ನು ಎಷ್ಟೆಂದು ಹೇಳ ಬೇಕು.!! ॥ ರಾಮ ರಾಮೆಂದವನು ಸ್ವರ್ಗದ ಕಾಮಿನೀಜನ ಕೊಡೆಯನೆಹ ರಘು ರಾಮ ರಕ್ಷಿಸು ರಕ್ಷಿಸೆಂದವ ಕಮಲಭ ವನಹನೂ ॥ ರಾಮಚರಿತಾಮೃತವ ಕೇಳ್ದವ ರಾಮನಿಗೆ ಸರಿ ಯು ಹನುಜಗದೊಳು ರಾಮನಾಮಕೆ ಸರಿಯು ಕಾಣೆನು ಗೌ ರಿ ಕೇಳೆಂದ ॥ ೧ ॥ ಯಾವ ರಾವಣಾರಿಯ ನಾಮದಿಂದ ಭವ ಭವದ ಕಿಲ್ಬಿಷವು ನಾಶವಾಗುವದೋ, ಯಾರ ನಾಮವು ತಾರಕ ನಾಮವೆಂದು ಶ್ರುತಿಗಳಿಂದ ಹೊಗಳಲ್ಪಡುವದೋ ಅಂಥ ಮಹಾರಾಯನನ್ನು ಕಂಡು, ಪೊಡಮಟ್ಟು, ಅವನೊಡ ನೆ ಮಾತಾಡಿ, ಕೂಡಾಡಿದವನೆ ಭಾಗ್ಯಕ್ಕೆ ಎಣೆಯಿಲ್ಲ. ಗುಡಿ ಯು ಚಿಕ್ಕದು, ತುಸು ಅಂಗಳವುಂಟು. ಕಬ್ಬಿಣದ ಗೆಜಗ ಳನ್ನು ನಡಿಸಿ ಅವಾರವನ್ನು ಮಾಡಿದ್ದಾರೆ.

ಯಂತ್ರೋದ್ಧಾರಕ ಪ್ರಾಣದೇವರು – ಈ ಗುಡಿಯು ರಾ ಮದೇವರ ಗುಡಿಯ ಮೇಲ್ಗಡಿಯಲ್ಲಿ ಗುಡ್ಡದ ಇಳುಕಲಿನಲ್ಲಿ

ಎತ್ತರದ ಮೇಲುಂಟು. ಗುಡಿಯು ಚಿಕ್ಕದು. ಎರಡು ಸಮ ಭುಜ ತ್ರಿಕೋನಗಳ ಮೇಲ್ಮೈಗಳು ಜೇವತಿ ಗೊಂಬೆಯಂತೆ ಒಂದರ ತಲೆ ಮತ್ತೊಂದರ ಕಾಲ ಕಡಿಗಾಗುವ ಹಾಗೆಯೂ ಆರೂ ಮೂಲಿಗಳು ವಿಂಗಡವಾಗಿ ಕಾಣುವಂತೆಯೂ ಒಂದರಮೇಲೊಂದು ಬಿದ್ದರೆ ಆಗುವ ಆಕೃತಿಯ ಮಧ್ಯಭಾಗದಲ್ಲಿ ಇರುವಂಥ ಕೈ ಮುಗಿದುಕೊಂಡು ನಿಂತಂಥ ಸಂಜೀವ ಮುಖ್ಯ ಪ್ರಾಣನಿಗೆ ಯಂತ್ರೋದ್ಧಾರಕ ಪ್ರಾಣದೇವರೆಂಬ ಹೆಸರು. ಪುರಂದರ ದಾಸರು ಈ ಗುಡಿಯಲ್ಲಿ ಕೆಲವು ದಿವಸ ಪ್ರಾಣದೇವರ ಸೇವೆಯನ್ನು ಮಾಡುತ್ತಾ ಕಾಲ ಕಳೆದರೆಂದು ಹೇಳುತ್ತಾರೆ ಈ ಗುಡಿಯ ಮಧ್ಯರಂಗದಲ್ಲಿ ಕಪಿಯಂತೆ ಮುಖಪುಚ್ಛಗಳುಳ್ಳಂಥಾ ತುದಿಗುಂಡಿಯಿಂದ ಕೂತು ಕೈಯಲ್ಲಿ ಕಲ್ಲಿನ ಪುಸ್ತಕದ ಓಲೆಯನ್ನು ಹಿಡಿದಂಥಾ ಒಂದು ಒಂದೂವರೆ ವರುಷದ ಕೂಸಿನಷ್ಟು ಕಾಣುವಂಥಾ ಮಾಧ್ವಮತ ಸ್ಥಾಪಕರಾದಂಥಾ ಶ್ರೀಮಧ್ವರಾಯರ ಪೂರ್ಣ ಪ್ರತಿಮೆಯು ಬಹು ಮನೋಹರವಾಗಿರುತ್ತದೆ ಇದನ್ನು ಸುಮಾರು ನೂರಾರು ವರ್ಷಗಳ ಕೆಳಗೆ ಸ್ವಪ್ನದೃಷ್ಟಾಂತದಿಂದ ಒಬ್ಬ ಭಾವಿಕನು ನದಿಯೊಳಗಿಂದ ತಂದು ಸ್ಥಾಪಿಸಿದನೆಂದು ಹೇಳುತ್ತಾರೆ. ಇದರ ನೆರೆಯಲ್ಲಿಯೇ ಸೂರ್ಯನಾರಾಯಣನ ಗುಡಿಯುಂಟು. ಇವೆಲ್ಲ ಮೂರ್ತಿಗಳು ನಿತ್ಯದಲ್ಲಿ ಪೂಜೆಯನ್ನು ಕಾಣುತ್ತಿರಬಹುದೆಂದು ತೋರುತ್ತದೆ.

ಸೀತಾಕುಂಡವೂ ಸೀತೆಯ ಶಿರಗೂ.

ಶ್ರೀರಾಮದೇವರ ಗುಡಿಯಿಂದ ನದಿಯನ್ನು ಎಡಕ್ಕೆ ಬಿಟ್ಟು ಮುಂದೆ ನಡೆಯಲು ಒಂದು ಕಲ್ಲುಪಡಿಯ ಸಂದಿಯಲ್ಲಿ ಒಂದು ಚಿಕ್ಕ ಕಲ್ಲಿನ ಮೇಲೆ ಸುಮಾರು ಒಂದು ಫೂಟು ಎತ್ತರವಿರುವ ಶ್ರೀ ರಾಮಲಕ್ಷ್ಮಣ ಸೀತಾ ಹನುಮಂತರ ಪ್ರತಿಮೆಗಳುಂಟು. ಆ ಸ್ಥಳದಲ್ಲಿ ಮಣ್ಣಿಲ್ಲದ ಕಲ್ಲು ಬಂಡೆಯು ಹಾಸಿಕೆಯುಂಟು ಆ ಹಾಸಿಕೆಯಲ್ಲಿ ಸುಮಾರು ಒಂದು ಗೇಣು ಅಗಲವಾದಂಥ ಎಡಬಲದ ಶಿಲೆಯಿಂದ ಭಿನ್ನವಾದಂಥ ಒಂದು ಶಿಲೆಯ ಪಟ್ಟಿಯು ಸುಮಾರು ನೂರಾರು ಮೊಳ ಕಾಣುವದು. ಇದಕ್ಕೆ ಸೀತೆಯ ಶಿರಗೆನ್ನುವರು. ಇದು ರಾವಣನು ಸೀತೆಯನ್ನು ಎಳೆದೊಯ್ಯುವಾಗ ಆಕೆಯ ಶಿರ

ಗು ನೆಲಗುಂಟ ಅಲೆದ ಕಲೆಯಿಂದು ಹೇಳುವರು. ಆದರೆ ಇದು ಆ ಬಂಡೆಯೊಳಗೆ ಹರಿದು ಬಂದ ಶಿಲಾರಸದ ಯೋಗದಿಂದುಂಟಾದ ಶಿಲೆಯ ರೂಪಾಂತರದ ಪಟ್ಟಿಯೆಂದು ಸಹಜವಾಗಿ ತಿಳಿಯುವದು. ಈ ಶರಗಿನ ಹತ್ತಿರವೇ ಒಂದು ಸಣ್ಣ ಬೆಂಚಿಯುಂಟು ಅದಕ್ಕೆ ಸೀತಾಕುಂಡವೆಂಬ ಹೆಸರು.

ವಿಜಯ ವಿಠಲನ ಗುಡಿಯು—ಸೀತಾಕುಂಡದಿಂದ ಸುಮಾರು ೧-೧॥ ಮೈಲುಗಳ ಅಂತರದಲ್ಲಿ ಈಶಾನ್ಯಕ್ಕೆ ಈ ಗುಡಿಯುಂಟು. ಈ ಗುಡಿಯ ಮುಂದೆ ಇರುವ ಬೈಲಲ್ಲಿ ನಿಂತು ಕೊಂಡು ನಾಲ್ಕೂ ಕಡೆಗೆ ನೋಡುವ ಪ್ರೇಕ್ಷಕನ ಮನಸ್ಸಿನಲ್ಲಿ ತರತರದ ವಿಚಾರತರಂಗಗಳು ಉದ್ಭವಿಸುವವು. ವಿಠಲನ ಮೂರ್ತಿಯಂತೂ ಗುಡಿಯಲ್ಲಿಲ್ಲ, ಅಷ್ಟೇ ಅಲ್ಲ, ಆ ಪ್ರಾಕಾರದಲ್ಲಿರುವ ಮೂರು ಭವ್ಯವಾದ ಮಂದಿರಗಳಲ್ಲಿ ಒಂದರೊಳಗಾದರೂ ಮೂರ್ತಿ ಇಲ್ಲ. ಹೆಬ್ಬಾಗಿಲುಗಳು ಬಿದ್ದು ಹೋಗಿವೆ. ಗೋಪುರಗಳು ನಡುವೆ ಕತ್ತರಿಸಿ ಕಡಕೊಂಡು ಬಿದ್ದಿರುವದರಿಂದ ಎಡಬಲದ ಗೋಡೆಗಳು ಮಾತ್ರ ಹಾಗೇ ನಿಂತುಕೊಂಡು ತಮ್ಮ ಹಿಂದಿನ ಸೌಭಾಗ್ಯವನ್ನೂ ಪ್ರಸ್ತುತದ ದೆಶೆಗೇಡಿತನವನ್ನೂ ಜಗಕೆಲ್ಲ ಸಾರುತ್ತವೆ. ಈ ವಿಠಲನನ್ನು ರಾಮರಾಜನು ಪಂಢರಪೂರದಿಂದ ಕರಕೊಂಡು ಬಂದನೆಂದು ಹೇಳುತ್ತಾರೆ. ವಿಠಲನ ದೇವಾಲಯದ ಎದುರಿಗೆ ಎಡಬದಿಯಲ್ಲಿ ಒಂದು ಇಮಾರತಿಯುಂಟು. ಇದರಲ್ಲಿ ತೋರಿ ಬರುವ ಕೆಲಸಗಳನ್ನು ನೋಡಿ ಬಹು ಆಶ್ಚರ್ಯವಾಗುತ್ತದೆ. ಒಂದು ಕಂಬದ ಮೇಲ್ಗಡಿಯ ಅರ್ಧದಲ್ಲಿ ಸೀಳಿ ಎಂಟು ಭಾಗಗಳನ್ನು ಮಾಡಿರುವರು. ಅವುಗಳನ್ನು ಬಾರಿಸಿದರೆ ಕಂಚು ಬಾರಿಸಿದಂತೆ ಸಪ್ಪಳವಾಗುವದು. ದಶಾವತಾರದ ಚಿತ್ರಗಳನ್ನು ಅದರಲ್ಲಿ ನೋಡಬಹುದು ಕಂಬದ ಗಡಿಗೆಯಲ್ಲಿ ಸಿಂಹ ಮುಖವನ್ನು ಮಾಡಿ ಅದರ ಬಾಯಲ್ಲಿ ಆನೆಯ ತಲೆಯನ್ನು ಮಾಡಿರುವರು. ಸೊಂಡಿಯು ತಳತನಕ ಇಳಿಬಿದ್ದಿರುವದು. ಮೆಟ್ಟುಗಳ ಎಡಬಲದಲ್ಲಿ ಒಂಡಿಯ ಬದಲಾಗಿ ಕಲ್ಲಿನ ಆನೆಗಳನ್ನು ನಿಲ್ಲಿಸಿರುವರು. ಈ ಎಲ್ಲ ಇಮಾರತಿಯನ್ನು ನೋಡಿ, ಸಾರ್ವಭೌಮರಾಜನ ಹೊರ್ತು ಭೂಮಿಯೊಳಗಿನ ಯಾವ ಕೋಟ್ಯಾಧೀಶನಾದರೂ ಇಂಥವುಗಳ

ನ್ನು ಕಟ್ಟಿಸಲಾರನೆಂಬ ಸಿದ್ಧಾಂತವು ದೃಢವಾಗುವದು. ಈ ಗುಡಿಗಳ ಮುಂಭಾಗದಲ್ಲಿ ಕಲ್ಲಿನ ತೇರುಂಟು ಗಾಲಿ ಅಚ್ಚು, ಗಡ್ಡಿ ಯಾವತ್ತೂ ಕಲ್ಲಿನವೇ. ಇವೆಲ್ಲವುಗಳನ್ನು ಕಟ್ಟಿಸಿದ ಮಹಾರಾಯನು ಕೊಕ್ಕನ್ನು ಎಷ್ಟು ವೆಚ್ಚ ಮಾಡಿರಬಹುದು? ಎಷ್ಟು ದಿವಸಗಳವರೆಗೆ ಎಷ್ಟು ಮಂದಿ ದುಡಿದಿರಬಹುದು? ಈ ಕೆಲಸವನ್ನು ಆರಂಭಿಸಿ ಮುಗಿಸಿದ ಮಹಾರಾಯನಿಗೆ ಎಷ್ಟು ಸಂತೋಷವಾಗಿರಬಹುದು? ನಮ್ಮ ಧರ್ಮಶಾಸ್ತ್ರದಂತೆ ಕಟ್ಟಿಸಿದವನು ಒಂದು ವೇಳೆ ಪುನರ್ಜನ್ಮವನ್ನು ಹೊಂದಿ ಬಂದು ಇವುಗಳನ್ನು ನೋಡಿದ್ದರೆ ಎಷ್ಟು ವಿಷಾದ ಪಟ್ಟಿರಬಹುದು? ಯಾವನು ತನ್ನ ಹೆಸರು ಚಿರಕಾಲ ಭೂಲೋಕದಲ್ಲಿರಬೇಕೆಂತಲೂ, ತಾನು ಗಳಿಸಿದ ಹಣವು ಸದ್ವ್ಯಯವಾಗಬೇಕೆಂತಲೂ ಬಯಸಿ ಈ ಕೃತ್ಯಗಳನ್ನು ಮಾಡಿಸಿದನೋ, ಆ ಮಹಾರಾಯನ ಈ ಕೃತ್ಯಗಳು ತಾವು ನಾಮಶೇಷವಾಗುತ್ತ ನಡೆದಿರುವದಲ್ಲದೆ, ಆ ಮಹಾ ಪುರುಷನ ಹೆಸರನ್ನು ಸಹ ಅದೇ ಮಾರ್ಗಕ್ಕೆ ಹಚ್ಚಿರುವದನ್ನು ನೋಡಿ ಕಡು ಖೇದವೆನಿಸುತ್ತದೆ. ಕಾಲಚಕ್ರದ ಮಹಿಮೆಯು ಅಗಾಧವು. ಹೇ ಕಾಲಾ, ನಿನಗೆ ನಮೋ ನಮಃ

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೯೦ ನೇ ಪುಟದಿಂದ ಮುಂದೆ ಸಾಗಿದ್ದು.)

೬ ಪುಸ್ತಕದೊಳಗೆ ಇದ್ದಕ್ಕಿದ್ದಂತೆ ಟಿಪ್ಪಣಿಗಳನ್ನು ಬರಕೊಳ್ಳುವದು ತೀರ ಹಾಳು ಇದರಿಂದ ಶರೀರಕ್ಕೆ ದುಡಿತವಾಗುವದೇ ಹೊರ್ತು ಮನಸಿಗೆ ಯಾವ ಬಗೆಯಿಂದಲೂ ಸಂಸ್ಕಾರವಾಗದು.

೭. ವಿದ್ಯಾರ್ಥಿಗಳು ಟಿಪ್ಪಣಿಯ ಪುಸ್ತಕದಲ್ಲಿ ಬರಕೊಂಡದ್ದನ್ನು ಕ್ವಚಿತ್ತಾಗಿ ಓದುವರು ಸ್ಮರಣದಲ್ಲಿಡುವದಂತೂ ದೂರಾಪಾಸ್ತವು. ಆದ್ದರಿಂದ ಬರಕೊಂಡ ಶ್ರಮವೆಲ್ಲ ನಿರರ್ಥಕವೇ. ಇದಲ್ಲದೆ ಈ ಪದ್ಧತಿಯಿಂದ ಸ್ಮರಣಶಕ್ತಿಯು ಬಿಗುವು ಸಡಿಲಾಗಿ ತೇಜವೂ ಕುಂದುತ್ತದೆ ನೋಟಬುಕ್ಕಿನಲ್ಲಿ ನೋಡಿಕೊಂಡು ಯಾವದೊಂದು ಪ್ರಶ್ನಕ್ಕೆ ತಾತ್ಕಾಲಿಕ

ಾಗಿ ಉತ್ತರ ಕೊಡುವ ಸಾಮರ್ಥ್ಯವು ಕಟ್ಟಾಗುತ್ತದೆ. ಈ ಸ್ಮೃತ್ಯಪಕರ್ಷಣದ ಸಂಬಂಧದಿಂದ ಮತಭೇದವುಂಟು. ವಿದ್ಯಾರ್ಥಿಗಳು ಸ್ವತಃ ಸಿದ್ಧಮಾಡಿದ ಟಿಪ್ಪಣಿಗಳು ಎಚ್ಚರ ದಿಂದ ಮಾಡಲ್ಪಟ್ಟಿದ್ದರೆ, ಪುಥಕ್ಕರಣ ಸಾಮರ್ಥ್ಯವೂ ಪುನರಾವಲೋಕನ ಸೌಕರ್ಯವೂ ಬೆಳೆಯುವವೆಂದು ಕೆಲವರು ಪ್ರತಿಪಾದಿಸುವರು.

೪. ಉದ್ದಕ್ಕೆ ಟಿಪ್ಪಣಿ ತೆಗೆಯುವ ನಡತೆಯು ಬಹಳ ಹಾನಿಕಾರಕವಾಗಿರುತ್ತದೆ ಇದರಲ್ಲಿ ಕಳೆದ ಕಾಲವು ಹಾಳಾಗುವದಲ್ಲದೆ ಚಿತ್ತಸ್ವಾಸ್ಥ್ಯವು ಕೆಡುತ್ತದೆ.

ಪರೀಕ್ಷೆಯ ಪ್ರಶ್ನೆಗಳು.

೧. ಹೊಸ ಶಿಕ್ಷಕನು ತನ್ನ ಕೆಲಸದ ರೋಜನಾಮೆ ಪಾಠದ ಟಿಪ್ಪಣಿಗಳನ್ನು ಬರೆಯುವವರಿಂದ ಆಗುವ ಲಾಭಗಳನ್ನು ನಿವರಿಸಿರಿ. ಇವುಗಳನ್ನು ನೀವು ಇಷ್ಟಿದ್ದರೆ ಅವುಗಳನ್ನು ವರ್ಣಿಸಿರಿ.

೨. ಅಭ್ಯಾಸದ ಟಿಪ್ಪಣಿಯ ಪುಸ್ತಕಗಳೂ ಟಿಪ್ಪಣಿಯ ಪುಸ್ತಕಗಳೂ ಇವುಗಳ ಉಪಯೋಗಗಳನ್ನು ಸ್ವಾನುಭವದ ಮೇರೆಗೆ ಬರೆಯಿರಿ; ಇವುಗಳನ್ನು ಕುರಿತು ನಿಯಮಗಳನ್ನು ಹೇಳಿರಿ.

೩. ಮೇಲಾದ ಪರೀಕ್ಷೆಪದ್ಧತಿಯಾವದು: ಯಾವ ಮಾದರಿಯ ಪ್ರಶ್ನೆಗಳನ್ನು ವರ್ಜ ಮಾಡತಕ್ಕದ್ದು?

೪. ಹೊಸ ವಿದ್ಯಾರ್ಥಿಗಳು ಶಾಲೆಗೆ ಬರಲು ಅವರನ್ನು ಯಾವ ವರ್ಗದಲ್ಲಿ ಶೇರಿಸಬೇಕೆಂಬದನ್ನು ನಿರ್ಣಯಿಸುವ ಮೇಲಾದ ಮಾರ್ಗವು ಯಾವದು? ನಿಮ್ಮ ಉತ್ತರವನ್ನು ಕಾರಣಸಹಿತವಾಗಿ ಬರೆಯಿರಿ.

೫ ವಿದ್ಯಾರ್ಥಿಗಳು ವಾಡಿಕೆಯಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಒಂದೇ ಶಬ್ದದಿಂದ ಕೊಡುವರು. ಇಂಥ ಉತ್ತರಗಳನ್ನು ಸ್ವೀಕರಿಸಲಿಕ್ಕೆ ಪ್ರತ್ಯವಾಯವೇನು ಪೂರ್ಣ ವಾಕ್ಯದಿಂದಾಗಲಿ ವಾಕ್ಯಗಳಿಂದಾಗಲಿ ಉತ್ತರವನ್ನು ಕೊಡುವ ಚಟವನ್ನು ಹಚ್ಚಬೇಕಾದರೆ ಉಪಾಯವೇನು?

೬. ಪ್ರತಿ ಒಂದು ಪಾಠ ಮುಗಿಯಲು ಆ ಸಂಬಂಧದ ಪ್ರಶ್ನೆಗಳನ್ನು ತೆಗೆಯಲಿಕ್ಕೆ ವಿದ್ಯಾರ್ಥಿಗಳಿಗೆ ಹಚ್ಚುವದರಿಂದ ಆಗುವ ಲಾಭ ನಷ್ಟಗಳನ್ನು ವಿವರಿಸಿರಿ.

MODEL OBJECT LESSON—LEAD

ಮಾದರಿಯ ವಸ್ತುಪಾಠ—ಸೀಸು.

ಉಪಕರಣಗಳು ಸೀಸಿನತಗಡು, ಸ್ಯಾಂಡಪೇಪರ, ಹೊಸರೂಪಾಯಿ, ಹಳೇ (ಕಪ್ಪಾದ) ರೂಪಾಯಿ, ಕಬ್ಬಿಣದ ಹಾಗೂ ಸೀಸಿನ ಮತ್ತು ಕಟ್ಟಿಗೆಯ ತುಂಡುಗಳ ಸಮಾನ ಆಕಾರದವು (ವರ್ಗದೊಳಗಿನ ಹುಡುಗರಿಗೆ ಸಾಲುವಷ್ಟು) ಸೀರಿನ ಪಾತೇಲಿ, ಚಾಕು, ಸುತ್ತಿಗೆ, ಸೀಸಿನ ಮತ್ತು ಕಬ್ಬಿಣದ ಮೊಳೆಗಳು; ಕೊಳಿವೆಗಳು ಅಥವಾ ತಗಡುಗಳು. ಕಬ್ಬಿಣದ ಸೌಟು ಕಾಗದ, ದೀವಿಗೆ, ಗಜಗ, ಸೀಸು ತುಂಬಿದ ಗಜಗ.

ಉಪಕ್ರಮ:—ಸೀಸಿನ ತುಂಡುಗಳನ್ನು ಕೈಯಲ್ಲಿಕೊಟ್ಟು ವಿಷಯಾರಂಭ ಮಾಡುವದು.

ಪ್ರಯೋಗ	ಫಲಿತ.	ಸಿದ್ಧಾಂತ.
ಕಟ್ಟಿಗೆಯ ತುಂಡು, ಕಬ್ಬಿಣದ ತುಂಡು, ಸೀಸಿನ ತುಂಡು ಕೈಯಲ್ಲಿಹಿಡಿದು, ತೂಗಿ ನೋಡಲಿಕ್ಕೆ ಹೇಳುವದು. ನೀರೊಳಗೆ ಮೂರೂ ತುಂಡುಗಳನ್ನು ಹಲ್ಲುವದು. ಸೀಸು ತುಂಬಿದ ಗಜಗವನ್ನು ಅಟದಲ್ಲಿ ಯಾಕೆ ಉಪಯೋಗಿಸುತ್ತಾರೆ?	ಸೀಸು, ಕಟ್ಟಿಗೆ ಕಬ್ಬಿಣಗಳಿಗಿಂತ ಜಡವಸ್ತು. ಕಟ್ಟಿಗೆ ತೇಲುತ್ತದೆ ಕಬ್ಬಿಣ ಸೀಸುಗಳು ಮುಳುಗುತ್ತವೆ. ಕಸುವಿನಿಂದ ಮುಂದಕ್ಕೆ ಹೋಗುತ್ತದೆ	ಜಡವಾದದ್ದು.

ಕಬ್ಬಿಣದ ಹಾಗೂ ಸೀಸಿನ ತುಂಡುಗಳ ಮೇಲೆ ಸಾಗುರಿನಿಂದಾಗಲಿ, ಚಾಕುವಿನಿಂದಾಗಲಿ ಗೀರಿ ತೋರಿಸುವದು.	ಕಬ್ಬಿಣದ ಮೇಲೆ ಗೀರುಬೀಳುವದಿಲ್ಲ ಸೀಸಿನಮೇಲೆ ಬೀಳುವದು.	ಮಿದುವಾದದ್ದು.
ಕಬ್ಬಿನದ ಮೊಳೆಯನ್ನೂ ಮತ್ತು ಸೀಸಿನ ಮೊಳೆಯನ್ನೂ ಕಾಗದದಮೇಲೆ ಎಳೆಯುವದು.	ಕಬ್ಬಿಣದ ಮೊಳೆಯಿಂದ ಎಳೆದರೆ ಗೆರೆ ಮೂಡುವದಿಲ್ಲ. ಸೀಸಿನ ಮೊಳೆಯಿಂದ ಮೂಡುವದು.	
ಸೀಸಪೆನಸಿಲಿನಿಂದ (ಗ್ರಾಫೈಟ) ಕಾಗದದ ಮೇಲೆ ಎಳೆಯುವದು.	ಗೆರೆ ಮೂಡುತ್ತದೆ.	
ಸೀಸಿನಕಡ್ಡಿ, (ಗ್ರಾಫೈಟ), ಸೀಸು ಇವೆರಡನ್ನು ದೀಪದಮೇಲೆ ಹಿಡಿದು ತೋರಿಸುವದು	ಸೀಸಿನಕಡ್ಡಿ (ಗ್ರಾಫೈಟ) ಬೂದಿಯಾಯಿತು. ಸೀಸು ಕರಗಿ ಗಟ್ಟಿಯಾಯಿತು.	ಸೀಸಿನಕಡ್ಡಿ (ಗ್ರಾಫೈಟ) ಸೀಸು ಅಲ್ಲ.
ಸೀಸಿನತುಂಡನ್ನು ಸುತ್ತಿಗೆಯಿಂದ ಬಡಿದು ತೋರಿಸುವದು.	ಹಲಜಿಯಾಗುತ್ತದೆ. ಅಂದರೆ ತಗಡಾಗುತ್ತದೆ.	ಸುತ್ತಿಗೆಯಿಂದ ಸುಲಭವಾಗಿ ಬಡಿದು ಹಿಗ್ಗಿಸಲಿಕ್ಕೆ ಬರುತ್ತದೆ.
ಕಬ್ಬಿಣದಮೊಳೆ, ಸೀಸಿನಮೊಳೆಗಳನ್ನು ಮಣಿಸಲಿಕ್ಕೆ ಹೇಳುವದು.	ಕಬ್ಬಿಣದ ಮೊಳೆಯು ಮಣಿಯುವದಿಲ್ಲ ಸೀಸಿನದು ಮಣಿಯುತ್ತದೆ.	ಮಣಿಯುವಂಥಾದ್ದು.
ಕಬ್ಬಿಣದಕೊಳವೆ, ಸೀಸಿನಕೊಳವೆಗಳನ್ನು ಮಣಿಸಿ ತೋರಿಸುವದು.		
ಟೀಪು :—ನಳದ ಕೊಳವೆಗಳನ್ನು ವಘಡುವದು		

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಸೀಸನತುಂಡು ತೋರಿಸುವದು. ಬಳಿಕ ಸ್ಯಾಂಡ ಪೇಪರಿನಿಂದ ತಿಕ್ಕಿ ತೋರಿಸುವದು. (ಹಳೆ, ಹೊಸ ರೂಪಾಯಿಗಳನ್ನು ತೋರಿಸಿ ಗೊತ್ತು ಮಾಡಿಕೊಡುವದು)	ಸೀಸು ಕವ್ವಾಗಿತ್ತು, ತಿಕ್ಕಿದರೆ ಹೊಳೆಯುತ್ತದೆ.	ಮಿಂಚುಳ್ಳದ್ದು. ಆದರೆ ಇಟ್ಟರೆ ಹೊಳವಿಲ್ಲದ್ದಾಗುವದು.
ಬಣ್ಣ ಕೇಳುವದು.		ಬೂದೀ ಬಂಣದ್ದು.
ಕಬ್ಬಿಣದ ಸೌಟಿನಲ್ಲಿ ಕಬ್ಬಿಣದ ತುಂಡು ಸೀಸಿನ ತುಂಡುಹಾಕಿ ಕರಗಿಸುವದು. ಹಾಗೂ ಆಗಳಿಡಿಸಿ ಅಥವಾ ಕಡ್ಡಿಯಿಂದ ತಿರುವಿ ತೋರಿಸುವದು.	ಸೀಸು ಕರಗಿತು. ಕಬ್ಬಿಣವು ಕರಗಲಿಲ್ಲ.	ಸ್ವಲ್ಪ ಕಾಪಿನಿಂದ ಕರಗುವದು.
ರೂಪಾಯಿಯನ್ನು ಬಾರಿಸುವದು ಬಳಿಕ ಸೀಸಿನ ತುಂಡನ್ನು ಬಾರಿಸುವದು.	ರೂಪಾಯಿಗೆ ನಾದವುಂಟು. ಸೀಸು ಟೊಕ್ ಅನ್ನುವದು.	ನಾದವಿಲ್ಲದ್ದು.
ಸೀಸು, ಕಬ್ಬಿಣ, ಬೆಳ್ಳಿ ಇವುಗಳೊಳಗಿನ ಭೇದವನ್ನು ಹಿಂದೆ ಕಲಿಸಿದ್ದರಮೇಲಿಂದ ಹೊರಡಿಸುವದು.		ವ್ಯವಹಾರುಪಯೋಗ

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಿಂ ಸಚ್ಛಿಕ್ಷಣೋತ್ಕರ್ಷಮುಂ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತವೆವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಚಿತರ್ಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೮] ಜೂನ ೧೯೦೨. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಅಧ್ಯಾಪಕರಿಗೆ ಸೂಚನೆಯು.

ಶಾಲಾಪತ್ರಿಕೆಯ ಉದ್ದೇಶವೇನೆಂಬದು ಎಲ್ಲ ಶಿಕ್ಷಕರಿಗೂ ಗೊತ್ತುಂಟು. ಮುಖ್ಯವಾಗಿ ಶಿಕ್ಷಣಕ್ಕೆ ಉಪಯೋಗವುಳ್ಳ ವಿಷಯಗಳೇ ಇದರಲ್ಲಿ ಬರುವವು. ವಿವಿಧ ವರ್ತಮಾನಗಳು ಇದರಲ್ಲಿ ಸೇರಲಾರವು. ಯಾಕೆಂದರೆ ಇದು ವರ್ತಮಾನಪತ್ರವಲ್ಲ. ಬೇರೆ ಬೇರೆ ವಿಷಯಗಳನ್ನು ಸರಿಯಾಗಿ ಕಲಿಸತಕ್ಕ ಬಗೆಗಳೂ, ವಿದ್ಯಾರ್ಥಿಗಳನ್ನು ತಿದ್ದುವ ಮೇಲಾದ ಪ್ರಕಾರಗಳೂ, ಅಧ್ಯಾಪಕರಿಗೆ ಅಪರಿಚಿತವಾದಂಥ ಐತಿಹ್ಯ ಶಾಸ್ತ್ರೀಯ ವಿಷಯಗಳೂ, ಮೂಢ ಜನರಲ್ಲಿ ತೋರಿ ಬರುವ ಮೂಢ ಶ್ರದ್ಧೆಗಳ ನಿರಾಕರಣದ ಲೇಖಗಳೂ ಇದರಲ್ಲಿ ಬರುವ ಮುಖ್ಯ ವಿಷಯಗಳು. ಇವಲ್ಲದೆ ಸ್ಥಲಾನುಕೂಲತೆಯಂತೆ ಪರೀಕ್ಷೆಯ ಪ್ರಶ್ನೆಗಳೂ ವಿದ್ಯಾಖಾತೆಯ ನೋಟೀಸುಗಳೂ, ಶಿಕ್ಷಕರಿಂದ ಬಂದ ಪತ್ರಗಳೂ ಮುದ್ರಿಸಲ್ಪಡುವವು. ಆದರೆ ಪ್ರಸ್ತುತದಲ್ಲಿ ಬರುವ ಪತ್ರಗಳಲ್ಲಿ ಬಹುತರವಾಗಿ ಸಾಲಿಯ ಪರೀಕ್ಷೆಯ ಪರಿಣಾಮದ ಸಂಬಂಧದ ಪತ್ರಗಳೇ ಹೆಚ್ಚಿರುವವು. ಇದರಿಂದ ಉಪ

ಯೋಗವಿಲ್ಲೆಂತಲ್ಲ; ತಕ್ಕಷ್ಟು ಉಪಯೋಗವುಂಟು. ಅಷ್ಟರೂ ಇಷ್ಟಕ್ಕೂ ಗೌರವದ ವಿಷಯಗಳು ಇನ್ನೂ ಅನೇಕ ಉಂಟು. ಕಲಿಸುವದರಲ್ಲಿ ತಮಗೊದಗಿದ ತೊಂದರೆಗಳನ್ನೂ ತಮ್ಮ ಎಡಬಲದಲ್ಲಿರುವ ಸೃಷ್ಟಿ ಚಮತ್ಕಾರಗಳನ್ನೂ ಅವುಗಳ ಕಾರ್ಯಕಾರಣಭಾವವನ್ನೂ ಈ ಪತ್ರದಲ್ಲಿ ಪ್ರಸ್ತಾಪಿಸುವದು ಶಿಕ್ಷಕರ ಕರ್ತವ್ಯವು. ಇದಲ್ಲದೆ ಕನ್ನಡ ಭಾಷೆಯಲ್ಲಿ ಪೂರ್ವದಲ್ಲಿ ಬರೆದ ಗದ್ಯಗ್ರಂಥಗಳಿಲ್ಲದ್ದರಿಂದ ಆ ಭಾಷೆಯ ಬರವಣಿಗೆಯ ಬಗೆಯನ್ನಾದರೂ ಚರ್ಚಿಸಿ ಗೊತ್ತು ಪಡಿಸುವದು ಅವಶ್ಯವಾಗಿರುವದು ಹಾಗೂ ಈ ಭಾಷೆಯೊಳಗಿನ ಶಬ್ದಗಳೊಳಗೆ ದೇಶಪರತ್ವದಿಂದುಂಟಾಡ ರೂಪವೈಲಕ್ಷಣ್ಯವನ್ನು ತೆಗೆದು ಸಾಧುರೂಪಗಳನ್ನು ಪ್ರಚಾರದಲ್ಲಿ ತರುವದಾದರೂ ಅತ್ಯವಶ್ಯವುಂಟು. ಇದೇ ಮೇರಿಗೆ ಹೊಸ ಇಯತ್ತೆಗಳಲ್ಲಿ ಸೇರಿಕೊಂಡ ವಸ್ತುಪಾಠ ಶಾಸ್ತ್ರೀಯ ಪಾಠಗಳ ಸಂಬಂಧದಿಂದ ಚರ್ಚಿಸುವದಾದರೂ ಪ್ರಯೋಜನಕರವಾದ ಸಂಗತಿಯು ಆದ್ದರಿಂದ ನಾವು ಶಿಕ್ಷಕವರ್ಗಕ್ಕೆ ಸೂಚಿಸುವದೇನೆಂದರೆ, ಅವರು ತಮ್ಮ ಸ್ವಂತ ಸುಧಾರಣೆಗಾಗಿಯೂ ಶಾಲಾಸುಧಾರಣೆಗಾಗಿಯೂ ಅವಶ್ಯವಾದ ವಿಷಯಗಳನ್ನು ಕೈಕೊಂಡು ಅವುಗಳ ಬಗ್ಗೆ ಈ ಪತ್ರಿಕೆಯಲ್ಲಿ ಚರ್ಚೆ ನಡಿಸುವದು ವಿಹಿತವು ಮನುಷ್ಯನು ಅಮರಣ ವಿದ್ಯಾರ್ಥಿಯಾಗಿರುವನೆಂಬ ಮಾತನ್ನು ಮರೆಯಕೂಡದು. ಶಿಕ್ಷಕನಂತೂ ಬಹುಶ್ರುತನೂ ಪೂರ್ಣನೂ ಆಗಿರಬೇಕೆಂಬದು ಸರ್ವಸಮ್ಮತವಾದದ್ದು. ಈ ತತ್ವವನ್ನನುಸರಿಸಿ ನಾಲ್ಕೂ ಜಿಲ್ಲೆಯಲ್ಲಿರುವ ಅಧ್ಯಾಪಕರು ಇನ್ನು ಮುಂದೆ ಈ ಬಗೆಯ ವಿಚಾರದಲ್ಲಿ ತೊಡಗುವರೆಂತಲೂ, ಆ ವಿಚಾರಗಳನ್ನು ಈ ಪತ್ರಿಕೆಯ ದ್ವಾರದಿಂದ ಚರ್ಚಿಸುವರೆಂತಲೂ ನಂಬಿ ನಾವು ಈ ಚಿಕ್ಕ ಸೂಚನೆಯನ್ನು ಮುಗಿಸುತ್ತೇವೆ.

ಸರ್ ೧೯೦೧ನೇ ಇಸವಿಯಲ್ಲಾದ ಧಾರವಾಡ ಜಿಲ್ಲೆಯ ಮುಲ್ಕೀ ಪರೀಕ್ಷೆಯ ಪರಿಣಾಮವು ಬಹು ಸಮಾಧಾನಕರವಾಗಿರುವದು. ಶಿಕ್ಷಕರು ತಮ್ಮ ಕೆಲಸವನ್ನು ಚನ್ನಾಗಿ ಮಾಡಿರುವರು. ಇದರಂತೆ ಮುಂದಾದರೂ ದಾನತಿ ಮಾಡಿ

ಕಲಿಸಿದರೆ ವಿದ್ಯಾರ್ಥಿಗಳ ಹೊತ್ತು ಹಣಗಳು ಹಾಳಾಗವೆಂದು ಎಣಿಸುತ್ತೇವೆ. ಈ ಪರೀಕ್ಷೆಯು ಸಂಬಂಧವಾಗಿ ಕೆಲವು ಗೌರವದ ಸಂಗತಿಗಳನ್ನು ಇದರಡಿ ಬರೆಯುವೆವು.

ಒಟ್ಟಿಗೆ ಈ ಜಿಲ್ಲೆಯೊಳಗಿನ ೪೦ ಸಾಲಿಗಳ ಮಾಸ್ತರರು ಮಾತ್ರ ತಮ್ಮ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳಿಸಿದ್ದರು. ಇಬ್ಬರು ಗಾವಠಿ ಸಾಲಿಯ ಮಾಸ್ತರರಾದರೂ ಕೆಲವು ವಿದ್ಯಾರ್ಥಿಗಳ ಅರ್ಜಿಯನ್ನು ಕಳಿಸಿದ್ದರು, ಆದರೆ ಆ ವಿದ್ಯಾರ್ಥಿಗಳು ಪರೀಕ್ಷೆಗೆ ಬರಲೇ ಇಲ್ಲ. ಮನೆಯಲ್ಲಿ ಕಲಿತುಕೊಂಡು ಪರೀಕ್ಷೆಗೆ ಬಂದವರು ೩೩ ಮಂದಿ. ಇವರಾದರೂ ಯಾವದೊಂದು ಸಾಲಿಯಲ್ಲಿ ಮೊದಲು ಕಲಿತವರೇ ಇರುವರು. ಅಂತು ಪರೀಕ್ಷೆಗೆ ಕುಳಿತ ೬೪೩ ಮಂದಿಯಲ್ಲಿ ೧೫೭ ಹುಡುಗರು ತೇರ್ಗಡೆ ಹೊಂದಿದರು. ಈ ತೇರ್ಗಡೆ ಹೊಂದಿದವರಲ್ಲಿ ೧೫೦ ಮಂದಿ ಹಿಂದೂ ವಿದ್ಯಾರ್ಥಿಗಳೂ ೪ ಮಂದಿ ಕ್ರೈಸ್ತಿಯನ್ನರೂ ೩ ಮಂದಿ ಮುಸಲ್ಮಾನರೂ ಇರುವರು. ಇನ್ನೊಂದು ಬಗೆಯಿಂದ ಜಾತಿಯಲ್ಲಿ ವರ್ಗೀಕರಣ ಮಾಡಿದರೆ ೪೦ ಮಂದಿ ಬ್ರಾಹ್ಮಣರೂ ೬೪ ಮಂದಿ ಲಿಂಗಾಯತರೂ ಇಬ್ಬರು ವೈಶ್ಯರೂ ಒಬ್ಬನು ಜೈನನೂ ಮೂವರು ಸಾಳೇರೂ ಅಷ್ಟೇ ಮಂದಿ ಮುಸಲ್ಮಾನರೂ ೪ ಮಂದಿ ಅರೇರೂ ಇರುವರು. ಇಷ್ಟು ದಿವಸ ಕ್ರೈಸ್ತಿಯನ್ನರು ಮುಂದರಿದದ್ದು ಕಂಡು ಬಂದಿದ್ದಿಲ್ಲ. ಈಗೆರಡು ವರ್ಷದಿಂದ ಆ ಜನರಲ್ಲಿ ಈ ಪರೀಕ್ಷೆಯ ಅಭಿರುಚಿಯು ಬೆಳೆದಿರುವದು. ಮನೆಯಲ್ಲಿ ಕಲಿತು ಬಂದವರು ೧೦೦ ಕ್ಕೆ ೪೦ ಮಂದಿಯಂತೆಯೂ, ಶಾಲೆಯಿಂದ ಬಂದವರು ೧೦೦ ಕ್ಕೆ ೨೬.೪ ಮಂದಿಯಂತೆಯೂ ಉತ್ತರಿಸಿರುವರು.

ಇನ್ನು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳಿಸಿದ ೪೦ ಶಾಲೆಗಳಲ್ಲಿ ಕೆಳಗಿನ ಶಾಲೆಗಳು ಕ್ರಮವಾಗಿ ಉತ್ತಮ ಪರಿಣಾಮವನ್ನು ತೋರಿಸಿರುವವು. ಅವು:— ೧ ಪ್ರಾಕ್ಟಿಸಿಂಗಸ್ಕೂಲ ೨೯, ೨ ಹಾವೇರಿ ೨೫, ೩ ಅಣ್ಣಿಗೇರಿ ೧೫, ೪ ನವಲಗುಂದ ೧೩, ೫ ಕೊಣ್ಣೂರ ೧೦ ೬ ರಾಣೆಬಿನ್ನೂರ ೯, ೭ ಹೊಂಬ

ಳ್ಳಿ v ಹುಲಕೋಟಿ ಕ್ಲಿ ೯ ಬ್ಯಾಡಿಗಿ ಕ್ಲಿ ಇತ್ಯಾದಿ. ಇವೆಲ್ಲದೆ ಬಂಕಾಪುರ, ಕರ್ಜಗಿ, ಎಲಗಚ್ಚು, ತೇವರಮಳ್ಳಿಹಳ್ಳಿ, ತಡಕೋಡ ಶಾಲೆಗಳಿಂದ ಕ್ರಮವಾಗಿ ೩, ೩, ೪, ೩, ೩, ಹುಡುಗರು ಪರೀಕ್ಷೆಗೆ ಬಂದು ಎಲ್ಲರೂ ಪಾಸಾಗಿರುವರು. ಇದು ಲಯನ್ಸ್ ಶಾಲೆಯ ಮಾಸ್ತರರಿಗೆ ಭೂಷಣವಾದ ಮಾತು. ಆದರೆ ಕೆಲವು ಸಾಲಿಗಳಿಂದ ಬಂದವರಲ್ಲಿ ಒಬ್ಬರೂ ತೇರ್ಗಡೆ ಹೊಂದಲಿಲ್ಲ.

ಹೆಚ್ಚು ಹುಡುಗರನ್ನು ಪರೀಕ್ಷೆಗೆ ಕಳಿಸುವದು ಶಾಲಾಸುಧಾರಣಾದ್ಯೋತಕ ಸಂಗತಿಯಾದರೂ ಹೆಚ್ಚು ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದು ಅದಕ್ಕೂ ಹೆಚ್ಚು ಸುಧಾರಣೆಯನ್ನು ತೋರಿಸುತ್ತದೆಂಬದನ್ನು ಮರೆಯಕೂಡದು. ಆದ್ದರಿಂದ ಮಾಸ್ತರಜನರು ಈ ಮಾತನ್ನು ಮನಸಂದಂದು ಬಹಳ ಹುಡುಗರನ್ನು ಪರೀಕ್ಷೆಗೆ ಕಳಿಸುವದಕ್ಕೆ ಅತು ದಪಡುವಂತೆ ಹೆಚ್ಚು ಹುಡುಗರು ತೇರ್ಗಡೆ ಹೊಂದಬೇಕೆಂಬ ಬಗ್ಗೆ ಹೆಚ್ಚು ಯತ್ನವನ್ನು ಮಾಡಬೇಕೆಂದು ನಾವು ಸೂಚಿಸುತ್ತೇವೆ.

ಮೇಲಿನ ಸಂಗತಿಯನ್ನು ಓದಿಕೊಂಡು ಪ್ರತಿಬಬ್ಬ ಶಿಕ್ಷಕನು ಉತ್ಸಾಹದಿಂದ ತನ್ನ ಕೆಲಸವನ್ನು ನಡಿಸಿ ಕೀರ್ತಿಯನ್ನೂ, ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಪುಣ್ಯವನ್ನೂ, ಸಂಪಾದಿಸಿಕೊಳ್ಳತಕ್ಕದ್ದು.

ಕಾರವಾರ ಜಿಲ್ಲೆಯ ಅ. ಡಿ. ಯವರಾದ ಮಿ. ಅಭ್ಯಂಕರರು ಪಿನಶನ್ ತೆಗೆದುಕೊಂಡದರಿಂದ ಆವರ ಸ್ಥಳಕ್ಕೆ ಧಾರವಾಡ ಜಿಲ್ಲೆಯ ೨ ನೇ ಅ. ಡಿ. ಯವರಾದ ಮಿ. ಕೊಪ್ಪೀಕರರನ್ನೂ, ಮಿ. ಕೊಪ್ಪೀಕರರ ಸ್ಥಳಕ್ಕೆ ಮಿ. ಬಿಚ್ಚು ದಾಮೋದರರಾಯರನ್ನೂ, ಮಿ. ಬಿಚ್ಚು ದಾಮೋದರರಾಯರ ಸ್ಥಳಕ್ಕೆ ಬಾಗಲಕೋಟೆಯ ಇಂಗ್ಲಿಷ ಶಾಲೆಯ ಮಾಸ್ತರರಾದ ಮಿ. ವೆಂಕಟೇಶ ಬಾಪೂಜಿ ಕೇತಕರರೆಂಬವರನ್ನೂ ನೇಮಿಸಿರುವರು.

ವಿದ್ಯಾಖಾತೆಯ ಕಾಹೀನು ಡಾಯರೆಕ್ಟರರಾದ ಮೆ. ಜಾಯಿಲ್ಸ ಸಾಹೇಬರು ಈ ತಿಂಗಳ ಕೊನೆಯಿಂದ ೯ ತಿಂಗಳ ರಜೆಯನ್ನು ಪಡೆದು ಸ್ವದೇಶಕ್ಕೆ ಹೋಗುವರು. ಇವರ ಸ್ಥಳದಲ್ಲಿ ಪೂನೆಯ ಡೆಕ್ಕನ್ ಕಾಲೇಜ ಪ್ರಿನ್ಸಿಪಾಲರಾದ ಮೆ. ಸೆಲ್ಬಿ ಸಾ. ರು ಬರುವರೆಂದು ತಿಳಿಯುತ್ತದೆ.

ಇಷ್ಟು ದಿವಸ ವಾಯವ್ಯಪ್ರಾಂತವೆಂದು ಕರೆಯಲ್ಪಡುತ್ತಿದ್ದ ಅಲ್ಲಾಬಾದ ಇಲಾಖೆಗೆ ಸರಕಾರದವರು ಇನ್ನುಮುಂದೆ "ಯುನಾಯಟೆಡ್ ಪ್ರಾವಿನ್ಸ ಆಫ್ ಆಗ್ರಾ ಅ್ಯಂಡ ಔದ್ಧ" ಎಂದು ಎನ್ನಬೇಕೆಂದು ತಗಾವು ಮಾಡಿರುವರು. ಶಿಷ್ಟರು ಇದನ್ನು ನೆನಪಿಟ್ಟು ಮುಂದೆ ಹೀಗೇ ಕಲಿಸಬೇಕು.

ನಮ್ಮ ಪ್ರಸ್ತುತದ ಸಾರ್ವಭೌಮರಾದ ೫ ನೇ ಎಡ್ವರ್ಡ ಧೊರೆಗಳ ಪಟ್ಟಾಭಿಷೇಕ ಮಹೋತ್ಸವವು ಇದೇ ತಿಂಗಳ ೨೬ ನೇ ತಾರೀಖಿನ ದಿವಸ ಲಂದನ ಪಟ್ಟಣದಲ್ಲಿ ನಡೆಯುವದೆಂದು ಗೊತ್ತಾಗಿದೆ. ಈ ಸಮಾರಂಭಕ್ಕಾಗಿ ಹಿಂದುಸ್ತಾನದ ರಾಜರೂ, ಕೆಲವು ಸಭ್ಯ ಗೃಹಸ್ಥರೂ ಹೋಗುವರು. ಜಯಪುರದ ಅರಸನು ೧೦೫ ಮಂದಿಯೊಡನೆ ಹೊರಡುವದನ್ನು ನಿಶ್ಚಯಿಸಿರುವನು ಇವರು ತಮ್ಮ ಸ್ವಂತಕ್ಕಾಗಿಯೇ ಒಂದು ಹಡಗನ್ನು ಬಾಡಿಗೆಯಿಂದ ಗೊತ್ತು ಮಾಡಿರುವರು.

ಈ ಸಮಾರಂಭವು ಬಹು ಸಡಗರದೊಡನೆ ಜರಗುವದೆಂಬದನ್ನು ಒಡೆದು ಹೇಳುವ ಕಾರಣವಿಲ್ಲ. ಭೂಮಿಯ ಎಲ್ಲ ಭಾಗದಲ್ಲಿ ವ್ಯಾಪಿಸಿದ ಇಂಗ್ಲಿಷ ಸಾಮ್ರಾಜ್ಯದಿಂದ ಬೇರೆ ಬೇರೆ ಯೋಗ್ಯತೆಯ ಜನರೂ, ಸ್ನೇಹಿತ ರಾಷ್ಟ್ರದ ರಾಜಪ್ರೇಷಿತ ಮಹಾಪುರುಷರೂ, ಲಂಡನ ಪಟ್ಟಣದಲ್ಲಿ ಕೂಡುವರು. ಸರ್ವ ಸಿದ್ಧತೆಯು ಒತ್ತರದಿಂದ ನಡೆದಿರುವದು. ಪ್ರಜರಾದ ನಮಗೆ ರಾಜನು ತಂದೆಗೆ ಸಮಾನನೆನಿಸುವನು. ಆದ್ದರಿಂದ ನಾವೆಲ್ಲರೂ ಈ ಉತ್ಸವದಲ್ಲಿ ಆನಂದವನ್ನು ವ್ಯ

ಕ್ತೆಪಡಿಸುವದಲ್ಲದೆ ಇವೆರಾಳಿಕೆಯು ನಮಗೆ ಸುಖಪ್ರದವಾಗಿ ಬಹುಕಾಲ ಸಾಗಬೇಕೆಂದು ಬಯಸುವದು ಕರ್ತವ್ಯಕರ್ಮವಾಗಿದೆ.

ಪಾರ್ಲಮೆಂತ ಸಭೆಯು.

ರಾಜ್ಯಕಾರ್ಯಭಾರವನ್ನು ನಡಿಸುವ ಈ ಮಹಾಸಭೆಯು ಇಂಗ್ಲಂಡದಲ್ಲಿರುವದು. ಇದರಲ್ಲಿ ಪ್ರಭುಗಳ ಸಭೆಯೆಂತಲೂ ಪ್ರತಿನಿಧಿಗಳ ಸಭೆಯೆಂತಲೂ ಎರಡು ಭಾಗಗಳುಂಟು. ಪ್ರತಿನಿಧಿ ಸಭೆಗೆ ಕಾಮನ್ಸ ಸಭೆಯೆಂಬ ಹೆಸರು. ಇದರಲ್ಲಿ ಒಟ್ಟು ೬೭೦ ಮಂದಿ ಸಭಿಕರಿರುವರು. ಇವರು ದೇಶದೊಳಗಿನ ಬೇರೆ ಬೇರೆ ಸ್ಥಳಗಳಿಂದ ಆರಿಸಿಬಂದವರು. ಒಟ್ಟು ಮತ ಕೊಡುವವರ ಸಂಖ್ಯೆಯು ೬೮೦೦೦೦, ಇವರಲ್ಲಿ ಇಂಗ್ಲಂಡ ಮತ್ತು ವೇಲ್ಸದಲ್ಲಿ ೫೭೮೯೭೬, ಸ್ಕಾಟಲಂಡದಲ್ಲಿ ೮೯೬೮೯, ಅಯರ್ಲಂಡದಲ್ಲಿ ೩೩೫೫೩ ಇರುವದು. ಪಾರ್ಲಮೆಂತಿನ ಕಾಯಮು ನೌಕರರು ೬೬ ಮಂದಿ ಅವರಲ್ಲಿ ಮುಖ್ಯ ಮುಖ್ಯವಾದ ಸ್ಥಳಗಳನ್ನು ಆಯಾ ಸ್ಥಳದ ಸಂಬಳದೊಂದಿಗೆ ಕೆಳಗೆ ಬರೆದಿದ್ದೇವೆ

ಘನವಂತರ ಅಥವಾ ಪ್ರಭುಗಳ ಸಭೆದು ನೌಕರರ—ಕ್ಲಾರ್ಕ ಆಫ್ ದಿ ಪಾರ್ಲಮೆಂತ ೨೦೦೦ ಪೌ, ಡೆಪೂಟಿ ಕ್ಲಾರ್ಕ ೧೫೬೦ ಪೌ, ರೀಡಿಂಗ (ಓದುವ) ಕ್ಲಾರ್ಕ ೯೦೦ ಪೌ, ಸಾರ್ಜೆಂಟ ಆಟ್ ಆರ್ಮ್ಸ್ ೧೦೦೦ ಪೌ, ಡೆಪೂಟಿ ಸಾರ್ಜೆಂಟ ೨೫೦ ಪೌ.

ಪ್ರತಿನಿಧಿ ಸಭೆಯ ನೌಕರರು—ಕ್ಲಾರ್ಕ ಆಫ್ ಹೌಸ ೨೦೦೦ ಪೌ, ಕ್ಲಾರ್ಕ ಅ. ೧೫೬೦ ಪೌ, ಸೆಕಂಡ್‌ಕ್ಲಾರ್ಕ ಅ. ೧೨೦೦ ಪೌ, ಸಾರ್ಜೆಂಟ ಆಟ್ ಆರ್ಮ್ಸ್ ೧೨೦೦ ಪೌ, ಡಿಪೂಟಿ ಸಾರ್ಜೆಂಟ ೪೦೦ ಪೌ, ಅ. ಸಾರ್ಜೆಂಟ ೨೬೦ ಪೌ, ಇವರಲ್ಲದೆ ಇನ್ನೂ ೨೫೫ ಮಂದಿ ಸಣ್ಣ ಸಂಬಳದವರಿರುವರು.

ಪ್ರಸ್ತುತದ ಪ್ರಧಾನ ಮಂಡಲವು.

ನಂಬರ	ಹುದ್ದೆ (ಅಧಿಕಾರ).	ಮಂತ್ರಿಯ ಹೆಸರು.	ಪಗಾರ ಪೌಂಡು
೧	ಮುಖ್ಯ ಪ್ರಧಾನ	ಮಾರ್ಕ್ವಿಸ್ ಆಫ್ ಸಾಲಿಸ್ಬರಿ	
೨	ಲಾರ್ಡ್ ಹಾಯ್ ಚಾನ್ಸೆಲರ್	ಬರನ್ ಹಾಲಿಸ್ಬರಿ	೧೫,೦೦೦
೩	ಲಾರ್ಡ್ ಪ್ರೆಸಿಡೆಂಟ ಆಫ್ ದಿ ಕೌನ್ಸಿಲ್	ಡ್ಯೂಕ್ ಆಫ್ ಡೆ ಹ್ಯಾವಿನ್‌ಶಾಯರ	೨೦೦೦
೪	ಲಾರ್ಡ್ ಪ್ರೀಹ್ವಿಸೀಲ್	ಮಾರ್ಕ್ವಿಸ್ ಆಫ್ ಸಾಲಿಸ್ಬರಿ	೨೦೦೦
೫	ಫರ್ಸ್ಟ್ ಲಾರ್ಡ್ ಆಫ್ ದಿ ಟ್ರೇಝರಿ	ರಾಯಿಟ್ ಆನರೇಬಲ್ ಆರ್ಥರ್ ಬಾಲಫೂರ	೫೦೦೦
೬	ಚಾನ್ಸೆಲರ್ ಆಫ್ ದಿ ಎಕ್ಸಚೇಕರ	ರಾಯಿಟ್ ಆನರೇಬಲ್ ಸರ್, ಎಂ, ಹಿಕ್ಸಬೀಚ್	೫೦೦೦
೭	ಚಾನ್ಸೆಲರ್ ಆಫ್ ದಿ ಡಚಿ ಆಫ್ ಲಾಂಕ್ಯಾಸ್ಟರ್	ಬಾರನ್ ಜೇಮ್ಸ ಆಫ್ ಹೆರಫರ್ಡ	೨೦೦೦
೮	ಸೆಕ್ರಟರಿ ಆಫ್ ಸ್ಟೇಟ ವಸಾಹತಿಖಾತೆ	ರಾ. ಆ. ಜೋಸೆಫ್ ಚೇಂಬರ್ಲೇನ	೫೦೦೦
೯	ಸೆಕ್ರಟರಿ ಸ್ಟೇಟ ಹೋಮಖಾತೆ	ಸೀ ಟೀ. ರಿಚಿ	೫೦೦೦

೧೦	ಸೆಕ್ರಟರಿ ಪರದೇಶ್ಯಖಾತೆ	ಮಾರ್ಕ್ವಿಸ್ ಆಫ್, ಲಾನ್ಸ್‌ಡೌನ್	೫೦೦೦
೧೧	ಸೆಕ್ರಟರಿ ಯುದ್ಧಖಾತೆ	ಡಬ್ಲ್ಯೂ ಸ್ಟೇಂಟ ಜಾನ್ ಬ್ರೋಡ್ರಿಕ್	೫೦೦೦
೧೨	ಇಂಡಿಯನ್ ಸೆಕ್ರಟರಿ	ರಾ. ಆ. ಲಾರ್ಡ ಜಾರ್ಜ ಹಾಮಿಲ್ಟನ್	೫೦೦೦
೧೩	ಫರ್ಸ್ಟ ಲಾರ್ಡ ಆಫ್ ದಿ ಅಡ್ಮಿರಾಲ್ಟಿ	ಅರ್ಲ ಆಫ್ ಸೆಲ್‌ಬೋರ್ನ	೪೫೦೦
೧೪	ಪ್ರೆಸಿಡೆಂಟ್ ಆಫ್ ದಿ ಬೋರ್ಡ ಆಫ್ ಟ್ರೇಡ	ರಾ. ಆ. ಜರ್ಲ್ಡ ಬಾಲ್‌ಫೂರ	೨೦೦೦
೧೫	ಪ್ರೆಸಿಡೆಂಟ್ ಲೋಕಲ್ ಗವರ್ನಮೆಂಟ ಬೋರ್ಡ	ರಾ ಆ ಡಬ್ಲ್ಯೂ ಹ್ಯೂಮ್ ಲಾಂಗ	೨೦೦೦
೧೬	ಲಾರ್ಡ ಲೆಫ್ಟಿನಂಟ್ ಆಫ್ ಆಯರ್ಲಂಡ	ಅರ್ಲ ಕಡೊಗನ್	೨೦೦೦
೧೭	ಲಾರ್ಡ ಚಾನ್ಸೆಲರ್ ಆಫ್ ಆಯರ್ಲಂಡ	ಲಾರ್ಡ ಆಶ್‌ಬೋರ್ನ	೯೦೦೦
೧೮	ಸೆಕ್ರಟರಿ ಫಾರ ಸ್ಕಾಟಲಂಡ	ಲಾರ್ಡ ಬಾಲ್‌ಫೂರ್ ಆಫ್ ಬರ್ಲೇ	೨೦೦೦
೧೯	ಫರ್ಸ್ಟ ಕಮಾಂಡರ್ ಆಫ್ ವರ್ಕ್ಸ್	ರಾ. ಆ. ಆರ್ಚಿಬಾಲ್ಡ ಅಕರ್ಸ್‌ಡಗಲ್‌ಸ	೨೦೦೦
೨೦	ಪ್ರೆಸಿಡೆಂಟ ಆಫ್ ಬೋರ್ಡ ಆಫ್ ಅಗ್ರಿಕಲ್ಚರ	ರಾ. ಆ. ಆರ್ ಡಬ್ಲ್ಯೂ ಹಸ್‌ಬರಿ	೨೦೦೦
೨೧	ಪೋಸ್ಟ ಮಾಸ್ತರ ಜನರಲ್	ಲಾರ್ಡ ಲಂಡನ್‌ಡೇರಿ	೨೦೯೦

ಈ ಪ್ರಧಾನ ಮಂಡಲಕ್ಕೆ ಕ್ಯಾಬಿನೆತ್ ಎನ್ನುವರು.

EXCURSION TO HAMPI.

ಪಂಪಾಯಾತ್ರೆ

(ಬರದು ಬಂದದ್ದು

(ಗಂಗಾ ನೀ ಪುಟದಿಂದ ಮುಂದೆ ಸಾಗಿದ್ದು.)

ಸೂಳೇಬಾಜಾರ—ಈ ಹೆಸರಿನ ಮನೆಗಳ ಜೋಡು ಸಾಲಾದರೂ ವಿಜಯ ವಿಠ್ಠಲನ ಗುಡಿಯ ಹತ್ತರವೇ ಉಂಟು. ಕಪ್ಪ ರಾಜನ ಬಂಗಾರದವಳು ತನ್ನ ಹೆಸರುಳಿಯುವದಕ್ಕೆಂದು ಇದನ್ನು ಕಟ್ಟಿಸಿದಳೆಂದು ಹೇಳುವರು. ಆದರೆ ಇದು ಈಗ ನೆಲಸಮವಾಗಿ ಹೋಗಿದೆ.

ಗಣಪತಿಯ ಮೂರ್ತಿಗಳು—ಶ್ರೀ ವಿರೂಪಾಕ್ಷನ ಗುಡಿಯ ದಕ್ಷಿಣ ಬದಿಯಲ್ಲಿ ೧, ೨ ಫರ್ಲಾಂಗುಗಳ ಅಂತರದಲ್ಲಿ ಎರಡು ಗಣಪತಿಯ ಗುಡಿಗಳುಂಟು. ಈ ಗಣಪತಿಯ ಮೂರ್ತಿಗಳು ೫ನೇ ಪುಸ್ತಕದಲ್ಲಿ ವರ್ಣಿಸಿದಂತೆ ಚಕ್ಕ ಗುಡ್ಡದಷ್ಟು ಅವೆ. ಆದ್ದರಿಂದಲೆ ಜನರು ಇವಕ್ಕೆ ವ್ಯಾಜೋಕ್ತಿಯಿಂದ ಕಡ್ಲೆಯ ಗಣೇಶ ಸಾಸಿವೆ ಗಣೇಶನೆಂದು ಕರೆಯುವರು. ಈ ಮಹಾಕಾಯನೆಂಬ ನಾಮವನ್ನು ಸಾರ್ಥಗೊಳಿಸುವ ಗಣಪತಿಯ ಮೂರ್ತಿಗಳನ್ನು ಒಂದು ದೊಡ್ಡ ಬಂಡೆಯಲ್ಲಿ ಕಟಿದು ಹುಟ್ಟಿಸಿ ಬಳಿಕ ಅದರ ಮೇಲೆ ಗುಡಿಯನ್ನು ಕಟ್ಟಿರಬಹುದಾಗಿ ತಿಳಿಯುತ್ತದೆ. ಯಾಕೆಂದರೆ ಆ ಗುಡಿಗಿರುವ ಬಾಗಿಲಗಳು ಸಣ್ಣವಿರುವವು. ಆ ಗುಡ್ಡದಲ್ಲಂತೂ ನಾವು ಹಿಂದೆ ಹೇಳಿದಂತೆ ಹತ್ತೆಂಟು ಆನೆಗಳಷ್ಟು ದೊಡ್ಡವಾದ ಕರೇ ಬಂಡೆಗಳು ಹೇರಳವಾಗಿರುವವು. ಅಂಥಾದ್ದೊಂದು ಬಂಡೆಯಲ್ಲಿಯೇ ಈ ವಿನಾಯಕನ ಮೂರ್ತಿಯನ್ನು ಹುಟ್ಟಿಸಿರುವರು.

ಉಗ್ರ ನರಸಿಂಹ, ಬಡವೀಲಿಂಗ—ಗಣಪತಿಯ ಗುಡಿಯಿಂದ ಹಾಗೆ ದಕ್ಷಿಣಕ್ಕೆ ಸುಮಾರು ೧ ಮೈಲು ನಡೆಯಲು ಒಂದು ಹೊಲದಲ್ಲಿ ಇವೆರಡು ಮೂರ್ತಿಗಳು ಕಾಣುವವು. ಇವುಗಳಿಗೆ ಮನೆಯಿಲ್ಲ. ಬೈಲಲ್ಲಿ ನಿಂತಿರುವದು ವಾಸ್ತವಿಕವಾದೆ ಒಬ್ಬನು ಸ್ಮಶಾನವಾಸಿಯು ಇನ್ನೊಬ್ಬನು ನರಸಿಂಹನು, ಇತ್ತ ಮನೆಯಿಲ್ಲ, ಅತ್ತ ಗವಿಯಿಲ್ಲ ಹೊಲದಲ್ಲಿರುವನು.

೧೦	ಸೆಕ್ರಟರಿ ಪರದೇಶ್ಯಖಾತೆ	ಮಾರ್ಕ್ವಿಸ್ ಆಫ್, ಲಾನ್ಸ್‌ಡೌನ್	೫೦೦೦
೧೧	ಸೆಕ್ರಟರಿ ಯುದ್ಧಖಾತೆ	ಡಬ್ಲ್ಯೂ ಸ್ಟೇಂಟ ಜಾನ್ ಬ್ರೋಡ್ರಿಕ್	೫೦೦೦
೧೨	ಇಂಡಿಯನ್ ಸೆಕ್ರಟರಿ	ರಾ. ಆ. ಲಾರ್ಡ ಜಾರ್ಜ ಹಾಮಿಲ್ಟನ್	೫೦೦೦
೧೩	ಫರ್ಸ್ಟ ಲಾರ್ಡ ಆಫ್ ದಿ ಅಡ್ಮಿರಾಲ್ಟಿ	ಅರ್ಲ ಆಫ್ ಸೆಲ್‌ಬೋರ್ನ್	೪೫೦೦
೧೪	ಪ್ರೆಸಿಡೆಂಟ್ ಆಫ್ ದಿ ಬೋರ್ಡ ಆಫ್ ಟ್ರೇಡ	ರಾ. ಆ. ಜರಲ್ಡ ಬಾಲ್‌ಫೂರ	೨೦೦೦
೧೫	ಪ್ರೆಸಿಡೆಂಟ್ ಲೋಕಲ್ ಗವರ್ನಮೆಂಟ ಬೋರ್ಡ	ರಾ ಆ ಡಬ್ಲ್ಯೂ ಹ್ಯೂಮ್ ಲಾಂಗ	೨೦೦೦
೧೬	ಲಾರ್ಡ ಲೆಫ್ಟಿನಂಟ್ ಆಫ್ ಆಯರ್ಲಂಡ	ಅರ್ಲ ಕಡೊಗನ್	೨೦೦೦
೧೭	ಲಾರ್ಡ ಚಾನ್ಸೆಲರ್ ಆಫ್ ಆಯರ್ಲಂಡ	ಲಾರ್ಡ ಆಶ್‌ಬೋರ್ನ್	೯೦೦೦
೧೮	ಸೆಕ್ರಟರಿ ಫಾರ ಸ್ಕಾಟಲಂಡ	ಲಾರ್ಡ ಬಾಲ್‌ಫೂರ್ ಆಫ್ ಬರ್ಲೀ	೨೦೦೦
೧೯	ಫರ್ಸ್ಟ ಕಮಾಂಡರ್ ಆಫ್ ವರ್ಕ್ಸ	ರಾ. ಆ. ಆರ್ಚಿಬಾಲ್ಡ ಅಕರ್ಸ್‌ಡಗಲ್‌ಸ	೨೦೦೦
೨೦	ಪ್ರೆಸಿಡೆಂಟ ಆಫ್ ಬೋರ್ಡ ಆಫ್ ಅಗ್ರಿಕಲ್ಚರ	ರಾ. ಆ. ಆರ್, ಡಬ್ಲ್ಯೂ ಹಸ್‌ಬರಿ	೨೦೦೦
೨೧	ಪೋಸ್ಟ ಮಾಸ್ತರ ಜನರಲ್	ಲಾರ್ಡ ಲಂಡನ್‌ಡೇರಿ	೨೦೮೦

ಈ ಪ್ರಧಾನ ಮಂಡಲಕ್ಕೆ ಕ್ಯಾಬಿನೆತ್ ಎನ್ನುವರು.

EXCURSION TO HAMPI.

ಪಂಪಾಯಾತ್ರೆ.

(ಬರೆದು ಬಂದದ್ದು.)

(೧೧೬ನೇ ಪುಟದಿಂದ ಮುಂದೆ ಸಾಗಿದ್ದು.)

ಸೂಳೇಬಾಜಾರ—ಈ ಹೆಸರಿನ ಮನೆಗಳ ಜೋಡು ಸಾಲಾದರೂ ವಿಜಯ ವಿಠ್ಠಲನ ಗುಡಿಯ ಹತ್ತರವೇ ಉಂಟು. ಕಪ್ಪ್ಣರಾಜನ ಬಂಗಾರದವಳು ತನ್ನ ಹೆಸರುಳಿಯುವದಕ್ಕೆಂದು ಇದನ್ನು ಕಟ್ಟಿಸಿದಳೆಂದು ಹೇಳುವರು. ಆದರೆ ಇದು ಈಗ ನೆಲಸಮವಾಗಿ ಹೋಗಿದೆ.

ಗಣಪತಿಯ ಮೂರ್ತಿಗಳು—ಶ್ರೀ ವಿರೂಪಾಕ್ಷನ ಗುಡಿಯ ದಕ್ಷಿಣ ಬದಿಯಲ್ಲಿ ೧, ೨ ಫರ್ಲಾಂಗುಗಳ ಅಂತರದಲ್ಲಿ ಎರಡು ಗಣಪತಿಯ ಗುಡಿಗಳುಂಟು. ಈ ಗಣಪತಿಯ ಮೂರ್ತಿಗಳು ೫ನೇ ಪುಸ್ತಕದಲ್ಲಿ ವರ್ಣಿಸಿದಂತೆ ಚಿಕ್ಕ ಗುಡ್ಡದಷ್ಟು ಅವೆ. ಆದ್ದರಿಂದಲೆ ಜನರು ಇವಕ್ಕೆ ವ್ಯಾಜ್ಯೋಕ್ತಿಯಿಂದ ಕಡ್ಲೆಯ ಗಣೇಶ ಸಾಸಿವೆ ಗಣೇಶನೆಂದು ಕರೆಯುವರು. ಈ ಮಹಾಕಾಯನೆಂಬ ನಾಮವನ್ನು ಸಾರ್ಥಗೊಳಿಸುವ ಗಣಪತಿಯ ಮೂರ್ತಿಗಳನ್ನು ಒಂದು ದೊಡ್ಡ ಬಂಡೆಯಲ್ಲಿ ಕಟಿದು ಹುಟ್ಟಿಸಿ ಬಳಿಕ ಅದರ ಮೇಲೆ ಗುಡಿಯನ್ನು ಕಟ್ಟಿರಬಹುದಾಗಿ ತಿಳಿಯುತ್ತದೆ. ಯಾಕೆಂದರೆ ಆ ಗುಡಿಗಿರುವ ಬಾಗಿಲಗಳು ಸಣ್ಣವಿರುವವು. ಆ ಗುಡ್ಡದಲ್ಲಂತೂ ನಾವು ಹಿಂದೆ ಹೇಳಿದಂತೆ ಹತ್ತೆಂಟು ಅನೆಗಳಷ್ಟು ದೊಡ್ಡವಾದ ಕರೇ ಬಂಡೆಗಳು ಹೇರಳವಾಗಿರುವವು. ಅಂಥಾದ್ದೊಂದು ಬಂಡೆಯಲ್ಲಿಯೇ ಈ ವಿನಾಯಕನ ಮೂರ್ತಿಯನ್ನು ಹುಟ್ಟಿಸಿರುವರು.

ಉಗ್ರ ನರಸಿಂಹ, ಬಡವೀಲಿಂಗ—ಗಣಪತಿಯ ಗುಡಿಯಿಂದ ಹಾಗೆ ದಕ್ಷಿಣಕ್ಕೆ ಸುಮಾರು ೧ ಮೈಲು ನಡೆಯಲು ಒಂದು ಹೊಲದಲ್ಲಿ ಇವೆರಡು ಮೂರ್ತಿಗಳು ಕಾಣುವವು. ಇವುಗಳಿಗೆ ಮನೆಯಿಲ್ಲ. ಬೈಲಲ್ಲಿ ನಿಂತಿರುವದು ವಾಸ್ತವಿಕವದೆ ಒಬ್ಬನು ಸ್ಮಶಾನವಾಸಿಯು ಇನ್ನೊಬ್ಬನು ನರಸಿಂಹನು, ಇತ್ತ ಮನೆಯಿಲ್ಲ, ಅತ್ತ ಗವಿಯಿಲ್ಲ ಹೊಲದಲ್ಲಿರುವನು.

ಬಡವೀಲಿಂಗನು ತೆಕ್ಕೆಗೆ ಅವುರನು. ಉಗ್ರ ನರಸಿಂಹನ ಪ್ರಭಾವಳಿಯು ನೋಡತಕ್ಕಂಥಾದ್ದದೆ. ಮುಂದೆ ತುಸು ದೂರದಲ್ಲಿಯೇ ಉದ್ದಾನ ವೀರಭದ್ರನ ಗುಡಿಯುಂಟು. ಲಿಂಗವಂತ ಪೂಜಾರಿ ಇರುವನು. ನಿತ್ಯ ಪೂಜೆ ಮಾಡುವನು. ಮೂರ್ತಿಯು ಆಜಾನು ಬಾಹುವಿರುವದು.

ಹಜಾರ ರಾಮಸ್ವಾಮಿಯ ಗ ಡಿ—ಮೇಲಿನ ಗುಡಿಗಳಿಂದ ಪೂರ್ವ ದಕ್ಷಿಣ ದಿಕ್ಕಿಗೆ ಪ್ರಾಚೀನ ಕಾಲದಲ್ಲಿ ಹೆಸರಾದ ವಿಜಯನಗರದ ಹಾಳು ಪ್ರದೇಶವು ಇರುವದು. ಹಿಂದೆ ವರ್ಣಿಸಿದ ಸ್ಥಳಗಳೆಲ್ಲ ಮೊದಲು ಈ ರಾಜಧಾನಿಯ ಭಾಗವಾಗಿದ್ದವು ಇಷ್ಟೇ ಅಲ್ಲ; ಕೆಲವೊಂದು ಬಗೆಯಿಂದ ವಿಚಾರ ಮಾಡಿ ನೋಡಿದರೆ ಆನೇಗುಂದಿ ಹೊಸಕೋಟೆಗಳಾದರೂ ಈ ರಾಜಧಾನಿಯ ಭಾಗವಾಗಿದ್ದವೆಂದು ಊಹಿಸಲಿಕ್ಕೆ ಆಸ್ಪದವುಂಟು. ವಿಜಯನಗರವು ತುಂಬುತ್ತ ನಡೆಯಲು ಜನರಿಗೆ ಸ್ಥಳ ಸಾಲದ್ದರಿಂದ ಹೊಸದಾಗಿ ಒಂದು ಕೋಟೆಯನ್ನು ಕಟ್ಟಿಸಿಕೊಂಡು ಅದಕ್ಕೆ ಹೊಸಕೋಟೆಯೆಂದು ಹೆಸರಿಟ್ಟುಕೊಂಡಿರಬಹುದು ಮುಂದೆ ನಗರವು ಹಾಳಾದ ಬಳಿಕ ಈ ಶಾಖಾ ನಗರವು ಸ್ವತಂತ್ರ ಗ್ರಾಮವಾಗಿ ಬಾಳಿರುವದು. ಈ ಮಾದರಿಯ ಉದಾಹರಣೆಗಳು ಈಗಿರುವ ಎಷ್ಟೋ ಪಟ್ಟಣಗಳಲ್ಲಿ ದೊರೆಯುವವು. ಇದರಂತೆ ಆನೆಗುಂದಿ ಈ ಶಬ್ದದ ಅವಯವಾರ್ಥವನ್ನು ನೋಡಲು, ಗೊಂದಿ=ದಡ್ಡಿ, ಆನೆಯ ಹಿಂಡು ತರಬುವ ಸ್ಥಳವಿರಬೇಕೆಂದು ಅನುಮಾನವದೆ. ಆದರೆ ತಾಲೆಮಿ ಬರೆದ ಗ್ರಂಥದಲ್ಲಿ ಆನೆಗುಂದಿಯು ಉಲ್ಲೇಖವಿರುವ ಕಾರಣ ನಮ್ಮ ಮೇಲಿನ ಕಲ್ಪನೆಗೆ ತುಸು ವ್ಯತ್ಯಯ ಬರುವದು. ಹ್ಯಾಗೇ ಇರಲಿ, ಈ ವಿಜಯನಗರವು ಪೂರ್ವದಲ್ಲಿ ಹೊಸಕೋಟೆಯಿಂದ ಆನೆಗುಂದಿಯವರೆಗೆ ಉತ್ತರ ದಕ್ಷಿಣವಾಗಿ ಹಬ್ಬಿರಬೇಕೆಂದು ಅನುಮಾನವಾಗುತ್ತದೆ. ಪೂರ್ವ ಪಶ್ಚಿಮವಾದರೂ ಹೆಚ್ಚು ವಿಸ್ತಾರವೆಂದರೆ ಸುಮಾರು ೪, ೫ ಮೈಲು ಇರಬಹುದೆಂದು ತರ್ಕಿಸಲಿಕ್ಕೆ ಮಾರ್ಗವದ. ಯಾಕೆಂದರೆ ಈ ಮಹಾದೆಯಲ್ಲಿ ಮನೆಗಳು, ಗುಡಿಗಳು, ಮಂಟಪಗಳು ಮುಂತಾದ ಮನುಷ್ಯವಸ್ತಿಯ ಕಾರುಹುಗಳು ವಿಪುಲವಾಗಿ ದೊರೆಯುತ್ತವೆ. ಈ ಹಾಳು ಪ್ರದೇಶದಲ್ಲಿ ಈ

ಗಲೂ ಕೆಲವು ಕಟ್ಟಡಗಳು ಗತವೈಭವವೆನ್ನು ನೆನಿಸಿ ನೆನಿಸಿ ಖಿನ್ನವಾಗಿರುವದನ್ನು ಜಗಕೆಲ್ಲ ಸಾರುತ್ತಿರುವಂತೆ ನಿರ್ಜನ ಪ್ರದೇಶದಲ್ಲಿದ್ದದರಿಂದ ಹಾಳು ಸುಂಯುತ್ತ ಚಳಿಗಾಳಿಗಳನ್ನು ಬಡಿಸಿಕೊಳ್ಳುತ್ತ, ಈ ಭೂತಬಾಧೆಯಿಂದ ಯಾವಾಗ ಸಾಯುವೆವೆಪ್ಪೋ ಎಂಬ ಭಯದಿಂದ ಚಿಂತಾಗ್ರಸ್ತವಾಗಿ ನಿಂತುಕೊಂಡಿವೆ. ಈ ಕಟ್ಟಡಗಳನ್ನು ನೋಡಲಿಕ್ಕೆ ಹೋಗುವ ಹಾದಿಯಲ್ಲಿಯೇ ಹಜಾರರಾಮ ಸ್ವಾಮಿಯ ಗುಡಿಯುಂಟು ಹಿಂದಿನ ಗುಡಿಯಂತೆ ಈ ಗುಡಿಯಲ್ಲಿಯೂ ಮೂರ್ತಿಯಿಲ್ಲ. ಹಜಾರ = ಓಲಗ, ಸಭಾಮಧ್ಯದಲ್ಲಿರುವ ರಾಮನ ಅಂದರೆ ಪಟ್ಟಾಭಿರಾಮನ ಮೂರ್ತಿಯು ಇಲ್ಲಿ ಮೊದಲಿಗಿರಬಹುದು. ಗುಡಿಯು ತಕ್ಕಷ್ಟು ದೊಡ್ಡದು. ಗುಡಿಯ ಗೋಡಿಯ ಒಳಮಗ್ಗಲ ಕಲ್ಲುಗಳಿಗೂ ಕಂಭಗಳಿಗೂ ಒಪ್ಪಾಹಾಕಿರುವರು. ಗೋಡೆಯ ಒಳಹೊರ ಬದಿಯ ಕಲ್ಲುಗಳಲ್ಲಿ ರಾಮಾಯಣದ ಚಿತ್ರಗಳನ್ನು ಕೊರೆದಿರುವರು. ಒಂದು ಬದಿಗೆ ಮಾರುತಿ ದರ್ಶನ, ಬೇರೊಂದು ಕಡೆಗೆ ಜಟಾಯು ಸಂಭಾಷಣ, ಮತ್ತೊಂದು ಕಡೆ ಸಪ್ತತಾಳಚ್ಛೇದನ, ಇನ್ನೊಂದು ಕಡೆಗೆ ರಾಮರಾವಣರ ಯುದ್ಧ, ಮಗುಳೊಂದು ಕಡೆ ಕಪಿ ರಾಕ್ಷಸ ಸೇನೆಯ ಕಾಳಗ, ಮುಂತಾದ ಚಿತ್ರಗಳಿರುವವು. ಸಾರಾಂಶ ಶ್ರೀ ವಾಲ್ಮೀಕಿಯ ರಾಮಾಯಣದ ಕಥೆಯನ್ನು ಅಕ್ಷರದಿಂದ ಬರೆದಿರುವಂತೆ ಈ ಗುಡಿಯನ್ನು ಕಟ್ಟಿಸಿದವನು ಚಿತ್ರರೂಪದಿಂದ ಬರೆದಿರುವನೆಂದು ಹೇಳಬಹುದು. ಗುಡಿಯು ಪಂಚಭೂತಗಳ ಬಾಧೆಗೆ ಒಳಗಾಗುತ್ತ ನಡೆದದೆ. (ಸಕ್ಷೇಪ)

TEACHER'S WORK & DUTY (*Communicated*).

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(ಗತಸಂಚಿಕೆಯ ಪುಟದಿಂದ ಮುಂದೆ ಸಾಗಿದ್ದು.)

ಅಧಿಕಾರಿಗಳು ಈ ಅಕಲ್ಯಾಣಕರವಾದ ದೇವತೆಗಳಂ
ಕೇಡು ಮಾಡತಕ್ಕವರೆಂದು ತಿಳಿದು ಅಜ್ಞಾನಿಗಳೂ, ಕ್ಷು

ಲ್ಲಕರೂ ಅವರಿಗೆ ಹೆದರಿ ಮಾನಕೊಡುತ್ತಾರೆ. ಆದರೆ, ಈ ಮಾನವು ಅಧಿಕಾರಕ್ಕೆ ಸ್ಥಾನವಾದ ವ್ಯಕ್ತಿಗೆ ಇರದೆ ಅಧಿಕಾರಕ್ಕೆ ಮಾತ್ರ ಇರುವದು. ದುಷ್ಟನೂ, ಅನ್ಯಾಯ ಮಾರ್ಗಾವಲಂಬಿಯೂ ಆದ ಅಧಿಕಾರಕ್ಕೆ ಅವನ ಅಧಿಕಾರಕ್ಕಾಗಿ ಅವನ ಮುಂದೆ ದೊರೆಯುವ ಮಾನದಲ್ಲಿ ಅವನ ಹಿಂದೆ ಅವನಿಗೆ ದೊರೆಯುವ ಅಪಮಾನವನ್ನು ಕಳೆದರೆ ಅವನ ಪಾಲಿಗೆ ಪೂಜೆಯು, ಇಲ್ಲದಿದ್ದರೆ ಅಪಮಾನವು ಮಾತ್ರ ಉಳಿಯುವದು. ಅಧಿಕಾರ ಹೋದಬಳಿಕ ಇಂಥವರ ಸ್ಥಿತಿಯು ಹ್ಯಾಗಾಗುವದೆಂಬದನ್ನು ವರ್ಣಿಸುವ ಕಾರಣವಿಲ್ಲ. ಅಧಿಕಾರ ಮದದಿಂದ ಅಂಧರಾದ ನೀಚ ಅಧಿಕಾರಿಗಳು ತಮ್ಮ ಕುಮಾರ್ಗಕ್ಕೆ ಹೇಸುವದಿಲ್ಲ. ಅಧಿಕಾರ ಭಯದಿಂದ ಅನ್ಯರೂ ಅವರ ದುರ್ವರ್ತನವನ್ನು ಪ್ರಸಿದ್ಧವಾಗಿ ತಿರಸ್ಕರಿಸುವದಿಲ್ಲ. ಹೀಗಾಗಿ ಆಸ್ತಿಕ ಮತದಂತೆ ಇವರಿಗೆ ನರಕಯಾತನೆಯು ಸಂಭವಿಸುವದಂತೂ ಒತ್ತಟ್ಟಿಗಿರಲಿ, ಈ ಲೋಕದಲ್ಲಿಯೇ ಅವರು ಬಹುತರ ತಮ್ಮ ಕರ್ಮದ ಫಲವನ್ನು ಯಾವದೊಂದು ರೀತಿಯಿಂದ ಉಣ್ಣುವರು. ಅವರ ಆತ್ಮಕ್ಕೆ ಶಾಂತಿಯು ಎಂದೂ ದೊರೆಯುವ ಸಂಭವವಿಲ್ಲ. ಆದರೆ ಇಂಥ ಘಾತಕ ಪ್ರಸಂಗವು ಒದಗುವದು ಕಡಿಮೆ. ಯಾಕಂದರೆ ಶಿಕ್ಷಕನಿಗೆ ಘಾತಕವಾದ ಯಾವ ಅಧಿಕಾರವೂ ಇಲ್ಲೆಂಬದು ಜನರಿಗೆ ಸ್ವಭಾವಸಿದ್ಧವಾಗಿ ಗೊತ್ತಿರುತ್ತದೆಂದರೂ ಸಲ್ಲುವದು. ಅಂದ ಬಳಿಕ ಕೇವಲ ಅಧಿಕಾರ ಭಯಕ್ಕಾಗಿ ಮಾನಕೊಡುವ ನೀಚ ವರ್ಗದ ಜನರಿಂದ ಅಧಿಕಾರಸ್ಥರಿಗೆ ದೊರೆಯುವಂಥ ಮಾನವು ಶಿಕ್ಷಕನಿಗೆ ದೊರೆಯಲಾರದೆಂದು ಹೇಳುವ ಕಾರಣವಿಲ್ಲ. ಅಂಥ ಮಾನವಾದರೂ ಶಿಕ್ಷಕನಿಗೆ ಒಪ್ಪದು. ಯಾಕಂದರೆ ಶಿಕ್ಷಕ ಶಿರೋಮಣಿಯಾದ ಫೌಲರನು "ಶಿಕ್ಷಕರು ತಮಗೆ ದೊರೆಯುವ ಮಾನವನ್ನು ನೋಡದೆ ಅದು ಯಾವ ಭಾವನೆಯಿಂದ ದೊರೆಯುತ್ತದೆಂಬದನ್ನು ನೋಡಬೇಕೆಂದು" ಮಾಡುವ ಉಪದೇಶದ ತತ್ವವು ಸಾಧಾರಣವಾದದ್ದಲ್ಲ. ಆದ್ದರಿಂದ ಶಿಕ್ಷಕರಾದರೂ ಇಂಥ ಮಾನವನ್ನು ಬ

ಯಸಲಾಗದು. ಇನ್ನು ಶಿಕ್ಷಕನಿಂದ ಎಂದೂ ಬೇರೆ ಮಾಡಲಿಕ್ಕೆ ಬಾರದ ಅವನ ವಿದ್ವತ್ತೆ, ಸದಾಚರಣೆ, ಪರೋಪಕಾರ ಬುದ್ಧಿ ಮೊದಲಾದವುಗಳಿಗಾಗಿ ಮಾನಕೊಡುವ ಜನರು ಶಿಕ್ಷಕನು ಒಲ್ಲೆನೆಂದರೂ ಮಾನ ಕೊಟ್ಟೇಕೊಡುವರು. ಈ ಮಾನಕ್ಕೆ ಭಂಗವಿಲ್ಲ. ಶಿಕ್ಷಕನು ಎದುರಿಗಿರಲಿ ಇಲ್ಲದಿರಲಿ ಅವನು ತನ್ನ ಕೆಲಸದ ಮೇಲಿರಲಿ ಕೆಲಸಬಿಟ್ಟು ಮನೆಯಲ್ಲಿ ಕುಳಿತಿರಲಿ, ಅವನು ಬಡುಕಿರಲಿ, ಸತ್ತಿರಲಿ, ಅವನ ಈ ಮಾನಕ್ಕೆ ಮಾತ್ರ ನಾಶವಿಲ್ಲ. ಶಿಕ್ಷಕನಿಗೆ ಖೊಟ್ಟಿ ಮಾನವು ದೊರೆಯದ್ದರಿಂದ ಅವನ ಆಯುಷ್ಯದಲ್ಲಿ ಮಾನದ ವಜಾಬಾಕಿಯಾಗದೆ ಬೇರೀಜು ಆಗುವದು. ಶಿಕ್ಷಕನು ತನ್ನ ಕರ್ತವ್ಯ ಜರಗಿಸಲಿಕ್ಕೆ ಅಯೋಗ್ಯನೂ, ದುರಾಚಾರಿಯೂ ಇದ್ದರೆ ಜನರು ಅವನನ್ನು ಪ್ರಸಿದ್ಧವಾಗಿ ತಿರಸ್ಕರಿಸುವದು ಆದ್ದರಿಂದ ಅವನಿಗೆ ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳಲಿಕ್ಕೆ ಮಾರ್ಗವಾಗುವದು. ಜನರು ಶಿಕ್ಷಕರ ಸಂಗಡ ಯೋಗ್ಯವಾದ ಸಲಿಗೆಯಿಂದ ನಡೆಯುತ್ತಿದ್ದರೆ ಅದು ಶಿಕ್ಷಕರ ಗೌರವಕ್ಕೆ ಭಂಗ ತರುವ ಸಂಗತಿಯಲ್ಲೆಂಬದನ್ನು ಶಿಕ್ಷಕರು ಲಕ್ಷದಲ್ಲಿಡತಕ್ಕದ್ದು. ಯೋಗ್ಯವಾದ ಸಲಿಗೆಯು ನಿಜವಾದ ಪ್ರೇಮದ ಲಕ್ಷಣವಾಗಿರುತ್ತದೆ ನಮ್ಮನ್ನು ನೋಡಿ ಜನರು ಹೆದರುವದಿಲ್ಲೆಂದು ಶಿಕ್ಷಕರು ಅಸಮಾಧಾನ ಪಡಲಾಗದು. ಯಾಕಂದರೆ ಶಿಕ್ಷಕರು ಹುಲಿಗಳಾಗಲಿ, ಕರಡಿಗಳಾಗಲಿ, ಕ್ರೂರ ಮನುಷ್ಯರಾಗಲಿ ಇರದೆ ಸನ್ಮಾನದರ್ಶಕರೂ, ವಿದ್ಯಾಗುರುಗಳೂ ಆಗಿರುವರೆಂದು ಜನರು ತಿಳಿದಿರುವರು. ಇದಲ್ಲದೆ ಜನರು ತಮ್ಮನ್ನು ನೋಡಿ ನಾಚುವದಿಲ್ಲೆಂದು ಶಿಕ್ಷಕರು ಶಂಕಿಸಲಾಗದು. ಯಾಕಂದರೆ ಲಜ್ಜೆಯು, ಮನಸ್ಸಿನಲ್ಲಿ ವಿಕಲ್ಪವನ್ನುಂಟು ಮಾಡುವಗೋಸ್ಕರ ಇರುತ್ತದೆ. ಈ ಲಜ್ಜೆಯ ಸಂಬಂಧದಿಂದ ಮಹತ್ವದ ಒಂದು ಸಣ್ಣ ಉದಾಹರಣೆಯನ್ನು ಕೊಡುವದು ಅಪ್ರಸಂಗಿಕವಾಗದು. ಶ್ರೀವೇದವ್ಯಾಸರು ತಮ್ಮ ಪುತ್ರರಾದ ಶುಕಾಚಾರ್ಯರನ್ನು ಹಿಂಬಲಿಸಿ ಮಾರ್ಗವನ್ನು ಕ್ರಮಿಸುತ್ತಿರಲು, ಪೂರ್ಣ ವೈರಾಗ್ಯ ಶಾಲಿಗಳಾದ ಶುಕಾಚಾರ್ಯ

ರು ನಗ್ನ ವಸ್ಥೆಯಿಂದ ಬಂದು ಸರೋವರ ತೀರಕ್ಕೆ ಹೋದರು. ಅಲ್ಲಿ ಕೆಲವು ಪ್ರಾಯಸ್ಥರಾದ ಸ್ತ್ರೀಯರು ಬತ್ತಲೆ ನೀರಾಟವಾಡುತ್ತಿದ್ದರು. ಆಗ ಶುಕಾಚಾರ್ಯರು ಅವರನ್ನು ಕಣ್ಣೆತ್ತಿ ಸಹ ನೋಡದೆ, ಯಥಾಸ್ಥಿತವಾಗಿ ತಮ್ಮ ಮಾರ್ಗ ಹಿಡಿದು ಹೋದರು. ಈ ವೈರಾಗ್ಯಶಾಲಿಯನ್ನೂ, ವಿಕಾರ ರಹಿತನು ಆದ ಮಹಾಪುರಷನನ್ನು ನೋಡಿ, ಆ ಸ್ತ್ರೀಯರು ಎಷ್ಟು ಮಾತ್ರವೂ ನಾಚಿಕೆದೆ, ನೀರಾಟವಾಡುತ್ತಿದ್ದರು. ತರುವಾಯ ಅದೇ ಮಾರ್ಗದಿಂದ ವೇದವ್ಯಾಸರು ಬರಲು, ಆ ಸ್ತ್ರೀಯರು ಅವರನ್ನು ನೋಡಿ ನಾಚಿ ವಸ್ತ್ರಗಳನ್ನು ಧರಿಸಿ ಕೊಂಡರು ಇದನ್ನು ನೋಡಿ ವೇದವ್ಯಾಸರು ಆ ಸ್ತ್ರೀಯರನ್ನು ಕುರಿತು—"ಬತ್ತಲೆಹೋದ ನನ್ನ ಮಗನಾವ ಶುಕನನ್ನು ನೋಡಿ ನಾಚಿದ ನೀವು ವಸ್ತ್ರಗಳನ್ನು ಧರಿಸಿದ ನನ್ನನ್ನು ನೋಡಿ ನಾಚಿದ ಕಾರಣವೇನೆಂ"ದು ಕೇಳಿದರು. ಅದಕ್ಕೆ ಆ ಸ್ತ್ರೀಯರು—"ಪೂಜ್ಯರೇ, ಶುಕಾಚಾರ್ಯರು ವಿಕೃತಿಯನ್ನಳಿದವರಾದ್ದರಿಂದ ಅವರು ನಮಗೆ ಪರಕೀಯರಾಗಿ ತೋರದಿರಲು ನಾವು ನಾಚಲಿಲ್ಲೆಂ"ದು ಹೇಳಿದರು. ಸಾರಾಂಶ ಶಿಕ್ಷಕರು ತಾವು ಇಲ್ಲದ ಅಯೋಗ್ಯವಾದ ಆರೋಪಗಳಿಂತೆ ತಮಗೆ ಮಾನ ದೊರೆಯದಿರಲು ವ್ಯಸನಪಡಲಾಗದು. ನಿಜವಾದ ಅವರ ಮಾನವು ಅವಿನಾಶಿಯಾಗಿರುತ್ತದೆ.

ಮೇಲಿನ ತಿಳುವಳಿಕೆಯಂತೆ ಶಿಕ್ಷಕರು ತಮ್ಮ ಸಮಾಧಾನ ಮಾಡಿಕೊಂಡು ತಮ್ಮ ಕರ್ತವ್ಯವನ್ನು ಜರುಗಿಸುತ್ತಿದ್ದರೂ, ಕೆಲ ತಿಳಿಗೇಡಿಜನರು ಶಿಕ್ಷಕರ ಸಂಗಡ ನಡೆಯುವ ಅಯೋಗ್ಯವರ್ತನದಿಂದ ಶಿಕ್ಷಕರಿಗೆ ಕೆಲಸದಲ್ಲಿ ಬಹಳ ತೊಂದರೆಯಾಗುವದು. ಆದ್ದರಿಂದ ಅಂಥವರ ತಪ್ಪು ತಿಳುವಳಿಕೆಯನ್ನು ಸ್ವಲ್ಪ ವಿಚಾರಿಸಿ ಬಹಳವಾಗಿ ಬೆಳೆದ ಈ ಭೂಗವನ್ನು ಮುಗಿಸುವಾ ದುರಭಿಮಾನಿಗಳಾದ ಕಲಿಜನರು "ಮಾಸ್ತರನೆಂದರೇನು? ಹೊಟ್ಟೆಯ ಸಲುವಾಗಿ ನಮ್ಮಲ್ಲಿ ಬಂದವನು, ನಾವು ಹೇಳಿದಂತೆ ಅವನು ಕೇಳಲಿಕ್ಕೆ ಬೇಕು, ನಮಗೆ ಕಂಡಲ್ಲಿ ನಮಸ್ಕಾರ ಅಥವಾ ಶರಣು ಮಾ

ಡಿಬೇಕು, ಅಂದರೆ ಆತನಿಗೆ ನಿನಾಗರೂ ಸಹಾಯ ಮಾಡ ಬಹುದು, ನಮ್ಮ ಮರ್ಯಾದೆಗೆ ಆತನ ಮರ್ಯಾದೆಯು ಸರಿಯಾದದ್ದಲ್ಲ." ಇತ್ಯಾದಿ ಮನಃ ಕಲ್ಪನೆಗಳನ್ನು ಮಾಡುವರು. ಇಂಥ ತಿಳುವಳಿಕೆಯವರಿಗ ಉತ್ತರವಿಷ್ಟೇ. ನಿಮ್ಮ ಕಲ್ಪನೆಗಳಿಗೆ ಸಂಪೂರ್ಣವಾಗಿ ನಮ್ಮ ಸಮ್ಮತಿಯುದೆ. ಯಾಕಂದರೆ ಯೋಗ್ಯ ಮನುಷ್ಯನಿಗೆ ನಮಸ್ಕಾರ ಮುಂತಾದ ಉಪಚಾರಗಳಿಂದ ಯೋಗ್ಯಮಾನ ಕೊಡದಿದ್ದರೆ ನಮ್ಮ ಸದಸದ್ವಿಚಾರಕ್ಕೆ ಕುಂದು ಬರುತ್ತದೆ. ಆದರೆ ಸನ್ಯಾಸಿಯನ್ನು ತಕ್ಕೆ ಹಾಯ್ದರೆ ಮೈಯಲ್ಲ ಬೂದಿ ಎಂಬಗಾದೆಯಂತೆ ಹೆಚ್ಚಿನ ವಿದ್ವತ್ತೆಯಿಲ್ಲದ, ಅಧಿಕಾರ ರಹಿತನಾದ ಬಡ ಶಿಕ್ಷಕನ ಮಾನದಿಂದ ನಿಮಗೇನು ಲಾಭವಿಲ್ಲೆಂದು ನೀವು ತಿಳುಕೊಳ್ಳಬೇಕಾಗುವದು. ಆದರೆ ಇಷ್ಟು ಮಾತ್ರ ನೀವು ನೆನಪಿಡತಕ್ಕದ್ದು. ನೀವು ಕೊಡುವ ಲೋಕಲ್‌ಫಂಡ ಹಣದ ನೌಕರನು ನಿಮ್ಮ ಶಿಕ್ಷಕನಾದರೂ ಅವನಕಡೆಗೆ ಒಪ್ಪಿಸಲ್ಪಟ್ಟ ನಿಮ್ಮ ಕೆಲಸವು ಬಹು ಮಹತ್ವದ್ದಿರುತ್ತದೆ. ಆ ಕೆಲಸದ ಮಹತ್ವವನ್ನು ನೀವು ತಿಳಿದು ನೋಡಿದರೆ ನಿಮ್ಮ ಶಿಕ್ಷಕನು ನಿಮಗೆ ಎಲ್ಲಕ್ಕೂ ಹೆಚ್ಚಿನ ಅಧಿಕಾರಿಯಾಗಿ ತೋರಬಾರದು. ನಿಮ್ಮ ಶಿಕ್ಷಕನು ನಿಮ್ಮ ಮಕ್ಕಳಿಗೆ ಎಲ್ಲ ರೀತಿಯಿಂದ ಕಿತ್ತೆಯಾಗಿರುವದರಿಂದ ಶಿಕ್ಷಕನ ಗುಣಗಳು ಒಂದರಹಿಂದೊಂದು ನಿಮ್ಮ ಮಕ್ಕಳಲ್ಲಿ ಸೇರದೆ ಇರಲಾರವು. ನಮ್ಮ ಶಿಕ್ಷಕನು ನಿಮ್ಮ ಹತ್ತರ ಎರಡನೆಯವರ ಚಾಡಿ ಮುಂತಾದನ್ನು ಹೇಳಿ ನಿಮ್ಮ ಮರ್ಜಿಯನ್ನು ಸಂಪಾದಿಸಿ ಸ್ನೇಹಿತ ಮಾಡಿಕೊಳ್ಳುವವನಿದ್ದರೆ ನಿಮ್ಮ ಮಕ್ಕಳಲ್ಲಿ ಈ ದುರ್ಗುಣಗಳು ಸೇರಿ ದೊಡ್ಡವರಾದ ಬಳಿಕ ಅವರು ಚಾಡಿಕೋರರೂ ಸ್ವಾರ್ಥಸಾಧಕರೂ ಆಗಬಹುದು. ಇದೇ ಪ್ರಕಾರ ನಿಮ್ಮ ಶಿಕ್ಷಕನು ತನ್ನ ಮಾನಾಪಮಾನಗಳನ್ನು ಲೆಕ್ಕಿಸದೆ, ಎಲ್ಲರಿಗೂ ಬೇಕಾಗಬೇಕೆಂಬ ಒಣ ಹೌಸಿನಿಂದ ಕಂಡ ಕಂಡವರಿಗೆ ಒಳ್ಳೆಯ ಮನಸ್ಸಿನಿಂದ ತಲೆವಾಗಿಸುವವನಿದ್ದರೆ ನಿಮ್ಮ ಮಕ್ಕಳು ದೊಡ್ಡವರಾದಬಳಿಕ ಬಾಲಾಗುಂಡಾಟಿಸಿ ಎರಡನೆಯವರು ಕೇಳಲಿ ಮುಳುಗಲಿ, ಜನಮ ತ

ನ್ನನ್ನು ಹೊಗಳಲಿ, ನಿಂದಿಸಲಿ, ತಮ್ಮ ಹೋಳಿಗೆಯು ತುಪ್ಪ ದಲ್ಲಿ ಬಿದ್ದರಾಯಿತೆಂಬ ಸ್ವಭಾವದವರು ಆಗಬಹುದು. ನೀ ವು ಸಾಲಿಗೆ ಬರಲಾಗಿ ನಿಮಗೆ ಯೋಗ್ಯವಾನಕೊಟ್ಟು ಕೂ ಡ್ರಿಸಿ ಕೂಡಲೆ ತನ್ನ ಕೆಲಸಕ್ಕೆ ತೊಡಗಿ ನಿಮ್ಮ ಮಕ್ಕಳಿಗೆ ಯಾವ ರೀತಿಯಿಂದ ಕಲಿಸುತ್ತೇನೆಂಬದನ್ನು ತೋರಿಸದೆ ನಿ ಮ್ಮ ಸಂಗಡ ಒಣಹರಟೆ ಹೊಡೆಯುವ ಶಿಕ್ಷಕನು ನಿಮ್ಮವ ನಿದ್ದರೆ ಅವನ ಸಹವಾಸದಿಂದ ನಿಮ್ಮ ಮಕ್ಕಳು ಕರ್ತವ್ಯ ವನ್ನು ತಿಳಿಯದವರಾಗಬಹುದು. ಇದರಂತೆಯೇ ನಿಮ್ಮ ಶಿಕ್ಷಕನು ಸುಳ್ಳನಿದ್ದರೆ ನಿಮ್ಮ ಹುಡುಗರು ಸುಳ್ಳರಾಗುವರು, ಅವನು ದುರಾಚಾರಿಯವನಿದ್ದರೆ ನಿಮ್ಮ ಮಕ್ಕಳಮೇಲೆ ಅವನ ಸದುಪದೇಶದ ಆಟವು ನಡೆಯದು, ಅವನು ಅಳ್ಳಿದೆ ಯವನಿದ್ದರೆ ನಿಮ್ಮ ಮಕ್ಕಳು ಅಳ್ಳಿದೆಯವರಾಗುವರು.

(ಸಶೇಷ)

ಮುಂಬಯಿ ಇಲಾಖೆ.

ವಸ್ತುಪಾಠಗಳನ್ನು ಕಲಿಸುವ ವಿಷಯವಾಗಿ ಸೂಚನೆಗಳು.

(೫) ವಸ್ತುಪಾಠಗಳು.

ವಸ್ತುಪಾಠಗಳನ್ನು ಕಲಿಸುವ ಉದ್ದೇಶ.

ಬಾಲಕರ ಇಂದ್ರಿಯಗಳನ್ನು, ಮುಖ್ಯವಾಗಿ ದೃಗಿಂದ್ರಿ ಯ ಸ್ಪರ್ಶೇಂದ್ರಿಯ ಇವುಗಳನ್ನೂ, ಅಂಶತಃ ರಸನೇಂದ್ರಿಯ ಘ್ರಾಣೇಂದ್ರಿಯಗಳನ್ನೂ, ಕೆಲಸಕ್ಕೆ ಹಚ್ಚಿ, ಬಲಪಡಿಸಿ, ತದ್ವಾರಾ ಅವರ ಮಾನಸಿಕ ಶಕ್ತಿಯನ್ನು ಬೆಳಿಸುವದೇ ವಸ್ತುಪಾಠಗಳ ಮುಖ್ಯ ಉದ್ದೇಶವಾಗಿರುತ್ತದೆ.

ಇಂದ್ರಿಯಗಳಿಂದ ಬಾಲಕರ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳಿಂದಲೂ, ಇಂಥ ಭಾವನೆಗಳಿಂದ ಮನಸ್ಸಿನಲ್ಲಿ ಉತ್ಪನ್ನವಾಗುವ ಚಟುವಟಿಕೆಯಿಂದಲೂ, ಮೊದಲು ಯೋ ಗ್ಯವಾದ ಗುರುಮುಖದಿಂದ ನಂತರ ಸ್ವಂತವಾಗಿ ದೊರಕಿಸಿ

ದ ಜ್ಞಾನವನ್ನು ಯಾವದೊಂದು ವಸ್ತುವಿನ ಅಥವಾ ಸೃಷ್ಟಿಯ ವ್ಯಾಪಾರದ ನಿಜಸ್ವರೂಪವನ್ನು ಸಾಧ್ಯವಾದ ಮಟ್ಟಿಗೆ ಅರಿತುಕೊಳ್ಳುವಂತೆ ಉಪಯೋಗಿಸಿಕೊಳ್ಳುವದರಿಂದಲೂ, ಇಂದ್ರಿಯಗಳ ಜ್ಞಾನಶಕ್ತಿಯ ಯೋಗದಿಂದಲೂ, ಅದರಿಂದ ಮನಸಿನ ಮೇಲೆ ಆಗುವ ಪರಿಣಾಮದಿಂದಲೂ, ಹುಡುಗರಿಗೆ ಅವರ ಇಂದ್ರಿಯಗಳನ್ನು ಒಂದೊಂದಾಗಿ ಅಥವಾ ಒಟ್ಟಾಗಿ ಉಪಯೋಗಿಸಿಕೊಳ್ಳುವದಕ್ಕೆ ಕಲಿಸುವದೇ ಇಷ್ಟ ಸಂಗತಿಯಾಗಿದೆ.

ಹುಡುಗದಲ್ಲಿ ಸ್ವಾಭಾವಿಕವಾಗಿರುವ ನಿರೀಕ್ಷಣ* ಅಥವಾ ಸಮಾಲೋಚನಾಶಕ್ತಿಯನ್ನು ಬಲಪಡಿಸಿ, ಅದನ್ನು ಸರಿಯಾದ ಮಾರ್ಗಕ್ಕೆ ಹಚ್ಚುವದೂ, ಅವರಲ್ಲಿರುವ ಅಂಕುರರೂಪವಾದ ವಿಚಾರಶಕ್ತಿಯನ್ನು ಬಲಪಡಿಸಿ, ಅದನ್ನು ಸರಿಯಾದ ಮಾರ್ಗಕ್ಕೆ ಹಚ್ಚುವದೂ, ನಾವು ಮೇಲೆ ಹೇಳಿದ್ದರ ಸ್ಪಷ್ಟಾರ್ಥವು. ಈ ಮಾದರಿಯ ಶಿಕ್ಷಣದ ಯೋಗದಿಂದ ವಿದ್ಯಾರ್ಥಿಗಳ ಮಾನಸಿಕ ಶಕ್ತಿಯು ಸುಸಂಸ್ಕೃತವೂ ವಿಕಸಿತವೂ ಆಗಿ, ಅವರೇ ಮುಂದೆ ಸರ್ವಪರಿಯಾಗಿ ಜ್ಞಾನಾಭಿವೃದ್ಧಿಯನ್ನೂ ಸುಶಿಕ್ಷಣವನ್ನೂ ಹೊಂದಿದ ರಾಷ್ಟ್ರೀಯ ಸ್ತ್ರೀಯರೂ ಪುರುಷರೂ ಆಗುವರು ಮತ್ತು ಈ ಬಗೆಯಾಗಿ ಸುಶಿಕ್ಷಿತರಾದ ಸ್ತ್ರೀಪುರುಷರು ಪ್ರಪಂಚದಲ್ಲಿ ಕಾಲಕಾಲಕ್ಕೆ ಒದಗುವ ತರತರದ ಇಕ್ಕಟ್ಟಿನ ಎಡರುಗಳಿಗೆ ಎದೆಗೊಟ್ಟು, ಅವುಗಳನ್ನು ಪರಿಹರಿಸಿಕೊಳ್ಳುವದಕ್ಕೆ ಈ ಪದ್ಧತಿಗೆ ಸರಿಯಾಗಿ ಶಿಕ್ಷಣವನ್ನು ಹೊಂದದೆ ಇದ್ದವರಿಗಿಂತಲೂ, ಶಾರೀರಕ ಮಾನಸಿಕ ನೈತಿಕ ಸಾಮಾಜಿಕ ಗುಣಗಳಿಂದ ಅಧಿಕ ಸಮರ್ಥರಾಗುತ್ತಾರೆಂಬದು ಸ್ಪಷ್ಟವದೆ. ಇದೇ ಈ ತರದ ಶಿಕ್ಷಣದ ಇಷ್ಟೋದ್ದೇಶವು

---

* ಟೀಪು—ಈ ನಿರೀಕ್ಷಣಶಕ್ತಿಯು ಕೇವಲ ನೇತ್ರೇಂದ್ರಿಯದ ಸಂಬಂಧದ್ದಷ್ಟೇ ಇರಕೂಡದು; ಆದರೆ ಯಾವತ್ತೂ ಇಂದ್ರಿಯಗಳ ನಿರೀಕ್ಷಣಶಕ್ತಿಯೆಂದು ತಿಳಿಯಬೇಕು.

ನಿರೀಕ್ಷಣವು ಪ್ರಯೋಗವನ್ನು ಬಿಟ್ಟಿರಲಾರದು. ವಸ್ತುಗಳ ಸಂಬಂಧದಿಂದ ನೋಡಿದರೆ ಪ್ರಯೋಗಪರೀಕ್ಷಣಗಳು ಹೆಚ್ಚು ಶ್ರಮ ಸಾಧ್ಯವಾದಂಥವು; ಇಲ್ಲವೆ ತೊಡಕಾದಂಥವು ಇರುವದು ಅವಶ್ಯವಲ್ಲ. ಇಷ್ಟೇ ಅಲ್ಲ; ಮಾಸ್ತರರು ಮಾರ್ಗ ತೋರಿಸಿಕೊಟ್ಟರೆ, ಹುಡುಗರು ತಾವಾಗಿ ತಮ್ಮ ಕೈಯಿಂದ ಮಾಡಲಿಕ್ಕೆ ಬಾರದಂಥವೂ ಇರುವದು ಅವಶ್ಯವಿಲ್ಲ. ಇದಕ್ಕೆ ಬದಲಾಗಿ ಪ್ರಯೋಗಮಾಡುವ ಕೃತಿಗಳು, ಎಷ್ಟೇ ಸುಲಭವಿದ್ದರೂ ಆದಷ್ಟು ಮಟ್ಟಿಗೆ ಪರರ ಸಹಾಯವನ್ನು ಬಯಸದೆ, ತಮ್ಮ ಕಲ್ಪನೆಯಿಂದಲೂ, ಪ್ರವೃತ್ತಿಯಿಂದಲೂ, ಹುಡುಗರು ತಾವಾಗಿ ಮಾಡುವಂಥವೇ ಇರಬೇಕೆಂಬದು ಮಹತ್ವದ ಸಂಗತಿಯು. ಹುಡುಗರು ತಾವು ಕಂಡುಕೊಂಡ ಅಥವಾ ಶಿಕ್ಷಕರು ಅವರೆದುರಿಗಿಟ್ಟ ಸಂಗತಿಗಳನ್ನು ಸ್ವಂತ ಪ್ರಯತ್ನದಿಂದ ಮನಗಾಣುವದಕ್ಕೆ ಕಲಿಯುವ ಬಗೆಯು ಇದೇ. ಯಾವದೊಂದು ಸಿದ್ಧಾಂತದ ಸತ್ಯಾಸತ್ಯಗಳನ್ನು ವರಿಹಚ್ಚುವ ಸಂಬಂಧದಿಂದಾಗಲಿ, ಯಾವದೊಂದು ಎದುರಿಗಿಟ್ಟ ಇಲ್ಲವೆ ಮಾಡಿತೋರಿಸಿಕೊಟ್ಟ ಸೃಷ್ಟಿವ್ಯಾಪಾರದ ಕೃತಿಯನ್ನು ಮರಳಿಮಾಡುವ ಸಂಬಂಧದಿಂದಾಗಲಿ, ಪರಿಚಿತಿ ಹೊಂದುವದಕ್ಕೆ ಪ್ರಯತ್ನಪೂರ್ವಕ ಕಾರ್ಯಗಳನ್ನು ಮಾಡುವದೇ. ಪ್ರಯೋಗ ಪರೀಕ್ಷಣಗಳ ಅಥವಾ ಮನಗಾಣುವಿಕೆಯ ಅರ್ಥವು. ಆದ್ದರಿಂದ ಆಕೃತಿಯನ್ನು ಮಾಡುವದು, ಬಣ್ಣಹಚ್ಚುವದು, ಚಿತ್ರತೆಗೆಯುವದು, ಅಳೆಯುವದು, ತೂಗುವದು, ಕಾಗದವನ್ನು ಮಾಡುವದು, ಸೃಷ್ಟಪದಾರ್ಥಗಳಿಂದ ಆಟ ಆಡುವದು, ಸಾಭಿನಯ ಗೀತಗಳನ್ನು ಹಾಡುವದು, ನಾಟಕಗಳನ್ನಾಡುವದು ಇವೆಲ್ಲವುಗಳು ಈ ತರದ ಶಿಕ್ಷಣದ ಪ್ರಯೋಗ ಪರೀಕ್ಷಣಗಳೆಂದೆಣಿಸಲ್ಪಡುತ್ತವೆ.

(೪) ವಸ್ತುಪಾಠ ಶಿಕ್ಷಣದ ತತ್ವಗಳು—ವಸ್ತುಪಾಠಗಳ ವ್ಯವಸ್ಥೆಯು ಕೆಳಗೆ ಬರೆದ ತತ್ವಗಳಂತೆ ಇರತಕ್ಕದ್ದು.

(೧) ವಸ್ತುಪಾಠಗಳು ಮೊದಲು ಸುಲಭ, ನಂತರ ಸ್ವಲ್ಪ

ಕಠಿಣ, ಮುಂದೆ ಹೆಚ್ಚು ಕಠಿಣ, ಹೀಗೆ ಕ್ರಮವಾಗಿದ್ದು, ಹುಡುಗರ ಜ್ಞಾನವನ್ನೂ, ಕಲ್ಪನಾಶಕ್ತಿಯನ್ನೂ, ಮಾನಸೀಕ ಶಕ್ತಿಯನ್ನೂ, ಕ್ರಮವಾಗಿ ಬೆಳಿಸುವಂಥವಾಗಿರಬೇಕು.

(೨) ಶಿಕ್ಷಣಕ್ರಮವು ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳಿಗೆ ಹುಡುಗರನ್ನು ಒಯ್ಯುವಂಥದಿರಬೇಕು. ವಸ್ತುಪಾಠ ಕ್ರಮವಾದರೂ ಈ ತತ್ವಕ್ಕೆ ವಿರೋಧ ತರುವಂಥಾದ್ದಿರಬಾರದು.

(೩) ಒಂದು ವಸ್ತುಪಾಠ ಮಾಲೆಯೊಳಗಿನ ಪಾಠಗಳು ವಿಷಯಾನುರೋಧದಿಂದ ಒತ್ತಟ್ಟಿಗೆ ಸಂಗ್ರಹಿಸಲ್ಪಡತಕ್ಕದ್ದು. ಕೇವಲ ಶಾಸ್ತ್ರೀಯ ಪರಿಭಾಷೆಯ ತತ್ವಕ್ಕೆ ಅನುಸರಿಸಿ ವರ್ಗೀಕರಣ ಮಾಡುವದು ಇಷ್ಟವಾದದ್ದಲ್ಲ.

(೪) ಈ ವಸ್ತುಪಾಠಗಳ ಮಾಲಿಕೆಯು, ಅದರಲ್ಲಿಯ ಬೇರೆ ಬೇರೆ ವಿಷಯಗಳನ್ನು ಕ್ರಮವಾಗಿ ವಿವರಿಸುವಂಥಾದ್ದರಲ್ಲಿಯೂ, ಪಾಠಗಳ ವಿವೇಚನ ಮಾಡುವದರಲ್ಲಿಯೂ, ಭಿನ್ನಭಿನ್ನವಾಗಿರದೆ, ಪೂರ್ವಾಪರ ಸಂಬಂಧವನ್ನು ಬಯಸುವಂಥಾದ್ದಿರಬೇಕು. ಆದರೆ ಕೇವಲ ಪೂರ್ವಾಪರ ಸಂಬಂಧದ ಕಡೆಗೇ ಲಕ್ಷವಿರಬಾರದು.

(೫) ಪ್ರತಿಯೊಂದು ಪಾಠವನ್ನು ಕಲಿಸುವಾಗ್ಗೆ ಮೊದಲನೇ ಪಾಠವು ಎರಡನೇ ಪಾಠಕ್ಕೆ ಯೋಗ್ಯವಾದ ಸಂಬಂಧವನ್ನು ತೋರಿಸತಕ್ಕದ್ದಿರಬೇಕು.

(೬) ವಸ್ತುಪಾಠಗಳಿಗೆ ಆಧಾರವಾದ ವಸ್ತುಗಳು ಹುಡುಗರಿಗೆ ಪರಿಚಿತವಾದಂಥವೇ ಇರಬೇಕು. ಅವರು ವಾಸಿಸುವ ದೇಶಸ್ಥಿತಿಗೂ ಲೋಕಸ್ಥಿತಿಗೂ ಅನುಸರಿಸಿ ಸುಲಭವಾಗಿ ದೊರೆಯುವಂಥವಿರಬೇಕು. ಆದಾಗ್ಯೂ ವಿಶೇಷ ಸ್ಥಳದಲ್ಲಿ ವಿಶೇಷ ವರ್ಗದ ಜನರ ದೆಶೆಯಿಂದ ಈ ನಿಯಮದಲ್ಲಿ ಹೆಚ್ಚು ಕಡಿಮೆ ಮಾಡಬಹುದು.

(೫) ಶಿಕ್ಷಕರಿಗೆ ವಸ್ತುಪಾಠದ ವಿಷಯವಾಗಿ ವ್ಯವಹಾರಿಕ ಸೂಚನೆಗಳು.

(೧) ಪಾಠಗಳ ಸಿದ್ಧತೆಯನ್ನು ಜಾಗ್ರತೆಯಿಂದ ಮೊದಲೇ ಮಾಡಿಡಬೇಕು. ಪಾಠಗಳ ಟಿಪ್ಪಣಿಯನ್ನು ಉಪಯೋಗಿ

ಸಬೇಕು. ಆದರೆ ಕೇವಲ ಟಿಪ್ಪಣಿಗೆ ಅಧೀನವಾಗಿರ ಬಾರದು.

(೭) ಪಾಠವನ್ನು ಪ್ರಾರಂಭಮಾಡುವದಕ್ಕೆ ಪೂರ್ವದಲ್ಲಿ ಅದರ ಉದ್ದೇಶವನ್ನು ಸಂಕ್ಷಿಪ್ತವಾಗಿ, ಆದರೆ ಸಾಮಾನ್ಯ ವಿಚಾರಗಳ ದಿಗ್ದರ್ಶನವಾಗುವಂತೆ ಸ್ಪಷ್ಟ ರೀತಿಯಿಂದ ಹೇಳಬೇಕು.

(೮) ವರ್ಗದಲ್ಲಿ ಬಹಳ ಚಿಕ್ಕ ಹುಡುಗರಿದ್ದರೆ, ಅವರಿಗೆ ಹೇಳುವ ಪ್ರತಿಯೊಂದು ತತ್ವವು, ಅವರ ಮನಸ್ಸಿನಲ್ಲಿ ಚಿತ್ರವಾಗಿ ಬಿಂಬಿಸುತ್ತದೋ? ಇಲ್ಲೋ? ಎಂಬದನ್ನು ನಿಶ್ಚಯಿಸಿಕೊಳ್ಳಬೇಕು.

(ಸಶೇಷ).

ನೋಟೀಸು.

ಜಾವಕ ನಂಬಿಡ ೬.

ಮೆಹರ್ಬಾನ್ ಕ್ಯುರೇಟರ ಗವ್ಹರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ ಸರ್ ೧೯೦೨ ನೇ ಇಸವಿಯ ಮಾರ್ಚ್ ತಿಂಗಳ ಕೊನೆಗೆ ಕೆಳಗೆ ಬರೆದ ಪುಸ್ತಕಗಳು ಹೊಸದಾಗಿ ಮುದ್ರಿಸಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಪುಸ್ತಕಗಳು.	ಬೆಲೆಯು. ರೂ. ಆ. ಪೈ.
ಸಂಸ್ಕೃತ ರೇಖಾಗಣಿತ	೧೫
ಕನ್ನಡ ಮೊದಲನೇ ಪುಸ್ತಕ	೦—೧—೦
ಕನ್ನಡ ಭೂಗೋಲ ಭಾಗ ೧	೦—೧—೬

ಮುಂಬಯಿ
ತಾ॥ ೪-೪-೧೯೦೨.

G. J. Agashe,
ಕ್ಯುರೇಟರ ಗವ್ಹರ್ನಮೆಂಟ ಸೆಂಟ್ರಲ್
ಬುಕ್ ಡಿಪೋ ಮುಂಬಯಿ.

ಉಳ್ಳೇ ಗಡ್ಡಿಯ ಗಿಡದ ವಸ್ತುಪಾಠ.

ಉದ್ದೇಶ:—(೧) ಟೊಂಗೆಗಳಿಲ್ಲದ ಗಿಡಗಳ ರಚನೆಯ ಕೆಲವು ಲಕ್ಷಣಗಳೂ,
(೨) ಅದನ್ನು ಊಟದಲ್ಲಿ ಉಪಯೋಗಿಸುವ ಕಾರಣಗಳೂ,

ಉಪಕರಣಗಳು:—ಉಳ್ಳೇ ಬೀಜ; ಉಳ್ಳೆಗಡ್ಡೆಯ ಗಿಡ; ಚಾಕು, ಟೊಂಗೆಯ ಗಿಡದ ಬಾನಿ (೧) ಮತ್ತು ಟೊಂಗೆಯಿಲ್ಲದ ಗಿಡದ ಬಾನಿ ಒಂದು, ಟೊಂಗೆಯುಳ್ಳ ಹಾಗು ಟೊಂಗೆಯಿಲ್ಲದ ಗಿಡಗಳ ಎಲೆಗಳು.

ವಸ್ತುದರ್ಶನವು.	ಫಲಿತವೂ ಸಿದ್ಧಾಂತವೂ
ಉಪೋದ್ಘಾತ:—ಉಳ್ಳೇಗಡ್ಡೆಯ ಗಿಡವನ್ನು ತೋರಿಸಿ, ವಿಷಯವನ್ನು ಆರಂಭಿಸುವದು.	
ಗಿಡವನ್ನು ತೋರಿಸಿ, ಅವಯವಗಳನ್ನು ಕೇಳುವದು.	ಉಳಿದ ಗಿಡಗಳ ಅವಯವಗಳನ್ನು ಕೇಳಿ, ಅವಕ್ಕೂ ಇದಕ್ಕೂ ಅವಯವಗಳಲ್ಲಿರುವ ಹೆಚ್ಚು ಕಡಿಮೆಯನ್ನು ಕೇಳುವದು. ಅದರಿಂದ "ಟೊಂಗೆಯಿಲ್ಲದ್ದು" ಎಂದು ಹೊರಡಿಸುವದು. ಬೇರೆ ಟೊಂಗೆಗಳಿಲ್ಲದ ಗಿಡಗಳನ್ನು ಕೇಳುವದು. (ಬಾಳೆ, ತೆಂಗು ಮುಂತಾದವು)
ಬೇರನ್ನು ತೋರಿಸಿ, ಇವು ಹ್ಯಾಗೆ ಇರುವವು? ಉಳ್ಳೇ ಗಿಡವು ಎಂಥ ಬೇರುಳ್ಳದ್ದು?	ಕೂದಲಿನಂತೆ ಇರುವವು. ಕೂದಲಿನಂಥ ಬೇರುಳ್ಳದು

ಸಿದ್ಧನಾಥ ವಾಚನ ಮಂದಿರ.
ಸೂರಬ. ಜಿ ಧಾರವಾಡ.

ಬೊಡ್ಡಿಯನ್ನು ತೋರಿಸಿ, ಬಣ್ಣವನ್ನೂ ಆಕಾರವನ್ನೂ ಕೇಳುವದು.	ಬಣ್ಣ ಕೆಂಪು ಅಥವಾ ಬಿಳಿದು, ಬೊಡ್ಡಿಯು ಗೋಲಾಕಾರವಾದದ್ದೂ ಹೋಲೆ ಚೂಪಾದದ್ದೂ, ಚೀರೆ ಗಿಡಗಳ ಬೊಡ್ಡಿಯು ಆಕಾರವನ್ನು ಕೇಳಿವದು. ಇದರ ಬೊಡ್ಡಿಯ ಚಿತ್ರ ತೆಗಿಸುವದು.
ಬೊಡ್ಡಿಯನ್ನು (ಗಡ್ಡೆಯನ್ನು) ಅಡ್ಡ ಕೊಯ್ದು, ಅಪರ ಆಕಾರ ರಚನೆಗಳನ್ನೂ ಪದರುಗಳ ಸಂಖ್ಯೆಯನ್ನೂ ಕೇಳುವದು.	ಒಂದರ ಸುತ್ತೊಂದು ಪದರುಳ್ಳದ್ದು, ಹೊರಗಿನ ಪದರು ಬಲಿತದ್ದು ಮತ್ತು ಒಳಗಿನ ಪದರು ಎಳೆದು ಎಂದು ಹೊರಡಿಸಿ ಪದರುಗಳು ಒಂದರೊಳಗೊಂದು ಹೊರಡುವವು. ಎಂದು ಹೊರಡಿಸುವದು. ಆಕೃತಿ ತೆಗೆಸುವದು.
ಎಲೆಗಳನ್ನು ತೋರಿಸಿ, ಬಂಣ ಆಕಾರ ವ್ಯವಸ್ಥೆಯನ್ನು ಕೇಳುವದು. ಟೀಪು:—ಉಳ್ಳೀಗಡ್ಡೆಯ ಎಲೆಗಳ ಕೊಳಿವೆಯಿಂದ ನೀರನ್ನು ಬಾಯಿಂದ ಹೀರಲಿಕ್ಕೆ ಬರುವದನ್ನು ಅದನ್ನು ಮಣಿಸಿ ಸಾಯಿಸಿನ್ನ ಮಾಡಲಿಕ್ಕೆ ಬರುವದನ್ನು ತಿಳಿಸುವದು.	ಹಸರು ಬಣ್ಣದವು, ಪೂರ್ತಾಗಿದ್ದು ತುದಿಯ ಕಡೆಗೆ ಸಣ್ಣಾಗುತ್ತ ಹೋಗಿರುವವು, ಎದರುಬದರು ಒಂದಕ್ಕೊಂದು ಹೊಂದಿರದೆ ಮೇಲೊಂದು ಕೆಳಗೊಂದು ಇರುವವು

ನಡುಸುಳಿಗು ಎಳೆಯನ್ನು ತೋರಿಸುವದು.	ಈ ಸುಳಿಯು ಎಲೆಯು ಎಳೆದಾಡಡ್ಡೂ, ಸುತ್ತಲಿನ ಎಲೆಗಳು ಬಲಿತಂಥವೂ, ಎಂಬದನ್ನು ಹೊರಡಿಸಿ, ಎಲೆಗಳ ಉತ್ಪತ್ತಿಯಾದರೂ ಒಂದರೊಳಗೊಂದು ಇರುತ್ತವೆಂಬದನ್ನು ಹೊರಡಿಸುವದು.
ಎಲೆಗಳನ್ನು ಗಡ್ಡೆಯೊಳಗಿನ ಪದರುಗಳ ಸಹಿತವಾಗಿ ಬಿಚ್ಚುವದು.	ಪ್ರತಿಯೊಂದು ಎಲೆಗೆ, ಗಡ್ಡೆಯೊಳಗಿನ ಒಂದೊಂದು ಪದರು ಸಂಬಂಧಿಸಿರುತ್ತದೆಂಬದನ್ನು ಹೊರಡಿಸುವದು. ಇದರ ಮೇಲಿಂದಲೇ ಎಲೆಗಳ ಸಂಖ್ಯೆಯೂ ಪದರುಗಳ ಸಂಖ್ಯೆಯೂ ಸರಿ ಇರುತ್ತದೆಂಬದನ್ನು ಹೊರಡಿಸುವದು
ಉಳ್ಳೀ ಗಡ್ಡೆಯ ಎಲೆಗಳನ್ನೂ, ಟೊಂಗೆಯಿದ್ದ ಗಿಡದ ಎಲೆಗಳನ್ನೂ ಸೀಳಿ, ಅವು ಹ್ಯಾಗೆ ಸೀಳುತ್ತವೆಂಬದನ್ನು ಕೇಳುವದು.	ಉಳ್ಳೀ ಗಡ್ಡೆಯ ಎಲೆಗಳು ನೆಟ್ಟಗೆ (ಸಮಾಂತರವಾಗಿ) ಸೀಳುವವು.
ಹೂವಿನ ಗಣ'ಯನ್ನು ತೋರಿಸಿ ಅದರ ಬಣ್ಣ, ಆಕಾರ, ಸಾನಗಳನ್ನು ಕೇಳುವದು.	ಹಸರು ಬಣ್ಣದ್ದು, ಎಲೆಯಂತೆ ಪೊಳ್ಳಾದದ್ದು; ಆದರೆ ಅದಕ್ಕಿಂತ ಬಿರುಸಾದದ್ದು; ಬೆಳೆಗೆ ತೀರಿದ ಗಿಡದ ಮಧ್ಯದಲ್ಲಿ ಹುಟ್ಟುವದು.

ಹೂವಿನ ಕವಚವನ್ನು ತೋರಿಸಿ, ಅದರ ಬಣ್ಣ, ಆಕಾರ, ಸ್ಥಾನವನ್ನು ಕೇಳುವದು.	ಬಿಳಿಯದು ಗೋಲಾಕಾರದ್ದು; ಗಣಿಯ ತುದಿಯಲ್ಲಿ ಅಗುವದು. ಆ ಕವಚದೊಳಗೆ ಅನೇಕ ಹೂಗಳಿರುವವು.

ಉಳ್ಳಿಗಡ್ಡಿಯ ಗುಣಗಳ ಮೇಲಿಂದ ಉಪಯೋಗ

ತಿನ್ನಲಿಕ್ಕೆ ಕೊಡುವದು.	ಖಾರವಾಪದ್ದೂ ರುಚಿಯುಳ್ಳದ್ದೂ ಇರುವದು. ಇದರಿಂದ ಸಲುವಾಗಿ ಪಲ್ಲೆಮಾಡುವರೆಂಬದನ್ನು ಹೊರಡಿಸುವದು.
ಹೆಚ್ಚಿ ಕಣ್ಣು ಹತ್ತರ ಹಿಡಿಯುವದು.	ಕಣ್ಣಿನ್ನಲ್ಲಿಗೆ ನೀರು ಬರುವದೆಂಬದನ್ನು ಹೊರಡಿಸುವದು.
ಮೂಗಿನ ಹತ್ತರ ಹಿಡಿಯುವದು.	ಒಂದು ಪ್ರಕಾರದ ಉಗ್ರವಾಸನೆಯುಳ್ಳದ್ದು; ಈ ಕಾರಣದಿಂದ ಔಷಧಿಗೆ ಉಪಯೋಗಿಸುವರೆಂಬದನ್ನು ಹೊರಡಿಸುವದು. ಈ ವಾಸನೆಯು ಕೆಲವು ಜನರಿಗೆ ಶೇರುವದು; ಕೆಲವು ಜನರಿಗೆ ಶೇರುವದಿಲ್ಲ; ಇದರಂತೆ ಇತರ ಪ್ರಾಣಿಗಳಿಗೆ ಈ ವಾಸನೆ ಶೇರುವದಿಲ್ಲ. ಆದ್ದರಿಂದ ಹುಲ ಹತ್ತಿದ ಗಿಡಗಳ ಹತ್ತರ ಈ ಗಿಡಗಳನ್ನು ಹಚ್ಚುವರು.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ!
ಜಯಸುತ್ತಂ ಪ್ರತಿಪಾದಿಸಲ್ಕೆನಿಪ ಪತ್ರಂ ಪುಟ್ಟಿಸಿ ॥
ಭಯವಿಲ್ಲಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ!
ಜಯಮಿಂದೋಷದತಿದ್ದವೇಳ್ವುದುಚಿತಜ್ಞಾನಾಭಿವೃದ್ಧಿಪ್ರಿಯರಿಂ॥

ಪುಸ್ತಕ ೩೮] ಜುಲೈ ೧೯೦೨. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶ್ರೀಮಚ್ಚಕ್ರವರ್ತಿಗಳಾದ ಎಡ್ವರ್ಡ ಭೂಪಾಲರ ಪಟ್ಟಾಭಿಷೇಕ ಮಹೋತ್ಸವವು ಕಳೆದ ತಿಂಗಳ ೯ನೇ ತಾರೀಖಿನ ದಿವಸ ಲಂಡನ ಪಟ್ಟಣದಲ್ಲಿ ಬಹು ವಿಜೃಂಭಣೆಯಿಂದ ಜರಿಯುವದೆಂಬ ಸಂಗತಿಯನ್ನು ನಾವು ಈ ಮೊದಲೇ ತಿಳಿಸಿರುತ್ತೇವಷ್ಟೇ. ಆದರೆ ಮಹಾರಾಜರವರ ದೇಹದಲ್ಲಿ ಅಸ್ವಸ್ಥತೆಯುಂಟಾದ ಕಾರಣ ಈ ಸಮಾರಂಭವು ಈಗ ನಡೆಯಲಿಲ್ಲ, ಮುಂದೆ ನಡೆಯುವದು. ಈ ಸಮಾರಂಭದಲ್ಲಿ ಅರಸನಿಗೆ ಕೊಡುವದಕ್ಕೆಂದು ಈ ದೇಶದ ಎಲ್ಲ ಭಾಗಗಳಿಂದ ಮಾನಪತ್ರಗಳು ಕಳಿಸಲ್ಪಟ್ಟಿರುವವು. ಅದರಂತೆ ಪುಣೆಯು ಗಾಯನ ಸಮಾಜದವರು ತಮ್ಮ ಸಮಾಜದ್ದೆಂದು ಒಂದು ಪದವನ್ನು ಕಳಿಸಿರುವರು. ಇದು ಸರ್ವಸಮ್ಮತವಾಗಿದ್ದುದರಿಂದ ಎಲ್ಲ ಶಾಲೆಗಳ ಹುಡುಗರಿಗೂ ಅನ್ನಲಿಕ್ಕೆ ಕಲಿಸಬೇಕೆಂದು ನಮ್ಮ ಅಭಿಪ್ರಾಯವಿರುವದು. ಆದ್ದರಿಂದ ಅದನ್ನು ಇದರ ಪುಟದಲ್ಲಿ ಮುದ್ರಿಸಿದ್ದೇವೆ. ರಾಗ ತಾಲಗಳನ್ನು ನೋಡಿಕೊಂಡು ಎಲ್ಲ ಅಧ್ಯಾಪಕರೂ ತಮ್ಮ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಕಲಿಸಬೇಕು. ಹಾಗೂ ಅಸರನ ಸಂಬಂಧದಿಂದ ಮಾಡಬಹುದಾದ ಉತ್ಸವ ಕಾಲದಲ್ಲಿ ಇದನ್ನು ತಪ್ಪದೆ ಅನ್ನಿಸತಕ್ಕದ್ದು.

ರಾಗೆ–ಮಾಂಡ್; ತಾಳ–ದಾದರಾ.

ಓ ರಾಯ ಎಡ್ವರ್ಡ ಧನ್ಯ ಧನ್ಯ ವಿಭುದಮಾನ್ಯ, ಸಾರ್ವ
ಭೌಮನೃಪವರ ॥

ಅನಂಗ ಸುಂದರ ಐಶ್ವರ್ಯದಿ ಮರೆವ ನೀಂ, ಭುವನ ಚರ
ದಿರ ॥ ಪಲ್ಲವಿ ॥ ಓ ರಾಯ–

ಅಖಿಲಧರಾ, ದುಃಖಿಹರ, ಕಂಬುಕಂಧರ ॥ ೧ ॥ ಅನಂಗ
ಸುಂದರ–

ಸರ್ವಸಮಶಾಂತ ದಾಂತ ಭೂಮಿಕಾಂತ,
ನಿನ್ನ ರಾಜ್ಯತಂತ್ರದಿಂದ ಶಾಸ್ತ್ರಕಲಾ ನೆರಿವುದೆಲ । ಜಿತವ
ಸುಂಧರ । ನತಸುಖಂಕರ ॥ ೨ ॥ ಅನಂಗ ಸುಂದರ–

ನಿನ್ನ ರಾಜ್ಯಭಾಗದೊಳ್ ಋದ್ಧಿಸಿದ್ಧಿ ದೇವನೀಯಲಿ । ಸದಾ
ದೇವನೀಯಲಿ ।
ಧರ್ಮಮೂರ್ತಿ ಚಕ್ರವರ್ತಿ ನಿನ್ನ ಕೀರ್ತಿ ಲೋಕ ಬೆಳಗಲಿ
ಶತ್ರು ಅಣಗಲಿ ॥ ೩ ॥ ಅನಂಗ ಸುಂದರ–

ಅನೇಕ ಕಾಲ ರಾಜ್ಯ ಸಿರಿಯ ಭೋಗ ಹೊಂದಿ ಬಾಳ್ವುದೈ
ಸ್ವಪುತ್ರ ಮಿತ್ರ ಪ್ರೀತಿಯಿಂದ ಪ್ರಜೆಯನಾಳ್ವುದೈ । ದೇವಕೃ
ಪಾ ನಿನ್ನ ಮೇಲೆ ಸತತವಿರುವದೈ ॥ ೪ ॥ ಅನಂಗ ಸುಂದರ–

ನಯಪರ ವಿಕ್ಟೋರಿಯಾ ಸ್ನೇಮಪುತ್ರ ।
ಪ್ರೀತಿಯಿಂದ ನಮ್ಮನಾಳು ನೃಪವರಾ ॥ ೫ ॥
ಓ ರಾಯ ಎಡ್ವರ್ಡ ಧನ್ಯ ಧನ್ಯ

ನಮ್ಮ ಪ್ರಸ್ತುತದ ವೈಸರಾಯರಾದ ಲಾರ್ಡ ಕರ್ಝನ್ ಸಾಹೇಬರು ವಿದ್ಯಾಪಕ್ಷಪಾತಿಗಳಿರುವದು ಸರ್ವಶ್ರುತವು. ಅವರು ಹಿಂದಕ್ಕೆ ಸಿಮ್ಲಾ ಪಟ್ಟಣದಲ್ಲಿ ವಿದ್ಯಾಭಿಮಾನಿಗಳ ಪರಿಷತ್ತನ್ನು ಕೂಡಿಸಿದ್ದನ್ನು ನಾವು ಅದೇ ಕಾಲಕ್ಕೆ ತಿಳಿಸಿರುತ್ತೇವೆ. ವಿದ್ಯವನ್ನು ಕಲಿತ ಇಂಗ್ಲಂಡದ ಜನರು ಯಾವ ದೊಂದು ಕಾರ್ಯವನ್ನು ಕೈಕೊಂಡು ಧೈರ್ಯದಿಂದ ಅದನ್ನು ನಡಿಸುವಷ್ಟು ಸಾಹಸ, ವಿವೇಕ, ಧೈರ್ಯ, ಧೂರ್ತತ್ವ ಮುಂತಾದ ಗುಣಗಳನ್ನು ಪಡೆಯುತ್ತಿರುವಂತೆ, ಈ ದೇಶದ ಜನರು ಯಾಕೆ ಪಡೆಯುವದಿಲ್ಲ? ಎಂಬ ಘನವಾದ ಪ್ರಶ್ನವ

ನ್ನು ಅನೇಕ ಮುಖವಾಗಿ ಚರ್ಚಿಸಿ ವಸ್ತುಪಾಠಗಳನ್ನೂ, ಶಾಸ್ತ್ರೀಯ ಪಾಠಗಳನ್ನೂ ಈ ದೇಶವು ಒಕ್ಕಲಿಗರಿಂದಲೇ ತುಂಬಿರುವದರಿಂದ ಕೃಷಿಕರ್ಮಶಾಸ್ತ್ರದ ಪಾಠಗಳನ್ನು ಪ್ರೌಢಶಾಲೆಗಳಲ್ಲಿ ಕಲಿಸಬೇಕೆಂದು ತೀರಾವು ಮಾಡಿರುವೆವು. ಈ ಹಿಂದುಸ್ತಾನದ ಸರಕಾರದ ತೀರಾವು ಹೊರಬಿದ್ದ ಕೂಡಲೆ ವಿದ್ಯಾಖಾತೆಯ ಅಧಿಕಾರಿಗಳು ಇದರಲ್ಲಿ ಮನಸ್ಸು ಹಾಕಿದರು. ಈಶಾನ್ಯಭಾಗದ ಎಜ್ಯುಕೇಶನಲ್ ಇ. ಸಾ. ರವರು ಆಯಾ ಇಯತ್ತೆಗಳಿಗನುಗುಣವಾದ ವಸ್ತುಪಾಠಗಳನ್ನು ಗೊತ್ತುಪಡಿಸಿ ಪ್ರಕಟ ಮಾಡಿದರು. ಆ ಪಾಠಮಾಲಿಕೆಗಳ ಭಾಷಾಂತರವು ಹೋದ ತಿಂಗಳಿಂದ ಶಾಲಾಪತ್ರಿಕೆಯಲ್ಲಿ ಮುದ್ರಿಸಲ್ಪಡಹತ್ತಿದೆ. ಅವುಗಳನ್ನು ಸರಿಯಾದ ಪದ್ಧತಿಯಿಂದ ಕಲಿಸಬೇಕು. ಆದರೆ ಈ ಪದ್ಧತಿಯು ಹೊಸದೂ ಶ್ರಮಸಾಧ್ಯವೂ ಆಗಿರುವದರಿಂದ ಆಯಾ ಜಿಲ್ಲೆಯ ಅ. ಡಿಪ್ಯುಟಿಯವರು ಟ್ರೇನಿಂಗ ಕಾಲೇಜದಲ್ಲಿ ಕೆಲವು ದಿವಸ ನಿಂತುಕೊಂಡು ವಸ್ತುಪಾಠಶಿಕ್ಷಣಪದ್ಧತಿಯನ್ನು ಸ್ವತಃ ಕಲಿತುಕೊಳ್ಳಬೇಕೆಂತಲೂ, ಬಳಿಕ ಶಾಲೆಗಳನ್ನು ಪರೀಕ್ಷಿಸುವಾಗ ಆಯಾ ಮಾಸ್ತರರಿಗೆ ಕಲಿಸಬೇಕೆಂತಲೂ, ಮುಖ್ಯಾಧಿಕಾರಿಗಳ ಅಪ್ಪಣೆಯಾದಂತೆ, ಸದ್ಯಕ್ಕೆ ಮೂವರು ಅ. ಡಿ. ಯವರು ಟ್ರೇನಿಂಗ ಕಾಲೇಜದಲ್ಲಿ ಬಂದು ನಿಂತಿರುವರು. ಇವರು ಒಂದು ತಿಂಗಳಾದ ಬಳಿಕ ತಿರಿಗಿ ಹೋಗುವರು. ಆ ಮೇಲೆ ಮತ್ತೆ ಉಳಿದವರು ಬರುವರು. ಹೀಗಾಗುವದರಿಂದ ಅಧ್ಯಾಪಕರಿಗೆ ಶಿಕ್ಷಣದ ಸಹಾಯವು ಸುಲಭವಾಗಿ ದೊರೆಯುವದೆಂದು ನಮಗೆ ನಂಬಿಗೆಯುಂಟು.

ಮೇಲೆ ವಿವರಿಸಿದಷ್ಟೇ ವ್ಯವಸ್ಥೆಯನ್ನು ಮಾಡಿ ವಿದ್ಯಾಖಾತೆಯವರು ಸುಮ್ಮನೆ ಕೂತಿಲ್ಲ. ಹಳೆ ಅಧ್ಯಾಪಕರಿಗೆ ಡಿ. ಇನಸ್ಪೆಕ್ಟರರ ೧।೨ ತಾಸಿನ ಶಿಕ್ಷಣವು ಸಾಕಾಗದೆಂದು ಬಗೆದು, ಹಣದ ಅನುಕೂಲತೆಯಂತೆ ವರುವರುಷ ಕೆಲ ಕೆಲವು ಶಿಕ್ಷಕರನ್ನು ಕಾಲೇಜದಲ್ಲಿಟ್ಟುಕೊಂಡು ಒಂದು ವರುಷದವರೆಗೆ ಅವರಿಗೆ ಕಲಿಸಿ ತಯಾರ ಮಾಡಿ ತಿರಿಗಿ ಕೆಲಸಕ್ಕೆ ಕಳಿಸಬೇಕೆಂದು ನಿಶ್ಚಯಿಸಿರುವರು. ಆದರೆ ಈ ನಿಶ್ಚಯವು

ಅವರ ಮನದಲ್ಲಿ ಅಥವಾ ಕಾಗದದಲ್ಲಿಯೇ ನಿಂತುಕೊಂಡಿಲ್ಲ. ಹೊಸ ಮಾಸ್ತರರಿಗೆ ಕಾಲೇಜದಲ್ಲಿ ಇರಲಿಕ್ಕೆ ಬೇಕಾಗುವ ಇಮಾರತುಗಳನ್ನು ಕಟ್ಟಿಸಲಿಕ್ಕೆ ೪೨,೦೦೦ ರೂಪಾಯಿಗಳನ್ನು ಈಗಲೇ ಕೊಟ್ಟು ಬಿಟ್ಟಿರುವರು. ಕೆಲಸವು ತುಸು ದಿವಸದಲ್ಲಿಯೇ ಪ್ರಾರಂಭವಾಗುವದು. ವಸ್ತುಪಾಠದ ಶಿಕ್ಷಣಕ್ರಮಕ್ಕೆ ಬೇಕಾಗುವ ಇತರ ಸಾಧನಗಳನ್ನಾಪರೂ ಒತ್ತರದಿಂದ ಕೂಡ ಹಾಕುವ ಕೆಲಸವನ್ನು ನಡಿಸಿರುವರು. ಸಾರಾಂಶ, ವರ್ಷ ಎರಡು ವರ್ಷಗಳಲ್ಲಿ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಹಳೆ ಅಧ್ಯಾಪಕರ ಒಂದು ವರ್ಗವು ದೃಷ್ಟಿಗೋಚರವಾಗುವದು.

ಇದಲ್ಲದೆ ಕಾಲೇಜದಲ್ಲಿರುವ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ಯೂ ಹೆಚ್ಚು ಸುಧಾರಣೆಯನ್ನು ಮಾಡತೊಡಗಿರುವರು. ಈಗಿರುವ ಒಬ್ಬನೇ ಮುಖ್ಯಾಧ್ಯಾಪಕನಿಂದ ಕೆಲಸವು ಸುಸೂತ್ರ ನಡೆಯುವೆಂದು ತಿಳಿದು ಈ ಶಾಲೆಗ ನಿಕೃಷ್ಟಪಕ್ಷಕ್ಕೆ ೪ ಮಂದಿ ಉಪಶಿಕ್ಷಕರನ್ನು ಕೊಡುವ ಆಲೋಚನೆಯು ನಡೆದಿರುವದು. ವಾಸ್ತವಿಕವಾಗಿ ಈ ಶಾಲೆಯೇ ಈ ದಕ್ಷಿಣಭಾಗದೊಳಗಿನ ನಾಲ್ಕೂ ಜಿಲ್ಲೆಯ ಶಿಕ್ಷಕರಿಗೆ ಮಾದರಿಯ ಶಾಲೆಯಾಗಿರುವದು. ಆದ್ದರಿಂದ ಈ ಶಾಲೆಯಲ್ಲಿ ಹೊಸ ಪದ್ಧತಿಯ ವಿಷಯಗಳು ಸಶಾಸ್ತ್ರವಾಗಿ ಕಲಿಸಲ್ಪಡುವದು ಅವಶ್ಯವಾಗಿರುವದು. ಈ ಮೇರೆಗೆ ಹೊಸ ಶಿಕ್ಷಣಕ್ರಮದ ಉಪಕ್ರಮವು ಎಲ್ಲ ಬಗೆಯಾಗಿ ಒತ್ತರದಿಂದ ನಡೆದಿರುವದು.

ಈ ಬಗೆಯಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಅನೇಕ ಅದಲು ಬದಲುಗಳಾಗಿರುವದರಿಂದ ಶಿಕ್ಷಣಕ್ಕೆ ಅನುಕೂಲವಾಗಬೇಕೆಂದು ಕೃಷಿಕರ್ಮಶಾಸ್ತ್ರದ ಪಾಠಗಳನ್ನು ಈ ಸಂಜ್ಞೆಕೆಯಿಂದ ಕ್ರಮವಾಗಿ ಶಾಲಾಪತ್ರಕದಲ್ಲಿ ಬರೆಯಬೇಕೆಂದು ನಾವು ಗೊತ್ತು ಮಾಡಿದ್ದೇವೆ. ಈ ವಿಷಯವು ಒಕ್ಕಲಿಗರಿಗಷ್ಟೇ ಅಲ್ಲ, ಸರ್ವ ಪ್ರಾಣಿಗಳಿಗೆ ಅನ್ನ ಕೊಟ್ಟು ಕಾಪಾಡುವಂಥ ಈ ವಿಷಯವು ಎಲ್ಲರಿಗೂ ಅವಶ್ಯವಾಗಿರುವದು.

ಅಧ್ಯರಿಂದ ಮಾಸ್ತರ ಜನರು ಈ ಪಾಠಗಳನ್ನು ತಾವು ಓದಿ ತಿಳಕೊಂಡರೆ ಹಾಗೂ ವಿದ್ಯಾರ್ಥಿಗಳಿಗೆ ಕಲಿಸಿದರೆ ತೀರಿತೆಂದು ತಿಳಿಯದೆ, ಕೂಡಿದಾಗ ಊರೊಳಗಿನ ಒಕ್ಕಲಿಗರನ್ನು ಕೂಡಿಸಿಕೊಂಡು ಅವರಿಗೂ ತಿಳಿಯಹೇಳಿ ಅವರಲ್ಲಿ ಸುಧಾರಣೆಯನ್ನುಂಟು ಮಾಡಬೇಕೆಂದು ಆಶಿಸುತ್ತೇವೆ.

ಮೇ ತಿಂಗಳ ಮೊದಲಿನ ವಾರದೊಳಗೆ, ಅಮೇರಿಕೆಯ ನೆರೆಯಲ್ಲಿರುವ "ವೆಸ್ಟ ಇಂಡೀಜ" ಎಂಬ ದ್ವೀಪಸಮುದಾಯದೊಳಗಿನ ಮಾರ್ಟಾನಿಕ್ ಎಂಬ ಫ್ರೆಂಚರ ವಶದೊಳಗಿನ ನಡುಗಡ್ಡೆಯಲ್ಲಿ ಭಯಂಕರವಾದ ಜ್ವಾಲಾಮುಖಿಯು ಪ್ರಕಟವಾಗಿ ಸೆಂಟಪಿಯರೀ ಎಂಬ ೭೦೦೦ ಜನರುಳ್ಳ ಪಟ್ಟಣವನ್ನು ಮೂರೇ ನಿನಿಟುಗಳಲ್ಲಿ ಹೆಸರುಳಿಯದಂತೆ ಮಾಡಿಬಿಟ್ಟಿತು. ಈ ಪರ್ವತದ ನೆರೆಯಲ್ಲಿ ಶೇಲ ಎಂಬ ದೊಂದು ಗುಡ್ಡವದೆ. ಇದು ಜ್ವಲತ್ಪರ್ವತವು. ಆದರೆ ಈಗ ಕೆಲವು ದಿವಸದಿಂದ ಇದು ಸುಮ್ಮನೆ ಇತ್ತು. ಜನರೆಲ್ಲ ಇದು ಆರಿ ಹೋಯಿತೆಂದು ನಂಬಿದ್ದರು. ಆದರೆ ಒಮ್ಮಿಂದೊಮ್ಮೆ ಸ್ಫೋಟವಾಗಿ ಮೊದಲು ಧೂಳಿನ ರಾಸಿಯೂ, ಬಳಿಕ ಅಪಾರವಾದ ಪ್ರವಾಹವೂ ಪಟ್ಟಣದ ಮೇಲೆ ಸಾಗಿ ಬಂದು ಎಲ್ಲ ಪ್ರಾಣಿಗಳನ್ನು ಕೊಂದು ಬಿಟ್ಟಿತು. ಬಳಿಕ ಎರಡು ದಿವಸದಲ್ಲಿ ಗ್ವಾಡಾಲೂಪೆದೊಳಗಿನದೊಂದು ಜ್ವಲತ್ಪರ್ವತವು ಸ್ಫೋಟವಾಗಿ ೪೦೦ ಮಂದಿಯನ್ನು ಕೊಂದು ಬಿಟ್ಟಿತು. ಈಶ್ವರನ ಮಹಿಮೆಯು ಅಗಾಧವಿರುವದು.

ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿ ತ್ರಾನ್ಸವಾಲ, ಆರೇಂಜಫ್ರೀಸ್ಟೇಟ ಎಂಬವೆರಡು ಪ್ರಜಕ್ಕ ಒಕ್ಕಲಿಗರ ಸಂಸ್ಥಾನಗಳುಂಟಷ್ಟೇ. ಈ ಸಂಸ್ಥಾನಗಳಿಗೂ ನಮ್ಮ ಇಂಗ್ಲಿಷ ಸರಕಾರಕ್ಕೂ ಈಗ ಮೂರು ವರ್ಷದಿಂದ ಯುದ್ಧವು ನಡೆದಿತ್ತು. ಅಸಂಖ್ಯ ಪ್ರಾಣಿಗಳೂ ಹೇರಳ ಹಣವೂ ನಷ್ಟವಾದ ಬಳಿಕ ಮೇ ತಿಂಗಳ ೩೧ನೇ ತಾರೀಖಿನ ದಿವಸ ಉಭಯರಲ್ಲಿ ಒಡಂಬಡಿಕೆಯಾಯಿತು. ಈ ಒಡಂಬಡಿಕೆಯಿಂದ ಬ್ರಿಟಿಶ ರಾಜ್ಯದ ಒಡೆತನವನ್ನು ಭೋರ ಜನರ

ರು ಒಪ್ಪಿಕೊಂಡರು. ಹಾಗೂ ಎಲ್ಲ ಶಸ್ತ್ರಗಳನ್ನು ಇಂಗ್ಲಿಷ ಸೇನಾಪತಿಗೆ ಒಪ್ಪಿಸಿದರು. ಇನ್ನು ಬ್ರಿಟಿಷ ಸರಕಾರದವರು ಅವರ ಶೂರತ್ವಕ್ಕೂ ಇತರ ಗುಣಗಳಿಗೂ ಮೆಚ್ಚಿ ಅವರಿಗೆ ವಿಶೇಷ ಹಕ್ಕುಗಳನ್ನು ಕೊಟ್ಟು ಗೌರವಿಸುವರೆಂದು ಆಶಿಸುತ್ತೇವೆ.

ರಾಜ್ಯಾರೋಹಣ ಸಮಾರಂಭಕ್ಕಾಗಿ ಭರತಖಂಡದಿಂದ ಹೋದ ಗ್ವಾಲೇರದ ಅರಸರಾದ ಮಾಧವರಾವ ಸಿಂದೆ ಮಹಾರಾಜರಿಗೂ ಕೊಲ್ಹಾಪೂರದ ಶಾಹೂ ಮಹಾರಾಜರಿಗೂ ಕೇಂಬ್ರಿಜ್ ಪಟ್ಟಣದ ವಿದ್ಯಾಪೀಠದವರು ಎಲ್. ಎಲ್. ಡಿ. ಎಂಬ ಗೌರವದ ಬಿರುದನ್ನು ಕೊಟ್ಟಿರುವರು. ಈ ಬಹುಮಾನದ ಪದವಿಯನ್ನು ಪಡೆದ ಅರಸರಲ್ಲಿ ಇವರೇ ಮೊದಲಿನವರು.

ಈ ಸಾರೆಯು ಮುಲಕೀ ಪರೀಕ್ಷೆಯು ಸಪ್ತೆಂಬರ ತಿಂಗಳ ೮ನೇ ತಾರೀಖು ಸೋಮವಾರ ದಿವಸ ಪ್ರಾರಂಭವಾಗುವದು. ಈ ಸಂಬಂಧದ ನೋಟೀಸನ್ನು ಮುಂದಿನ ಪುಟದಲ್ಲಿ ಮುದ್ರಿಸಿರುವೆವು. ಈ ಸಾರೆ ಮರಾಠೀ ಉಮೇದವಾರರಿಗೆ ಆಯಾ ಜಿಲ್ಲೆಯಲ್ಲಿಯೇ ಪರೀಕ್ಷೆಗೆ ಕೂಡ್ರಲಿಕ್ಕೆ ಸರಕಾರದವರು ಅನುಕೂಲ ಮಾಡಿಕೊಟ್ಟಿರುವರು.

ಹೊಸ ಇಯತ್ತೆಗಳು ಅಚ್ಚಾಗಿ ಬಂದಿರುವವು. ಸ್ವಲ್ಪ ದಿವಸಗಳಲ್ಲಿ ಎಲ್ಲ ಅಧ್ಯಾಪಕರಿಗೂ ಮುಟ್ಟುವವು. ಈ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಹೊಸ ಇಯತ್ತೆಯಂತೆ ಅಭ್ಯಾಸ ಮಾಡಿಸಬೇಕೆಂದು ಬೇರೆ ಹೇಳುವ ಕಾರಣವಿಲ್ಲ.

ಜುಲೈ ತಿಂಗಳ ೧೪ನೇ ತಾರೀಖಿನ ದಿವಸ ಪ್ರಾ. ಸ್ಕೂಲಿನ ಸ್ಕಿಲವಿುನರೀ ಪರೀಕ್ಷೆಯು ಪ್ರಾರಂಭವಾಗುವದು. ಮುದ್ರಿಸಿದ ಪರೀಕ್ಷೆಯ ಪ್ರಶ್ನೆಗಳು ಬೇಕಾಗಿದ್ದರೆ ೭ನೇ ತಾರೀಖಿನೊಳಗಾಗಿ ಪ್ರಾ. ಸ್ಕೂ. ಮಾಸ್ತರರಿಗೆ ತಿಳಿಸಬೇಕು. ಪ್ರತಿ ಒಬ್ಬ ಹುಡುಗನಿಗೆ ಬೇಕಾಗುವ ಕಾಗದಗಳಿಗೆ ೦ ೪ಣ್ಣೆ ಕೀಳುವದು.

ಪ್ರಸ್ತಾವನೆಯು.

ಮೊದಲಿನ ಜನರು ಕಲಿಸತಕ್ಕ ವಿಷಯಗಳ ಪೂರ್ಣಜ್ಞಾನವೇ ಶಿಕ್ಷಕನಲ್ಲಿರಬೇಕಾದ ಮುಖ್ಯ ಗುಣವೆಂದು ತಿಳಿಯುತ್ತಿದ್ದರು. ಹುಡುಗರ ಗುಣಸ್ವಭಾವಗಳ ಜ್ಞಾನವೂ ಅವರನ್ನು ಒಲಿಸಿಕೊಳ್ಳಲಿಕ್ಕೆ ಅನುಕೂಲವಾದ ಗೌರವದ ತತ್ವಗಳಜ್ಞಾನವೂ ವಿಶೇಷಮಹತ್ವದವೆಂದು ಅವರು ತಿಳಿಯುತ್ತಿದ್ದಿಲ್ಲ. ಪ್ರಸ್ತುತದ ಪ್ರವೃತ್ತಿಯು ಪೂರ್ವದ ಗ್ರಹಿಕೆಯಿಂದ ತೀಕ್ಷ್ಣ ಭಿನ್ನವಾಗಿರುತ್ತದೆ. ಮನೋಧರ್ಮಶಾಸ್ತ್ರಜ್ಞಾನವೇ ಸತ್‌ಶಿಕ್ಷಕನ ಜೀವಕಳೆಯೆಂದು ಈಗಿನ ವಿದ್ವಾಂಸರು ಎಣಿಸುತ್ತಾರೆ. ಆದರೆ ಸತ್‌ಶಿಕ್ಷಕನು ಕಲಿಸುವ ವಿಷಯಗಳಲ್ಲಿಯೂ ಮನೋಧರ್ಮದ ತತ್ವಗಳಲ್ಲಿಯೂ ಪಾರಂಗತನಾಗಿದ್ದರೆ ತೀರಲಿಲ್ಲ. ವಿಷಯಗಳಿಗೂ ಮನಸ್ಸಿಗೂ ಇರುವ ಸಂಬಂಧವನ್ನು ಜನ್ಯಾಗಿ ಅರಿತಿರಬೇಕು. ಇದಲ್ಲದೆ ತಾನು ಕಲಿಸುವ ವಿಷಯಗಳಿಂದ ವಿದ್ಯಾರ್ಥಿಗಳ ಮನಸ್ಸು ಧಾರಣೆಯುಲ್ಲಿಯೂ ಬುದ್ಧಿಪ್ರಾಗಲ್ಭ್ಯತೆಯಲ್ಲಿಯೂ ಉಂಟಾಗಬೇಕೆಂದು ಬಯಸಿದ ಪರಿಣಾಮಗಳನ್ನು ಗೊತ್ತುಪಡಿಸುವದು, ಇಂಥ ಪರಿಣಾಮಗಳುಂಟಾಗಲಿಕ್ಕೆ ಕಲಿಸತಕ್ಕ ವಿಷಯಗಳನ್ನು ಯೋಗ್ಯವಾಗಿ ವಿಂಗಡಿಸುವದು, ಈ ವಿಂಗಡಿಸಿದ ವಿಷಯಗಳನ್ನು ಸರಿಯಾಗಿ ವಿವೇಚಿಸುವದು ಮುಂತಾದ ಈ ಮೂರು ಸಂಗತಿಗಳನ್ನು ಅವನು ಒಳಿತಾಗಿ ವಿಚಾರಿಸಿ ಅರಿತುಕೊಂಡಿರಬೇಕು. ಆದ್ದರಿಂದ ಶಿಕ್ಷಕವರ್ಗಕ್ಕೆ ಈ ಹೊಸತತ್ವಗಳ ಅನುರೋಧದಿಂದ ಕಲಿಸಲಿಕ್ಕೆ ಅನುಕೂಲವಾಗಬೇಕೆಂದು ನಾವು ಈ ಗ್ರಂಥವನ್ನು ಬರೆದಿರುವೆವು. ಇದರಲ್ಲಿ ಈಗ ಬಳಿಕೆಯಲ್ಲಿ ಬಂದ ಗಹನವಾದ ಮನೋಧರ್ಮಶಾಸ್ತ್ರಗಳ ತತ್ವಾನುಸಾರವಾಗಿಯೇ ವಿಷಯವನ್ನು ವಿವೇಚಿಸಿದ್ದೇವೆ. ಆದರೆ ಆ ಶಾಸ್ತ್ರದೊಳಗಿನ ಪಾರಿಭಾಷಿಕ ಶಬ್ದಗಳನ್ನೇ ಕೈಕೊಂಡಿರುವದಿಲ್ಲ. ಶಬ್ದಗಳಲ್ಲಿ ಭಿನ್ನತ್ವ ತೋರಿದರೂ ವಿಷಯ ವಿವರಣೆಯು ಆ ಶಾಸ್ತ್ರದ ತತ್ವಗಳನ್ನು ಅತಿಕ್ರಮಿಸಿಲ್ಲೆಂಬದು ಸೂಜ್ಞವಾಚಕರಿಗೆ ತಿಳಿಯದಿರದು. ಇದರಿಂದ ಮನೋಧರ್ಮಶಾಸ್ತ್ರದ ತತ್ವಗಳು ನಮಗೆ

ಸಮ್ಮತವಿಲ್ಲಂದು ತಿಳಿಯಲಾಗದು ಎಲ್ಲ ಶಿಕ್ಷಕರು ಈ ಶಾಸ್ತ್ರವನ್ನು ತಕ್ಕಷ್ಟಾದರೂ ಅರಿತುಕೊಳ್ಳಲಿಕ್ಕೆ ಪ್ರಯತ್ನಿಸ ಬೇಕು ಹೀಗೆ ಪ್ರಯತ್ನ ಪೂರ್ವಕವಾಗಿ ಅರಿತುಕೊಂಡ ತತ್ವಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳದೆ ಶಿಕ್ಷಣದಲ್ಲಿ ತ ಕ್ಕಂತೆ, ಕಾಲಕಾಲಕ್ಕೆ ಅಸ್ಥೆಯಿಂದ ಉಪಯೋಗಿಸಬೇಕು. ಇದಲ್ಲದೆ ಪೂರ್ವದಲ್ಲಿ ಹೆಸರು ಪಡೆದ ಶಿಕ್ಷಕರ ಚರಿತ್ರೆಗಳ ನ್ನು ಅವರಿಂದ ಬರೆಯಲ್ಪಟ್ಟ ಗ್ರಂಥಗಳನ್ನು ಓದಿ ಚನ್ನಾಗಿ ಮನನಮಾಡಿಕೊಳ್ಳಬೇಕು. ಇದರಿಂದ ಶಿಕ್ಷಕನಿಗೆ ತನ್ನ ಕರ್ತವ್ಯದಲ್ಲಿ ಆಸಕ್ತಿಯೂ ಉಲ್ಲಾಸವೂ ಉಂಟಾಗಿ ಈ ಗ್ರಂಥದಲ್ಲಿ ಹೇಳಿದಂತೆ ಶಿಕ್ಷಣ ಕಾರ್ಯವನ್ನು ನಡಿಸಲಿಕ್ಕೆ ಅನುಕೂಲವಾಗುವದೆಂದು ನಮ್ಮ ನಂಬುಗೆಯುಂಟು

ಈ ಗ್ರಂಥದಲ್ಲಿ ನಾವು ವಿವೇಚಿಸಿರುವ ಶಾಲಾರಚನಾ ಪದ್ಧತಿಯೂ, ಶಿಕ್ಷಣದ ಪದ್ಧತಿಯೂ ಕೇವಲ ಪ್ರಾಥಮಿಕ ಶಾಲೆಗಳಿಗೆ ಅನುಗುಣವಾಗಿರುವವು. ಆದರೂ ಮೇಲ್ತರದ ಶಾಲೆಯ ಅಧ್ಯಾಪಕರು ಈ ಮಾರ್ಗದರ್ಶಿಯಾದ ಗ್ರಂಥ ವನ್ನು ಓದಿ ಚನ್ನಾಗಿ ತಿಳಿಕೊಂಡರೆ ಮೇಲ್ತರದ ಶಾಲೆಗಳಿ ಗಾದರೂ ಉಪಯೋಗ ಬೀಳದಿರಲಿಕ್ಕಿಲ್ಲೆಂದು ನಾವು ತುಂ ಭಾ ನಂಬುತ್ತೇವೆ.

ಶಾಲಾವ್ಯವಸ್ಥೆ

೧ನೆಯ ಅಧ್ಯಾಯ.

ಶಾಲೆಯೂ, ಮನೆಯೂ.

ಇಂಗ್ಲಂಡದಲ್ಲಿ ಪ್ರಾಥಮಿಕ ಶಿಕ್ಷಣದ ಕಾಯದೆಯು ಅ ನುಮತಿಯನ್ನು ಪಡೆದ ಬಳಿಕ ಆ ದೇಶದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಹತ್ತಿದರು. ಆದರೂ ಅವರು ಗೃಹಶಿಕ್ಷಣವೂ ಶಾಲಾಶಿಕ್ಷಣವೂ ತೀರಭಿನ್ನವಾಗಿರುವವೆಂ ದೂ, ಅವುಗಳಲ್ಲಿ ವಿರೋಧವುಂಟೆಂದು ನಂಬುತ್ತಿದ್ದರು. ಇತ್ತಲಾಗಿ ಪ್ರಾಥಮಿಕಶಿಕ್ಷಣದಿಂದ ತಮ್ಮ ಮಕ್ಕಳಿಗಾದ ಲಾಭವನ್ನು ಕಣ್ಣುಮುಟ್ಟಿ ನೋಡುತ್ತಿರುವದರಿಂದಲೂ, ಹುಡು ಗರ ಶಿಕ್ಷಣಕ್ಕಾಗಿ ತಾಯಿತಂದೆಗಳ ಆಸಕ್ತಿಯನ್ನು ಬೆಳಿಸಲಿ

ಕ್ಕೆ ಶಿಕ್ಷಕರು ಕಾಲಕಾಲಕ್ಕೆ ಉಪಯುಕ್ತವಾದ ಪದ್ಧತಿಗಳನ್ನು ಕೈಕೊಂಡದ್ದರಿಂದಲೂ, ಜನರೊಳಗಿನ ಮೊದಲಿನ ತಪ್ಪು ತಿಳುವಳಿಕೆಯು ಇಲ್ಲದಂತಾಗಿ ಶಿಕ್ಷಣಕ್ಕೆ ಅನುಕೂಲವಾದ ಗ್ರಹಿಕೆಯುಂಟಾಗಿದೆ.

ಬಾಲಕರ ಇಡೀ ಸುಧಾರಣೆಯು ಅವರ ಮಾನಸಿಕ, ಶಾರೀರಿಕ ನೈತಿಕ ಶಕ್ತಿಗಳ ಅಭಿವೃದ್ಧಿಯನ್ನವಲಂಬಿಸಿರುತ್ತದೆ. ಮಾನಸಿಕ ಶಿಕ್ಷಣವು ವಿಶೇಷವಾಗಿ ಮನೆಯಲ್ಲಿಯೂ ನೈತಿಕ ಶಿಕ್ಷಣವು ಸಾಲಿಯಲ್ಲಿಯೂ ದೊರೆಯುವಂಥವುಗಳಾಗಿವೆ. ಶಾರೀರ ಶಿಕ್ಷಣವು ಇವೆರಡೂ ಸಂಸ್ಥೆಗಳಿಗೆ ಬಾಹ್ಯವಾದದ್ದು. ಇವುಗಳು ಒಂದು ಎರಡನೆಯದೊಂದನ್ನೇ ಅವಲಂಬಿಸಿರುವದಿಲ್ಲ. ಒಂದು ಉಳಿದೆರಡರ ಸಹಾಯವನ್ನೂ ಸಹಾನುಭೂತಿಯನ್ನೂ ಅಪೇಕ್ಷಿಸುತ್ತಿರುವದು.

ತಾಯಿ ತಂದೆಗಳನ್ನು ಕುರಿತು.

ತಾಯಿತಂದೆಗಳಿಂದ ದೊರೆಯತಕ್ಕ ಸಹಾಯದ ಬಲವಾದ ಮಾರ್ಗಗಳು—

(೫) ಸತ್ಯತೆ, ಸ್ವಚ್ಛತೆ, ವಿಧೇಯತೆ ಇವುಗಳ ಸಂಬಂಧದಿಂದ ಬಾಲ್ಯದಲ್ಲಿ ಶಿಕ್ಷಣ ಕೊಡುವದು. ಈ ಗುಣಗಳಲ್ಲಿ ಮೊದಲನೆಯದು ಅತಿ ಅಸಾಧ್ಯವು. ಚಿಕ್ಕ ಬಾಲಕರು ಕೂಡ ಸುಳ್ಳಾಡಲಿಕ್ಕೆ ಎಷ್ಟು ಮುಂದರಿಯುತ್ತಾರೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯು; ಆದರೆ ಸುಳ್ಳಾಡುವ ಕೆಟ್ಟ ನಡತೆಯನ್ನು ಆರಂಭದಲ್ಲಿಯೇ ಮುರಿಯುವದು ಸುಸಾಧ್ಯವೂ, ಹಿತಕರವೂ ಆಗಿರುವದು. ಮನೆಯಲ್ಲಿರುವ ಕಾಲದಲ್ಲಿಯೂ ಸಾಲಿಯಲ್ಲಿರುವ ಕಾಲದಲ್ಲಿಯೂ ಸ್ವಾಭಿಮಾನದ ಕಲ್ಪನೆಯನ್ನು ಹುಡುಗರ ಮನಸ್ಸಿನಲ್ಲಿ ಸತತವಾಗಿ ಉಂಟು ಮಾಡತಕ್ಕದ್ದು.

ವಿಧೇಯತೆಯ ಮಹತ್ವದ ಚಟವು ಗ್ರಹಶಿಕ್ಷಣದ ಪ್ರಭಾವದಿಂದಲೇ ತಲೆಗೊಳ್ಳತಕ್ಕದ್ದು. ಆದರೆ ಹೀಗಾಗುವದು ಕಡಿಮೆ. ಹಲವರು ತಮ್ಮ ಮಕ್ಕಳಿಗೆ ಮಿತಿಮೀರಿ ಸಲಿಗೆಯನ್ನು ಕೊಟ್ಟು ಅವರನ್ನು ತಲೆಗೇರಿಸಿಕೊಂಡಿರುತ್ತಾರೆ. ಇದು ಹೆಚ್ಚಿನ ಅಚ್ಚಿಯ ಪರಿಣಾಮವು.

(೪) ಹುಡುಗರೆನ್ನು ತಪ್ಪದೆ ದಿನಾಲು ಹೊತ್ತಿಗೆ ಸರಿಯಾಗಿ ಸಾಲಿಗೆ ಕಳಿಸುವದು. ಹುಡುಗರು ಬೇನೆಯ ಹೊರ್ತು ಮಿಕ್ಕ ಯಾವ ಕಾರಣದಿಂದಲೂ ಶಾಲೆಯನ್ನು ತಪ್ಪಿಸಕೂಡದು. ಒಂದು ವೇಳೆ ವಿಶೇಷ ಪ್ರಸಂಗದಿಂದ ಸಾಲಿಯನ್ನು ತಪ್ಪಿಸಲು, ಹುಡುಗರ ಪಾಲಕರು ಶಕ್ಯವಿದ್ದರೆ ಮುಂಚಿತವಾಗಿಯೇ ಅಧ್ಯಾಪಕರಿಗೆ ಆ ಕಾರಣವನ್ನು ತಿಳಿಸುವದು ಗೃಹಸ್ಥಿಕೆಯ ರೀತಿಯೆನಿಸುವದು. ಕುಟುಂಬದಲ್ಲಿ ಒಬ್ಬನೇ ಹುಡುಗನಿರುವದರಿಂದಲೂ ಖಾಸಗೀ ಶಾಲೆಗಳ ಅಧ್ಯಾಪಕರ ಸ್ಪರ್ಧೆಯಿಂದ ವಿದ್ಯಾರ್ಥಿಗಳ ಹಾಗೂ ತಾಯಿತಂದೆಗಳ ನೀತಿನುಲ್ಲಿ ಶೈಥಿಲ್ಯವುಂಟಾಗುವದರಿಂದಲೂ, ಸಮಯಶೀಲತೆ, ನಿಯಮಶೀಲತೆಗಳ ಗೌರವವೇ ತೋರದ ಹಾಗಾಗುತ್ತದೆ. ಒಮ್ಮೊಮ್ಮೆ ತೀರ ಕ್ಷುಲ್ಲಕ ಕಾರಣದಿಂದ ಹುಡುಗರು ಸಾಲಿಯನ್ನು ತಪ್ಪಿಸುತ್ತಿರುತ್ತವೆ ಹೀಗೆ ಚಿಕ್ಕ ಪುಟ್ಟ ಕಾರಣಗಳಿಗಾಗಿ ಮಕ್ಕಳನ್ನು ಮನೆಯಲ್ಲಿಟ್ಟುಕೊಳ್ಳುವರು ಮಕ್ಕಳಿಗೆ ಹಿತ ಮಾಡುವರೆಂದು ತಿಳಿಯಲಾಗದು. ಅವರು ಕೇವಲ ಮಕ್ಕಳ ಅಕಲ್ಯಾಣವನ್ನು ಚಿಂತಿಸುವ ಕಡು ಹಗೆಗಳಾಗಿರುತ್ತಾರೆಂದು ಹೇಳಬಹುದು. ಶಾಲೆಯನ್ನು ತಪ್ಪಿಸುವವನು ಶಾಲೆಯಲ್ಲಿ ನಡೆಯುವಂಥ ಮುಂದಿನ ಪಾಠಕ್ಕೆ ಸಹಾಯವಾಗುವಂಥ ಉಪಯುಕ್ತವಾದ ಪಾಠವನ್ನು ಕಳೆದುಕೊಳ್ಳುತ್ತಾನೆ. ಇಷ್ಟೇ ಅಲ್ಲದೆ ಹೊತ್ತಿಗೆ ಸರಿಯಾಗಿ ಕೆಲಸ ಮಾಡುವ ಅಭ್ಯಾಸವೂ ನೇಮದಿಂದ ಕೆಲಸ ಮಾಡುವ ರೂಢಿಯೂ ಅಳಿದುಹೋಗುತ್ತವೆ. ಈ ಸಮಯಶೀಲತೆ ನಿಯಮಶೀಲತೆಗಳ ಮಹತ್ವವೆಷ್ಟೆಂಬದು ಪ್ರೌಢಾವಸ್ಥೆಯಲ್ಲಿ ತಿಳಿಯುವದು.

(೫) ಮನೆಯಲ್ಲಿ ಕಲಿಯುವ ಪಾಠಗಳಿಗೆ ಪ್ರೀತಿಪೂರ್ವಕವಾಗಿ ಲಕ್ಷ ಕೊಡುವದು. "ಶಾಲಾಭ್ಯಾಸ" ವೆಂಬ ಅಧ್ಯಾಯದಲ್ಲಿ ಈ ಮಾತನ್ನು ಹೆಚ್ಚು ವಿಸ್ತಾರವಾಗಿ ವಿವರಿಸುವೆನು.

PROPOSED OBJECT LESSONS.

ಸೂಚಿಸಿದ ವಸ್ತುಪಾಠಗಳು.

(೧೪ನೇ ಪುಟದಿಂದ ಮುಂದೆ ಸಾಗಿದ್ದು.)

ಉದಾಹರಣೆ—ಕಲಿಸತಕ್ಕ ವಸ್ತುವು ಒಂದು ಹಳದೀ ಬಣ್ಣದ ಚೆಂಡು ಇದ್ದರೆ, ಬಾಲಕರಿಗೆ ಅದರ ಬಣ್ಣವು ಗೊತ್ತಾಗಿ, ಆ ಬಣ್ಣಕ್ಕೂ ಉಳಿದ ಬಣ್ಣಗಳಿಗೂ ಇರುವ ಭೇದವು ತಿಳಿದದೆಯೋ? ಇಲ್ಲವೋ? ಎಂಬದನ್ನು ಮಾಸ್ತರನು ಪರೀಕ್ಷಿಸಬೇಕು.

(೪) ಪಾಠ ಕಲಿಸುವಾಗ್ಗೆ ಪ್ರಥಕ್ಕರಣದಿಂದ ವಿಶೇಕರಣದ ಕಡೆಗೆ ಹೋಗಬೇಕು. ಮತ್ತು ಕಲಿಸುವಾಗ್ಗೆ ಯಾವ ಸಾಮಾನ್ಯ ವಿಚಾರಗಳು ಹೊರಡುವವೋ ಅವುಗಳನ್ನು ಹುಡುಗರಿಗೆ ಚನ್ನಾಗಿ ತಿಳಿಸಿಕೊಡಬೇಕು.

(೫) ಯಾವದೊಂದು ಸಂಗತಿಯಿಂದ ಹೊರಡುವ ಸಿದ್ಧಾಂತಗಳನ್ನು ಹುಡುಗರು ತಾವಾಗಿ ತೆಗೆಯುವ ಪ್ರಸಂಗಗಳನ್ನು ಅವರಿಗೆ ತಂದು ಕೊಡಬೇಕು. ಮತ್ತು ಇಂಥ ಸಿದ್ಧಾಂತಗಳನ್ನು ಮಾಡುವದರಲ್ಲಿ ಅವರು ತಮಗಿದ್ದ ಜ್ಞಾನದ ಉಪಯೋಗ ಮಾಡುತ್ತಾರೋ? ಇಲ್ಲವೋ? ನೋಡಬೇಕು. ಅವರಲ್ಲಿ ಒಣ ಸಂಗತಿಗಳ ಜ್ಞಾನವನ್ನು ತುಂಬಬಾರದು.

(೬) ಪ್ರಯೋಗ ಮಾಡಿ ನೋಡುವದಕ್ಕೆ ಹುಡುಗರಿಗೆ ಅದಪ್ಪ ಪ್ರಸಂಗಗಳನ್ನು ತಂದುಕೊಡಬೇಕು.

(೭) ವರ್ಣನೆ ಮಾಡುವಾಗ್ಗೆ ಹುಡುಗರಲ್ಲಿ ಸ್ಪಷ್ಟತೆ, ಯಥಾರ್ಥತ್ವ, ಪೂರ್ಣತ್ವ ಉಂಟಾಗುವ ಹಾಗೆ, ಅವರಿಂದ ಬರುವ ಉತ್ತರಗಳನ್ನು ಪೂರ್ಣ ವಾಕ್ಯದಿಂದ ಸ್ವೀಕರಿಸಬೇಕು.

(೮) ಕಲಿಸುವಾಗ್ಗೆ ಹ್ಯಾಗೆ ಮಾತಾಡಬೇಕು, ಮತ್ತು ಪ್ರಶ್ನೆಗಳನ್ನು ಹ್ಯಾಗೆ ಕೇಳಬೇಕು, ಎಂಬದನ್ನು ಮೊದಲೇ ಅಭ್ಯಾಸ ಮಾಡಬೇಕು. ಪಾರಿಭಾಷಿಕ ಅಥವಾ ಶಾಸ್ತ್ರೀಯ ಶಬ್ದಗಳನ್ನೂ ಕಠಿಣ ಭಾಷೆಯನ್ನೂ ಉಪಯೋಗಿಸಬಾರದು. ವರ್ಗದಲ್ಲಿ ಹುಡುಗರ ಲಕ್ಷ ಹತ್ತುವದಕ್ಕೆ ಇದೇ ಮುಖ್ಯ ಉಪಾಯವು. ಇದೇ ಮೇರೆಗೆ ಹುಡುಗರ ಲಕ್ಷ ಹತ್ತು

ವ ಹಾಗೆ ಮಾಡುವದರಿಂದಲೂ, ಅವರು ಎಲ್ಲ ಸಂಗತಿಗಳನ್ನು ಕೇಳುವ ಹಾಗೆ ಮಾಡುವದರಿಂದಲೂ, ಅವರಲ್ಲಿ ನಿರೀಕ್ಷಣ ಸಾಮರ್ಥ್ಯವನ್ನು ಬೆಳಿಸಿದಂತೆ ಆಗುತ್ತದೆಂಬ ಮಾತು ಲಕ್ಷದಲ್ಲಿಡತಕ್ಕಂಥಾದ್ದಾಗಿದೆ.

(೯) ಪಾಠವು ಹುಡುಗರ ಮನೋರಂಜನವಾಗುವಂತ ಇರಬೇಕು. ಇದನ್ನು ಮಾಡಬಹುದಾದ ಸಂಗತಿಯು ಹೇಗಂದರೆ—ಹುಡುಗರಿಗೆ ಪರಿಚಿತವಾದಂಥ ಸಂಗತಿಗೂ, ಪಾಠಕ್ಕೂ ಇರುವ ಸಂಬಂಧವನ್ನು ತೋರಿಸಿ, ಅಥವಾ ಹುಡುಗರು ಜಗದಲ್ಲಿ ಮಾಡತಕ್ಕಂಥ ಕೆಲಸಕ್ಕೆ ಇರುವ ಸಂಬಂಧವನ್ನು ತೋರಿಸಿ, ಇಲ್ಲವೆ ಅವರ ಪ್ರೀತ್ಯಾಸ್ಪದವಾದ ಭಾವನೆಗಳಿಗೆ ಸಂಬಂಧಿಸಿ ಅಥವಾ ಅವರ ಉದ್ಯೋಗ, ನಡತೆ, ಆಶ್ಚರ್ಯದ ಭಾವನೆ, ಅಥವಾ ಸೌಂದರ್ಯದ ಕಲ್ಪನೆ ಅಥವಾ ಅವರ ರಾಜನಿಷ್ಠೆ ಇಲ್ಲವೆ ಧರ್ಮನಿಷ್ಠೆ ಇವುಗಳಿಗೆ ಸಂಬಂಧಿಸಿ ಪಾಠಗಳನ್ನು ಅವರ ಮನವರಿಕೆಯಾಗುವಂತೆ ನಡಿಸಬೇಕು.

(೫) ಸಾಮಾನ್ಯ ಸೂಚನೆಗಳು.

(೧) ವಸ್ತುಪಾಠವನ್ನು ಕಲಿಸುವದರಲ್ಲಿ ಬರೇ ಚಿತ್ರಗಳಾಗಲಿ ಆಕೃತಿಗಳಾಗಲಿ ಸಾಕಷ್ಟು ಸಾಧನಗಳಲ್ಲ. ಯಾಕಂದರೆ ಇವುಗಳಿಂದ ಬಾಲಕರ ನಿರೀಕ್ಷಣ ಸಾಮರ್ಥ್ಯವು ತಕ್ಕಷ್ಟು ಬೆಳೆಯುಲಾರದು. ಇದರ ಹೊರ್ತು ಶಿಕ್ಷಕನು ಅವುಗಳಿಂದ ಮಾಡಬೇಕಾದಷ್ಟು ಪ್ರಯೋಗಗಳನ್ನು ಮಾಡಲಾರನು. ದೊಡ್ಡ ದೊಡ್ಡ ಪ್ರಾಣಿಗಳು, ಯಂತ್ರಗಳು, ಎಲ್ಲ ಪ್ರಕಾರದ ಸೃಷ್ಟಿ ಚಮತ್ಕಾರಗಳು, ಇವುಗಳನ್ನು ಕುರಿತು ಪಾಠ ಹೇಳುವಾಗ್ಗೆ, ಇವುಗಳ ಸಣ್ಣ ಸಣ್ಣ ಚಿತ್ರಗಳನ್ನು ತೋರಿಸುವದರಿಂದ ವಿಶೇಷ ಉಪಯೋಗ ಮಾಡಿಕೊಳ್ಳಬಹುದು. ಮತ್ತು ಇಂಥ ಚಿತ್ರಗಳನ್ನು ಶಿಕ್ಷಕನು ಸ್ವತಃ ತೆಗೆದುಬಿಡಿಸಿಕ್ಕೆ ಕಲಿಯಬೇಕು; ಅಥವಾ ದೊರಕಿಸಲಿಕ್ಕೆ ಯತ್ನ ಮಾಡಬೇಕು: ಹ್ಯಾಗೇ ಇರಲಿ, ಬರೇ ಚಿತ್ರಗಳನ್ನು ಎಂದೂ ಉಪಯೋಗ ಮಾಡಬಾರದು. ಆದರೆ ಪಾಠದ ವಿಷಯಕ್ಕೆ

ನಿಕಟವಾಗಿ ಸಂಬಂಧಿಸಿದಂಥ ಅದನ್ನು ವಿವರವಾಗಿ ಉದಹರಿಸುವಂಥ ಸ್ವಪ್ನ ಪದಾರ್ಥಗಳನ್ನು ಉಪಯೋಗಿಸಬೇಕು. ಸಾಧ್ಯವಿದ್ದಾಗ್ಗೆ ಪದಾರ್ಥಗಳನ್ನು ಅವುಗಳ ಸ್ವಾಭಾವಿಕ ಸ್ಥಿತಿಯಲ್ಲಿ ಮತ್ತು ಯೋಗ್ಯ ಋತುಗಳಲ್ಲಿ ಹುಡುಗರು ಅವ ಲೋಕಿಸುವಂತೆ ಮಾಡತಕ್ಕದ್ದು

(ಎ) ಹುಡುಗರು ತಮ್ಮ ವಸ್ತುಪಾಠವನ್ನು ವಿವರಿಸುವ ಮಾದರಿಗಳನ್ನು ಸಂಗ್ರಹಿಸಿ ಅವುಗಳನ್ನು ಶಾಲೆಗೆ ತರುವಂತೆ ಅವರಿಗೆ ಉತ್ತೇಜನ ಕೊಡಬೇಕು. ವಿಶೇಷ ಮನರಂಜನೆಯಾಗುವ ಪದಾರ್ಥಗಳನ್ನು ಅರಿಸಿ ಶಾಲೆಯಲ್ಲಿ ಸಂಗ್ರಹಾಲಯವನ್ನು ಮಾಡಬೇಕು. ಪ್ರತಿಯೊಂದು ಪಾಠದ ಸಮಯದಲ್ಲಿ ಹುಡುಗರು ತಂದ ಮಾದರಿಗಳನ್ನು ಕುರಿತು ಶಿಕ್ಷಕನು ಕೆಲವು ವೇಳೆ ಚರ್ಚಿಸಬೇಕು.

(ಬಿ) ಸಾಧ್ಯವಾದ ಮಟ್ಟಿಗೆ ಒಕ್ಕಲು ಮನೆ ಮಾಡಿದ ಪಾಟಿಯ ಮೇಲಾಗಲಿ ಕಾಗದದ ಮೇಲಾಗಲಿ ಹುಡುಗರಿಂದ ಚಿತ್ರ ತೆಗಿಸಬೇಕು.

(ಸಿ) ಹುಡುಗರು ಹೊಲಗಳಿಗೂ, ಜಲಾಶಯಗಳ ದಂಡೆಗೂ, ಅಡವಿಗಳಿಗೂ, ಐತಿಹಾಸಿಕ ಇಲ್ಲವೆ ಶಾಸ್ತ್ರೀಯ ಸಂಬಂಧದ ಜ್ಞಾನ ಉಂಟಾಗುವ ಸ್ಥಳಗಳಿಗೂ, ಅಥವಾ ಅಂಥ ವಸ್ತುಗಳಿದ್ದ ಸ್ಥಳಗಳಿಗೂ ಹೋಗುವದಕ್ಕೆ ಉತ್ತೇಜನ ಕೊಡಬೇಕು. ಅದರಿ ಇಂಥ ಸ್ಥಳಕ್ಕೆ ಹುಡುಗರನ್ನು ಕರಕೊಂಡು ಹೋಗೋಣವು ಹುಡುಗರ ವಯಸ್ಸು ಅವರು ಹೊಂದಿದ ಜ್ಞಾನ ಇವುಗಳನ್ನು ಅವಲಂಬಿಸಿರಬೇಕು. ಮತ್ತು ಅವರ ಪ್ರವಾಸವು ಒಂದು ಅಥವಾ ಹಲವು ಪಾಠಗಳಿಗೆ ಸ್ವಲ್ಪವಾಗಿ ಸಂಬಂಧಿಸಿದ್ದಿರಬೇಕು. (ಸಶೇಷ).

ಕೃಷಿಶಾಸ್ತ್ರವು

ಮೊದಲನೇ ಭಾಗ.

ಮಣ್ಣು.

ಒಕ್ಕಲಿಗನಿಗೆ ತನ್ನ ಭೂಮಿಯ ಮಣ್ಣು ಯಾವ ಪ್ರಕಾರ

ದ್ದಿರುತ್ತದೆಂಬುದರ ಜ್ಞಾನವು ಅತಿ ಮಹತ್ವವಾದದ್ದು. ಮಣ್ಣಿನ ಸ್ವರೂಪವು ತಿಳಿದ ಹೊರ್ತು ಅವನು ಮಾಡತಕ್ಕ ಮೂಂದಿನ ಕೆಲಸಗಳೆಲ್ಲ ನಿಷ್ಫಲವಾಗುವವು. ಆದ್ದರಿಂದ ಮಣ್ಣಿನ ಸ್ವರೂಪದ ಜ್ಞಾನವು ಅತಿಶಯ ಅವಶ್ಯವಾದದ್ದು.

ಮಣ್ಣು ನಾನಾಪ್ರಕಾರದ ಸಸ್ಯಾದಿಗಳ ಬೇರುಗಳ ಮೂಲಸ್ಥಾನವು. ಆ ಬೇರುಗಳು ಅದರ ಎಲ್ಲ ದಿಕ್ಕುಗಳಲ್ಲಿ ಸೇರಿಕೊಂಡು ಹಬ್ಬುತ್ತವೆ. ಮತ್ತು ಸಸ್ಯಾದಿಗಳು ತಮ್ಮ ಸ್ಥಿತಿಯಲ್ಲಿ ಸಮನಾಗಿ ನಿಲ್ಲುವದಕ್ಕೆ ಮಣೇ ಮುಖ್ಯವಾಗಿ ಬೇಕು.

ಮಣ್ಣೇ ಸಸ್ಯಾದಿಗಳಿಗೆ ಕೂಳು ನೀರುಗಳ ಭಾಂಡಾರವಾಗಿದೆ. ಮಣ್ಣಿನ ಅಂತರ್ಭಾಗದಲ್ಲಿ ಎಲ್ಲ ಪ್ರಕಾರದ ರಸಾಯನ ವ್ಯಾಪಾರಗಳು ನಡೆದಿರುತ್ತವೆ. ಮತ್ತು ಇಂಥ ರಸಾಯನ ವ್ಯಾಪಾರಗಳು ವನಸ್ಪತಿಗಳ ಬೆಳವಣಿಗೆಗೆ ಅತಿಶಯ ಮಹತ್ವವಾದ ಸಂಗತಿಗಳಾಗಿವೆ.

ಬೇಸಾಯದ ಕೆಲಸಕ್ಕೆ ಯಾವದೊಂದು ಮಣ್ಣಿನ ಯೋಗ್ಯತೆಯನ್ನು ಅದರ ಪ್ರಾಕೃತಿಕ ಸ್ವರೂಪದಿಂದಲೂ ಅದರಲ್ಲಿರತಕ್ಕ ರಸಾಯನ ದ್ರವ್ಯಗಳ ಮಿಶ್ರಣದಿಂದಲೂ ನೊತ್ತು ಮಾಡಬಹುದು. ರಂಟೆ ಕುಂಟೆಯ ಕೆಲಸಗಳೆಲ್ಲ ನೆಲದ ಯಾಂತ್ರಿಕ ಮತ್ತು ಪ್ರಾಕೃತಿಕ ಮಿಶ್ರಣವನ್ನು ತಿದ್ದುವದರ ಉದ್ದೇಶದಿಂದಲೇ. ಗೊಬ್ಬರ ಹಾಕುವ ಉದ್ದೇಶವಾದರೂ ಮಣ್ಣಿನಲ್ಲಿರುವ ರಸಾಯನೆ ಮಿಶ್ರಣವನ್ನು ಸುಧಾರಿಸುವದಕ್ಕಾಗಿಯೇ ಇರುವದು. ಮಣ್ಣನ್ನು ಸುಡುವದೂ, ಅದರಲ್ಲಿ ಸುಣ್ಣವನ್ನು ಕೂಡಿಸುವದೂ ಮೊದಲಾದ ಸಂಗತಿಗಳಾದರೂ ಮಣ್ಣಿನ ಯಾಂತ್ರಿಕ ಸ್ಥಿತಿಯನ್ನು ರಸಾಯನೆ ಮಿಶ್ರಣದಿಂದಾದ ರಚನೆಯನ್ನೂ ಸುಧಾರಿಸುವ ಸಲುವಾಗಿಯೇ ಇರುವವು.

ಹೀಗಿದ್ದಮೇಲೆ ಒಕ್ಕಲಿಗನ ಮುಖ್ಯ ಕರ್ತವ್ಯವು ಮಣ್ಣನ್ನು ಸುಧಾರಿಸುವದೇ ಇರತಕ್ಕದ್ದು ಆದ್ದರಿಂದ ಮಣ್ಣಿನ ಸ್ವರೂಪವನ್ನು ಕುರಿತು ಎಲ್ಲ ಪ್ರಕಾರದ ಜ್ಞಾನವನ್ನು ಅವ

ಸ್ಥಿರುತ್ತದೆಂಬುದರ ಜ್ಞಾನವು ಅತಿ ಮಹತ್ವವಾದದ್ದು. ಮಣ್ಣಿನ ಸ್ವರೂಪವು ತಿಳಿದ ಹೊರ್ತು ಅವನು ಮಾಡತಕ್ಕ ಮುಂದಿನ ಕೆಲಸಗಳೆಲ್ಲ ನಿಷ್ಫಲವಾಗುವವು. ಆದ್ದರಿಂದ ಮಣ್ಣಿನ ಸ್ವರೂಪದ ಜ್ಞಾನವು ಅತಿಶಯ ಅವಶ್ಯವಾದದ್ದು.

ಮಣ್ಣು ನಾನಾಪ್ರಕಾರದ ಸಸ್ಯಾದಿಗಳ ಬೇರುಗಳ ಮೂಲಸ್ಥಾನವು. ಆ ಬೇರುಗಳು ಅದರ ಎಲ್ಲ ದಿಕ್ಕುಗಳಲ್ಲಿ ಸೇರಿಕೊಂಡು ಹಬ್ಬುತ್ತವೆ. ಮತ್ತು ಸಸ್ಯಾದಿಗಳು ತಮ್ಮ ಸ್ಥಿತಿಯಲ್ಲಿ ಸಮನಾಗಿ ನಿಲ್ಲುವದಕ್ಕೆ ಮಣ್ಣೇ ಮುಖ್ಯವಾಗಿ ಬೇಕು.

ಮಣ್ಣೇ ಸಸ್ಯಾದಿಗಳಿಗೆ ಕೂಳು ನೀರುಗಳ ಭಾಂಡಾರವಾಗಿದೆ. ಮಣ್ಣಿನ ಅಂತರ್ಭಾಗದಲ್ಲಿ ಎಲ್ಲ ಪ್ರಕಾರದ ರಸಾಯನ ವ್ಯಾಪಾರಗಳು ನಡೆದಿರುತ್ತವೆ. ಮತ್ತು ಇಂಥ ರಸಾಯನ ವ್ಯಾಪಾರಗಳು ವನಸ್ಪತಿಗಳ ಬೆಳವಣಿಗೆಗೆ ಅತಿಶಯ ಮಹತ್ವವಾದ ಸಂಗತಿಗಳಾಗಿವೆ.

ಬೇಸಾಯದ ಕೆಲಸಕ್ಕೆ ಯಾವದೊಂದು ಮಣ್ಣಿನ ಯೋಗ್ಯತೆಯನ್ನು ಅದರ ಪ್ರಾಕೃತಿಕ ಸ್ವರೂಪದಿಂದಲೂ ಅದರಲ್ಲಿರತಕ್ಕ ರಸಾಯನ ದ್ರವ್ಯಗಳ ಮಿಶ್ರಣದಿಂದಲೂ ಗೊತ್ತು ಮಾಡಬಹುದು. ರಂಟೆ ಕುಂಟೆಯ ಕೆಲಸಗಳೆಲ್ಲ ನೆಲದ ಯಾಂತ್ರಿಕ ಮತ್ತು ಪ್ರಾಕೃತಿಕ ಮಿಶ್ರಣವನ್ನು ತಿದ್ದುವದರ ಉದ್ದೇಶದಿಂದಲೇ. ಗೊಬ್ಬರ ಹಾಕುವ ಉದ್ದೇಶವಾದರೂ ಮಣ್ಣಿನಲ್ಲಿರುವ ರಸಾಯನೆ ಮಿಶ್ರಣವನ್ನು ಸುಧಾರಿಸುವದಕ್ಕಾಗಿಯೇ ಇರುವದು. ಮಣ್ಣನ್ನು ಸುಡುವದೂ, ಅದರಲ್ಲಿ ಸುಣ್ಣವನ್ನು ಕೂಡಿಸುವದೂ ಮೊದಲಾದ ಸಂಗತಿಗಳಾದರೂ ಮಣ್ಣಿನ ಯಾಂತ್ರಿಕ ಸ್ಥಿತಿಯನ್ನು ರಸಾಯನೆ ಮಿಶ್ರಣದಿಂದಾದ ರಚನೆಯನ್ನೂ ಸುಧಾರಿಸುವ ಸಲುವಾಗಿಯೇ ಇರುವವು.

ಹೀಗಿದ್ದಮೇಲೆ ಒಕ್ಕಲಿಗನ ಮುಖ್ಯ ಕರ್ತವ್ಯವು ಮಣ್ಣನ್ನು ಸುಧಾರಿಸುವದೇ ಇರತಕ್ಕದ್ದು ಆದ್ದರಿಂದ ಮಣ್ಣಿನ ಸ್ವರೂಪವನ್ನು ಕುರಿತು ಎಲ್ಲ ಪ್ರಕಾರದ ಜ್ಞಾನವನ್ನು ಅವ

ನು ಅವಶ್ಯವಾಗಿ ಸಂಪಾದಿಸತಕ್ಕದ್ದು. ಮಣ್ಣಿನ ವಿಷಯವಾಗಿ ಅರಿತುಕೊಳ್ಳಬೇಕಾದ ಮುಖ್ಯ ಸಂಗತಿಗಳು ಯಾವವೆಂದರೆ :—

೧. ಮಣ್ಣಿನ ಪ್ರಕಾರಗಳೂ ಅವುಗಳ ರಚನಾಕ್ರಮವೂ
೨. ಅವುಗಳ ರಸಾಯನ ದ್ರವ್ಯಮಿಶ್ರಣವು.
೩. ಅವುಗಳ ಗುಣಗಳು, ಜಾತಿಗಳು ಹಾಗೂ ಇವುಗಳಲ್ಲಿರುವ ರೂಪಾಂತರಗಳು.
೪. ಅವುಗಳ ಯಾಂತ್ರಿಕ ಮತ್ತು ಪ್ರಾಕೃತಿಕ ಧರ್ಮಗಳು.
೫. ಮಣ್ಣಿನ ರಸಾಯನ ಕ್ರಿಯೆಯಲ್ಲಿ ಆಗುವ ರೂಪಾಂತರಗಳು.
೬. ಭೂಗರ್ಭ ಶಾಸ್ತ್ರತತ್ವದಿಂದಲೂ ಭೂಗರ್ಭ ಶಾಸ್ತ್ರತತ್ವದಿಂದಲೂ ಅವುಗಳ ವ್ಯವಸ್ಥೆ.

ಮಣ್ಣಿನ ಪ್ರಾಕೃತಿಕ ಸ್ಥಿತಿಯನ್ನು ತಿದ್ದುವದಕ್ಕೆ ಇಲ್ಲವೆ ಅದರ ರಸಾಯನ ಮಿಶ್ರಣದ ರಚನೆಯನ್ನು ಬಲಪಡಿಸುವದಕ್ಕೆ ಇಲ್ಲವೆ ಬದಲು ಮಾಡುವದಕ್ಕೆ ಒಕ್ಕಲತನ ಮಾಡುವವರು ಉದ್ಯುಕ್ತರಾಗುವ ಮೊದಲು ಮೇಲೆ ಹೇಳಿದ ಎಲ್ಲ ಸಂಗತಿಗಳ ಜ್ಞಾನವನ್ನು ಚೆನ್ನಾಗಿ ಮಾಡಿಕೊಳ್ಳತಕ್ಕದ್ದು ಅವಶ್ಯವಾಗಿದೆ.

ಮಣ್ಣುಗಳ ಉತ್ಪತ್ತಿ.

ಬೇರೆ ಬೇರೆ ಮಣ್ಣುಗಳಂದರೇನು ? ಅವುಗಳ ಉತ್ಪತ್ತಿಯು ಹ್ಯಾಗೆ ? ಅದು ಹ್ಯಾಗೆ ಆಗುತ್ತದೆಂಬದನ್ನು ವಿಚಾರ ಮಾಡಿದರೆ, ಮಣ್ಣೆಂಬುವು ಸಸ್ಯಾದಿಗಳು ಬೆಳೆಯುವ ನೆಲದ ಭಾಗವೆಂದು ತಿಳಿಯತಕ್ಕದ್ದು. ಇಂಥ ಮಣ್ಣಿನ ನೆಲವು ಭೂಪೃಷ್ಠದ ಮೇಲೆ ಕೆಲವು ಕಡೆಗೆ ಒಂದೆರಡು ಇಂಚುಗಳು ಕೆಲವು ಕಡೆ ಕೆಲವು ಫೂಟುಗಳ ಸರಿಗೆ ಆಳವಾಗಿರುವದು. ಒಂದು ಮಣ್ಣಿನ ಹೆಂಟೆಯನ್ನಾಗಲಿ ಒಂದು ಬುಟ್ಟಿತುಂಬ ಇಲ್ಲವೆ ಒಂದು ಸಲಿಕೆ ತುಂಬಾಗಲಿ ಮಣ್ಣನ್ನು ತೆಗೆದು ಕೊಂಡು ಅದನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದರೆ ಆ ಮಣ್ಣಿನಲ್ಲಿ ಬೇರೆ ಬೇರೆ ಆಕಾರದ ಕಲ್ಲುಗಳು ನಮಗೆ ಕಂಡುಬ

ಬಹುವವು. ದೊಡ್ಡ ದೊಡ್ಡ ಕಲ್ಲುಗಳನ್ನು ನಾವು ಕೈಯಿಂದ ಆರಿಸಿ ತೆಗೆಯಬಹುದು. ಮತ್ತು ಇನ್ನು ಅನೇಕ ಕಲ್ಲುಗಳನ್ನು ನಾವು ಬೇರೆ ಬೇರೆ ಆಕಾರದ ಕಣ್ಣುಗಳಿದ್ದ ಜರಡಿಗಳ ಸಹಾಯದಿಂದ ಸೋಸಿಕೊಂಡು ಮಣ್ಣಿನಿಂದ ವಿಂಗಡಿಸಬಹುದು. ಇಂಥ ಸೋಸಿಕೊಂಡ ಕಲ್ಲುಗಳಿಗೆ ನಾವು ಹರಳುಗಳೆನ್ನುತ್ತೇವೆ.

ಈ ರೀತಿಯಿಂದ ಸೋಸಿ ತೆಗೆದ ಮಣ್ಣು ಪುನಃ ವಿಶೇಷ ರೀತಿಯಲ್ಲಿ ಸೋಸಬಹುದು ಹ್ಯಾಗಂದರೆ—ಆ ಮಣ್ಣನ್ನು ನೀರಿನಲ್ಲಿ ಬೆರಿಸಿ ಕಲಹೊತ್ತು ಹಾಗೆ ಬಿಟ್ಟರೆ ಮಣ್ಣಿನ ಜಡ ಕಣಗಳು ನೀರು ಹಾಕಿದ ಪಾತ್ರೆಯ ಬುಡಕ್ಕೆ ಹೋಗಿ ಕೂಡುವವು. ಮತ್ತು ಕೆಲವು ಅಂಶವು ನೀರಿನ ಮೇಲೆ ತೇಲುವದು. ಇಂಥ ನೀರಿನ ಮೇಲೆ ತೇಲುವ ಅಂಶವನ್ನು ಎರಡನೇ ಪಾತ್ರೆಯಲ್ಲಿ ಸುರಿವಿಕೊಳ್ಳಬೇಕು. ನೀರಿನ ಬುಡಕ್ಕೆ ಹೋಗಿ ಕೂತದ್ದೇ ಉಸುಬು. ಮತ್ತು ಮೇಲೆ ತೇಲುವ ಅಂಶವೇ ಮಣ್ಣು ಮತ್ತು ಕೆಲವು ಸೇಂದ್ರಿಯ ಪದಾರ್ಥವು.

ನೀರನ್ನು ಫಿಲ್ಟರ ಅಂದರೆ ನೀರನ್ನು ಸೋಸುವ ಯಂತ್ರ ದೊಳಗಿಂದ ಸೋಸಿ ಅದು ಬಣಗಿ ಹೋಗುವವರೆಗೆ ಇಟ್ಟರೆ ಪಾತ್ರೆಯ ಬುಡದಲ್ಲಿ ನೀರಲ್ಲಿ ಬೆರತು ಕರಗುವ ಅನೇಕ ದ್ರವ್ಯಗಳು ಉಳಿಯುವವು. ಅಂದರೆ ನೀರಿನಲ್ಲಿ ಅನೇಕ ದ್ರವ್ಯಗಳು ಬೆರತುಕೊಂಡಿರುವವೆಂಬದು ಸ್ಪಷ್ಟವದೆ. ಈ ದ್ರವ್ಯಗಳು ಯಾವವೆಂಬುವದನ್ನು ರಸಾಯನ ಶಾಸ್ತ್ರತತ್ವದಿಂದ ಪರಿಶೋಧಿಸಿದರೆ ಕೆಳಗಿನ ದ್ರವ್ಯಗಳು ಅದರಲ್ಲಿ ಸಿಗುವವು.

ಕಾರಬೋನೆಟಸ್.	ಪೋಟಾಷ
ನೈಟ್ರೆಟಸ್	ಸೋಡಾ
ಕ್ಲೋರಾಯಿಡಸ್	ಮ್ಯಾಗ್ನೇಸಿಯಾ
ಸುಣ್ಣದ ಫಾಸ್ಫೆಟ್ಸ	

(ಸಶೇಷ.)

DEPARTMENTAL NOTICE.

ನೋಟೀಸಗಳು.

P. S. C. EXAMINATION.

ಮುಲಖೀ ಪರೀಕ್ಷೆಯು.

ಈ ನೋಟೀಸಿನಿಂದ ಪ್ರಸಿದ್ಧಿಸಲ್ಪಡುದೇನಂದರೆ, ಸನ್ ೧೯೦೦ನೇ ದಿಶಂಬರ ೨೦ನೇ ತಾರೀಖಿನ ದಿವಸ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟಿನ ೧ನೇ ಭಾಗದ ದಲ್ಲಿ ಪ್ರಸಿದ್ಧಿಸಲ್ಪಟ್ಟ ಹೊಸ ನಿಯಮಗಳ ೧ನೇ ಪರಿಶಿಷ್ಟದ ಸಿ. ಶೆಡ್ಯೂಲಗಳಿಗೆ ಸರಿಯಾಗಿ ಸನ್ ೧೯೦೨-೧೯೦೩ನೇ ಇಸವಿಯ ಪಬ್ಲಿಕ ಸರ್ವಿಸ ಸರ್ಟಿಫಿಕೇಟು ಪರೀಕ್ಷೆಗಳು ಸಪ್ಟಂಬರ ೮ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗೆದುಕೊಳ್ಳಲ್ಪಡುವವು.

೨. ಮರಾಠಿ ಭಾಷೆಯಲ್ಲಿ ಪರೀಕ್ಷಿಸಲಪೇಕ್ಷಿಸುವ ಉಮೇದವಾರರು ಬೆಳಗಾವಿ, ಅಥವಾ ಧಾರವಾಡ ಸೆಂಟರಿನಲ್ಲಿ ಆಗುವ ಪರೀಕ್ಷೆಗೆ ಮೆ. ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆಯನ್ನು ಪಡಕೊಂಡು ಕೂಡ್ರಬಹುದು.

೩. ಪರೀಕ್ಷೆಗೆ ಕೂಡ್ರ ತಕ್ಕವರು ತಮ್ಮ ಅರ್ಜಿಗಳನ್ನು ತಾರೀಖು ೧ನೇ ಅಗಷ್ಟ ೧೯೦೨ನೇ ಇಸವಿ ದಿವಸ ಇಲ್ಲವೇ ತತ್ಪೂರ್ವದಲ್ಲಿ ತಲಪುವಂತೆ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಾದ ಧಾರವಾಡ ಹಾಯಸ್ಕೂಲ ಹೆಡ್ ಮಾಸ್ತರರ ಕಡಿಗೆ ಕಳಿಸಬೇಕು. ಪ್ರತಿ ಒಂದು ಅರ್ಜಿಯಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರೂ ಅವನು ಯಾವದೊಂದು ಸಾಲೆಯಲ್ಲಿ ಕಲಿಯುತ್ತಿದ್ದರೆ, ಆ ಸಾಲೆಯ ಹೆಸರೂ ಇರತಕ್ಕದ್ದು. ಮತ್ತು ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ತರಗತಿಯನ್ನು (ಗ್ರೇಡು) ಅದರಲ್ಲಿ ತೋರಿಸಿಬೇಕು.

೪ ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳಿದ ಆರು ತಿಂಗಳಿಂದ ಆ ಜಿಲ್ಲೆಯಲ್ಲಿದ್ದನೆಂಬ ಬಗ್ಗೆ

ತಾನು ಇರುವ ಊರ ಪಾಟೀಲನದಾಗಲಿ, ಸಾಲೆಯ ಮಾಸ್ತರನದಾಗಲಿ, ಸರಟೆಫಿಕೇಟನ್ನು ಹಾಜರ ಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು ಪರೀಕ್ಷೆಯ ಫೀ ಪರೀಕ್ಷೆಯ ವಿಷಯ ಮುಂತಾದ ಮಾಹಿತಿಯು ಸನ್ ೧೯೦೦ನೇ ಇಸವಿಯ ದಿಸಂಬರ ೨೦ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೨೫೧೯ರಿಂದ ೨೫೭೦ ಪುಟಗಳವರೆಗೆ ಛಾಪಿಸಲ್ಪಟ್ಟಿದೆ.

೬. ಈ ವರ್ಷ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪ್ರಸ್ತಕಗಳು ಸನ್ ೧೯೦೧ನೇ ಇಸವಿಯ ನೊವ್ಹೆಂಬರ ೨೧ನೇ ತಾರೀಖಿನ ಮುಂಬೈ ಗವ್ಹರ್ನಮೆಂಟ ಗ್ಯಾಝೀಟಿನ ೨ ಭಾಗದಲ್ಲಿ ೧೫೭೭ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟಿವೆ.

ಧಾರವಾಡ
ತಾ|| ೧೫-೫-೧೯೦೨. } C. C. Boyd.
ಅಕ್ಟಿಂಗ ಕಲೆಕ್ಟರ ಧಾರವಾಡ.

ಟೀಪು:—ಇದೇ ಮೇರೆಗೆ ವಿಜಾಪೂರ, ಬೆಳಗಾವ, ಕಾರವಾರ ಜಿಲೆಗಳ ಕಲೆಕ್ಟರರಾದರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು ಎಲ್ಲ ಕಡೆಯಲ್ಲಿ ಆಗುವ ಪರೀಕ್ಷೆಗಳ ತಾರೀಖು ಒಂದೇ ಎಂಬದು ಎಲ್ಲರಿಗೂ ಗೊತ್ತೇ ಇರುವದು. ಈ ಸಾರೆ ಮರಾಠಿಯಲ್ಲಿ ಪರೀಕ್ಷೆಯನ್ನು ಕೊಡಲಿಚ್ಛಿಸುವ ಉಮೇದವಾರರು ಬೇರೆ ಜಿಲ್ಲೆಗಳಿಗೆ ಹೋಗುವ ಕಾರಣವಿಲ್ಲ. ಆಯಾ ಜಿಲ್ಲೆಗಳಲ್ಲಿಯೇ ಅವರನ್ನು ಪರೀಕ್ಷಿಸುವ ವ್ಯವಸ್ಥೆಯನ್ನು ಸರಕಾರದವರು ಮಾಡಿರುವರು.

ಎ. ಕನ್ನಡ ಶಾ. ಪತ್ರಕ.

MDDLE SCHOOL SCHOLARSHP EXAMINATION.

ಮಿಡಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು.

೨೫ನೇ ಜಾನ್ಯೂಆರಿ ೧೯೦೨ನೇ ಇಸವಿಯು ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ಒಂದನೇ ಭಾಗದ ೨೩೦ ರಿಂದ ೨೩೨ನೇ ಪಾನಿನಲ್ಲಿ ಛಾಪಿಸಿದಂತೆ ಆದು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಶುಕ್ರವಾರ

ತಾರೀಖು ೧೯ನೇ ಸಪ್ಟಂಬರ ಸನ್ ೧೯೦೬ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಮದ್ರಾಸ ಕಾಲ ಘಾನದ ೧೧ ಘೆಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರು ಗಳು ಯಾವವೆಂದರೆ: —

೧ ಧಾರವಾಡ ಹೈಸ್ಕೂಲ
೨ ಬೆಳಗಾವ ಹೈಸ್ಕೂಲ
೩ ವಿಜಾಪೂರ ಹೈಸ್ಕೂಲ
೪ ಕಾರಕಾರ ಹೈಸ್ಕೂಲ
೫ ಅಲಿಭಾಗ ಜಾನ್ ಎಲ್ಸ್ಟನ್ ಮಿಶನ್ ಹೈಸ್ಕೂಲ

೨ ಈ ಆರು ಸ್ಕೂಲರ ಶಿಪ್ರ್ಪಗಳಲ್ಲಿ ಎರಡು ಎಲ್ಲ ಉ ಮೇದವಾರರಲ್ಲಿ ಮೇಲಾದವರಿಗೆ ಸಿಗುವವು ಎರಡು ಇಂಗ್ಲಿ ಷ ಅಭ್ಯಾಸದಲ್ಲಿ ಹಿಂದುಳಿದ ಚೀನಿ ಇಸ್ರಾಯೆಲ್ ಕುಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ೪ ವರ್ಗದಲ್ಲಿ ಉತ್ತೀರ್ಣರಾದವರಿಗೆ ಸಿಗುವವು. ಎರಡು ಮುಸಲ್ಮಾನ ಜಾತಿಯವರಿಗಾಗಿ ಕಾದಿಟ್ಟಂಥವು ೪ ಜಾತಿ ಯ ಉತ್ಕೃತರಾದ ವಿದ್ಯಾರ್ಥಿಗಳಿಗೆ ದೊರಯುವವು.

೩ ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡು ವದು ಧಾರವಾಡ ವಿಜಾಪೂರ ಮತ್ತು ಕಾರವಾರ ಸೆಂಟ ರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ಅಲಿಭಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆ ದುಕೊಳ್ಳಲ್ಪಡುವದು.

೪ ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯ ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯು ಕೇಶನಲ್ ಇನಸ್ಪೇಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿ ಯ ಹೈಸ್ಕೂಲಿನ ಹೆಡ್‌ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿ

ಯುಸ್ಸು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಥಾಪಿಸಿದ ಸಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯು ನಮೂನೆಗಳು ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳುವದಿಲ್ಲ ಉಮೇದವಾರರು ಅರ್ಜಿಗಳನ್ನು ೧೫ನೇ ಅಗಪ್ಟ ಸನ್ ೧೯೦೧ನೇ ಇಸವಿಯ ಒಳಗಾಗಿ ತಮ್ಮ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲಿಕ್ಕಿಲ್ಲ.

೫ ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು ಸ್ಕಾಲರಶಿಪ್ಪಿನ ರಕಮು ಅವಧಿ ಪರೀಕ್ಷಾ ಫೀ ಮುಂತಾದ ಸಂಗತಿಗಳ ಸಂಬಂಧದ ಸುಧಾರಿಸಿದ ಹೆಚ್ಚಿನ ಮಾಹಿತಿಯು ನಮ್ಮ ಕಡೆಗಾಗಲಿ ಪರೀಕ್ಷಾ ಕವಿಾಟಿಯ ಕಡೆಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಶಿಗುವವು

ಧಾರವಾಡ
ತಾ|| ೧೫-೫-೧೯೦೧ } B. R. Sahasrabudhe,
ಎ. ಇ. ದಕ್ಷಿಣಭಾಗ

HIGH AND S. SCHOOL SCHOLARSHIP EXAMINATION.

ಹೈಸ್ಕೂಲ ಸ್ಕಾಲರಸಿಪ್ಪ ಪರೀಕ್ಷೆಯು.

ಸನ್ ೧೯೦೦ನೇ ಇಸವಿಯ ಜನವರಿ ೩೧ನೇ ತಾರೀಖಿಗೆ ೧೮೮೯-೯೦ನೇ ಸಾಲಿನವರೆಗೆ ಸರಕಾರಿ ಗ್ಯಾಝೆಟ್ಟಿನಲ್ಲಿ ಪ್ರಸಿದ್ಧವಾದಂತೆ ಮೂರು ಹೈಸ್ಕೂಲ ಸ್ಕಾಲರಸಿಪ್ಪುಗಳ ಸಂಬಂಧದ ಪರೀಕ್ಷೆಯು ಬುಧವಾರ ತಾರೀಖು ೧೩ನೇ ಸಪ್ಟಂಬರ ಸನ್ ೧೯೦೦ ಇಸವಿಯ ದಿವಸ ಮುತ್ತು ತದುತ್ತರ ದಿನಸಗಳಲ್ಲಿ ಮಧ್ಯಾಸ್ಕಾಲವಾನದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಬಂದು ಸೆಂಟರಿನಲ್ಲಿ ಪ್ರಾರಂಭವಾಗುವದು ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲ.

೨. ಬೆಳಗಾವ ಹೈಸ್ಕೂಲ.

೩. ವಿಜಾಪೂರ ಹೈಸ್ಕೂಲ.
೪. ಕಾರವಾರ ಹೈಸ್ಕೂಲ
೫. ಅಲಿಬಾಗ ಜಾನ್ ಎಲ್‌ಫನಸ್ಟನ್ ಮಿ
ಶನ್ ಹಾಯಸ್ಕೂಲ.

೩. ಈ ಮೂರು ಸ್ಕೂಲರಶಿಪ್ಪುಗಳಲ್ಲಿ ಒಂದು ಎಲ್ಲ ಉ
ದ್ಯೋದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂ
ಗ್ಲಿಷ ಅಭ್ಯಾಸೆದವ್ಗಿ ಹಿಂದೆ ಹೇಳಿದ ಬೇನಿ ಇಸ್ರಾಯೆಲ್ ಉ
ಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಿ
ದ್ದು ಅವರಲ್ಲಿ ಉತ್ಕೃತನಾದವನಿಗೆ ದೊರೆಯುವದು. ಮೂ
ರನೇದು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟಿದೆ.
ಆ ಜಾತಿಯ ವಿದ್ಯಾರ್ಥಿಗಳಲ್ಲಿ ಉತ್ಕೃತನಾದವನಿಗೆ ದೊರೆ
ಯುವದು.

೩. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ
ಮರಾಠಿ ಭಾಷೆಗಳ ಮುಖಾಂತರವಾಗಿ ತೆಗದುಕೊಳ್ಳಲ್ಪಡು
ವದು ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟ
ರುಗಳಲ್ಲಿ ಕನ್ನಡ ಭಾಷೆಯು ಮುಖಾಂತರವಾಗಿ ಅಲಿಬಾಗ
ಸೆಂಟರಿನಲ್ಲಿ ಮರಾಠಿ ಭಾಷೆಯು ಮುಖಾಂತರವಾಗಿ ತೆಗೆದು
ಕೊಳ್ಳಲ್ಪಡುವದು.

೪. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ
ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲಿಬಾಗ
ಪರಿಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯು
ಕೇಶನಲ್ ಇನಸ್ಪೇಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿ
ಯ ಹಾಯಸ್ಕೂಟನ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಾ
ಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ಸಲಿಕ್ಕೆ
ಸರವಾನಿಗೆಯನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಛಾಪಿ
ನಮೂನೆಗಳ ಮೇಲೆ ಮಾಡತಕ್ಕದ್ದು ಅರ್ಜಿಯ ನಮೂ
ನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ
ನಮ್ಮ ಕಡಿಗಾಗಲಿ ಸಿಗುವವು. ಅದಕ್ಕ ಕ್ರಯ ಬೀಳಲಿಕ್ಕಿ
ಲ್ಲ. [illegible] ಅರ್ಜಿಗಳನ್ನು ನಿಗೆನೇ ಅಗಷ್ಟ

ಸರ್ ೧೯೦೧ನೇ ಇಸವಿಯ ಒಳಗಾಗಿ ತಲಪುವಂತೆ ತಮ್ಮ ತಮ್ಮ ಜಿಲ್ಲೆಯ ಕವಿಗೋಷ್ಠಿಯ ಅಧ್ಯಕ್ಷರ ಕಡಿಗೆ ಕಳಿಸಿಕೊಡಬೇಕು. ಆ ತಾರೀಖಿನನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ ಪರೀಕ್ಷೆಯ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ನವ್ಮ ಕಡಿಗಾಗಲಿ, ಪರೀಕ್ಷಾ ಕವಿಗೋಷ್ಠಿಯ ಅಧ್ಯಕ್ಷರ ಕಡಿಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಶಿಗುವವು.

ಧಾರವಾ ತಾ|| ೧೫-೫-೧೯೦೦. } B. R. Sahasrabudhe, ಎ. ಇನಸ್ಪೆಕ್ಟರ ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

ಮಾ. ರಾ. ರಾ. ಕನ್ನಡ ಶಾಲಾಪತ್ರಿಕೆಯ ಎಡೀಟರ ಧಾರವಾಡ ಇವರ ಸನ್ನಿಧಿಗೆ :—

ಸಾ. ನ. ವಿ. ವಿ. ತಮ್ಮ ಅಂದವಾದ ಮಾಸಪತ್ರಿಕೆಯಲ್ಲಿ ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ಸ್ಥಳ ದೊರಿಯಬೇಕೆಂದು ಬೇಡಿಕೊಳ್ಳುತ್ತೇನೆ. ಕನ್ನಡ ಕವಿತೆಯು ೩ನೇ ಪುಸ್ತಕದ ೪ನೇ ಪಾಠದಲ್ಲಿ ಮುಳಿ ಬರುವ ಲಕ್ಷಣಗಳೆಂದು ಸರ್ವಜ್ಞ ಕವಿಯಿಂದ ರಚಿತವಾದ ತ್ರಿಪದಿಗಳಲ್ಲಿ ಮೊದಲನೇ ತ್ರಿಪದಿಯು "ಅಗಿಯ ಹುಣಿವೆ ಹೋದ ಮಿಗೆ ಮೂರು ದಿವಸಕ್ಕೆ । ಮೃಗಧರನ ಕೂಡೆ ಮೃಗವಿರಲು ಮುಳಿಗಾಲ ! ಜಗದಣಿಯಲಕ್ಕು ಸರ್ವಜ್ಞ " ॥ ೧ ॥ ಎಂದು ಅದೆ, 'ಈ ಕವಿತೆಯಲ್ಲಿ 'ಮೃಗ' ಈ ಶಬ್ದದ ಅರ್ಥವನ್ನು ಕೈ. ವಾ. ಧೊಂಡೋಪಂತ ಮುಳಬಾಗಲ ಧಾರವಾಡ ಟ್ರೇನಿಂಗಕಾಲೇಜದ ಕನ್ನಡ ಪಂಡಿತ ಇವರು ರಚಿಸಿದ ಪದ್ಯಾರ್ಥಸಾರದಲ್ಲಿ ಮೃಗನಕ್ಷತ್ರವೆಂದು ಮಾಡಿದ್ದಾರೆ. ಅಗಿಯ ಹುಣ್ಣಿವೆಯ ದಿವಸ ವಿಶಾಖಾ ನಕ್ಷತ್ರವಿರುತ್ತದೆ, ಮುಂದೆ ಮೂರು ದಿವಸಕ್ಕೆ ಮೂಲಾ ಅಥವಾ ಪೂರ್ವಾಷಾಢಾ ನಕ್ಷತ್ರವಿರಬಹು

ಮೃ ಪೌರ್ಣಮೆಯ ದಿವಸ ವಿಶಾಖಾ ನಕ್ಷತ್ರವಿರುವದರಿಂ ದ ತೃತೀಯದ ದಿವಸ ಮೃಗ ನಕ್ಷತ್ರವು ಇರುವದಿಲ್ಲೆಂದು ಸಿದ್ಧವಾಗುತ್ತದೆ. ಈ ಸಂಧಿಗೆ ಉತ್ತರಾಷಾಢಾ ನಕ್ಷತ್ರ ಬಂದರೆ ಮಕರರಾಸಿಯಾಗುತ್ತದೆ. ಮೃಗ ಇದಕ್ಕೆ ಮಕರರಾಸಿ ಎಂದು ಅರ್ಥವಾಗುವ ಶುಕದೇವ ಇವರಿಂದ ರಚಿತವಾದ ಜ್ಯೋತಿಷಸಾರವೆಂಬ ಸಂಸ್ಕೃತ ಗ್ರಂಥದಲ್ಲಿ ಬರೆದ ಶ್ಲೋಕವನ್ನು ಇಲ್ಲಿ ಕೊಟ್ಟಿದ್ದೇನೆ.

ಮೃಗಾದಿರಾಶಿಷ್ವಿಯೆ ಭಾನುಮೃಗಾಂತಕೇವಃ ಸ್ಯುಃಶಿಶಿರೋವಸಂತಃ ॥
ಗ್ರೀಷ್ಮಶ್ಚವರ್ಷಾಶ್ಚಶರಚ್ಚ ತದ್ವಚ್ಛೇಮಂತ ನಾಮಾಕಥಿತಶ್ಚಷಷ್ಠಃ ॥

ನಾಡದಿಯೊಳಗಿನವಶ್ಯಕೂಟದ ಆಧಾರ ಸಚರಾಮೃಗಮೀನ-ಕ್ರಹೀರಕಾ ! ಪ್ರಸಿದ್ಧ ಪಂಡಿತರಾದ ಮುಳಬಾಗಲ ಇವರು ಮಾಡಿದ ಅಥವಾ ಮೇಲೆ ಬರೆದ ಅರ್ಥಗಳಲ್ಲಿ ವಿದ್ವಾಂಸರಿಗೆ ಸಮಂಜಸವಾದದ್ದನ್ನು ತಿಳಿಸಬೇಕೆಂದು ವಿದ್ಯಾಭಿಮಾನಿಗಳಿಗೆ ನನ್ನ ಪ್ರಾರ್ಥನೆಯದೆ.

ಅಯ್ಯಾ ಎಡೀಟರ ಮಹಾರಾಜರೇ ಪತ್ರಕ್ಕೆ ತಮ್ಮ ಜಗಮಾನ್ಯ ಪತ್ರಿಕೆಯಲ್ಲಿ ಸ್ಥಳ ದೊರಿಯಬೇಕೆಂದು ಬೇಡಿಕೊಳ್ಳುತ್ತೇನೆ. ಅಲ್ಪಮತಿಯಿಂದ ಬರೆದದ್ದು ಸಾರ್ಥಕವಾದೀತೆಂದು ಪೂರ್ಣ ಅಪೇಕ್ಷೆ ಇರುವದು.

ಹೊನವಾಡ
ತಾ॥ ೧೨-೬-೧೯೦೨.

ಕೃಷ್ಣಪ್ಪಯ್ಯಾ ನಾನಪ್ಪಯ್ಯಾ
ಕುಮಸಿ.

ಟೀಪು :—ವೈಕುಂಠವಾಸಿಗಳಾದ ಮುಳಬಾಗಲರವರು ಬರೆದ ಅರ್ಥದ ಪುಸ್ತಕವು ನಮ್ಮ ದೃಷ್ಟಿಗೆ ಬಿದ್ದಿಲ್ಲ. ಹಿಂದಕ್ಕೆ ಕಾಲಾಪತ್ರಕದಲ್ಲಿ ಈ ಮಾತಿನ ಚರ್ಚೆಯಾಗಿ ಧಾರವಾಡ ತಾಲೂಕ ಹೆಬ್ಬಳ್ಳಿಯಲ್ಲಿ ಅಧ್ಯಾಪಕರಾಗಿದ್ದ ಮಿ. ಲಿಮಯೆ ಇವರು ಈ ಪತ್ರಲೇಖಕನ ಅಭಿಪ್ರಾಯಕ್ಕನುರೂಪವಾದ ಪತ್ರವನ್ನೇ ಬರೆದಿರುವರು. ಇದು ನಮಗೆ ಸಯುಕ್ತಿಕವಾಗಿ ತೋರುವದು. ಇನ್ನು ಮುಂದೆ ಅಧ್ಯಾಪಕರೆಲ್ಲ ಹೀಗೆಯೇ ಕಲಿಸಬಹುದು ಅಥವಾ ಇದಕ್ಕೂ ಸಮರ್ಪಕವಾದ ಅರ್ಥ ಹೊರಡುತ್ತಿದ್ದರೆ ಅದರಂತೆ ಕಲಿಸಬಹುದು.

ಎ. ಕ. ಶಾ. ಪತ್ರ.

ರಾ. ಸಾ. ಶಾಲಾಪತ್ರಕದ ಎಡಿಟರರ ಸನ್ನಿಧಿಗೆ—

ವಿ. ವಿ. ಈ ಊರ (ಮುದ್ದೇಬಿಹಾಳ ತಾಲೂಕಿನೊಳಗಿನ ತಾಳೀಕೋಟೆ) ಸಾಲಿಗೆಳಿಗೆ ರಾ. ಸಾ. ವಿಷ್ಣು ವಿನಾಯಕ ಬಾಕರೆ ಮಾಮಲೇದಾರ ಸಾ. ಮುದ್ದೇಬಿಹಾಳ ಇವರು ಬಂದು ಹುಡುಗರನ್ನು ಪರೀಕ್ಷಿಸಿದರು. ಹಿಂದುಸ್ತಾನೀ ಶಾಲೆಯೊಳಗಿನ ಸಾಭಿನಯ ಗೀತಯುಕ್ತ ಕವಾಯತವನ್ನು ನೋಡಿ ಸಂತಸಪಟ್ಟು, ಕನ್ನಡ ಸಾಲಿಯಲ್ಲಿ ಆ ಶಾಲೆಯ ಮಾಸ್ತರರು ಮುಂಚಿತವಾಗಿಯೇ ಸಿದ್ಧ ಮಾಡಿಟ್ಟ ಸ್ಥಳದಲ್ಲಿ ಊರ ಪ್ರಮುಖರೊಂದಿಗೆ ಬಂದು ಈಳಿತ ಟಳಿಕ ೫ನೇ ೬ನೇ ಪ್ರಸ್ತಕದಲ್ಲಿರುವ ಶಾಸ್ತ್ರೀಯ ವಿಷಯಗಳ ಪ್ರಯೋಗವನ್ನು ತಮ್ಮ ಕೈಯಿಂದ ಮಾಡಿ ಅದರ ವಿವರವನ್ನು ಹೇಳುವ ವಿದ್ಯಾರ್ಥಿಗಳನ್ನು ಕಂಡು ಬಹು ಆನಂದಪಟ್ಟರು. ಇನ್ನು ಹೆಚ್ಚಿಗೆ ಪ್ರಯೋಗ ಸಾಮಾನುಗಳು ಬೇಕಾದರೆ ತರಿಸಿರೆಂದೂ ಹದಿನೈದು ರೂಪಾಯಿಗಳನ್ನು ವಂತಿಗೆಯಿಂದ ಕೂಡಿಸಿ ಸಾಕ್ಷಿಯು ಪಂಚರಾದ ರಾ. ರಾ. ಪರಪ್ಪಣ್ಣ ಸಜ್ಜನ ಇವರ ಕೈಯಲ್ಲಿ ಕೊಟ್ಟು "ನಾನು ನೋಡಿದ ಶಾಲೆಗಳಲ್ಲಿ ಸಪ್ರಯೋಗ ಶಾಸ್ತ್ರೀಯ ಸಂಗತಿಗಳನ್ನು ಕಲಿಸಿದ ಶಾಲೆಯಿದೇ" ಎಂದು ನುಡಿದರು. ಎಲ್ಲ ಶಾಲೆಯ ವ್ಹಿಜಿಟರ್ಸ ಬುಕ್ಕಿನಲ್ಲಿ ಉತ್ತಮ ಅಭಿಪ್ರಾಯವನ್ನು ಬರೆದಿದ್ದಾರೆ.

ಈಗಿನ ಕನ್ನಡ ಸಾಲಿಯ ಮಾಸ್ತರರಾದ ರಾ. ಶಂಕರಪ್ಪ ನವರೂ ಅವರ ೧ನೇ ಅ. ರೂ ಕರ್ತವ್ಯದಕ್ಷರಿರುವರು ಮುಲಖೀಖಾತೆಯ ಅಧಿಕಾರಿಗಳು ಕೂಡಿ ವಿದ್ಯಾಕ್ಕುತ್ತೇಜನ ಕೊಡುವವರೇ ದೊರೆತದ್ದರಿಂದ ನಮ್ಮೂರ ದೈವ ತೆರೆಯಿತೆಂದು ಹೇಳಬಹುದು ಇ. ವಿ.

ತಾಳೀಕೋಟೆ
ತಾ॥ ೨೦-೫-೧೯೦೨.

ಪ್ರೇಕ್ಷಕರಲ್ಲಿ ಒರ್ವ
ಸಂಗಪ್ಪ ಅಯ್ಯಪ್ಪ ಪಾಟೀಲ,
ತಾಳೀಕೋಟೆ.

ಶಾಲಾ ಪತ್ರಿಕೆ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಕೋತ್ಕರ್ಷಮುಂ।
ಬಯಸುತ್ತಂ ಪ್ರತಿಪಾಸದಾದಿಗಳಲಿಂದೀಪತ್ರಮುಂ ಪುದ್ರಿಸಿ ॥
ನಯದಿಂದಿತ್ತವೆಪ್ರೋದುವರ್ಗ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷಪತಿದ್ದ ವೇಳ್ವುದುಬುಧರ್ಜ್ಞಾನಾಳಿವೃದ್ಧಿಪ್ರಿಯರಿ॥

ಪುಸ್ತಕ ೩೮] ಆಗಸ್ಟ್ ೧೯೦೫ [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳ ಸಂಚಿಕೆಯಲ್ಲಿ ಚಕ್ರವರ್ತಿಗಳ ಪಟ್ಟಾಭಿಷೇಕಮಹೋತ್ಸವವು ಮಹಾರಾಜರವರ ಪ್ರಕೃತಿಯು ಅಸ್ವಾಸ್ಥ್ಯದ ಮೂಲಕರಾಗಿ ನಡೆಯಲಿಲ್ಲವೆಂದು ತಿಳಿಸಿರುತ್ತೇವಷ್ಟೇ. ಆದರೆ ಶ್ರೀ ಪರಮಾತ್ಮನ ಅನುಗ್ರಹದಿಂದ ಅವರ ರೋಗವು ವಾಸಿಯಾಗಿರುವದು. ಅಂತ್ರವಿಕಾರವಾಗಿ ಕರುಳಲ್ಲಿ ಗಂಟಾಗಿತ್ತು. ಚಾಣಾರಾದ ಡಾಕ್ಟರರು ಅದನ್ನು ಕೊಯ್ದು ತೆಗೆದರು. ಈಗ ಮಹಾರಾಜರು ಸ್ವಸ್ಥವಾಗಿರುವರು. ಮತ್ತು ಪಟ್ಟಾಭಿಷೇಕ ಮಹೋತ್ಸವವು ಇದೇ ತಿಂಗಳ ಮಧ್ಯದ ಸುಮಾರಿಕ್ಕೆ ಬಹಳವಾಡಿ ನೇ ತಾರೀಖಿನ ದಿವಸ ಜರಗುವದೆಂದು ವಾರ್ತೆಯುಂಟು. ಪರಮೇಶನು ಈ ಸುಯೋಗವನ್ನು ಬೇಗನೆ ಒದಗಿಸಲೆಂದು ನಾವು ಆಶಿಸುತ್ತೇವೆ.

ಶಕ್ತಿಹೀನತೆಯ ರೋಗಕ್ಕೆ ಡಾಕ್ಟರರು "ಕಾಡ್‌ಲಿವ್ವರ"ವನ್ನು ತೆಗೆದುಕೊಳ್ಳಲಿಕ್ಕೆ ಹೇಳುವದು ಸರ್ವಶ್ರುತವು. ಇದು ಸೀಟೆದುಲ್ಲಿ ದೊರೆಯುತ್ತದೆ. ಆದರೆ ಅದು ಶುದ್ಧವಲ್ಲ. ಶುದ್ಧ ಕಾಡ್‌ಲಿವ್ವರವು ದುರ್ಗಂಧವಾಗಿರುವದರಿಂದ ಇದ

ನ್ನು ಸೇವಿಸಲಿಕ್ಕೆ ಜನರು ಹೇಸುವರು. ಕಾರಣ ಅದರಲ್ಲಿ ಬೇರೆ ಸವಿಯಾದ ಪದಾರ್ಥಗಳನ್ನು ಕೂಡಿಸಿರುತ್ತಾರೆ. ಅದರೆ ಕಾಡ್‌ಲಿವ್ಹರವೆಂದರೇನು? ಇದೊಂದು ಜಾತಿಯ ಮೀನಿನ ಪಿತ್ತರಸವು ಈ ಮೀನುಗಳು ಅತ್ಲಾಂತಿಕ ಮಹಾಸಾಗರದಲ್ಲಿ ನ್ಯೂಫೌಂಡಲಂಡದ ನೆರೆಯಲ್ಲಿ ಸುಮಾರು ೬೦೦ ಮೈಲು ಉದ್ದವೂ ೬೦ ಮೈಲು ಅಗಲವೂ ಆದ ಸಮುದ್ರಭಾಗದಲ್ಲಿ ಇರುವವು. ಇವು ಸಾಲ್ಮಾರು ಪೂಟು ಉದ್ದಿರುವವು. ಇವುಗಳ ಹಲ್ಲು ದೊಡ್ಡವೂ ಬಳಗೆ ಬಾಗಿರುವಂಥವೂ ಇರುವವು. ಸರ್ದಿಗೆ ೪೦೦ ವರೆಗೆ ತತ್ತಿಗಳನ್ನಿಡುವವು. ಹಾವು ಮೊದಲಾದ ಪ್ರಾಣಿಗಳ ಹಾವಳಿಯೊಳಗಿಂದ ಪಾರಾಗಿ ಬಹಳ ಕಡಿಮೆ ಮರಿಗಳು ಹುಟ್ಟುವವು. ಇವು ಹುಟ್ಟಿದ ಕೂಡಲೆ ನೀರೊಳಗೆ ಹೊಕ್ಕು ಏಡಿ ಮುಂತಾದ ಜಲಚರಗಳನ್ನು ತಿಂದು ಬದುಕುವವು. ಯುರೋಪ ಅಮೇರಿಕಾ ಖಂಡದವರು ಇವುಗಳನ್ನು ಬಳವಾಗಿ ಹಿಡಿಯುವರು. ಕುಶಲನಾದ ಬಲೆಗಾರನು ಒಂದೇ ದಿವಸ ನೂರಾರು ಮೀನುಗಳನ್ನು ಹಿಡಿಯುವನು. ಇವರ ಮಾಂಸವನ್ನು ತಿನ್ನುವರು, ಹಲ್ಲು ಎಲವುಗಳನ್ನು ದನಕ್ಕೆ ಹಾಕುವರು. ಇವುಗಳ ಶರೀರದೊಳಗಿಂದ ಒಂದು ಬಗೆಯ ಜಿಗುಟಾದ ರಸವು ದೊರೆಯುವದು. ಅದನ್ನು ಅಂಟಿಗೆ ಬದಲಾಗಿ ಉಪಯೋಗಿಸುವರು. ಆ ನಾಡ ಜನರು ಇವರ ಕಣ್ಣುಗಳನ್ನು ಸರಗೊಳಿಸಿ ಮಕ್ಕಳ ಕೊರಳೊಳಗೆ ಹಾಕುವರು.

ಪಾಮಕುಕ್ಷಿ — ಭಾರತೀಯರಲ್ಲಿ ಉಂಡೆ ಕೂಡಲೆ ಶತಪಡಗಳನ್ನು (ನೂರು ಹೆಜ್ಜೆಗಳನ್ನು) ನಡೆದು ಬಳಿಕ ಎಡಮಗ್ಗಲಾಗಿ ಸ್ವಲ್ಪ ವೇಳೆ ಮಲಗಿಕೊಳ್ಳುವ ಪರಿಪಾಠವುಂಟು. ಇದಕ್ಕೆ ಪಾಮಕುಕ್ಷಿಯೆಂಬ ಹೆಸರು. ಈ ನಿಯಮವು ಬಹು ಪುರಾತನಕಾಲದಿಂದ ನಡೆದು ಬಂದಿರುವದು. ಅದರ ಇದರ ಕಾರಣವೇನೆಂಬದನ್ನು ಅರ್ವಾಚೀನ ಶೋಧದಿಂದ ಸಶಾಸ್ತ್ರವಾಗಿ ಯಾರೂ ಹೇಳಿಲ್ಲ. ಒಬ್ಬ ಡಾಕ್ತರನು ಈ ಬಗ್ಗೆ ಹೇಳುವದೇನೆಂದರೆ:—ಅನ್ನ ಪಚನಕ್ಕೆ ಬೇಕಾದ ಶ್ವೇತರಸದ ಚೀಲದ ಬಾಯಿಯು ಎಡಪಾರ್ಶ್ವಕ್ಕೆ ತೆರೆದಿರು

ವದು. ಅದರೊಳಗಿನ ರಸವು ಉಂಡ ಅನ್ನದೊಳಗೆ ಬಿದ್ದ ಕೂಡಲೆ ಆ ಅನ್ನದೊಳಗಿನ ಶರ್ಕರೆಯೊಡನೆ ಸಂಯೋಗವಾಗಿ ರಾಸಾಯನಿಕಾಗ್ನಿಯು ಪ್ರಜ್ವಲಿಸುವದು. ಆದ್ದರಿಂದ ಎಡಮಗ್ಗಲಾಗಿ ಮಲಗುವದು ಲೇಸು. ಇದಲ್ಲದೆ ಇನ್ನೊಂದು ಕಾರಣವುಂಟು. ಅದೇನೆಂದರೆ :—ಉಂಡ ಕೂಡಲೆ ಅನ್ನಾಶಯದೊಳಗೆ ಬಿದ್ದ ಅನ್ನವು ಪಚನವ್ಯಾಪಾರವನ್ನು ಹೊಂದಲಾರಂಭಿಸುತ್ತದೆ. ಶರೀರದೊಳಗೆ ಯಾವದೊಂದು ವ್ಯಾಪಾರವು ಥರದಿಂದ ನಡೆಯುತೊಡಗಲು ಮಿಕ್ಕ ಅವಯವಗಳ ಕಡೆಗೆ ಹರಿಯುವ ಎಲ್ಲ ರಕ್ತವು ಆ ವ್ಯಾಪಾರವು ನಡೆದಿರುವ ಅವಯವದ ಕಡೆಗೆ ಹೊರಳುವದು ಸ್ವಾಭಾವಿಕವು. ಆದ್ದರಿಂದ ಪಚನ ಕ್ರಿಯೆಯು ಆರಂಭವಾದ ಕೂಡಲೆ ಎಲ್ಲ ರಕ್ತವಾಹಿನಿಗಳು ಪಚನಕೋಶದ ಕಡೆಗೆ ಸಾಗಹತ್ತುವವು. ಆಗ ಮಿಕ್ಕ ಅವಯವಗಳ ಚೇತನಾಂಶವು ಮಂದವಾಗುವದು ಸಹಜವು. ಇಂಥ ಪ್ರಸಂಗದಲ್ಲಿ ನೀವು ಮಿಕ್ಕ ಅವಯವಗಳನ್ನು ಒತ್ತಾಯದಿಂದ ದುಡಿಯ ಹಚ್ಚಿದರೆ ಹೆಚ್ಚಿನ ಶ್ರಮವಾಗುವದೆಂದು ನಿಮ್ಮ ಧ್ಯಾನದಲ್ಲಿ ಬರುವದು. ಈ ತತ್ವಕ್ಕನುಸರಿಸಿಯೇ ನಮ್ಮ ಪೂರ್ವಜರು ಉಂಡ ಕೂಡಲೆ ಯಾವದೊಂದು ಶಾರೀರಿಕ ಮಾನಸಿಕ ಹೋರೆಯನ್ನು ನಡೆಯಿಸುವದು ಸರಿಯಲ್ಲವೆಂದು ಬಗೆದು ಮಾಮಕುಕ್ಷಿಯು ನಿಯಮವನ್ನು ಮಾಡಿರುವರು. ಮಿದುಳಿಗೆ ಹರಿಯುವ ರಕ್ತವು ಪಚನಕ್ರಿಯೆಗಾಗಿ ಅನ್ನಾಶಯದ ಕಡೆಗೆ ಸಾಗುತ್ತಿರುತ್ತದೆ. ಅದರಿಂದ ಮಿದುಳಿಗೆ ಜಡತ್ವವು ಬರುವದು. ಉಂಡ ಕೂಡಲೆ ಕಣ್ಣಿಗೆ ಮಬ್ಬು ಬರುವದು ಸರ್ವರಿಗೂ ಅನುಭವದ ಸಂಗತಿಯು. ಸಾರಾಂಶ ಉಂಡ ಕೂಡಲೆ ಮಿದುಳು ಸಹಿತ ಎಲ್ಲ ಅವಯವಗಳ ವ್ಯಾಪಾರವು ಮಂದವಾಗುಗುತ್ತದೆ. ಆದ್ದರಿಂದ ಉಂಡ ಕೂಡಲೆ ಯಾವದೊಂದು ಕೆಲಸಕ್ಕೆ ಕೈಹಚ್ಚಬೇಡ, ಕಾಲು ತಾಸಿನ ವರೆಗೆ ಎಡಮಗ್ಗಲಾಗಿ ಮಲಗಬೇಕು. ಆದರೆ ಈ ಮಾಮಕುಕ್ಷಿಯ ಕಾಲವನ್ನು ನಿದ್ರೆಯಲ್ಲಿ ಕಳೆಯುವದು ಅಹಿತಕರವು.

ಹಿಯೆನ್‌ತ್ಸಾಂಗನೆಂಬ ಚೀನದೇಶ ಪ್ರವಾಸಿಯು ಹಿಂದು ಸ್ಥಾನದಲ್ಲಿ ಸಂಚರಿಸಿದ ಸಂಗತಿಯನ್ನು ವಾಚಕರು ತಕ್ಕ ಷ್ಟು ಅರಿತಿರುವರು. ಆದರೆ ಅವನ ಸಮಗ್ರ ಸಂಚಾರವ ನ್ನು ಕಾಲ ಸಹಿತ ಬರೆದರೆ ಆ ಕಾಲದ ಭಾರತವರ್ಷದ ಸ್ಥಿತಿಗತಿಯು ತಕ್ಕಷ್ಟು ಹೊಕ್ಕು ತಿಳಿದೀತೆಂದು ಬಗೆದು ಇದರ ಡಿಯಲ್ಲಿ ಬರೆದಿದ್ದೇವೆ

ಇವನು ಬೌದ್ಧ ಧರ್ಮದ ಉಗಮಾಭ್ಯಾಯನು ಬುದ್ಧನ ಮೂಲಸ್ಥಾನವನ್ನು ನೋಡುವೆದಕ್ಕಾಗಿ ಬಂದಿದ್ದನು. ಇವ ನ ಪೂರ್ವದಲ್ಲಿ ಫಾಹಿಯೆನನೆಂಬವನು ೪೧೯-೪೧೪ನೇ ವ ರ್ಷಗಳ ಪರೆಗೆ, ಸಂಗಯೂನನೆಂಬವನು ೫೧೦ನೇ ಇಸ ವಿಯಲ್ಲಿ ಹಿಂದುಸ್ಥಾನದಲ್ಲಿ ಸಂಚಾರವೆಮಾಡಿ ಹೋಗಿದ್ದರು ಹಿ ಯೆನ್‌ತ್ಸಾಂಗನು ೬೨೯ ರಿಂದ ೬೪೫ ವರೆಗೆ ಅಂದರೆ ಸುಮಾ ರು ೧೬ ವರ್ಷ ಈ ದೇಶದಲ್ಲಿ ಸಂಚರಿಸಿ ಅನೇಕ ಸ್ಥಳಗಳ ನ್ನು ನೋಡಿ ಬರೆದಿಟ್ಟಿರುವನು. ಇವನು ಹಿಂದುಸ್ಥಾನದಲ್ಲಿ ಆ ಕಾಲದ ೮೦ ರಾಜ್ಯಗಳನ್ನು ಆಯಾ ರಾಜ್ಯಗಳ ರಾಜಧಾ ನಿ, ವಿಸ್ತಾರ ಮುಂತಾದವುಗಳನ್ನು ಸವಿಸ್ತರವಾಗಿ ಬರೆದಿಟ್ಟ ರುವನು. ಇವನು ಮೊದಲು ಉತ್ತರದಿಂದ ಕಾಬೂಲದ ಮೇಲೆ ಹಾಯ್ದು, ೬೩೦ರಲ್ಲಿ ಉಹಿಂದದ ಹತ್ತರ ಸಿಂಧುನ ದವನ್ನು ದಾಟಿ, ಕಾಶ್ಮೀರದ ದಕ್ಷಿಣ ತುದಿಯಲ್ಲಿರುವ ತಕ್ಷಶಿ ಎಂಬ ಪಟ್ಟಣಕ್ಕೆ ಬಂದನು ಅಲ್ಲಿ ಬಂದು ತಿಂಗಳು ಇದ್ದು ಕಾ ಶ್ಮೀರಕ್ಕೆ ಹೋದನು. ಅಲ್ಲಿ ಎರಡು ವರ್ಷ ಬೌದ್ಧಮತದ ಹಾಗು ವೈದಿಕ ಮತದ ಗ್ರಂಥಗಳನ್ನು ಓದಿದನು ಆ ಮೇ ಲೆ ಪಂಜಾಬದಲ್ಲಿ ಚಿನಪತಿಯೆಂಬಲ್ಲಿ ೧೪ ತಿಂಗಳಿದ್ದು ಜಲಂ ಧರದಲ್ಲಿ ೪ ತಿಂಗಳ ಕಳೆದು ೬೩೪ರಲ್ಲಿ ಸತಲಜ ನದಿಯನ್ನು ದಾಟಿದನು ಹಾಗೇ ದೇಶವನ್ನು ಸಂಚರಿಸುತ್ತ ಮಥುರೆಗೆ ಬಂದು, ಅಲ್ಲಿಂದ ವಾಯವ್ಯಕ್ಕೆ ೬೦ ಮೈಲು ದೂರಿರುವ ಸ್ಥಾನೇಶ್ವರಕ್ಕೆ ಹೋದನು. ಬಳಿಕ ಯಮುನಾ ಗಂಗಾ ದ್ವಾಬಗಳೊಳಗಿಂದ ಉತ್ತರ ಪಾಂಚಾಲ (ರೋಹಿಲಖಂಡ) ದ ರಾಜಧಾನಿಯಾದ ಅಹಿಚ್ಛತ್ರಕ್ಕೆ ತಲುಪಿದನು. ಮುಂದೆ ಕನೋಜ ಕೌಶಂಬಿಗಳ ಮೇಲಿಂದ ಅಯೋಧ್ಯೆ ಶ್ರಾವಸ್ತಿ

ಗಳಿಗೆ ಹೋಗಿ, ಬಳಿಕ ಪೂರ್ವಕ್ಕೆ ಹೊರಳಿ ಕಪಿಲವಸ್ತು (ಬುದ್ಧನಜನ್ಮಸ್ಥಾನ) ವಿನ ಮೇಲಿಂದ ಕಾಶಿಗೆ ಬಂದನು. ಅಲ್ಲಿಂದ ತಿಕಹೂತಪ್ರಾಂತದೊಳಗಿನ ವೈಶಾಲಿಗೆ ಬಂದು ನೇಪಾಳವನ್ನು ಪ್ರವೇಶಿಸಿದನು. ತಿರುಗಿ ಭಾಗೀರಥಿಯನ್ನು ದಾಟಿ ಪಾಟಲೀಪುತ್ರ (ಪಾಟನಾ) ಕ್ಕೆ ಬಂದನು. ಅಲ್ಲಿಂದ ಗಯಾಬುದ್ಧಗಯಾ, ರಾಜಗ್ರಹಗಳ ಮೇಲಿಂದ ನಾಲಂದಕ್ಕೆ ಬಂದು ಅಧ್ಯಯನಕ್ಕಾಗಿ ೧೫ ತಿಂಗಳ ಕಳೆದನು. ಕಡೆಗೆ ೬೨೮ ರಲ್ಲಿ ಪೂರ್ವಕ್ಕೆ ಹೊರಳಿ ಚಂಪಾ (ಅಂಗದೇಶದ ರಾಜಧಾನಿ) ದಿಂದ ಗಂಗಾ ನದಿಯನ್ನು ದಾಟಿ, ಕಾಮರೂಪದೇಶಕ್ಕೆ ಬಂದನು. ಅಲ್ಲಿಂದ ದಕ್ಷಿಣಕ್ಕೆ ಹೊರಟು ತಾಮ್ರಲಿಪ್ತ (ಓಡಿಸಾ) ಪ್ರಾಂತಗಳಿಂದ ಗಂಜಾಮು ಕಲಿಂಗ ದೇಶಗಳ ಮೇಲಿಂದ ಕೋಸಲಕ್ಕೆ (ವರ್ಹಾಡ) ೬೨೯ ರಲ್ಲಿ ಬಂದನು. ೬೩೦ ರಲ್ಲಿ ದ್ರವಿಡದೇಶದ ರಾಜಧಾನಿಯಾದ ಕಾಂಚೀಪುರಕ್ಕೆ ಬಂದು ಮಹಾರಾಷ್ಟ್ರ ಕೊಂಕಣಗಳ ಮೇಲಿಂದ ಭಡೋಚಕ್ಕೆ ಬಂದು ಕಡೆಗೆ ೬೪೦ ರಲ್ಲಿ ಸಿಂಧದಿಂದ ಮುಲ್ತಾನವನ್ನು ಸೇರಿದನು. ೬೪೩ ರಲ್ಲಿ ಮತ್ತೆ ಪಾಟಲೀಪುತ್ರಕ್ಕೆ ಬಂದಲು ಹರ್ಷವರ್ಧನ (ಶೀಲಾದಿತ್ಯ) ನ ಪಂಚವಾರ್ಷಿಕ ಮಹೋತ್ಸವವು ನಡೆದಿತ್ತು. ಆ ರಾಜನಿಗೆ ೧೮ ಮಂದಿ ಮಾಂಡಲಿಕರಿದ್ದರು ಆ ಅರಸನ ಕೂಡ ಪ್ರಯಾಗ ಕೌಶಾಂಬಿಗಳ ಮೇಲಿಂದ ಕನೋಜಕ್ಕೆ ಬಂದನು ಇದೇ ಅವನ ರಾಜಧಾನಿಯಾಗಿತ್ತು. ೬೪೫ ರಲ್ಲಿ ಪಂಜಾಬ ಕಾಬೂಲಗಳ ಮಾರ್ಗವಾಗಿ ಕಾಶಗರಕ್ಕೆ ತಲುಪಿ ಮುಂದೆ ಸ್ವದೇಶವನ್ನು ಸೇರಿದನು

ಬ್ರಿಟಿಶ ಸಾಮ್ರಾಜ್ಯದ ಮುಖ್ಯ ಪ್ರಧಾನನಾಗಿದ್ದ ವಾಲ್ಪರ್ ಸ್ ಸಾಲಿಸ್ಬರಿಯವರು ಕಳೆದ ತಿಂಗಳ ೧೭ನೇ ತಾರೀಖಿನ ದಿವಸ ತಮ್ಮ ಮುಖ್ಯ ಮಂತ್ರಿಪದವನ್ನು ಬಿಟ್ಟುಕೊಟ್ಟರೆಂದು ಇಂಗ್ಲಂಡದಿಂದ ಸುದ್ದಿ ಬಂದಿದೆ ಇವರು ಕಾಸ್ಸ ಸರ್ವೋತ್ತಮ ಪಕ್ಷದವರು ೧೮೩೦ ರಲ್ಲಿ ಹುಟ್ಟಿದರು ಚಿಕ್ಕಂದಿನಲ್ಲಿ ಹೆಸರಾದ ವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಪಾರ್ಲಮೆಂತಿನಲ್ಲಿ ಸೇರಿದರು ೧೮೬೬ ರಲ್ಲಿ ಡರ್ಬಿ ಮಂ

ಡೊರೆಗಳು ಮುಖ್ಯ ಮಂತ್ರಿಯಾಗಿದ್ದಾಗ ಇವರು ಹಿಂದು ಸ್ತಾನದ ಪ್ರಧಾನರಾಗಿದ್ದರು. ೧೪೭೭ ರಲ್ಲಿಯೂ ಇದೇ ಪದವನ್ನು ಅನುಭೋಗಿಸಿದರು. ಈ ಕಾಲಕ್ಕೆ ಡೆಜರಾಯಲಿ ದೊರೆಗಳು ಮುಖ್ಯ ಮಂತಿ ಗಳಾಗಿದ್ದರು. ಇವರು ಕಾನಸರ್ವೇತಿವ ಪಕ್ಷಾವಲಂಬಿಗಳಾಗಿದ್ದರೂ ಪ್ರಸಿದ್ಧ ಮುತ್ಸದ್ದಿಗಳಿಬಳಗಕ್ಕೆ ಇವರನ್ನು ಎಣಿಸತಕ್ಕದ್ದು. ಶಾಸ್ತ್ರೀಯ ವಿಷಯದಲ್ಲಿ ಇವರು ಪ್ರವೀಣರಿರುವರೆಂದು ತಿಳಿಯುವದು ಸದ್ಯಕ್ಕೆ ಇವರಿಗೆ ೭೦ ನೇ ವರ್ಷವು ನಡೆಯುವದು ಇವರ ತಂದೆಯವಾಯ ಲಾರ್ಡ್ ಬಾಲೂರ ದೊರೆಗಳು ಮುಖ್ಯ ಮಂತ್ರಿಗಳಾದರೆಂದು ತಿಳಿಯುತ್ತದೆ.

ಹಾಲಂಡದಲ್ಲಿ ಶಾಲಾಧ್ಯಾಪಕನು ಒಂದು ಸ್ಥಲದಲ್ಲಿ ಒಂದೇ ಸಮನೇ ೨೫ ವರ್ಷ ಎಡೆಬಿಡದೆ ಶಿಕ್ಷಕನಾಗಿದ್ದರೆ ಊರವರೂ, ಉಪಶಿಕ್ಷಕರೂ, ವಿದ್ಯಾರ್ಥಿಗಳೂ, ತಮ್ಮ ಕೈಲಾದ ಒಡವೆಗಳನ್ನು ಅವರಿಗೆ ಉಚಿತವಾಗಿ ಕೊಟ್ಟು ಸನ್ಮಾನಿಸುವರು. ಆ ಮುಖ್ಯಾಧ್ಯಾಪಕನು ಮರುದಿವಸ ಇವರೆಲ್ಲರಿಗೂ ಊಟಕ್ಕೆ ಕರೆಯುವನು. ಈ ಬಗೆಯಾಗಿ ಒಬ್ಬರಿಗೊಬ್ಬರು ಸತ್ಕರಿಸುವರು. ಈ ಸಮಾರಂಭಕ್ಕೆ ಸಿಲ್ವರ ವೇಡಿಂಗ ಉಯಿಥ ದಿ ಸ್ಕೂಲ ಎಂಬ ಹೆಸರು. ಈ ಪೂರ್ವದರಿಯದೊಂದು ಸಮಾರಂಭವು ಪೊನ್ನೆಪೊನ್ನೆ ಅವುಸ್ವರ್ಡವುಂ ಪಟ್ಟದಲ್ಲಿ ನಡೆಯಿತು ಸಮಾರಂಭದ ದಿವಸ ಮುಂಜಾನೆ ಸಭೆಯಲ್ಲಿ ದೊಡ್ಡದೊಂದು ಸಭೆಯನ್ನು ನೆರಿಯಿಸಿದರು. ಅಧ್ಯಾಪಕನ ಗುಣಗಳನ್ನು ವರ್ಣಿಸುವ ಕವಿತೆಗಳನ್ನು ವಿದ್ಯಾರ್ಥಿಗಳಿಂದ ಬಳಿಕ ಅದೇ ಅರ್ಥದ ಭಾಷಣಗಳಾದವು. ಉಪಶಿಕ್ಷಕರು ಮೇಜನ್ನು ವಿದ್ಯಾರ್ಥಿಗಳು ಳ ಕುರ್ಚಿಗಳನ್ನು ಕೊಟ್ಟರು. ಸಂಜೆಗೆ ಮೊದಲು ಈ ಅಧ್ಯಾಪಕನಿಗೆ ಉಪಶಿಕ್ಷಕರಾಗಿದ್ದ ಮುವ್ವರು ಒಂದು ತಟಕವನ್ನು ಕಾಣಿಕೆಕೊಟ್ಟರು ಇವಲ್ಲದೆ ಇನ್ನೂ ಅನೇಕ ಸಣ್ಣದೊಡ್ಡ ಕಾಣಿಕೆಗಳು ಬಂದವು

ಸುಧಾರಿಸಿದ ದೇಶದಲ್ಲಿ ವಿದ್ಯಾಗುರುವಿಗಿರುವ ಮಾನಪ

ಅವರ್ಣನೀಯವಾಗಿರುವದು. ನಮ್ಮ ದೇಶದಲ್ಲಿ ಈ ಪ್ರಾ
ಚರಿಯ ನಡತೆಯು ಇಲ್ಲದಿದ್ದರೂ ಪ್ರಾಚೀನಕಾಲದಲ್ಲಿ ವಿದ್ಯಾ
ಗುರುವಿನ ಮಾನವು ಅನಿವಾರ್ಯವಿತ್ತೆಂದು ತಿಳಿಯುವದು ಸ
ದ್ಯಕ್ಕೆ ಈ ಮಾದರಿಯೊಂದು ಉದಾಹರಣೆಯು ಧಾರವಾ
ಡಜಿಲ್ಲೆಯೊಳಗಿರುವ ಪಟವರ್ಧನ ಸರಕಾರಕ್ಕೆ ಒಳಪಟ್ಟ ಳ
ಕ್ಷ್ಮೇಶ್ವರದಲ್ಲಿ ವರ್ತಿಸಿದ್ದು ನಮಗೆ ಗೊತ್ತುಂಟು ರಾ.
ರಾ. ಯಶವಂತ ಗಣೇಶ ಜಾವಡವರೆಂಬ ಆವೂರ ಶಾಲಾಧ್ಯಾ
ಪಕರು ತಮ್ಮನ ತೆಗೆದುಕೊಂಡ ಬಳಿಕ ಊರವರೆಲ್ಲ ಒಂ
ದಾಗಿ ಅವರಿಗೆ ಊಟಕ್ಕ ಕರೆದಲ್ಲದೆ, ಒಂದು ಬಂಗಾರದ
ಕಂಠಿಯನ್ನು ಕಾಣಿಕೆಯಾಗಿ ಕೊಟ್ಟರು. ಹಾಲಂಡಗಂತೆ
೩೫ ವರ್ಷ ಒಂದೇ ಊರಲ್ಲಿರುವ ಮುಖ್ಯಾಧ್ಯಾಪಕನೆಂದರೆ
ಧಾರವಾಡಜಿಲ್ಲೆಯ ಗುತ್ತಲಶಾಲೆಯ ಅಧ್ಯಾಪಕನು ಬೇರೆ
ಜಿಲ್ಲೆಯಲ್ಲಿಯೂ ಈ ಮಾದರಿಯ ಅಧ್ಯಾಪಕರು ದೊರೆಯ
ಬಹುದು.

ಒಳಗಡೆಯಲ್ಲಿ ಯುರೋಪಖಂಡದ ಜನರು ಔದ್ಯೋಗಿ
ಕ ಶಿಕ್ಷಣಕ್ಕೆ ಹೆಚ್ಚು ಲಕ್ಷ ಕೊಡತೊಡಿಗಿರುವರು ಸ್ವಿತ್ಸ
ರ್ಲಂಡದೊಳಗಿನ ವಿಂಟರಥರವೆಂಬ ಪಟ್ಟಣದಲ್ಲಿರುವ ಔ
ದ್ಯೋಗಿಕ ಶಿಕ್ಷಣಾಲಯದಲ್ಲಿ ಒಂಬತ್ತು ಬಗೆಯ ಉದ್ಯೋ
ಗಗಳನ್ನು ಕಲಿಸುತ್ತಾರೆ. ಅವು:—೧ ಇವ್ಹಾರತಿ ಕಟ್ಟೋ
ಣ ೨ ಯಂತ್ರಶಾಸ್ತ್ರ ೩ ವಿದ್ಯುತ್‌ಶಾಸ್ತ್ರ ೪ ಯಾಂತ್ರಿಕ ಆಯು
ಧಗಳನ್ನು ತಯಾರಮಾಡೋಣ ೫ ರಸಾಯನಶಾಸ್ತ್ರವೂ
ಬಣ್ಣ ಕೊಡುವ ಜಾಣತನವೂ ೬ ಹಸ್ತಕೌಶಲ್ಯ ೭ ಭೂಮಿ
ತಿ ಹಾಗೂ ಕೃಷಿಶಾಸ್ತ್ರ ೮ ವ್ಯಾಪಾರಶಾಸ್ತ್ರ ೯ ಉಗೆಬಂಡಿಯ
ಕಾರಖಾನೆಯಲ್ಲಿ ನೈಪುಣ್ಯವನು ಪಡೆಯೋಣ

ಈ ಸಂಸ್ಥೆಯು ೧೮೭೪ ರಲಿ ಸಾಪನವಾಯಿತು ಆಗ
೬೦ ಮಂದಿ ವಿದ್ಯಾರ್ಥಿಗಳೂ ೯ ಮಂದಿ ಪ್ರೊಫೆಸರರೂ ಇ
ದ್ದರು ಈಗ ೬೫೬ ಮಂದಿ ವಿದ್ಯಾರ್ಥಿಗಳೂ ೪೦ ಮಂದಿ
ಪ್ರೊಫೆಸರೂ ಇರುವರು. ಅನ್ಯದೇಶದ ವಿದ್ಯಾರ್ಥಿಗಳೆಷ್ಟೋ
ಮಂದಿ ಈ ಶಾಲೆಯಲ್ಲಿ ಕಲಿಯುವರು.

ಈಗೆರಡು ವರ್ಷಕ್ಕೆ ಮುಂಚೆ ಧಾರವಾಡ ಹಾಯಸ್ಕೂಲಿ ನಲ್ಲಿ ಮುಖ್ಯಾಧ್ಯಾಪಕರಾಗಿದ್ದು. ಮ. ರಾ. ರಾ. ಹರೀ ಭಗವಂತ ಕೇಸಕರರು ಜುಲಾಯಿ ೭ನೇ ತಾರೀಖಿಗೆ ಪುಣೆಯಲ್ಲಿ ಮೃತಪಟ್ಟರೆಂದು ತಿಳಿಸಲಿಕ್ಕೆ ನಮಗೆ ಪರಮಾವಧಿ ದುಃಖವಾಗುತ್ತದೆ. ಇವರು ಹೆಸರಾದ ವಿದ್ವಾಂಸರಿದ್ದರು.

ಕೃಷಿಶಾಸ್ತ್ರವು

(ಹಿಂದಿನ ಪುಟದಿಂದ ಮುಂದೆ ಸಾಗಿದ್ದು.).

ಮಣ್ಣಿನಲ್ಲಿ ಬೆಣಗಿದ ಸಸ್ಯಾದಿಗಳ ಬೇರುಗಳೂ ಬೊಡ್ಡೆಗಳೂ ಎಲೆಗಳೂ ಸತ್ತಪ್ರಾಣಿಗಳೂ ಪ್ರಾಣಿಗಳ ಗೊಬ್ಬರವೂ ಕೊಳೆತು ಬೆರತುಕೊಂಡಿರುವದರಿಂದ ಅದರಲ್ಲಿ ಸೇಂದ್ರಿಯ ಪದಾರ್ಥಗಳಿರುವದು ಸ್ವಾಭಾವಿಕವು ಇದಲ್ಲದೆ ರೇವಿ, ಉಸಬು, ಹರಳು ಮೊದಲಾದ (inorgain) ಪದಾರ್ಥಗಳು ಸಹ ಮಣ್ಣಿನಲ್ಲಿ ಇರುವವು ಯಾಕೆಂದರೆ, ಸಾಧಾರಣವಾದ ದೊಡ್ಡ ಪದಾರ್ಥಗಳು ಅನೇಕ ಸೂಕ್ಷ್ಮಕಾರಣಗಳಿಂದ ಸವಿದು ರಜರೂಪವನ್ನು ಹೊಂದುವವು. ಈ ರಜಸಮುದಾಯವೇ ಹುಡಿಯೆಂದು ಹೇಳಲ್ಪಡುವದು. ಈ ಹುಡಿಯೇ ಮಣ್ಣೆಂದು ಬಿಚ್ಚಿ ಹೇಳುವ ಕಾರಣವಿಲ್ಲ ಈ ಕಾರ್ಯಕಾರಣದ ನಿಜವನ್ನು ಮನಗಾಣುವದು ಬಿಗಿಯಲ್ಲ. ಕೆಲವೊಂದು ಪ್ರದೇಶದಲ್ಲಿ ನಿಂತುಕೊಂಡು ಅಡರ ಸುತ್ತಲಿನ ಕಲ್ಲುಗಳನ್ನೂ ನೆಲದ ಮೇಲಿನ ಮಣ್ಣನ್ನೂ ಸ್ವಲ್ಪ ಲಕ್ಷವಿಟ್ಟು ನೋಡಿದರೆ ಸಾಕು. ಆ ಬಂಡೆಗಳು ಸವೆದುಂಟಾದ ರಜಗಳೇ ಈ ಮಣ್ಣಿನಲ್ಲಿರುತ್ತವೆಂದು ಗೊತ್ತಾಗುವದು ಹ್ಯಾಗಂದರೆ ಬಂದು ಸ್ಥಳದಲ್ಲಿ ಸುಣ್ಣದಕಲ್ಲುಗಳು ಅಥವಾ ಮಟ್ಟೆಯ (Chalk) ಕಲ್ಲುಗಳು ಇದ್ದರೆ ಅಲ್ಲಿಯ ಮಣ್ಣಿನಲ್ಲಿ ಸುಣ್ಣದ ಅಂಶವು ವಿಶೇಷವಾಗಿರುತ್ತದೆಂದು ಊಹಿಸಬಹುದು. ಒಂದು ಸ್ಥಳದಲ್ಲಿ ಬಸಾಲ್ಟ (Basalt) ಅಥವಾ ಜ್ವಾಲಾಮುಖಿ ಬಂಡೆಗಳಿದ್ದರೆ ಅಲ್ಲಿಯ ಮಣ್ಣಿನಲ್ಲಿ ಸುಣ್ಣವೂ ಪೊಟ್ಯಾಷವೂ Potash ಇರುತ್ತದೆಂದು ಹೇಳಬಹುದು.

ಉಸುಬಿನ ಕಲ್ಲು ಅಥವಾ ಹಿಟ್ಟುಗಲ್ಲು (Sandstone) ಇದ್ದ ನೆಲದಲ್ಲಿ ಉಸಬಿನ ಮಣ್ಣು ಇರುತ್ತದೆ. ಈ ಎಲ್ಲ ಸಂ

ಗತಿಗಳಿಂದ ತಿಳಿಯುವದೇನೆಂದರೆ ಸಣ್ಣ ಪುಟ್ಟ ಬಂಡೆಗಳು ಸವೆದು ನಾಶ ಹೊಂದಿ ಮಣ್ಣು ಆಗುತ್ತದೆ.

ಈ ಚಿಕ್ಕ ಪುಟ್ಟ ಬಂಡೆಗಳು ಹ್ಯಾಗೆ ಸವೆಯುತ್ತವೆ, ಹಾಗೂ ಪ್ರಥಕ್ಕರಣ ಹೊಂದುತ್ತವೆ ಎಂಬದನ್ನು ನೋಡುವಾ.

ಈ ಮುಖ್ಯ ಬಂಡೆಗಳು ಹ್ಯಾಗೆ ಹುಟ್ಟುತ್ತವೆ ಅವುಗಳ ರಚನೆಯು ಹ್ಯಾಗೆ ಇರುತ್ತದೆ. ಈ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳಬೇಕಾದರೆ ನಾವು ಭೂಗರ್ಭಶಾಸ್ತ್ರವನ್ನು ಕೆಲಮಟ್ಟಿಗೆ ಅಭ್ಯಾಸಮಾಡಬೇಕು. ಭೂಗರ್ಭಶಾಸ್ತ್ರದಲ್ಲಿ ಈ ಪೃಥ್ವಿಯನ್ನು (ಸ್ತರರಚಿತ) ಥರ ಹೊಂದಿದ ಹಾಗೂ ಥರಹೊಂದದೆ ಅನಿಯಮಿತವಾಗಿ ಹಬ್ಬಿದ ಎರಡುತರದ ಬಂಡೆಗಳು ಅಚ್ಛಾದಿಸಿರುತ್ತವೆಂದು ಹೇಳಿರುತ್ತಾರೆ

ಥರಹೊಂದಿದ ಬಂಡೆಗಳು ಥರದ ಮೇಲೆ ಥರವಿದ್ದಂತೆ ಇಲ್ಲವೆ ಒಂದು ಥರದ ಪೊರ್ಪ್ಪದಲ್ಲಿ ಎರಡನೇ ಪ್ರಕಾರದ ಥರವಿದ್ದು ಈ ಭೂಮಂಡಲದ ಸುತ್ತಲಿನೆ ಒಡೆಲು ಭಾಗದಲ್ಲಿ ಇರುತ್ತವೆ. ಆದರೆ ಥರ ಹೊಂದದೆ ಅನಿಯಮಿತವಾದ ಬಂಡೆಗಳು ಹೆರಳಾಕೃತಿಯಾಗಿ ರಚನೆಯಲ್ಲಿ (Granite) ವ ಜ್ರಶಿಲೆಯಂತೆ ಇದ್ದು ಬಹಳ ಮಹತ್ವದವು ಇರುತ್ತವೆ. ಯಾಕೆಂದರೆ ಇಂಥ ಬಂಡೆಗಳು ಸವೆಯುವಿಕೆ ಅಥವಾ ನಷ್ಟತೆಯಿಂದಲೂ ಅವುಗಳ ಕಣಗಳ ವ್ಯೆವಸ್ಥೆಯಿಂದಲೂ ನೀರಿನ ಸಾಧನದಿಂದಲೂ ಥರಹೊಂದಿದ ಬಂಡೆಗಳು ಆಗಿರುತ್ತವೆ.

ಬಂಡೆಗಳು.

ವ್ಯವಹಾರದಲ್ಲಿ ಬಂಡೆಗಳೆಂದರೆ-ಗಟ್ಟಿಯಾದ ದೊಡ್ಡದೊಡ್ಡ ಕಲ್ಲುಗಳು ಎಂದು ತಿಳಿಯುತ್ತೇವೆ. ಆದರೆ ಭೂಗರ್ಭಶಾಸ್ತ್ರವಿಚಾರದಿಂದ ನೋಡಲಾಗಿ ಬಂಡೆಗಳ ಅರ್ಥವು ತೀರ ಭಿನ್ನವಾಗಿದೆ. ಭೂಗರ್ಭವನ್ನು ಮೇಲ್‌ಭಾಗದಲ್ಲಿ ಅತಿಕ ಮಿಸಿದ ಯಾವದೊಂದು ಪದಾರ್ಥಕ್ಕೆ ಇಲ್ಲವೆ ಪದಾರ್ಥಗಳಿಗೆ ಬಂಡೆಗಳೆಂಬ ಹೆಸರು ಭೂಗರ್ಭಶಾಸ್ತ್ರದಿಂದ ಕೊಡಲ್ಪಟ್ಟಿದೆ. ಆದ್ದರಿಂದ ರೇವಿ, ಉಸಕು, ಬಂಡೆಗಳಿಂದುಂಟಾದ ಹರಳುಗಳು ಬೆಣಚಿಕಲ್ಲು ಮತ್ತು ಹಿಟ್ಟುಕಲ್ಲು ಇವೆಲ್ಲ ಬಂಡೆಗಳೆಂದು ಹೇಳಬಹುದು.

ಒಂದು ಬಣಚಿಕಲ್ಲನ್ನು ತೆಗೆದುಕೊಂಡು ಅದನ್ನು ನಾವು ಪರೀಕ್ಷಿಸಿದರೆ ಅದರಲ್ಲಿ ಬೇರೆ ಬೇರೆ ಪದಾರ್ಥಗಳು ಸಿಗುತ್ತವೆ. ಅವುಗಳಿಗೆ ಖನಿಜಗಳೆಂಬ ಹೆಸರು. ಅದರಲ್ಲಿ ಸಿಗುವ ಕಾಜೆನಂತೆ ಕಾಣುವ ಸಣ್ಣ ಹರಳುಗಳು ಚೂರಿಯಿಂದ ಕೊರೆದರೆ ಅವುಗಳ ಮೇಲೆ ಗರೆ ಮೂಡುವದಿಲ್ಲ. ಅವುಗಳಿಗೆ ನಾವು Quartz ಅನ್ನುತ್ತೇವೆ

ಅಡ್ಡರದರ್ಶಕವಾದ ಬಿಳಿ ಮತ್ತು ಮುತ್ತಿನ ಬಣ್ಣದಂತ ಬಣ್ಣವಿದ್ದು ಸುಣ್ಣಾದ ಹರಳುಗಳು ಶಿಲಾಪರ (Felspar) ಎಂದು ಹೇಳಲ್ಪಡುತ್ತವೆ ಮತ್ತು ಸಣ್ಣ ಸಣ್ಣ ಕಪ್ಪುವರ್ಣದ ಚೂರುಗಳು ಹೊಳೆಯುವಂಥ ಅನೇಕ ತುಂಡುಗಳಾಗಿ ಬೀಳುವಂಥವುಗಳು (Mica) ಅನ್ನಲ್ಪಡುತ್ತವೆ

ಈ ಮೇಲೆ ಹೇಳಿದ ಬೇರೆ ಬೇರೆ ಪದಾರ್ಥಗಳ ಗುಣಧರ್ಮಗಳು ಬೇರೆ ಬೇರೆಯಾಗವೆ. ಅಂದರೆ ಪ್ರತಿ ಒಂದು ಪದಾರ್ಥದ ರಾಸಾಯನ ರಚನೆಯು ಬೇರೆ. ವಿಶಿಷ್ಟ ಗುರುತ್ವವು ಭಿನ್ನ. ಆಕಾರದಲ್ಲಿ ಹೆಚ್ಚು ಕಡಿಮೆ. ಮತ್ತು ಕಠಿಣತ್ವದ ಪ್ರಮಾಣವು ಬೇರೆ ಬೇರೆ ಇರುವವು. ಇಂಥ ಪದಾರ್ಥಗಳಿಗೆ ಖನಿಜಗಳೆಂಬ ಹೆಸರು ಜೀವಶಾಸ್ತ್ರವನ್ನು ಕಲಿಯುವ ವಿದ್ಯಾರ್ಥಿಯು ಮುಂದಿನ ವಿಷಯವನ್ನು ಅರಿತುಕೊಳ್ಳುವ ಮೊದಲು, ಬಂಡೆಗಳ ರಚನೆಗಳನ್ನು ಮತ್ತು ಬಂಡೆಗಳನ್ನು ಉಂಟು ಮಾಡುವದಕ್ಕೆ ಮುಖ್ಯ ಸಾಧನವಾದ ಈ ಖನಿಜಗಳನ್ನು ಅರಿತುಕೊಳ್ಳುವದು ಇಷ್ಟ ಸಂಗಿಯಾದ್ದರಿಂದ ಅಂಥ ಖನಿಜಗಳನ್ನು ಕುರಿತು ಕೆಲವು ಸಂಗತಿಗಳನ್ನು ಕೆಳಗೆ ಹೇಳುತ್ತೇವೆ ಮಣ್ಣಿಸಬುಡದಲ್ಲಿ ಅಗಿದರೆ ಯಾವ ಯಾವ ಪದಾರ್ಥಗಳು ಶಿಗುತ್ತವೆಂಬದನ್ನು ನೋಡಿದರೆ ಮಣ್ಣಿನ ಮೊದಲಿನ ಥರದ ಕೆಳಗೆ ಮತ್ತೊಂದು ಜಾತಿಯ ಮಣ್ಣಿನ ಥರವಿರುತ್ತದೆ ಈ ಕೆಳಗಿನ ಮಣ್ಣಿನ ಥರಕ್ಕೆ ಕೆಳಗಿನ ಮಣ್ಣಿನ ಥರ ಅಥವಾ ಉಪಥರವೆಂದೂ, ಮೇಲಿನ ಥರಕ್ಕೆ ಮೇಲ ಥರದ ಮಣ್ಣೂ ಎಂದು ಹೆಸರಿಡುವೆ. ಮೇಲಿನ ಥರದ ಮಣ್ಣಿಗೂ ಕೆಳಗಿನ ಥರದ ಅಥವಾ ಉಪಥರದ ಮಣ್ಣಿಗೂ ಎರಡು ಮಹತ್ವವಾದ ಭೇದಗಳುಂಟು (ಸಶೇಷ)

SCHOOL MSNAGEMENT.

ಶಾ ಲಾ ವ್ಯ ವ ಸ್ಥೆ.

೧೯ನೆಯ ಅಧ್ಯಾಯ.

ಸಾಲೆಯೂ, ಮನೆಯೂ.

(ಡ) ಅಧ್ಯಾಪಕರಲ್ಲಿಯೂ ಪಾಲಕರಲ್ಲಿಯೂ ಯಾವ ದೂಂದು ಮೊತಿಗಾಗಿ ಮತಭೇದವಾಗುವದು ಸರಿಯಲ್ಲ. ಓಂದು ವೇಳೆ ವಿಶೇಷ ಪ್ರಸಂಗದಲ್ಲಿ ಮತಭೇದವಾದರೂ. ಆ ಸಂಗತಿಯು ವಿದ್ಯಾರ್ಥಿಗಳಿಗೆ ಎಷ್ಟು ಮಾತ್ರಕ್ಕೂ ತಿಳಿಯಗೊಡಬಾರದು. ಈ ಒಡಕಿನ ಸಂಗತಿಯು ವಿದ್ಯಾರ್ಥಿಗಳಿಗೆ ತಿಳಿಯಿತಂದರೆ ಈರ್ವರ ಪ್ರಭಾವವೂ ಕಡಿಮೆ ಯಾಗುವದು. ಅಧ್ಯಾಪಕರೂ ಪಾಲಕರೂ ಒಬ್ಬರಿಗೊಬ್ಬರು ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸುವದಿದ್ದರೆ ಸಮಷ್ಟ ಅಥವಾ ಪತ್ರದ್ವಾರದಿಂದ ತಿಳಿಸುವದು ಲೇಸು.

(ಬ) ಬಾಲಕನು ಮನೆಯಲ್ಲಿ ಕೇಳುವ ಭಾಷಾ ಪದ್ಧತಿಯನ್ನೇ ಸ್ವೀಕರಿಸುವನು. ಭೀತಿಯ ದುಷ್ಪರಿಣಾಮಗಳಿಗೆ ಅವನು ಆದಷ್ಟು ಒಳಗಾಗದಂತೆ ಯತ್ನ ಮಾಡಬೇಕು.

(ಕ) ಸಾಲಗಳಲ್ಲಿ ಕ್ರಮಪಡಿಸಿದ ಕಾರ್ಯಗಳನ್ನು ತಾಯಿ ತಂದೆಗಳು ಮನಃಪೂರ್ವಕವಾಗಿ ಆದರಿಸಬೇಕು.

ಇದರ ಹೊರ್ತು ತಾಯಿತಂದೆಗಳಿಗೆ ಹುಡುಗನ ಶಾಲಾ ಕ್ರಮವನ್ನು ಓಲಿಸುವ ಮಾರ್ಗಗಳು ಎಷ್ಟೋ ಉಂಟು. ತಾಯಿ ತಂದೆ ಮತ್ತು ಶಿಕ್ಷಕ ಇವರಲ್ಲಿ ನೆರವೇರಿಸತಕ್ಕ ಉದ್ದೇಶದ ವಿಷಯದಲ್ಲಿ ಅಂತಃಕರಣದಿಂದ ಯುಕ್ತವಾದ ಮಾತಿಗಿಂತ ಹೆಚ್ಚು ಇಷ್ಟವಾದ ಮಾತು ಮತ್ತೊಂದಿಲ್ಲ.

ಶಿಕ್ಷಕನನ್ನು ಕುರಿತು.

ತಾಯಿತಂದೆಗಳು ಸಾಲೆಯ ಕೆಲಸದಲ್ಲಿ ಮನಸ್ಸು ಹಾಕುವಹಾಗೆ ಮಾಡುವ ಅನೇಕ ಉಪಾಯಗಳು ರೂಢಿಯಲ್ಲಿವೆ ಶಾಲೆಯೆಲ್ಲಿ ಆಗುವ ವಾದ್ಯ ಸಮಾರಂಭ, ಮೇಜವಾನಿ, ಇನಾಮು ಹೆಂಚುವಿಕೆ, ಸಾಲೆಯ ಆಟಗಳು, ಸಾಧಕದ ಕೂಟಗಳು ದೇಶದಲ್ಲೆಲ್ಲ ವಾಡಿಕೆಯಾಗಿವೆ ಮತ್ತು ಪ್ರವೃತ್ತಿಯು ಓಂದುವೇಳೆ ಅಳತಗ ವಾಡುವವರ ಕಡಗೆ ಇ

ರುತ್ತದ. ವಾಸ್ತವಿಕವಾಗಿ ಸಾಲಿಯು ಕೆಲಸಕ್ಕೆ ಸಂಬಂಧವಿ ಲ್ಲದಂಥ ಈಗ ಹೇಳಿದ ಉಪಾಯಗಳ ಸೊರತು ಕೆಳಗೆ ಹೇಳಿದಂತೆ ಮಾಡುವದು ನೆಟ್ಟಗೆ.

(೪) ಹುಡುಗನನ್ನು ಸಾಲಿಯಲ್ಲಿ ತಕ್ಕೊಳ್ಳುವಾಗ ಅವನ ತಂದಗ ಭೆಟ್ಟಿಯಾಗುವದು. ಆಗ ಅವನ ವಿಶೇಷವಾದ ಸ್ವ ಭಾವವೂ ಊನಗಳೂ ಗೊತ್ತಾಗಬಹುದು ಮತ್ತು ಮುಖ್ಯ ವಾಗೂ ಅತ್ಯವಶ್ಯವಾದ ನಿಯಮಗಳನ್ನು ತಂದೆಗೆ ತಿಳಿಸ ಬಹುದು. ಸಾಲಿಯಲ್ಲಿ ಶೇರಿಸಕೊಳ್ಳುವದಕ್ಕಾಗಿ ಮಾಡಿದ ವಿನ್ನಹವನ್ನು ಅವನ ತಂದೆಯು ಪತ್ರದಿಂದ ಅಥವಾ ಸ್ವತಃ ಖಂಡಿತವಾದ ಅನುಮತಿಯನ್ನು ಕೊಟ್ಟಹೊರತು ಮಾನ್ಯ ಮಾಡಬಾರದು.

(೫) ವರುಷಕ್ಕೆ ಮೂರುಸಾಲ್ಕು ಸಾರ ರಿಪೋರ್ಟ ಮಾ ಡುವದು--ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿಯೊಂ ದು ವಿಷಯದಲ್ಲಿ ದೊರಕಿಸಿದ ಗುಣಗಳನ್ನು ಬರೆದು ನಡತೆ ಯಲ್ಲಾಗಲಿ ಹಾಜರಿಯಲ್ಲಾಗಲಿ ಆದ ತಪ್ಪುಗಳ ಕಡಗೆ ಪಾ ಲಕನ ಲಕ್ಷ್ಯವನ್ನೆಳಿಯಬೇಕು. ಇವುಗಳ ಕೂಡ ಯೋ ಗ್ಯತಾನುಗುಣವಾದ ವರ್ಗದ ಪಟ್ಟಿಯನ್ನು ಕಳುಹಬಹುದು.

(೬) ಎಷ್ಟೋ ಸಾಲಿಗಳಲ್ಲಿ ಒಂದು ಪ್ರಕಾರದ ಟೊಪ್ಪಿಗೆ ಯನ್ನೂ ಗುರುತನ್ನು ಧರಿಸುವ ರೂಢಿಯುಂಟು. ವಿಶೇಷ ವಾದ ಮಿಗಿಲಾದ ಹುರಿದುಂಬಿಸುವ ಉತ್ಸಾಹನವೇ ಇದರ ಪರಿಣಾಮವಾಗಿದೆ

(೭) ಕೆಲವು ಸಾಲಿಗಳಲ್ಲಿ ವರುಷದಲ್ಲಿ ಗೊತ್ತಾದ ಬೇರೆ ಬೇರೆ ಕಾಲಕ್ಕೆ ಭೆಟ್ಟಿಯ ಯೋಗವನ್ನು ಗೊತ್ತುಮಾಡಿ ಸಾ ಲೆಯಲ್ಲಿ ಕಲಿಸುವ ಕ್ರಮವು ನಡೆದಾಗ ಸಾಲಿಗೆ ಬಂದು ನೋಡಿ ಹೊಗುವದಕ್ಕೆ ವಿಘ್ನಿಸುವ ರೂಢಿಯು ಸಹ ಉಂ ಟು ಈ ಸಮ್ಮೇಲನದ ಯೋಗಗಳು ಮೇಲಿಂಪವೋಲ ಇಲ್ಲದಿದ್ದರೆ ಮತ್ತು ಇವುಗಳಿಂದ ಸಾಲಿಯು ಸಾಧಾರಣವಾ ದ ನಿತ್ಯ ಕ್ರಮಕ್ಕೆ ತೊಂದರೆಯಾಗದಿದ್ದರೆ, ಇದು ಶಾಲಾಗ್ರ ಹ ಶಿಕ್ಷಣದ ಪರಿಣಾಮಗಳನ್ನು ವಿಕೀಕರಿಸುವ ಅತ್ಯುತ್ತಮ ಉಪಾಯವೆಂದು ತೋರುತ್ತದೆ,

ಪ್ರಾಥಮಿಕ ಶಾಲೆಗಳಲ್ಲಿ ಕಾಲೆ ಹಾಗೂ ಗ್ರಹಗಳ ಕ್ರಮಗಳನ್ನು ಏಕೀಕರಿಸುವ ವಿಷಯದಲ್ಲಿ ಆದಷ್ಟು ಪೂರ್ಣತ್ವವು ಒದಗುವಂತೆ ಪ್ರಯತ್ನವು ಮುಂದರಿದದೆಂದು ಅನ್ನಲಕ್ಕೆ ಅಡ್ಡಿ ಇಲ್ಲ. ಶಿಕ್ಷಕ ಹಾಗೂ ಪಾಲಕರ ನಡುವೆ ಇದಕ್ಕೂ ಹೆಜ್ಜೆ ಸ್ನೇಹ ಸಹಾನುಭೂತಿಯೂ ಉಂಟಾದರೆ ಶಿಕ್ಷಣದ ಕ್ರಮವನ್ನು ಪೂರ್ಣತ್ವಕ್ಕೆ ಮುಟ್ಟಿಸುವದಕ್ಕೆ ನಡಪ ಪ್ರಯತ್ನಗಳಿಗೆ ಬಹು ಸಹಾಯವಾಗದೆ ಇರದು.

ಮನೆಯ ಕಾರ್ಯಭಾಗವು.

ಇಂಗ್ಲಂಡಿನ ಸ್ಕೂಲ ಬೋರ್ಡಿನವರು ಹುಡುಗರಿಗೆ ಮನೆಯಲ್ಲಿ ಮಾಡಿಕೊಂಡು ಬರಬೇಕಾದ ಪಾಠಗಳ ಅಂದರೆ ಗ್ರಹ ಪಾಠಗಳ ಸಂಬಂಧದಿಂದ ಯಾವದೂಂದು ನಿಶ್ಚಯಾತ್ಮಕ ನಿಯಮಗಳನ್ನು ಗೊತ್ತು ಮಾಡಿಲ್ಲ. ಆದರೂ ಅವರ ರಿಪೋರ್ಟಿನ ಶೀನೇ ಪಾನಿನಲ್ಲ ಈ ಕೆಳಗಿನ ವಾಕ್ಯಗಳು ಇರುತ್ತವೆ.

ಶಾಲೆದು ಹೊತ್ತಿನಲ್ಲ ಪ್ರಯೋಜನಕರವಾಗಿ ಕಲಿಸಲ ಸಾಧ್ಯವಾದಂಥ ಯಾವದೊಂದು ವರ್ಗದ ಅಭ್ಯಾಸದ ಸಂಬಂಧದ ಗ್ರಹಪಾಠಗಳನ್ನು ಕೊಡುವದು ಸರಿಯಲ್ಲ."

ಆದರೆ ಈ ನಿಯಮವನ್ನು ಸ್ವಲ್ಪ ತಿದ್ದಿ ರ್ಗನೇ ಪಾನಿನಲ್ಲಿ ಬರೆದ ಅಭಿಪ್ರಾಯವೇನಂದರೆ— ಕೆಲವು ಶಾಲೆಗಳು ಮಕ್ಕಳ ತಾಯಿತಂದೆಗಳ ಸಹಾಯವನ್ನು ಪಡೆದಂಥವುಗಳಾಗಿರುತ್ತವೆ. ಕೆಲವರ ತಾಯಿತಂದೆಗಳು ತಮ್ಮ ಮಕ್ಕಳು ಮನೆಯಲ್ಲಿ ವರ್ತಮಾನ ಪತ್ರವನ್ನಾಗಲಿ ಚಿಕ್ಕ ಚಿಕ್ಕ ಕಥೆಯ ಪುಸ್ತಕವನ್ನಾಗಲಿ ಸ್ವಲ್ಪ ಹೊತ್ತಾದರೂ ಗಟ್ಟಿಸಿ ದಿನಾ ಓದುತ್ತಿರಬೇಕೆಂದು ಬಯಸುತ್ತಾರೆ.

ಬಹಳ ಹುಡುಗರಿರುವ ವರ್ಗಗಳಲ್ಲಿ ಓದುವ ರೂಢಿಯನ್ನು ಬೆಳಿಸುವದು ಅಶಕ್ಯವು. ಅಥವಾ ಸಾಲಿಯ ಹೊತ್ತಿನಲ್ಲಿಯೇ ವಾಚನವನ್ನು ಸರಿಯಾಗಿ ಕಲಿಸುವದು ಅಸಾಧ್ಯವೆಂದು ಹೇಳಿದರೂ ತಪ್ಪಾಗದು ಆದ್ದರಿಂದ ಇಂಥ ಕಾರ್ಯಕ್ಕಾಗಿ ಶಾಲಾಪರಿಸ್ಥಿತಿಯನ್ನು ನೋಡಿಕೊಂಡು ಗ್ರಹಪಾಠಗಳನ್ನು ಕೊಡಬಹುದು ಮನೆಯಲ್ಲಿ ಕಲಿತುಕೊಂಡು ಬಂದ

ಅಂದರೆ ಗೃಹಪಾಠವನ್ನು ಸಿದ್ಧಮಾಡಿಕೊಂಡು ಬಂದ ವಿದ್ಯಾರ್ಥಿಯನ್ನು ಬೇರೆ ವಿದ್ಯಾರ್ಥಿಯು ಸರಿಗಟ್ಟಿ ತಾರತಮ್ಯವೆಂಬುದು ಮೇಲೇ ತೋರುತ್ತದೆ.

ಅದು ಹೇಗೇ ಇರಲಿ ಪ್ರಾಥಮಿಕ ಶಿಕ್ಷಣದ ಸಾಲಿಗೆ ಬರುವ ಹುಡುಗರು ಬೇರೆ ಬೇರೆ ಗೃಹಸ್ಥಿತಿಯವರೂ, ಬೇರೆ ಬೇರೆ ಗುಣಸ್ವಭಾವದವರೂ ಇರುತ್ತಾರೆಂಬುದು ನಿರ್ವಿವಾದವು. ತಂದೆ ತಾಯಿಗಳು ತಮ್ಮ ಮಕ್ಕಳ ಅಭ್ಯಾಸಕ್ಕೆ ಲಕ್ಷ್ಯಕೊಡುವಂಥ ಮತ್ತು ಉತ್ತಮವಾದ ಗೃಹಶಿಕ್ಷಣವು ಸಾಗುತ್ತಿರುವ ಮನೆತನದ ವಿದ್ಯಾರ್ಥಿಗಳೇ ವಿಶೇಷವಾಗಿ ಶಾಲೆಗೆ ಬರುತ್ತಿರುವಂಥ ಶಾಲೆಗಳ ವಿದ್ಯಾರ್ಥಿಗಳಿಗೆ ಮಾತ್ರ ಗೃಹಪಾಠಗಳನ್ನು ಕೊಡಬೇಕೆಂದು ಗೊತ್ತು ಪಡಿಸಬಹುದು. ಕೆಲ ಕೆಲವು ಹುಡುಗರು ಸಾಲಿಯಿಂದ ಮನೆಗೆ ಬಂದ ಕೂಡಲೆ ಪ್ರಪಂಚದ ಸಂಬಂಧದ ಹಲವು ಹೋರೆಗಳನ್ನು ಮಾಡಲೇ ಬೇಕಾಗುತ್ತದೆ. ಇಂಥವರು ಗೃಹಪಾಠಗಳನ್ನು ಮಾಡಿಕೊಂಡು ಬರುವದೆಂತು? ಹಾಗು ಇವರಿಗೆ ಗೃಹಪಾಠಗಳನ್ನು ಮಾಡಿಕೊಂಡು ಬರಲಿಕ್ಕೆ ಹೇಳುವದರಲ್ಲಿ ಅರ್ಥವೇನು. ಆದ್ದರಿಂದ, ಕೆಳಗಿನ ಮೂರು ಸಂಗತಿಗಳು ಅನುಕೂಲವಾಗಿರುವಲ್ಲಿ ಗೃಹಪಾಠಗಳನ್ನು ನಿಯಮಿಸಿ ಕೊಡಬಹುದು. ೧ ಸಾಲಿಯು ಸುಧಾರಿಸಿದ ಜನ ವಸತಿಯ ನಡುವೆ ಇದ್ದರೆ, ೨ ಅದು ಮೇಲ್ತರದ ಇಯತ್ತೆಗಳುಳ್ಳದ್ದಿದ್ದರೆ. ೩ ಪ್ಯೂಪಿಲ್ ಟೀಚರರುಳ್ಳ ಪ್ರಾಥಮಿಕ ಶಾಲೆಯಾಗಿದ್ದರೆ.

ಗೃಹಪಾಠದಿಂದಾಗುವ ಲಾಭಗಳು.

(೧) ಅಭ್ಯಾಸ ಮಾಡಲಿಕ್ಕೆ ಹೊತ್ತು ಹೆಚ್ಚು ದೊರೆಯುತ್ತದೆ.

(೨) ಸಾಲಿಯೂ ಮನೆಯೂ ಒಂದಕ್ಕೊಂದು ಸಂಬದ್ಧವಾಗುತ್ತವೆ. ಹುಡುಗನಲ್ಲಿ, ಸಾಲಿಯಲ್ಲಿ ಶಿಕ್ಷಕನೂ ಮನೆಯಲ್ಲಿ ತಾಯ್ತಂದೆಗಳೂ ನನ್ನ ಹಿತದ ಸಲುವಾಗಿಯೇ ಇರುವರು, ಎಂಬ ತಿಳುವಳಿಕೆಯು ನೆಲೆಗೊಂಡು ಉಭಯರಲ್ಲಿಯೂ ಭಕ್ತಿಯನ್ನಿಟ್ಟು ನಡಕೊಳ್ಳುವನು. ಇದಲ್ಲದೆ ತಾಯ್ತಂದೆಗಳಿಗೆ ತಮ್ಮ ಮಕ್ಕಳಲ್ಲುಂಟಾದ ಸುಧಾರಣೆಯನ್ನು ಕಂಡುಕೊಳ್ಳಲಿಕ್ಕೆ ಅನುವಾಗುತ್ತದೆ. (ಸಶೇಷ).

EXCURSION TO HAMPI.

ಪಂಪಾಯಾತ್ರೆ.

(ಬರೆದು ಬಂದದ್ದು.)

(೧೯೧೧ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಹಜಾರರಾಮ ಸ್ವಾಮಿಯ ಗುಡಿಯಹತ್ತರವೇ ಒಡೆದು ಕಲ್ಲಿನ ಅಖಂಡವಾಡ ದೋಣಿಯುಂಟು. ಅದು ೨೦ ಫೂಟು ಉದ್ದವು ೨ ಫೂಟು ಅಗಲವೂ ಇರುವದು. ತೋರಿಸಬಂದವನು ಇದು ಕುದುರೇ ಮರಿಗಳಿಗೆ ಹಾಲು ಕುಡಿಸತಕ್ಕ ಡೋಣಿಯೆಂದು ಹೇಳಿದನು ಮುಂದೆ ಹಾಗೇ ನಡೆಯಲು ಪಟ್ಟಣದ ಹಾಳು ಪ್ರದೇಶದಲ್ಲಿ ಬಂದಕ್ಕೊಂದು ದೂರಾಗಿ ನಿಂತುಕೊಂಡಿರುವ ಕೆಲವು ಇಮಾರತಿಗಳು ಕಾಣುವವು. ಇವೆಲ್ಲ ತೆಳದಲ್ಲಿ ಕಲ್ಲುಗಳಿಂದಲೂ ಮುಂದೆ ಇಟ್ಟಂಗಿ ಗಚ್ಚುಗಳಿಂದಲೂ ಕಟ್ಟಲ್ಪಟ್ಟಿರುವವು. ಈ ಇಮಾರತಿಗಳಲ್ಲಿ ೧ ಮಂಚವ ಉಪ್ಪರಿಗೆ ೨ ಕಮಲ (ಕತ್ತಲ) ಉಪ್ಪರಿಗೆ ೩ ಗಾಣಗಿತ್ತಿಯ ಮಹಲು ೪ ಅಗಸಗಿತ್ತಿಯ ಮಹಲು ೫ ಕುದುರೆಗಳ ಲಾಯ ಇವು ಏಳು ಮುಖ್ಯವಾದವುಗಳು.

ಆನೆ ಕುದುರೆಗಳ ಮನೆಗಳೂ ಗರುಡೇಮನೆಯೂ ಮಾತ್ರ ನೋಡತಕ್ಕಂಥವವೆ. ಗರುಡೇಮನೆಯು ಸುಮಾರು ೧೦೦ ಫೂಟು ಉದ್ದಾಗಿಯೂ ೩೦-೪೦ ಫೂಟು ಅಗಲಾಗಿಯೂ ಇರುವದು ಗೋಡೆಯ ಹೊಂದಿಗೆ ಎದೆಯುದ್ದ ಇರುವ ೩-೪ ಫೂಟು ಅಗಲಾದ ಕಟ್ಟೆಯು ಸುತ್ತಲೆ ಇರುವದು. ಅಲ್ಲಿ ಪ್ರೇಕ್ಷಕರು ಕೂತುಕೊಂಡು ನಡುವಿನ ಪ್ರದೇಶದಲ್ಲಿ ಮಲ್ಲಯುದ್ಧ ಮಾಡುವ ಬಂಟರ ಯುಕ್ತಿಶಕ್ತಿಗಳನ್ನು ನೋಡುತ್ತಿರಬಹುದು. ಈ ಇಮಾರತಿಯ ಎತ್ತರವಾದರೂ ಬಹಳುಂಟು ನಾವು ಅಲ್ಲಿಗೆ ಹೋದಾಗ ಆ ಸ್ಥಳದಲ್ಲಿ ನೆಲ ಅಗಿದ ಗುರುತುಗಳನ್ನು ನೋಡಿದೆವು. ಅವು ದ್ರವ್ಯಕ್ಕಾಗಿ ಅಗಿದ ತೆಗ್ಗುಗಳೆಂದು ಜನರು ಹೇಳುವರು. ಆನೆ ಕುದುರೆಗಳನ್ನು ಕಟ್ಟಿದ ಮನೆಗಳಾದರೂ ನೆಟ್ಟಗವೆ. ಇಲ್ಲಿ ಅತಸೆ

ನು ಹತ್ತುವಂಥ ಅಂದರೆ ಪಟ್ಟದ ಆನೆ ಕುದುರೆಗಳನ್ನು ಮಾತ್ರ ಕಟ್ಟುತ್ತಿರಬಹುದಾಗಿ ತೋರುವದು ಯಾಕೆಂದರೆ ಈ ಮನೆಗಳಲ್ಲಿ ೧೦-೧೫ ಪಶುಗಳನ್ನು ಮಾತ್ರ ಕಟ್ಟಲಿಕ್ಕೆ ಬರುವಷ್ಟು ಸ್ಥಳವದೆ.

ಈ ಇಮಾರತಿಗಳಿಂದ ತುಸು ದೂರದಲ್ಲಿ ಒಂದು ಬೈಲೊಳಗೆ ನೂರಾರು ಮೊಳ ಉದ್ದಗಲುಳ್ಳಂಥ ಒಂದೆರಡಾಳು ಎತ್ತರವಾದ ಕಟ್ಟೆಯಿರುವದು. ಇದು ಅಚ್ಯುತರಾಯ ಕೃಷ್ಣರಾಯರು ಕೂಡುವ ಗದ್ದುಗೆಯಿಂದು ಹೇಳುವರು. ಅಡರೆ ಸುತ್ತಲಿರುವ ಬೈಲು ಪ್ರದೇಶವನ್ನು ನೋಡಿದರೆ ಆನೆ, ಕುದುರೆ, ಹುಲಿ ಮುಂತಾದ ಪ್ರಾಣಿಗಳನ್ನು ಪರಸ್ಪರವಾಗಿ ಕಾದಾಡಲಿಕ್ಕೆ ಹಚ್ಚಿ ನೋಡುತ್ತ ಕುಳಿತುಕೊಳ್ಳುವ ಸ್ಥಳವಿರಬಹುದಾಗಿ ತೋರುತ್ತದೆ. ಈ ಮಾದರಿಯ ಕಾದಾಟವನ್ನು ನೋಡುವದು ಕ್ಷತ್ರಿಯರಿಗೆ ಬಹು ಪ್ರಿಯವಾದ ಸಂಗತಿಯಾಗಿರುವದು. ಪ್ರಸ್ತುತದಲ್ಲಿ ಈ ಸ್ಥಳದೊಳಗೆ ಅಲ್ಲಲ್ಲಿ ಹೊಲಗಳೂ ಗದ್ದೆಗಳೂ ಕಂಗೊಳಿಸುತ್ತಿರುವವು.

ಇವೆಲ್ಲ ಇಮಾರತಿಗಳನ್ನು ಅಲ್ಲಲ್ಲಿ ಬಿಡ್ಡ ಇನ್ನೂ ಅನೇಕ ಇಮಾರತಿಗಳನ್ನು ಆಳವೇರಿಯ ಗೋಡೆಗಳನ್ನು ನೋಡುತ್ತ ಇಂಗ್ಲೀಷ ಸರಕಾರದವರು ತುಂಗಭದ್ರೆಯ ಕಾಲುವೆಯನ್ನು ಗಚ್ಚು ಕಲ್ಲುಗಳಿಂದ ಕಟ್ಟಿಸಿದ ಸ್ಥಳಕ್ಕೆ ಬಂದೆವು ಅಲ್ಲಿ ಬೆಸ್ತರು ವಿಾನುಗಳನ್ನು ಹಿಡಿಯುತ್ತಿದರು. ವಿಾನುಗಳೊಳಗಿಂದ ಹರಿಯುವ ಪ್ರವಾಹವೂ ಕಿವಿಗಳನ್ನು ಗಡಚಿಕ್ಕಿಸುವದು ಸುತ್ತಲಿನ ಗದ್ದೆಗಳಲ್ಲಿರುವ ಕಬ್ಬು ಬತ್ತಗಳು ನೀರಲ್ಲಿ ನಿಂತುಕೊಂಡು ತಿರುಗಾಡಿ ದಣಿದ ನಮ್ಮ ಶರೀರವನ್ನೂ ಮನವನ್ನೂ ಶಾಂತಗೊಳಿಸಿದವು. ಅಲ್ಲಿ ತುಸು ಹೊತ್ತು ಕುಳಿತು ಇಳಿದ ಸ್ಥಳದ ಹಾದಿಯನ್ನು ಹಿಡಿದೆವು. ಮಾರ್ಗದಲ್ಲಿ ಗುಡ್ಡದ ಮೇಲೆ ಅಲ್ಲಲ್ಲಿ ಕಾಣುವ ಕಲ್ಲು ಮಂಟಪಗಳನ್ನು ನೋಡಿ ಇವೇನೆಂದು ಪ್ರಶ್ನಮಾಡಲು, ತೋರಿಸಬಂದವನು ಇದು ಮತಂಗಾಶ್ರಮವೆಂತಲೂ ಇತ್ತ ಕಡೆಯ ಮಂಟಪವನ್ನು ರಾಯರು ಕಟ್ಟಿಸಿರುವರೆಂತಲೂ ತೋರಿಸಿದನು. ಇದಲದೆ ಒಂದು ಗೊಂಬೇಗುಡಿಯನ್ನು

ಕಾಣುವ ಮಂಟಪವನ್ನು ತೋರಿಸಿದನು. ಈ ಮಂಟಪವನ್ನು ನಾಲ್ಕು ಕಂಬಗಳ ಮೇಲೆ ಒಂದು ಹಲಿಗೆಗಲ್ಲು ಹಾಕಿ ಮಾಡಿದ್ದಾರೆ ಇದರ ಐತಿಹ್ಯವನ್ನು ಅವನು ಹೇಳಿದ್ದು ಹೇಗಂದರೆ:—ವಿಜಯನಗರದ ಕೃಷ್ಣರಾಯರ ಓಲಗದಲ್ಲಿ ವಿಕಟ ಕವಿಯೆಂಬ ಬಿರುದುಳ್ಳ ತೆನ್ನಲರಾಮ ಕೃಷ್ಣನೆಂಬ ಪರಿಹಾಸಕನಿದ್ದನು. ಅವನು ರಾಯರು ಕಟ್ಟಿಸಿದ ಮಂಟಪಗಳನ್ನು ನೋಡಿ – ಥೂರೆಗಳೇ ನೀವು ಕಟ್ಟಿಸಿದ ಮಂಟಪದಲ್ಲಿ ಕುಳಿತರೆ ನಾಲ್ಕೂ ದಿಕ್ಕುಗಳು ಒಮ್ಮೆಲೆ ಕಾಣುವದಿಲ್ಲ ಇದೊಂದು ದೊಡ್ಡ ಕೊರತೆಯುಂಟು ಎನಲು, ದೊರೆಗಳು ಹಾಗಾದರೆ—ನೀನು ಕಟ್ಟಿಸು, ಈ ನ್ಯೂನತ್ವವು ಹ್ಯಾಗೆ ಇಲ್ಲದಂತಾಗುವದು? ನೋಡುವಾ ಎಂದು ನುಡಿಯಲು, ಈ ಮಂಟಪವನ್ನು ಕಟ್ಟಿಸಿದನೆಂತಲೂ, ಇದು ಆದ್ಯಂತವಾಗಿ ಒಬ್ಬನೇ ಮನುಷ್ಯನು ಕೂಡ್ರಬರುವಷ್ಟಿರುವದರಿಂದ ಉಳಿದ ಮಂಟಪಗಳಲ್ಲಿದ್ದ ಕೊರತೆಯು ಇದರಲ್ಲಿರುವದಿಲ್ಲೆಂತಲೂ ದಂತ ಕಥೆಯುಂಟು.

ಇದು ವರೆಗೆ ನಾವು ಶ್ರೀ ಪಂಪಾಕ್ಷೇತ್ರವನ್ನು ಅದರ ನೆರೆಯಲ್ಲಿ ಬಹು ದಿವಸ ಪರಧರ್ಮಿಗಳಾದ ಮುಸಲ್ಮಾನರನ್ನು ವಿರಗೊಡದೆ ಘನವಾದ ಗೌರವವನ್ನು ಪಡೆದು ಕಡೆಯಲ್ಲಿ ಅವರಿಂದಲೇ ನಾಮಶೇಷವಾಗಿರುವ ವಿಜಯನಗರದ ಹಾಳು ಪ್ರದೇಶದಲ್ಲಿರುವ ಮನೆ ಗುಡಿಗಳನ್ನೂ ಕೈಲಾದಷ್ಟು ಬಣ್ಣಿಸಿದೆವು. ಆದರೆ ವಾಚಕವರ್ಗಕ್ಕೂ ಇಂಗ್ಲೀಷ ಭಾಷೆಯ ನೈಪುಣ್ಯವನ್ನು ಪಡೆದ ಸಾಹಸಿಗಳಿಗೂ ಒಂದು ಮಾತನ್ನು ಹೇಳಿಕೊಂಡು ಈ ಲೇಖವನ್ನು ಮುಗಿಸಲಪೇಕ್ಷಿಸುತ್ತೇವೆ.

ವಿಜಯನಗರದ ರಾಜ್ಯವನ್ನು, ಒಳ್ಳೇ ಹೆಸರಾದ ಅಕಬರನಿರುವ ಕಾಲದ ಮೊಗಲ ಸಾಮ್ರಾಜ್ಯಕ್ಕೂ ನಾನಾಫಡನನೀಸನಿರುವ ಮಹಾರಾಷ್ಟ್ರ ದೇಶಕ್ಕೂ ಅನೇಕ ಸಂಗತಿಗಳಿಂದ ಹೋಲಿಸಬಹುದು. ಶೌರ್ಯ, ಔದಾರ್ಯ, ವಿದ್ಯಾಕಲಾಕೌಶಲ್ಯ, ಮುಂತಾದವುಗಳಿಗೆ ಹೋಲಿಸುವದಕ್ಕಂತೂ ಅಡ್ಡಿಯಿಲ್ಲ. ಆದರೆ, ಈ ಮೂರು ಸಾಮ್ರಾಜ್ಯದಲ್ಲಿ ಅತಿಶಯ ಬು

ಳವಂತೆರಾದ ಮುವ್ವರು ಪ್ರಮುಖಮಂತ್ರಿಗಳಿಂದ ಸಹ
ಹೋಲಿಸಬಹುದು. ವಿಜಯನಗರದಲ್ಲಿ ಅಪ್ಪಾಜಿಯು. ಮೊ
ಗಲಾಯಿಯಲ್ಲಿ ಬೀರಬಲ್ಲನು ದುಹಾರಾಪ್ಪ್ರದಲ್ಲಿ ವಾನಾಫ
ಡನವೀಸನು. ನಾನಾಫಡನವೀಸನ ಸಂಬಂಧವಾಗಿ ಅನೇಕ
ಸೋಧಗಳಾಗಿ ಆ ಕಾಲನ ಅವನ ಕೌಶಲ್ಯವನ್ನೂ, ಮುಂಜಾ
ಕೋಚಕನೆಯನ್ನೂ ಅನೇಕ ಜನರು ಪ್ರಕಟಿಸಿರುವರು. ಆ
ದರೆ ರಾಯರ ಅಪ್ಪಾಜಿಯ ಸಂಬಂಧದಿಂದ ವಿಶೇಷ ಸಂಗತಿ
ತಿಗಳು ಪ್ರಕಟವಾಗದಿದ್ದರಪ್ಪೇ ಹೋಯಿತು. ಕೃಷ್ಣರಾಯ
ನ ಮಂತ್ರಿಯು ಅಪ್ಪಾಜಿಯೆಂಬವನಿದ್ದನು ಎಂಬುದಿಪ್ಪೇ ವಾ
ಕ್ಯವು ಸಹ ಇತಿಹಾಸದಲ್ಲಿ ಸೇರಬಾರದೇ! ಅಯ್ಯೋ ಕ
ನ್ನಡಿಗರ ದೈವವೇ, ನಾವು ಇಷ್ಟಕ್ಕೆ ಸಹ ಪಾತ್ರರಿಲ್ಲವೇ!
ಇನ್ನಾದರೂ ಪ್ರಾವತಿಮಾಡಿ ಈ ಮಹಾ ಮಂತಿ ಯು ಸಂಬಂ
ಧದ ಐತಿಹ್ಯ ಸಂಗತಿಯನ್ನು ಬೈಲಿಗೆ ತಂದರೆ. ಕರ್ನಾಟಕ
ದಲ್ಲಿ ಇತಿಹಾಸ ಪ್ರಸಿದ್ಧರಾದ ಬುದ್ಧಿಶಾಲಿಗಳು ಹಿಂದಕ್ಕಾದ
ರೂ ಇದ್ದರೆಂದು ತಿಳಿದು ಕನ್ನಡಿಗರಿಗೆ ಆನಂದವಾಗದೇ
ಇರದು ಆದ್ದರಿಂದ ಅನುಕೂಲವಿದ್ದ ಸಾಹಸಿಗಳು ಈ ಕಾ
ರ್ಯವನ್ನು ಕೈಕೊಂಡಾರೆಂದು ನಂಬುತ್ತೇವೆ

PROPOSED OBJECT LESSONS

ಸೂಚಿಸಿದ ವಸ್ತುಪಾಠಗಳು.

(ಗುರುತಿನ ಪುಟದಿಂದ ಮುಂದ ಸಾಗಿದ್ದು.)

(೯) ವಿಷಯಗಳನ್ನು ಸಮುದಾಯಿಸುವ ಬಗ್ಗೆ ಸೂಚನೆಗಳು.

ಸೂಚಿಸಿದ ವಿಷಯ ಸಮೂಹಗಳು ಏನೂ ಸಂಬಂಧವಿಲ್ಲದೆ ಒಂದರಿಂದೊಂದು ತೀರ ಭಿನ್ನವಾಗಿವೆಂಬಂತೆ ಇಲ್ಲ. ಅವುಗಳನ್ನು ಬೇರೆ ರೀತಿಯಿಂದಲೂ ಇನ್ನೂ ವಿಷಯಗಳನ್ನು ಸೇರಿಸುವದರಿಂದಲೂ ಪುನಃ ಸಮುದಾಯಿಸಬಹುದು, ಆದರೆ ಈ ಮೊದಲು ಹೇಳಿದ ತತ್ವಗಳಿಗೆ ವಿರೋಧಬಾರದಂತೆ ವಸ್ತುಪಾಠಗಳ ಉದ್ದೇಶವನ್ನು ನೆರವೇರಿಸತಕ್ಕದ್ದು.

(೧) ವಸ್ತುಗಳ ಮೂಲ ಅಥವಾ ನಿಜ ಗುಣಗಳು:

(ಅ) ಪದಾರ್ಥ.

(ಆ) ಆಕಾರ.

(ಇ) ಬಣ್ಣ.

(೨) ಖನಿಜ ಪದಾರ್ಥಗಳು.

(೩) ಧಾತುಗಳು.

(೪) ಸೃಷ್ಟಿಯ ವ್ಯಾಪಾರಗಳು

(೫) ಉದ್ಭಿಜ್ಜ ಕೋಟಿ.

(೬) ಪ್ರಾಣಿ ಕೋಟಿ

(೭) ಮಾನವೇಂದ್ರಿಯದ ವಿಶಿಷ್ಟ ರಚನೆ.

(೮) ಹೊಲಗಳು ಮತ್ತು ಅದರಲ್ಲಿಯ ಸೈರುಗಳು

(೯) ಸಾಧ ರಣ ಉದ್ಯೋಗ ಮತ್ತು ಕೈಗಾರಿಕೆ

(೧೦) ಸಾಧಾರಣ ವಸ್ತುಗಳು ಅಂದರೆ ಬಳಿಕೆಯೊಳಗಿನ ವಸ್ತುಗಳು.

(೧೧) ಗ್ರಹವ್ಯವಸ್ಥೆ.

ಟೀಪು:—ಪ್ರತಿಯೊಂದು ಇಯತ್ತೆಯ ಕ್ರಮದಲ್ಲಿ ಪ್ರತಿಯೊಂದು ಪದಾರ್ಥ ಸಮೂಹವು ಇರಬೇಕೆಂಬದು ಆವಶ್ಯವಿಲ್ಲ. ಕೆಲವು ಸಮೂಹಗಳಲ್ಲಿರುವ ವಿಷಯಗಳನ್ನು ಹೆಚ್ಚಿನ ಇಯತ್ತೆಗಳಿಗೆ ಮಾತ್ರ ಕಲಿಸಬಹುದು. ಉದಾಹರಣಾರ್ಥ ೬, ೯, ೧೧ ಗುಂಪುಗಳು ಆದರೆ ಇತರ ಸಮೂಹಗಳಲ್ಲಿ ಪ್ರತಿಯೊಂದು ಇಯತ್ತೆಗ ಯೋಗ್ಯವಾದ ವಸ್ತುಗಳನ್ನು ಆಯಾಯಾ ಇಯತ್ತೆಗಳ ಯೋಗ್ಯತೆಗೆ ಸರಿಯಾಗಿ ಮತ್ತು ಒಂದು ಇಯತ್ತೆಯಿಂದ ಮತ್ತೊಂದು ಇಯತ್ತೆಯವರೆಗೆ ವಿಷಯಗಳನ್ನು ಭಿನ್ನಭಿನ್ನವಾಗದೆ ಪೂರ್ವಾಪರ ಸಂಬಂಧದಿಂದ ಬುದ್ಧಿಯು ವಿಕಾಸವಾಗುವಂತೆ ಕಲಿಸಬಹುದು.

(೫) ಸಮೂಹ ಸಂಬಂಧದಿಂದ ವಿವರವಾಗಿ ಹೇಳಿದ ಸೂಚನೆಗಳು.

ಈ ಕೆಳಗೆ ಹೇಳಿದ ವಸ್ತುವಾಚಕಗಳ ಸಮೂಹಗಳು ಮಾದರಿಗಾಗಿ ಕೊಡಲ್ಪಟ್ಟಿವೆ. ಆದರೆ ಅವುಗಳನ್ನು ಕಣ್ಣು ಮು

ಪಟ್ಟಿ ಕಿಂಬಾಲಿಸಬೇಕು ಎಂಬ ಅವಶ್ಯಕತೆಯಿಲ್ಲ. ಮುಕ್ತ
ಅವುಗಳಲ್ಲಿ ವಸ್ತುಪಾಠಗಳ ಸಂಬಂಧದಿಂದ ಹೇಳತಕ್ಕ ಎಲ್ಲ
ವಸ್ತುಗಳ ಸಮಾವೇಶವೂ ಆಗಿರುತ್ತದೆಂದು ತಿಳಿಯಲಾಗದು
ಕಲಿಸುವವರು ಅನುಕೂಲತೆಯ ಪ್ರಕಾರ ತಮಗೆ ಬೇಕಾದ
ವಸ್ತುಗಳನ್ನು ಆರಿಸಿಕೊಳ್ಳಬೇಕೆಂಬದಾಗಿ ಕೋಡಿನಲ್ಲಿ ಹೇಳ
ರುವ ಕಲಿಸತಕ್ಕ ವಸ್ತುಪಾಠಗಳ ಸಂಖ್ಯೆಗಿಂತಲೂ ಹೆಚ್ಚು
ವಸ್ತುಗಳ ಸಂಖ್ಯೆಯನ್ನು ಕೊಟ್ಟಿರುತ್ತೇವೆ. ಆದರೆ ಪ್ರತ್ಯೇ
ಕ ಇಯತ್ತೆಗೆ ವಸ್ತುಪಾಠ ಕಲಿಸುವಾಗ್ಗೆ ಆಯಾ ಇಯತ್ತೆಗ
ಯೋಗ್ಯವಾದ ಸಮೂಹಗಳನ್ನೂ ಪಾಠಗಳನ್ನೂ ಆರಿಸುವದ
ರಲ್ಲಿ ವಸ್ತುಪಾಠದ ಮೂಲತತ್ವಗಳನ್ನು ಲಕ್ಷ್ಯವಲ್ಲಿಡಬೇಕು.

ದೇಶಭಾಷೆಯ ಪ್ರಾಥಮಿಕ ಹೆಣ್ಣು ಹುಡುಗರ ಶಾಲೆಗಳ ಬಗ್ಗೆ ಸೂಚಿತ ವಸ್ತುಪಾಠಕ್ರಮ.

ಬಾಲಕರ ವರ್ಗ.

ನೇ ಸಮುದಾಯ.

(೫) ಪದಾರ್ಥ.	ಉದ್ಭವತೆ ಅಗಲ ಪಿಂಡಗಳನ್ನ
ಕಲ್ಲುಗಳು	ಹುರುಬರಕುತನ ನುಣುಪು ಕ
ಕಟ್ಟಿಗೆಯ ತುಂ	ಥಿಣತ್ವ ಮೃದುತ್ವ ಭಾರ ಹಗ
ಡುಗಳು	ರುತನ ಮುಂತಾದವುಗಳನ್ನೂ
ಅರಲಿನ ಪುಡ್ಡಿ	ತಿಳಿಸಿ ಕೊಡುವದು

(೫) ಆಕಾರ	
ಕಟ್ಟಿಗೆಯ	ಫನ ಅಥವಾ ಗಟ್ಟಿ ಆಕಾರದ ಭೌ
ಗೋಲು	ತೆ ನೀರಿ ತರಗಳನ್ನೂ ಸರಳ ಹ
ಕಟ್ಟಿಗೆಯ ಫನ	ಗೂ ಪಕ್ಕ ರೇಖೆಗಳನ್ನೂ ತಿಳಿಸಿಕೆ
ಕಟ್ಟಿಗೆಯ ಸಿ	ಡುವದು ಬಾಲಕರು ಗಳಿಗ
ಲಿಂದರ, ಶಂ	ನ್ನು ತೆಗೆದು ಮಣ್ಣಿನಿಂದ ವಸ್ತು
ಕ್ಯಾಕೃತಿ	ಗಳ ಆಕಾರವನು ಮಾಡುವದು
ಹುಡುಗರ ಸಲು	
ವಾಗಿ ಮಾಡಿದ	
ಇಟ್ಟಂಗಿಗಳು.	

೨) ಬಣ್ಣ ಜಿಳ, ಕತ, ಕೆಂ ಪು, ಹಸರು, ನೀ ಲಿ, ಹಳದಿ ಬಣ್ಣ ಗಳ ಗುಂಡು ಗಳು,	ಬಣ್ಣದ ವಿಷಯಕ್ಕೆ ಸುಲಭ ಸಂಗ ತಿಗಳನ್ನು ಹೇಳುವದು. ಬಣ್ಣಗಳ ನ್ನು ಹೇಳಿದ ಕ್ರಮದಿಂದಲೇ ಕಲಿ ಸಬೇಕು.

ವಸ್ತುಕೋಟಿ.

ಗಿಡ :—ಮುಖ್ಯ ಸುಲಭಸ್ವರೂಪವನ್ನೂ ಭಾಗಗಳನ್ನೂ
ಪಾತ್ರ ಕಲಿಸಬೇಕು.

ಬಾಲಕರು ಹಣ್ಣಿನ ಅಥವಾ ಹೂವಿನ ಆ ಕಾರವನ್ನು ತೆಗಿಯ ಬೇಕು	ಹಣ್ಣು (ಮೊವಿನಹಣ್ಣು.) ಹೂ (ಸಾಧಾರಣ ಹೂ.)

ಇನೇ ಸಮುದಾಯ.

ಪ್ರಾಣಿಕೋಟಿ.

೧. ಆಕಳು ಅಥವಾ ಎಮ್ಮೆ. ೨. ಗಿಳಿ.	ಮುಖ್ಯ ಮುಖ್ಯ ಸ್ವರೂಪವನ್ನೂ ಭಾಗಗಳನ್ನು ಕಲಿಸಬೇಕು.

ಗನೇ ಸಮುದಾಯ.

ಸಾಧಾರಣ ವಸ್ತುಗಳು.

೧. ಮೇಜು ಅಥವಾ ಬೆಂಚು. ೨ ಬುಟ್ಟಿ.	

ಗನೇ ಇಯತ್ತೆ.

ಗನೇ ಸಮುದಾಯ.

(೫) ವಸ್ತು.

ನೀರು: ಕಾಜು: ಹುಣ್ಣಿನಪಾತ್ರೆ.	ಘನ ಪ್ರವಾಹಿಪದಾರ್ಥಗಳನ್ನೂ ಅವುಗಳ ಗುಣಧರ್ಮ ಅಂದರೆ ಪಾರದರ್ಶಕತ್ವ, ಸ್ಥಿತಿಸ್ಥಾಪಕತ್ವ, ಸಚ್ಛಿದ್ರತ್ವ, ಉಷ್ಣತಾ, ತಂಪು ಮೊದಲಾದವುಗಳನ್ನೂ ತಿಳಿಸಿಕೊ ಡುವದು.

(೪) ಆಕಾರ.

ಸ್ಲೇಟುಗಳು, ಕಾಗ ದದ ತುಂಡುಗಳು ಕಟ್ಟಿಗೆ ಅಥವಾ ದ ಕಾಗದದ ಬಟ್ಟುಗ ಹಲಿಗೆಗಳು, ಆಟ ಇಟ್ಟಂಗಿಗಳು.	ತ್ರಿಕೋನಗಳನ್ನೂ ಸಮಾಂತರರೇ ಪೆಗಳನ್ನೂ, ಸಾದಾಬಹಿರಂಗದ ಘ ವ್ಯಭಾಗದ ಆಕಾರ (ಚೌರಸ, ಕಾ ಟ್ಟಕೋನ ಚೌಕೋನ, ತ್ರಿಕೋನ ಗಳನ್ನು ತಿಳಿಸುವದು ಆಕೃತಿಯಂ ತೆ ಕಾಗದಗಳನ್ನು ಮಡಿಸುವದು ರೇಖೆಗಳನ್ನೂ ಆಕಾರಗಳನ್ನೂ ತ ಗೆಯುವದು.

(೫) ಬಣ್ಣ

ಬಾಲಕರ ಇಯತ್ತೆಯಲ್ಲಿ ಹೇಳಿ ಸ್ಥರ ಹೊರ್ದು ನಿಂಬಿ ಮತ್ತು ನಸು ಗೆಂಪು ಬಣ್ಣಗಳು: ಹಾಗೂ ಪ್ರಥಮ ಬಣ್ಣದ ಎಲ್ಲ ಪುಡಿಗಳು.	ಪ್ರಾಥಮಿಕ ಅಂದರ ಮೂಲ ಅಥವಾ ಮಿಶ್ರ ಬಣ್ಣದ ಭೇದಗಳನ್ನು ಹೇಳುವದು ಮೂಲಬಣ್ಣಗಳನ್ನು ಬ ರಿಸಿ ಮಿಶ್ರ ಬಣ್ಣಗಳನ್ನು ಮಾಡಿಸುವದು.

ಟೀಪು :—ವಸ್ತು ಸಂಚಿಯಕ್ಕೆ ಪುರವಣಿಯಾಗಿ ಉಪ್ಪು
ಕಹಿ, ಕಾರ, ರುಚಿಗಳನ್ನು ತೋರಿಸುವದಕ್ಕೆ ಉಪ್ಪು, ಕಹಿ
ಬಾದಾಮಿ, ಮೆಣಸು, ಲವಂಗ ಮುಂತಾಂದವುಗಳಿಂದ ತೀ
ಸುವದು.

ಎನೇಯ ಸಮುದಾಯ:

(ಸಶೇಷ)

DEPARTMENTAL NOTICE.

ನೋಟೀಸಗಳು.

ವಿಜಾಪೂರ ಜಿಲ್ಲೆಯೊಳಗಿನ ಯಾವತ್ತು ಸಾಲೆಗಳ ಮು
ಸ್ತರರಿಗೆ—

ಜಿಲ್ಲಾ ಮುಜಕೂರ ಡೆಪುಟಿ ಎಜ್ಯುಕೇಶನಲ್ ಇನಸ್ಪೆಕ್ಟ
ರ ಕಡೆಯಿಂದ :- ಒಬ್ಬ ಮಾಸ್ತರರು ರಜಾಪಡಕೊಳ್ಳದೆ,
ದಿವಸ ಗೈರಹಾಜರ ಇದ್ದದರಿಂದ ಅವರಿಗೆ ಮಿ॥ ಎಜ್ಯುಕೆ

ಲ್ ಇನಸ್ಪೆಕ್ಟರ ಸಾಹೆ ದಕ್ಷಿಣಭಾಗ ಇವರ ಹುಕುಮಿನ ಮೇಲಿಂದ ೩ ರೂಪಾಯಿ ದಂಡ ಮಾಡಿರುತ್ತದೆ. ಕಾರಣ ಯಾವತ್ತು ಮಾಸ್ತರರು ಈ ಸಂಗತಿಯನ್ನು ಚನ್ನಾಗಿ ಲಕ್ಷ್ಯ ದಲ್ಲಿಟ್ಟು, ಜಾಗ್ರತೆಯಿಂದ ನಡಿಯಬೇಕು

ಮಂಜೂರಿ ಪಡಕೊಳ್ಳದೆ ಯಾವ ಮಾಸ್ತರರಾದರು ಗೈರ ಹಾಜರ ಆದರೆ ಅವರ ಬಗ್ಗೆ ಸಖ್ತ ತಜವೀಜು ಮಾಡ ಲಾದೀತು.

ವಿಜಾಪೂರ
ತಾ॥ ೨೮-೭-೧೯೦೧. } S. M. Ankle.
ಡೆ. ಎ, ಇ, ಜೆ. ವಿಜಾಪೂರ.

ನೋಟೀಸು.

ಜಾವಕ ನಂಬರು ೧೦೫

ಮೆಹರ್ಬಾನ ಕ್ಯುರೇಟರ ಗವ್ಹರ್ನಮೆಂಟ ಸೆಂಟ್ರಲ್ ಬುಕ್ಕ ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂ ದರೆ:-ಸನ್ ೧೯೦೨ನೇ ಇಸವಿಯ ಜೂನ ತಿಂಗಳ ಕೊನೆ ಯಲ್ಲಿ ಕೆಳಗೆ ಬರೆದ ಪುಸ್ತಕಗಳು ಹೊಸದಾಗಿ ಮುದ್ರಿಸಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಪುಸ್ತಕಗಳು	ಬೆಲೆಯು. ರೂ ಆ. ಪೈ.
ಕನ್ನಡ ೩ನೇ ಪುಸ್ತಕ್	೦ ೧೧ ೦
ಛಂದಸ್ಸಾರ	೦ ೪ ೦

ಮುಂಬಯಿ
ತಾ॥ ೪-೭-೧೯೦೨. } G. J. Agashe,
ಕ್ಯೂರೇಟರ ಗವ್ಹರ್ನಮೆಂಟ ಸೆಂಟ್ರಲ್
ಬುಕ್ಕ ಡಿಪೋ ಮುಂಬಯಿ.

CORRESPONDENCE.

ಪತ್ರವ್ಯವಹಾರ.

ಬಂದ ಪತ್ರಗಳ ಸಾರಾಂಶವು.

I

ತೆಡಕೋಡ (ತಾ. ಧಾರವಾಡ)- ಈ ಊರ ಶಾಲೆಯ ಪ್ರತಿ ೀಕ ಪರೀಕ್ಷೆಯು ಅಭ್ಯಾಸವಾಡುವ ವಿದ್ಯಾರ್ಥಿಗಳು ಬರೆದ

ಪತ್ರದ ಸಾರಾಂಶವು : ನಮ್ಮ ಶಾಲಾ ಗುರುಗಳು ನಮ್ಮನ್ನು ಧಾರವಾಡಕ್ಕೆ ಕರಕೊಂಡು ಬಂದು ನೋಡತಕ್ಕಂಥ ಸ್ಥಳಗಳನ್ನು ತೋರಿಸಿ ಪ್ರಾಕ್ಟಿಸಿಂಗಸ್ಕೂಲಿಗೆ ಕರೆತಂದರು. ಆ ಪ್ರಾಕ್ಟಿಸಿಂಗ ಸ್ಕೂಲಮಾಸ್ತರರು ನಮ್ಮ ವಿನಂತಿಯನ್ನು ಮಾನ್ಯಮಾಡಿ ಶಾರೀರಶಾಸ್ತ್ರದ ಪಾಠಗಳನ್ನು ಸರಸವಾಗಿ ತಿಳಿಸಿದರು. ಮನುಷ್ಯ ಶರೀರದ ಮಾದರಿಯಿಂದ ಈ ಪಾಠವನ್ನು ಅವರು ಸುಬೋಧವಾಗಿ ತಿಳಿಸಿಕೊಟ್ಟಿದ್ದರಿಂದ ಅವರಿಗೂ ಈ ಸುಯೋಗವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ನಮ್ಮ ಗುರುಗಳ ಉಪಕಾರವನ್ನು ಬಹಳವಾಗಿ ನೆನಿಸುವೆವು. ಇತ್ತೀಚಿಕ್ಕ ಪುಟ್ಟ ಶಾಲೆಯ ಅಧ್ಯಾಪಕರು ತಮ್ಮ ನೆರೆಯಲ್ಲಿರುವ ಸುಧಾರಿಸಿದ ಶಾಲೆಗಳಿಗೆ ತಮ್ಮ ವಿದ್ಯಾರ್ಥಿಗಳನ್ನು ಕರದುಕೊಂಡು ಹೋಗಿ ಅವರ ಜ್ಞಾನವನ್ನು ಬೆಳಿಸುವದು ಉತ್ತಮವಾದ ಕೆಲಸವೆಂದೆಣಿಸುತ್ತೇವೆ. ಇದರಿಂದ ಅನೇಕಲಾಭಗಳುಂಟು.

II

ಹಾನಗಲ್ಲ ಹೆಣ್ಣು ಮಕ್ಕಳ ಶಾಲೆಯಲ್ಲಿ ಆ ಶಾಲೆಯ ವಿದ್ಯಾರ್ಥಿಗಳಿಗೆ ಮುಚ್ಚು ಕೊಡುವ ಸಮಾರಂಭವು ನಡೆಯಿತೆಂತಲೂ, ಆ ತಾಲೂಕಿನ ಮಾಮಲೇದಾರ ಸಾಹೇಬರೂ ಬೇರೆ ಸದ್ಗೃಹಸ್ಥರೂ ಸಭೆಗೆ ಬಂದಿದ್ದರೆಂತಲೂ, ಕುಪ್ಪಸ, ಪುಸ್ತಕ ಮುಂತಾದವುಗಳನ್ನು ಇನಾಮು ಕೊಟ್ಟರೆಂತಲೂ ತಿಳಿಯುವದು. ಇದು ಮಾಸ್ತರರಿಗೆ ಭೂಷಣವು.

III

ಗೋಕಾಕ್ ತಾಲೂಕ ಅಕ್ಕತಂಗೇರ ಹಾಳದಿಂದ ಒಬ್ಬ ವಿದ್ಯಾರ್ಥಿಯು ಪತ್ರ ಬರೆದಿರುವನು ಅದರಲ್ಲಿ ಅವನು ಎಪ್ರೇಲ ತಿಂಗಳ ಸಂಚಿಕೆಯಲ್ಲಿ ರಾ. ಅಗರಖೇಡರವರು ಬರೆದ ಲೆಕ್ಕವು ಅಂಕಗಣಿತದಿಂದ ಬಿಡಲೊಲ್ಲದೆಂತಲೂ ಯಾರಾದರೂ ಅದನ್ನು ಬಿಡಿಸಿತೋರಿಸಬೇಕೆಂತಲೂ ಸೂಚಿಸಿದ್ದಾನೆ. ಇತ್ತಕಡೆ ಶಾಲಾಧ್ಯಾಪಕರು ಲಕ್ಷಕೊಡತಕ್ಕದ್ದು.

ಶಾಲಾ ಪತ್ರಿಕೆ.

ಪದ್ಯಂ.

ಪ್ರಥುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಪೋತ್ಕರ್ಷಮುಂ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂವೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪವೋದುವರ್ಗಸುಗುಣಂ ತೋರಲ್ಕೆಕೈಕೊಂಬುಪ್ಪೈ।
ಪಯಿಯಿಂದೋಷಪಡಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ ॥೧

ಪುಸ್ತಕ ೩ಲೆ] ಸಪ್ಟಂಬರ ೧೯೦೨. [ಸಂಚಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಎಡ್ವರ್ಡ ಭೂಪಾಲರ ಮೂಭರ್ಭಿಷೇಕವು.

ಸರ್ ೧೯೦೨ನೇ ಇಸವಿಯ ಅಗಸ್ಟ್ ತಿಂಗಳ ೯ನೇ ತಾರೀಖಿನ ದಿವಸವು ಬ್ರಿತಿಶರ ಸಾರ್ವಭೌಮತ್ವಕ್ಕೆ ಅಂಕಿತವಾಗಿರುವ ಭೂಮಂಡಲದ ಯಾವತ್ತು ಪ್ರದೇಶದೊಳಗಿನ ಜನರಿಗೂ ಬ್ರಿತಿಶ ರಾಷ್ಟ್ರಕ್ಕೆ ಮಿತ್ರತ್ವದಿಂದ ಇದ್ದ ಬೇರೆ ರಾಷ್ಟ್ರಗಳೊಳಗಿನ ಜನರಿಗೂ ಅತ್ಯಾನಂದಕರವಾದಂಥ ಚಿರಸ್ಮರಣೀಯವಾದಂಥ ಸುದಿವಸವೆಂದು ನಿರ್ವಾದವಾಗಿ ಹೇಳಬಹುದು. ನಾವು ಹೋದ ಸಂಚಿಕೆಯಲ್ಲಿ ಸೂಚಿಸಿದಂತೆ ಶ್ರೀಮಚ್ಚಕ್ರವರ್ತಿಗಳಾದ ೭ನೇ ಎಡ್ವರ್ಡ ಭೂಪಾಲರು ಈ ದಿವಸ ಪಟ್ಟಾಭಿಷಿಕ್ತರಾದರು. ಬ್ರಿತಿಶರಾಜ್ಯವು ಭೂಲೋಕದ ೫ ಖಂಡಗಳಲ್ಲಿ ನೆಲೆಗೊಂಡಿರುವದರಿಂದ ಭೂಮಂಡಲದ ಯಾವತ್ತು ಪ್ರದೇಶದ ಜನರು ಈ ಸಮಾರಂಭಕ್ಕೋಸುಗ ಆಮಂತ್ರಿತರಾಗಿದ್ದರು. ಯಾವತ್ತು ವಸಾಹತುಗಳಿಂದಲೂ, ಹಿಂದುಸ್ಥಾನದಿಂದಲೂ, ಬೇರೆ ಬೇರೆ ಸ್ವತಂತ್ರ ರಾಷ್ಟ್ರಗಳಿಂದಲೂ, ಬೇರೆ ಬೇರೆ ಯೋಗ್ಯತೆಯ ಅಧಿಕಾರಿಗಳೂ, ರಾಜಪ್ರೇಷಿತ ಮುತ್ಸದ್ದಿಗಳೂ, ಹಲಕೆಲವು

ಮಂದಿ ರಾಜರೂ, ರಾಜಪುತ್ರರೂ, ಇತರ ಸಭ್ಯ ಗೃಹಸ್ಥರೂ, ಬಂಡಾಳುಗಳೂ ಆಮಂತ್ರಿತರಾಗಿ ಲಂಡನೆ ಪಟ್ಟಣಕ್ಕೆ ಹೋಗಿದ್ದರು. ಅದರಿಂದ ಲಂಡನ್ ಪಟ್ಟಣವು ಭೂಮಂಡಲದೊಳಗಿನ ಯಾವತ್ತು ಪ್ರಕಾರದ ಹಾಗೂ ಯೋಗ್ಯತೆಯ ಜನ ಸಮುದಾಯದ ಪ್ರದರ್ಶನಾಲಯದಂತೆ ಕಂಗೊಳಿಸುತ್ತಿರ ಬಹುದು.

ಕಾರ್ಯಕ್ರಮ ಪತ್ರಿಕೆಯಂತೆ ಆ ದಿವಸ ಹಗಲು ೧೦ ಘಂಟೆಗೆ ಸರಿಯಾಗಿ ಸಾರ್ವಭೌಮರಾದ ಎಡ್ವರ್ಡ ದೊರೆಗಳೂ, ಅಲೆಕ್ಸಾಂದ್ರಾ ಮಹಾರಾಣಿಯವರೂ, ರಥಾರೂಢರಾಗಿ, "ಬಕಿಂಗಹಮ್" ಎಂಬ ರಾಜಮಂದಿರದಿಂದ ಹೊರಡಲು, ಹೊರಗೆ ಮಾರ್ಗದಲ್ಲಿ ನಿಂತ ಜನರು ಜಯಘೋಷವನ್ನು ಮಾಡಿದರು. ತಮ್ಮ ಅರಸನು ಪಟ್ಟಾಭಿಷಿಕ್ತನಾಗುವನೆಂಬ ಜನಮನದ ಉತ್ಸಾಹವು ಜೀವದ ಮೇಲೆ ಬಂದಿದಗಂಡದೊಳಗಿಂದ ಪಾರಾದನೆಂಬ ಅತ್ಯಾನಂದದೊಡನೆ ಓಂಬಾಗಿ, ಜನರೆಲ್ಲರನ್ನು ಆನಂದಪರವಶರನ್ನಾಗಿ ಮಾಡಿ ಬಿಟ್ಟಿತ್ತು. ಆದ್ದರಿಂದ ಅವರ ಆನಂದಸೂಚಕ ಕೋಲಾಹಲವು ಸಮುದ್ರಘೋಷವನ್ನು ಅಡಗಿಸುತ್ತಿರಲು, ವಾದ್ಯರವವೂ, ತೋಪಿನ ಸಪ್ಪಳವೂ, ದಿಕ್ಪಾಲರನ್ನು ಬಧಿರರನ್ನಾಗಿ ಮಾಡಿದವು. ಇಷ್ಟು ಸಡಗರದಿಂದ ಯೋಗ್ಯ ಅಧಿಕಾರಿಗಳಿಂದ ಪರಿವೃತರಾದ ರಾಜದಂಪತಿಗಳು ಮಂದಸ್ಮಿತದಿಂದ ಪ್ರಜೆಗಳ ಆನಂದಭಕ್ತಿಗೆ ಕೃತಜ್ಞತೆಯನ್ನು ತೋರಿಸುತ್ತ "ವೆಸ್ಟಮಿನಿಸ್ತರ ಅಬ್ಬೇ" ಎಂಬ ಮಂದಿರದ ಬಾಗಿಲ್ಗೆ ತಲ್ಪಿದ ಕೂಡಲೆ ಯೋಗ್ಯ ಅಧಿಕಾರಿಗಳೂ, ಕಾಂತೆರಬರಿ, ಯಾರ್ಕ್ ಪಟ್ಟಣಗಳ ಧರ್ಮಾಧಿಕಾರಿಗಳೂ, ಮಿಕ್ಕ ಪ್ರಮುಖ ಮುತ್ಸದ್ದಿಗಳೂ, ಸಾಮಂತರಾಜರೂ, ಸೇನಾನಾಯಕರೂ, ಜಯಜಯಕಾರದೊಂದಿಗೆ ಈ ರಾಜದಂಪತಿಗಳನ್ನು ಸನ್ಮಾನಪೂರ್ವಕವಾಗಿ ಮಂದಿರದೊಳಗೆ ಕರೆದುಕೊಂಡು ಹೋದರು. ಈ "ವೆಸ್ಟಮಿನಿಸ್ತರ ಅಬ್ಬೇ" ಎಂಬ ಮಂದಿರವೇ ಇಂಗ್ಲಂಡದ ಅರಸರು ಪಟ್ಟಾಭಿಷೇಕನವನ್ನು ಮಾಡಿಸಿಕೊಳ್ಳುವ ಸ್ಥಳವು. ಈಗ ಸುಮಾರು ೧೦೦೦ ವರ್ಷಗಳಿಂದಾದ ಅರ

ನೆರೆಲ್ಲರೂ ಈ ಮಂದಿರದಲ್ಲಿಯೇ ಇಂಗ್ಲೆಂಡಿನ ಅರಸುತನದ ಅಧಿಕಾರವನ್ನು ಕೈಕೊಂಡಿರುವರು. ಇದು ಅಧಿಕಚಿಹ್ನದ ಆಕೃತಿಯಂತಿರುವದು.

ಮಹಾರಾಜರು ಪ್ರಾರ್ಥನೆಯನ್ನು ಮಾಡಿ ಕುರ್ಚಿಯ ಮೇಲೆ ಕುಳಿತುಕೊಂಡರು. ಬಳಿಕ ಪೂರ್ವಪದ್ಧತಿಯಂತೆ ಧರ್ಮಾಧಿಕಾರಿಯು ಎದ್ದು ನಿಂತು, ನೆರೆದವರೆಲ್ಲರೂ ಕೇಳಿಸುವಂತೆ "ನೋಡಿರಿ, ಈತನು ನಿಮ್ಮ ನಾಡಿನ ಅರಸುತನವನ್ನು ಕೈಕೊಳ್ಳುತ್ತಾನೆ. ಈ ಸಂಬಂಧದಿಂದ ನಿಮ್ಮದೇನಾದರೂ ಆಕ್ಷೇಪವಿರುವದೋ?" ಎಂದು ನುಡಿದನು. ನೆರೆದವರೆಲ್ಲರೂ ಈ ರಾಜನನ್ನು ಒಲ್ಮೆಸಿ ಬಾಳುತ್ತೇವೆಂಬ ಅರ್ಥವನ್ನು ಧ್ವನಿತಗೊಳಿಸುವ ಆನಂದಜಯಕಾರದಿಂದ ಒಪ್ಪಿಗೆಯನ್ನಿತ್ತು ಬಳಿಕ ಮಂತ್ರಗಳೂ, ಸ್ತೋತ್ರಪಾಠಗಳೂ ನಡೆದವು. ಆ ಮೇಲೆ ಮಹಾರಾಜರು ರಾಜಪದವನ್ನು ಕೈಕೊಳ್ಳುವ ಮೊದಲು ಮಾಡಬೇಕಾದ ಶಪಥವನ್ನು ಮಾಡಿದರು. ಹಾಗೂ ಶಪಥದ ಕಾಗದಕ್ಕೆ ರುಜು ಹಾಕಿದರು. ತರುವಾಯ ಬಂದು ವಿಶೇಷ ಪ್ರಕಾರದ ಕುರ್ಚಿಯ ಮೇಲೆ ಕುಳಿತುಗೊಂಡರು. ಈ ಕುರ್ಚಿಯು ನಾಲ್ಕು ಕಾಲುಗಳು ಕಟ್ಟಿಗೆಯ ನಾಲ್ಕು ಸಿಂಹಗಳ ಮೇಲೆ ನಿಂತಿರುವವು. ಕೂಡ್ರುವ ಸ್ಥಳದಲ್ಲಿ ಗಾದಿಯ ಬದಲು ಎರಡು ಸ್ಫೂಟು ಉದ್ದವು ೧½ ಸ್ಫೂಟು ಅಗಲವೂ ಒಂದು ಸ್ಫೂಟು ಪಿಂಡವೂ ಉಳ್ಳ ಹಲಿಗೆಗಲ್ಲುಂಟು. ಈ ಕಲ್ಲಿನ ಐತಿಹ್ಯವು ವಿಲಕ್ಷಣವಾದೆ. ಕ್ರಿಸ್ತ ಶಕದ ಪೂರ್ವದಲ್ಲಿ ಸುಮಾರು ೧೯೦೦–೨೦೦೦ ವರ್ಷಗಳ ಪೂರ್ವದಲ್ಲಿ ಜೇಕಬನೆಂಬ (ಯಾಕೋಬ) ಒಬ್ಬ ಪುರುಷನು ಪಾಲಸ್ತೈನಿನೊಳಗಿನ ಬೆತ್ಲೆಹೇವು ಗ್ರಾಮದಲ್ಲಿರುತ್ತಿದ್ದನು. ಅವನು ಒಂದು ದಿವಸ ಮನೆಯಿಂದ ಯಾವದೋ ಒಂದು ಕೆಲಸಕ್ಕಾಗಿ ಹೊರಗೆ ಹೋಗಿದ್ದನು. ಕೆಲಸ ತೀರಿಸಿಕೊಂಡು ಮನೆಗೆ ಬರುವಾಗ ಮಾರ್ಗದಲ್ಲಿಯೇ ಕತ್ತಲವಾದ್ದರಿಂದ ಅಲ್ಲೇ ಆ ಅಡವಿಯಲ್ಲಿಯೇ ಒಂದು ಕಲ್ಲನ್ನು ತಲೆಗಿಂಬು ಮಾಡಿಕೊಂಡು ನಿದ್ರಿಸಿದನು. ನಿದ್ದೆಯಲ್ಲಿ ಅವನಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ದೇವರು ಆಕಾಶದಿಂದ

ನಿಚ್ಚಣಿಕೆಯ ಮಾರ್ಗವಾಗಿ ಇಳಿದು ಬಂದು—ಎಲೈ ಜೇಕಬನೇ, ಈ ಪ್ರದೇಶವನ್ನು ನಿನಗೆ ಕೊಟ್ಟಿದ್ದೇನೆ. ನೀನು, ನಿನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮುಂತಾದ ತಲತಲಾಂತರದವರು ಇದನ್ನು ಆಳಿಕೊಂಡು, ಸುಖವಾಗಿ ಇರ್ರಿ, ಎಂದು ನುಡಿದಂತಾಯಿತು. ಆಗ ಜೇಕಬನು ಎಚ್ಚತ್ತು ನೋಡಲು, ಯಾವದೊಂದು ಕಾಣದೆ ಬರೇ ಬೈಲೇ ದೃಷ್ಟಿಗೋಚರವಾಯಿತು. ಆದರೂ ಆ ಸ್ವಪ್ನದಲ್ಲಿ ಶ್ರದ್ಧೆಯುಳ್ಳ ಜೇಕಬನು ತಲೆಗಿಂಬಿನ ಕಲ್ಲಿನಲ್ಲಿ ಮಹಾತ್ಮೆಯುಂಟೆಂದು ಬಗೆದು ಅದನ್ನು ಅಲ್ಲಿಯೇ ನಿಡಿಸಿ, ಅದರ ಮೇಲೆ ಒಂದು ಗುಡಿಯನ್ನು ಕಟ್ಟಿಸಿದನು. ಮುಂದೆ ಅವನ ಮಗನು ಅದನ್ನು ಇಜಿಪ್ತಕ್ಕೆ ಒಯ್ದನು. ಅಲ್ಲಿಂದ ಅದು ಬೇರೆ ಬೇರೆ ಜನಾಂಗದವರ ಕೈಸೇರುತ್ತ ಅಯರ್ಲಂಡವನ್ನು ಹೊಕ್ಕಿತು. ಆ ದೇಶದ ಅರಸನು ಅದಕ್ಕೆ ಕರ್ಮಗತಿಯು ಕಲ್ಲೆಂದು ಅನ್ನುತ್ತಿದ್ದನು. ಅಲ್ಲಿಂದ ಅದು ಸ್ಕಾಟಲಂಡವನ್ನು ಪ್ರವೇಶಿಸಿ, ಕಡೆಪಟ್ಟಿಲ್ಲಿ ೧೦ನೇ ಜೇಮ್ಸರಾಜನ ಕಾಲಕ್ಕೆ ಉಭಯ ರಾಷ್ಟ್ರಗಳ ರಾಜವಂಶವು ಒಂದಾದ್ದರಿಂದ ಇಂಗ್ಲಂಡದಲ್ಲಿ ಬಂತು. ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳುವ ಅರಸನು ಈ ಕಲ್ಲುಳ್ಳ ಖುರ್ಚಿಯ ಮೇಲೆ ಕೂಡಲು, ಕಲ್ಲು ಧ್ವನಿಗೆಯ್ಯುವದು. ಹೀಗೆ ಧ್ವನಿಗೆಯ್ದರೆ ಕೂತ ಅರಸನನ್ನು ಒಪ್ಪಿಕೊಂಡಂತಾಯಿತೆಂತಲೂ, ಧ್ವನಿಗೆಯ್ಯದಿದ್ದರೆ ಸಮ್ಮತಿಸಲಿಲ್ಲಿಂತಲೂ ತಿಳಿಯುತಕ್ಕ ಸಾಂಪ್ರದಾಯ ಉಂಟು. ಇರಲಿ.

ಬಳಿಕ ಧರ್ಮಾಧ್ಯಕ್ಷನು ಹೊಂಬಟ್ಟಲಲ್ಲಿ ಪವಿತ್ರವಾದ ಎಣ್ಣೆಯನ್ನು ತೆಗೆದುಕೊಂಡು ರಾಜನಿಗೆ ಅಭ್ಯಂಗಸ್ನಾನ ಮಾಡಿಸಿದನು. ನಮ್ಮ ದೇಶದಂತೆ ಪೂರ್ವದಲ್ಲಿ ಸರ್ವಾಂಗಸ್ನಾನವನ್ನೇ ಮಾಡಿಸುತ್ತಿರಬಹುದು. ಈಗ ಸಂಕ್ಷೇಪವಾಗಿ ಶಿರ, ಸ್ಕಂಧ, ವಕ್ಷ, ಇತ್ಯಾದಿ ಸ್ಥಳಗಳಲ್ಲಿ ಮಾತ್ರ ಎಣ್ಣೆಯನ್ನು ಹಚ್ಚುವದು. ತದನಂತರ ಆ ಕಾಲಕ್ಕೆ ಹಾಕಿಕೊಳ್ಳುವ ವೋಷಾಕಗಳನ್ನು ಬೇರೆ ಬೇರೆ ಘನವಂತರು ತೊಡಿಸಿದರು. ಶಸ್ತ್ರಧಾರಣ, ದಂಡಧಾರಣ ಮುಂತಾದ ಕೃತಿಗಳು ನಡೆದು ಕಡೆಯಲ್ಲಿ ತಲೆಯ ಮೇಲೆ ಮುಕುಟವನ್ನು ಇಟ್ಟ

ರು. ಆ ಕಾಲದಲ್ಲಿ ಮಂಗಲ ವಾದ್ಯಗಳೂ, ತೋಪುಗಳ ಸಪ್ಪಳವೂ, ಜನರ ಜಯಘೋಷವೂ ಬ್ರಹ್ಮಾಂಡವನ್ನು ತುಂಬಿದವು. ಈ ಕಾರ್ಯವನ್ನು ನಡೆಯಿಸುವ ಕಾಂತರ ಬರಿಯ ಧರ್ಮಾಧ್ಯಕ್ಷನಿಗೆ ಅತ್ಯಾನಂದದಿಂದ ಉನ್ಮಾದವಾ ಗಿ ಎಚ್ಚರದಪ್ಪಿತು. ಕಡೆಗೆ ಬಹು ಜನರು ಶೈತ್ಯೋಪಚಾರ ದಿಂದ ಉಪಚರಿಸಿದ ಬಳಿಕ ಚೇತರಿಸಿಕೊಂಡೆದ್ದು ಉಳಿದ ವಿಧಿಗಳನ್ನೆಲ್ಲ ಸಾಂಗೋಪಾಂಗವಾಗಿ ನೆರವೇರಿಸಿದನು. ಇಂ ಥ ಸುಯೋಗವು ಪ್ರಾಪ್ತವಾಗುವದು ಕಪಿಲಾಪಷ್ಠಿಯು ಯೋಗದಂತೆ ಇರುವದು. ಅಂಥ ಯೋಗವು ತನ್ನ ಬಾಳಿ ಯಲ್ಲಿ ಪ್ರಾಪ್ತವಾದದ್ದಕ್ಕಾಗಿ, ಅತ್ಯಾನಂದವಾಗುವದು ಸಹ ಜವು. ಬಳಿಕ ಮಹಾರಾಜರು ಧರ್ಮಾಧ್ಯಕ್ಷನ ಆಶೀರ್ವ ಚನವನ್ನು ತೆಗೆದುಕೊಂಡು ಪುನಃ ಪ್ರಾರ್ಥನೆಯನ್ನು ಮಾಡಿ ದರು. ಆ ಮೇಲೆ ಸಿದ್ಧ ಮಾಡಿದ ಸಿಂಹಾಸನವನ್ನೇರಿ ಕುಳಿ ತುಕೊಂಡರು. ಎಲ್ಲ ಜನರು ಕೈಮುಗಿದು ತಲೆಬೊಗ್ಗಿಸಿ ನಿಂತುಕೊಂಡು ತಮ್ಮ ಸೇವಕಭಾವವನ್ನು ವ್ಯಕ್ತಪಡಿಸಿದ ರು. ಬಳಿಕ ಮಹಾರಾಣಿಯವರಿಗೆ ಪಟ್ಟಾಭಿಷೇಚನವಾ ಯಿತು. ಇಷ್ಟು ಸಮಾರಂಭವಾಗಲಿಕ್ಕೆ ಸುಮಾರು ಒಂದು ಪ್ರಹರ ಕಾಲವು ಹಿಡಿಯಿತು. ಮೂರು ಘಂಟೆಗೆ ಸರಿಯಾಗಿ ಅಭಿಷಕ್ತರಾದ ದಂಪತಿಗಳು ರಾಜಚಿಹ್ನದೊಂದಿಗೆ ಅರಮನೆ ಗೆ ಬಂದು ಮುಟ್ಟಿದರು. ಬಳಿಕ ಭೋಜನ ದಕ್ಷಿಣೆಗಳ ಸಮಾರಂಭಗಳು ಆಯಾ ಸ್ಥಳಗಳಲ್ಲಿ ನಡೆದವು. ರಾತ್ರಿಯು ಲ್ಲಿ ನಗರದ ಎಲ್ಲ ಕಡೆಯಲ್ಲಿ ದೀಪೋತ್ಸವವು ನಡೆಯಿತು. ಮರುದಿವಸ ಮೂರನೆ ದಿವಸ ಸಮಾರಂಭಕ್ಕಾಗಿ ಬಂದ ಬೇರೆ ಬೇರೆ ಜನರನ್ನು ಆಪರಸತ್ಕಾರಗಳೊಂದಿಗೆ ಅಪ್ಪಣೆ ಕೊಟ್ಟು ಕಳುಹಿಸಿದರು. ನಮ್ಮ ದೇಶದಿಂದ ಹೋದ ಅರ ಸರಲ್ಲಿ ಜಯಪುರದ ಮಹಾರಾಜರು ಸುಮಾರು ಒಂದು ಲಕ್ಷ ರೂಪಾಯಿ ಬೆಲೆ ಬಾಳುವದೊಂದು ಕತ್ತಿಯನ್ನು ಸಾರ್ವ ಭೌಮರಿಗೆ ಕಾಣಿಕೆಯಾಗಿ ಕೊಟ್ಟರು.

ವಿಕ್ತೋರಿಯಾ ಮಹಾರಾಣಿಯವರ ಪಟ್ಟಾಭಿಷೇಕವಾಗಿ ಸುಮಾರು ಅರವತ್ತೆರಡು ವರ್ಷಗಳಾದವು. ಅದ್ದರಿಂದ

ಇಂಗ್ಲೆಂಡದಲ್ಲಿ ಈಗಿರುವ ಜನರಿಗೆ ಇದೇ ಮಹೋತ್ಸವವೇ ಹೊಸದಾಗಿರುವದು. ಹಾಗೂ ಈ ಕಾಲದಲ್ಲಿ ಬ್ರಿತಿಶ ರಾಜ್ಯದ ಘನತೆಯೂ ವೈಭವವೂ ವಿಸ್ತಾರವೂ ಪರಮಾವಧಿ ಬೆಳೆದಿರುವದರಿಂದ ಹಿಂದಿನ ಉತ್ಸವಗಳಿಗಿಂತ ಇದು ಹೆಚ್ಚು ವಿಜೃಂಭಣೆಯಿಂದ ನಡೆಯಿತು. ಮಹಾರಾಜರವರು ವಿಕ್ಟೋರಿಯಾ ಮಹಾರಾಣಿಯವರ ಗರ್ಭಸಂಭವರಾದ್ದರಿಂದ ಸುಶೀಲರೂ, ದಯಾವಂತರೂ ಇರುವರೆಂಬದಕ್ಕೆ ಸಂದೇಹವಿಲ್ಲ. ಪರಮಾತ್ಮನು ಈ ಮಹಾರಾಯರಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿ ಪ್ರಜಗಳಾದ ನಮ್ಮೆಲ್ಲರನ್ನು ನ್ಯಾಯದಿಂದ ಆಳುವ ಸಾಮರ್ಥ್ಯವನ್ನೂ, ಸದ್ಬುದ್ಧಿಯನ್ನೂ ಕೊಡಲಿ ಎಂದು ಅತನನ್ನು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಮೈಸೂರ ಮಹಾರಾಜರವರ ಪಟ್ಟಾಭಿಷೇಚವವು.

ಹೋದ ತಿಂಗಳ ೮ನೇ ತಾರೀಖಿನ ದಿವಸ ಶ್ರೀಮನ್ಮಹಾರಾಜಾಧಿರಾಜರಾದ ಮಹಿಸೂರ ಸಂಸ್ಥಾನದ ಪಾಲಕರಾದ ಚಾಮರಾಜ ಒಡೆಯರ ಗರ್ಭಸಂಜಾತರಾದ ಶ್ರೀಮತ್ ಕೃಷ್ಣರಾಜ ಒಡೆಯರಿಗೆ ಮೂರ್ಧಾಭಿಷೇಕವಾಯಿತು. ಇವರ ತಂದೆಗಳು ೧೮೬೭ರಲ್ಲಿ ಸ್ವರ್ಗಸ್ಥರಾದ ಬಳಿಕ ಮಹಾರಾಣಿಯವರಾದ ಪಾಣೀವಿಲಾಸಮ್ಮನವರು ರಾಜ್ಯಭಾರವನ್ನು ಮೂವ್ವರು ಮಂತ್ರಾಲೋಚಕರ ಸಹಾಯದಿಂದ ಸಾಗಿಸುತ್ತ ಬಂದಿದ್ದರು. ಆದರೆ ಮಹಾರಾಜ ಕೃಷ್ಣರಾಜ ಒಡೆಯರು ಹದಿನೆಂಟು ವರ್ಷದವರಾದ ಕಾರಣ ಸಾರ್ವಭೌಮರ ಪ್ರತಿನಿಧಿಗಳಾದ ಲಾರ್ಡ ಕರ್ಜನ್ ದೊರೆಗಳು ಮಹಿಸೂರ ಸಂಸ್ಥಾನದ ಆಡಳಿತದ ಅಧಿಕಾರವನ್ನು ಸಂಪೂರ್ಣವಾಗಿ ಸಂಸ್ಥಾನದ ಒಡೆಯರಿಗೆ ಒಪ್ಪಿಸಿಬಿಡುವದನ್ನು ನಿಶ್ಚಯಿಸಿದರು. ಅದರಂತೆ ಶ್ರಾವಣ ಶುದ್ಧ ೫ ಅಂದರೆ ಆಗಷ್ಟ ೮ನೇ ತಾರೀಖಿನ ದಿವಸವು ಈ ಸಮಾರಂಭಕ್ಕಾಗಿ ಗೊತ್ತು ಮಾಡಲ್ಪಟ್ಟಿತು. ಈಗ ೪।೫ ತಿಂಗಳಿಂದ ಈ ಉತ್ಸ

ವದ ಸಿದ್ಧತೆಯು ಒತ್ತರದಿಂದ ನಡೆದಿತ್ತು. ವೈಸರಾಯ ದೊರೆ ಗಳೂ ಮೈಸೂರಿಗೆ ದಯಮಾಡಿಸಿದ್ದರು.

ಕರ್ನಾಟಕದಲ್ಲಿ ಈ ರಾಜ್ಯವು ಬಹು ಪುರಾತನದಿಂದ ಹೆಸರಾಗಿರುವದರಿಂದ ಕರ್ನಾಟಕದೊಳಗಿನ ಹಲವು ಸಂಸ್ಥೆ ಗಳಿಗೆ ಈ ಸಂಸ್ಥಾನದ ಆಶ್ರಯವು ದೊರತಿರುವದು. ಪದ್ಮ ಸರೋವರದ ಸಭೆ, ಕರ್ನಾಟಕ ವಿದ್ಯಾವರ್ಧಕ ಸಂಘ (ಧಾರವಾಡ) ಎಲ್ಲ ಮತದ ಗುರುಮಠಗಳು, ಇತ್ಯಾದ್ಯನೇಕ ಚಿಕ್ಕ ದೊಡ್ಡ ಸಂಸ್ಥೆಗಳಿಗೆ ಈ ಸಂಸ್ಥಾನದಿಂದ ತರತರದ ಆಶ್ರಯಗಳು ಶಿಕ್ಕಿರುವವು. ಆದ್ದರಿಂದ ಕರ್ನಾಟಕದೊಳ ಗಿನ ಈ ಸಂಸ್ಥೆಗಳಿಂದಲೂ ಬೇರೆ ಸಂಸ್ಥೆಗಳಿಂದಲೂ ಕಟ್ಟಿ ಗೆ ಮುವ್ವತ್ತು ಮಾನಪತ್ರಗಳು ಕೊಡಲ್ಪಟ್ಟವು. ಎಪ್ಪತ್ತೇ ಮಂದಿ ಕನ್ನಡಿಗರಿಗೆ ಆಮಂತ್ರಣಪತ್ರಗಳು ಬಂದಿದ್ದವು.

ಮೈಸೂರ ಸಂಸ್ಥಾನದ ಪ್ರಸ್ತುತದ ದಿವಾನರಾದ ಮಹಾ ರಾಜ ಶ್ರೀಕೃಷ್ಣ ಮೂರ್ತಿಗಳು ಪ್ರಸಿದ್ಧ ಮುತ್ಸದ್ದಿಗಳಾದ ಪೂರ್ಣಯ್ಯನವರ ಮೊಮ್ಮಕ್ಕಳು. ಇವರೂ ರೆಸಿಡೆಂಟ ರೂ ಮೊದಲೇ ವಿಚಾರ ಮಾಡಿ ಈ ಮಹಾಕಾರ್ಯವು ಹೀಗೆ ಹೀಗೆ ನಡೆಯುತಕ್ಕದೆಂದು ಗೊತ್ತು ಮಾಡಿ ಅದರಂತೆ ವ್ಯವಸ್ಥೆಯನ್ನಿಟ್ಟಿದ್ದರು. ಎಂಟನೇ ಕಾರ್ಲಿಖಿಗಿಂತ ಮುನ್ನ ನೇ ಲಾರ್ಡ ಕರ್ಜನ್ ದೊರೆಗಳು ಮೈಸೂರಿಗೆ ಬಂದರು. ನುತ್ತು ಮಿಕ್ಕ ಆಮಂತ್ರಿತ ಜನರೂ ರಾಜಧಾನಿಯನ್ನು ನೇ ರಿದರು. ಅವರವರ ಯೋಗ್ಯತೆಯಂತೆ ಎದುರ್ಗೊಂಡು ಕರಕೊಂಡು ಬಂದು ತಕ್ಕ ಸ್ಥಳದಲ್ಲಿ ಇಳಿಸಿದರು. ಸಂಸ್ಥಾ ನದಿಂದ ಈ ಬಂದ ಜನರ ಸರ್ವ ಉಪಚಾರವು ಯಥಾ ಸಾಂಗವಾಗಿ ನಡೆಯುತ್ತಿತ್ತು. ಜಗನ್ಮೋಹನವೆಂಬ ರಾಜಾ ಲಯದಲ್ಲಿ ದರ್ಬಾರವನ್ನು ನೆರಿಸುವದು ಗೊತ್ತಾಗಿತ್ತು.

ಈ ಗೃಹದ ಶೃಂಗಾರವನ್ನು ವರ್ಣಿಸುವದು ಅಸಾಧ್ಯವು ಮೈಸೂರಲ್ಲಿರುವ ಯಾವತ್ತು ಗೃಹಗಳು ಮೆತ್ತಿ ಸಾರಿಸಿ ತೋರಣ ಪತಾಕೆಗಳಿಂದ ಸಿಂಗರಿಸಲ್ಪಟ್ಟಿದ್ದವು. ರಾಜಮಾ ರ್ಗಗಳೆಲ್ಲ ವಸ್ತ್ರಾಲಂಕಾರಗಳಿಂದಲೂ ಅಧಿಕಾರಚಿಹ್ನಗಳಿಂ ದಲೂ ಯುಕ್ತವಾದ ಜನಸಮೂಹದಿಂದ ತುಂಬಿಹೋಗಿದ

ವು. ಪೆರವಣಿಗೆಯು ಸಯಾಜೀರಾವರೋಡ ಲಕ್ಷ್ಮೀ ವಿಲಾಸರೋಡ ಎಂಬ ರಾಜಮಾರ್ಗಗಳಿಂದ ಸಾಗುವದೆಂ ದು ಮೊದಲೇ ಗೊತ್ತಿದ್ದರಿಂದ ಆ ಮಾರ್ಗಗಳೂ ಅವುಗಳ ಇಕ್ಕೆಲದ ಸೌಧಗಳೂ ಜನಸಮೂಹದಿಂದ ತುಂಬಿಹೋಗಿ ದ್ದವು. ಮೊದಲೇ ಗೊತ್ತಾದಂತೆ ಎಂಟನೇ ತಾರೀಖಿನ ದಿವ ಸ ೯ ಗಂಟೆಗೆ ಸಂಸ್ಥಾನದೊಳಗಿನ ಯಾವತ್ತೂ ಮುಲಖೀ ಮತ್ತು ಲಷ್ಕರೀ ಅಧಿಕಾರಿಗಳು ಜಗನ್ಮೋಹನ ಮಂದಿರದ ಲ್ಲಿ ತಮಗಾಗಿ ಗೊತ್ತು ಪಡಿಸಿದ ಸ್ಥಳದಲ್ಲಿ ಕುಳಿತುಕೊಂಡ ರು. ಮಹಾರಾಜರವರ ಅರಮನೆಯಿಂದ ದರ್ಬಾರ ಮಂ ದಿರದವರೆಗೆ ಸಂಸ್ಥಾನದ ಕಾಲಾಳೂ ರಾಹುತರೂ ಸಾಲಾಗಿ ನಿಂತಿದ್ದರು ಬ್ರಿತಿಶ ಸರಕಾರದ ದಂಡಾದರೂ ಮಹಾರಾ ಜರವರ ಸನ್ಮಾನಾರ್ಥವಾಗಿ ಮಂದಿರದ ಬಹಿರ್ಭಾಗದಲ್ಲಿ ವಾದ್ಯಪತಾಕೆಗಳಿಂದ ಸಜ್ಜಾಗಿ ನಿಂತುಕೊಂಡಿತ್ತು. ದಿವಾನ ರಾದ ಕೃಷ್ಣಮೂರ್ತಿಗಳೂ ಬೇರೆ ಮುವರು ದೊಡ್ಡ ಅಧಿ ಕಾರಿಗಳೂ ವೈಸರಾಯರ ಬಂಗಲೆಗೆ ಹೋಗಿ ಸಮಾರಂಭ ವನ್ನು ಸಾಂಗಗೊಳಿಸಲಿಕ್ಕೆ ತಮ್ಮ ಆಗಮನವಾಗಬೇಕೆಂದ ವಿನ್ನೈಸಿದರು. ಬಳಿಕ ಲಾರ್ಡ ಕರ್ಜನ್ ದೊರೆಗಳು ತಮ್ಮ ಪರಿಜನರೊಂದಿಗೆ ೯ ಘಂಟೆಗೆ ಸರಿಯಾಗಿ ಹೊರಟ ರು ಕೂಡಲೆ ೩೧ ತೋಪುಗಳು ಬಹುಮಾನಾರ್ಥವಾಗಿ ಹಾರಿಸಲ್ಪಟ್ಟವು. ಇತ್ತ ಮಹಾರಾಜರವರು ರೆಸಿಡೆಂಟರಿಂ ದಲೂ ಬೇರೆ ನಾಲ್ಕು ಪ್ರಸಿದ್ಧ ಗ್ರಹಸ್ಥರಿಂದಲೂ ಇತರ ಅಧಿ ಕಾರಿಗಳಿಂದಲೂ ಪರಿವೃತರಾಗಿ ಬಂದು ವೈಸರಾಯರನ್ನು ಕೂಡಿದರು ಬಳಿಕ ಈವರ್ರೂ ಈ ಕೆಳಗಿನ ಕ್ರಮದಿಂ ದ ರಾಜಮಂದಿರವನ್ನು ಪ್ರವೇಶಿಸಿದರು.

ಪರರಾಷ್ಟ್ರಗಳ ಸೆಕ್ರಟರಿಯ ಹಸ್ತಕನು.

ಪರರಾಷ್ಟ್ರಗಳ ಸೆಕ್ರಟರಿಯು—ರೆಸಿಡೆಂಟರು.

ವೈಸರಾಯರ ದೊರೆಗಳ ಅಧಿಕಾರಿಮಂಡಲವು—ಶ್ರೀಮನ್ಮಹಾರಾಜರವರು ಅಧಿಕಾರಮಂಡಲವು

ವೈಸರಾಯರ ದೊರೆಗಳು—ಶ್ರೀಮನ್ಮಹಾರಾಜರವರು.

ಈ ಕ್ರಮವಾಗಿ ಬ್ಯಾಂಡಿನ ನಾದಕ್ಕನುಸರಿಸಿ ನಡೆಯುತ್ತ ದರ್ಬಾರದ ಬಾಗಿಲಿಗೆ ಬಂದಕೂಡಲೆ ದಂಡಾಳುಗಳು ಸಲಾಮು ಮಾಡಿದರು ೫೧ ತೋಪುಗಳು ಹಾರಿಸಲ್ಪಟ್ಟವು. ಬಳಿಕ ಮಂದಿರವನ್ನು ಪ್ರವೇಶಿಸಲು ಎಲ್ಲರೂ ಎದ್ದುನಿಂತು ಸನ್ಮಾನ ಮಾಡಿದರು.

ಈ ಮಂದಿರದಲ್ಲಿ ಮೇಲ್ಬದಿಗೆ ಒಂದು ಜಗುಲಿಯನ್ನು ಮಾಡಿ ಅದನ್ನು ಸಿಂಗರಿಸಿ ಅದರ ಮೇಲೆ ೫೦ ಸಾವಿರ ರೂಪಾಯಿ ಬೆಲೆ ಬಾಳುವ ೫೦ ಖುರ್ಚಿಗಳನ್ನು ಇಟ್ಟಿದ್ದರು. ಜಗುಲಿಗೆ ಹೊಂದಿ ಕೆಲವು ಖುರ್ಚಿಗಳು ಮುಂಬೆ ಎಲ್ಲ ಜನರು ಕೂಡುವದಕ್ಕಾಗಿ ಅನೇಕ ಖುರ್ಚಿಗಳು ಮಂಡಿಸಿದ್ದವು. ಎಡಬಲದಲ್ಲಿ ಗ್ಯಾಲರಿಗಳಿರುವವು. ಹೆಣ್ಣುಮಕ್ಕಳಿಗಾಗಿ ತೆರೆಯ ಮರೆಯಲ್ಲಿ ಸ್ಥಳವು ಗೊತ್ತುಪಡಿಸಿತ್ತು. ಇವೆಲ್ಲ ಸ್ಥಳದಲ್ಲಿ ಮೊದಲೇ ಎಲ್ಲರೂ ಬಂದು ತಮ್ಮ ತಮ್ಮ ಮಾನಾನುಸಾರವಾಗಿ ಕುಳಿತುಕೊಂಡಿದ್ದರು. ಮುಂಭಾಗದ ಒಂದು ಖುರ್ಚಿಯ ಮೇಲೆ ವೈಸರಾಯರು ಕುಳಿತರು ಅವರ ಬಲಗಡೆಗೆ ಮಹಾರಾಜರು ವಿರಾಜಮಾನರಾದರು. ರೆಸಿಡೆಂಟರು ಮೊದಲಾದ ಅಧಿಕಾರಿಗಳೂ ತಮ್ಮ ತಮ್ಮ ಸ್ಥಳದಲ್ಲಿ ಕುಳಿತ ಬಳಿಕ ಪದರಾಷ್ಟ್ರಗಳ ಸೆಕ್ರಟರಿಯು ಎದ್ದು ಬಂದು ವೈಸರಾಯನ ಬಳಿಯಲ್ಲಿ ಕಾಲು ಜೋಡಿಸಿ ತಲೆ ಬಾಗಿಸಿಕೊಂಡು ನಿಂತು ಸಭಾಕಾರ್ಯವನ್ನು ಆರಂಭಿಸಲಿಕ್ಕೆ ಅಪ್ಪಣೆಯನ್ನು ದಯಪಾಲಿಸಬೇಕೆಂದು ವಿನಂತೀ ಮಾಡಿಕೊಂಡನು. ಬಳಿಕ ವೈಸರಾಯರು ದೊರೆಗಳು ಎದ್ದುನಿಂತು ಮಹಾರಾಜರವರನ್ನು ಉದ್ದೇಶಿಸಿ ನುಡಿದದ್ದೇನೆಂದರೆ—ಮಹಾರಾಜರೇ! ಈ ನಿಮ್ಮ ಸಂಸ್ಥಾನವು ಕರ್ನಾಟಕದಲ್ಲಿ ಬಹು ಪುರಾತನದಿಂದ ಪ್ರಸಿದ್ಧವಾಗಿರುವದು. ಇದು ನಡುವೆ ಕೆಲವು ದಿವಸ ಅನ್ಯರ ಕೈಸೇರಿತ್ತು. ಬ್ರಿತಿಶ ಸರಕಾರದವರು ಆ ಅನ್ಯರ ಕೈಯಿಂದ ಕಸುಕೊಂಡು ಮತ್ತೆ ಮೊದಲಿನವರಾದ ನಿಮ್ಮ ವಂಶದವರ ಅಧೀನಕ್ಕೆ ಕೊಟ್ಟರು. ಈ ಕಾರ್ಯದ ಶ್ರೇಯವು ಬ್ರಿತಿಶ ಜನರಿಗೆ ಬಹು ಸಮಾಧಾನವನ್ನೂ ಗೌರವವನ್ನೂ ಒದಗಿಸಿಕೊಟ್ಟಿದೆ, ನಿಮ್ಮ ಹಿರಿಯರು

ಸ್ಥಾನವನ್ನು ಹ್ಯಾಗೆ ಆಳಿದರು? ಸಾರ್ವಭೌಮರೊಡನೆ ಹ್ಯಾಗೆ ನಡೆದುಕೊಂಡರು? ಎಂಬುದನ್ನು ನಾನು ಒಡನುಡಿಯುವ ಕಾರಣವಿಲ್ಲ ಯಾಕಂದರೆ ಅದು ಈ ಸಭೆಯಲ್ಲಿ ಕುಳಿತ ಯಾವತ್ತರಿಗೂ ವಿದಿತವಾದ ಸಂಗತಿಯಾಗಿರುವದು ಅವರು ಗತಿಸಿಹೋದಾಗ ನೀವು ಸಣ್ಣವರಿದ್ದಿರಿ. ಸಂಸ್ಥಾನವನ್ನು ಯಾರ ಕೈಯಲ್ಲಿ ಕೊಡಬೇಕೆಂದು ಆಲೋಚಿಸಲು ನಿಮ್ಮ ಮಾತೋಶ್ರೀಗಳಾದ ಮಹಾರಾಣಿಯವರ ಕೈಯಲ್ಲಿ ಕೊಡುವದೇ ಹೆಚ್ಚು ಶ್ರೇಯಸ್ಕರವೆಂದು ತೋರಿದ್ದರಿಂದ ಹಾಗೇ ಮಾಡಲ್ಪಟ್ಟಿತು. ಈಗ ಎಂಟು ವರ್ಷದ ಮಹಾರಾಣಿಯವರ ಆಳಿಕೆಯಿಂದ ಮಹಾರಾಣಿಯವರ ಕಾರ್ಯಭಾರದಕ್ಷತೆ, ಸೌಜನ್ಯ, ಚಾತುರ್ಯ ಮುಂತಾದ ಮುತ್ಸದ್ದಿತನದ ಗುಣಗಳು ಜಗಜ್ಜಾಹೀರಾಗಿ ತೋರಿಬಂದಿರುವವು ಅದರಿಂದ ನನಗೆ ಪರಮಾವಧಿ ಆನಂದವೂ ಮಹಾರಾಣಿಯವರ ಕರ್ತೃತ್ವಕ್ಕಾಗಿ ಅಭಿಮಾನವೂ ಉಂಟಾಗಿದೆ. ಈ ಅನುಕರಣೀಯ ಗುಣಗಳ ಜ್ಞಾಪನೆಗಾಗಿ ಮಹಾರಾಣಿಯವರಿಗೆ ಅವರ ಅವಸಾನಕಾಲದ ವರೆಗೆ ೧೯ ತೋಪುಗಳ ಬಹುಮಾನವನ್ನು ನಡಿಯತಕ್ಕದ್ದೆಂದು ಬಾದಶಹರು ನನಗೆ ಆಜ್ಞಾಪತ್ರವನ್ನು ಕಳುಹಿಸಿದ್ದಾರೆ. ನೀವು ವಿದ್ಯೆಯನ್ನು ಚೆನ್ನಾಗಿ ಕಲಿತು ಸುಶಿಕ್ಷಿತರಾಗಿರುವಿರಿ. ನಿಮ್ಮ ಶಿಕ್ಷಕರು ನಿಮ್ಮ ಗುಣಗಳನ್ನು ಕೊಂಡಾಡುವರು ಸರಿ. ಆದರೆ ನೀವು ಇನ್ನು ದೊಡ್ಡದೊಂದು ಸಂಸ್ಥಾನದ ಕಾರಭಾರವನ್ನು ಕೈಕೊಳ್ಳಬೇಕಾಗಿದೆ. ಆದ್ದರಿಂದ ನಿಮ್ಮ ಸ್ವಂತಕ್ಕಾಗಿ ಕೆಲವು ಮಾತುಗಳನ್ನು ಹೇಳುವದು ಅವಶ್ಯವಾಗಿದೆ. ಅರಸನು ವ್ಯಾಖ್ಯಾನುಗಳನ್ನು ಕೇಳುವದರಿಂದ ನ್ಯಾಯವಂತನೂ ಸದಾಚಾರಿಯೂ ಆಗಲಾರನು. ಶಿಕ್ಷಣವೂ ವೃದ್ಧರ (ಜ್ಞಾನ) ಅನುಭವಗ್ರಹಣವೂ ಅತ್ಯುಪಯುಕ್ತವಾಗಿರುವವು. ಈಗ ನೀವು ಕೈಕೊಳ್ಳುವ ಕೆಲಸದಲ್ಲಿ ಲೋಕಕ್ಕೆ ಹಿತವಾಡುವ ಪ್ರಸಂಗಗಳು ಅನೇಕ ಉಂಟು. ಲಕ್ಷ್ಯಗಟ್ಟಿಲೆ ಜನರ ಹಿತಾಹಿತಗಳು ನಿಮ್ಮ ಕೈಯಲ್ಲಿರುವವು. ಆದ್ದರಿಂದ ನೀವು ಒಳ್ಳೇ ಜಾಗ್ರತೆಯಿಂದ ಕಾರ್ಯಭಾರವನ್ನು ಸಾಗಿಸಿರಿ. ನ್ಯಾಯಕ್ಕೆ, ಪ್ರಜೆಗಳ

ಬಲಿಯುವರೆಂಬ ತತ್ವವನ್ನು ನೆರೆನಂಬಿರಿ. ಅನ್ಯಾಯಪ್ರಕ
ರ್ತನವು ಪ್ರಜೆಗಳಲ್ಲಿ ಅಸಂತೋಷವನ್ನೂ ಔದಾಶೀನ್ಯವ
ನ್ನೂ ಹುಟ್ಟಿಸುತ್ತದೆಂಬ ಮಾತನ್ನು ಮರೆಯಬೇಡಿರಿ. ನಿಮ್ಮ
ನ್ನು ಈಗ ಸಿಂಹಾಸನಾರೂಢರನ್ನಾಗಿ ಮಾಡುವದು ಕೇವಲ
ನಿಮ್ಮ ಹಿತಕ್ಕಲ್ಲ ಲಕ್ಷಾವಧಿ ಪ್ರಜೆಗಳ ಹಿತಕ್ಕೆಂಬದನ್ನು
ಧ್ಯಾನದಲ್ಲಿಡಿರಿ. ನೀವು ಕರ್ತವ್ಯದಕ್ಷರಾಗಿ ಪ್ರಜಾಪರಿಪಾ
ಲನೆಯನ್ನು ನಡಿಸಿದರೆ ನಿಮ್ಮ ಹೆಸರು ಚಿರಕಾಲ ನಿಲ್ಲುವ
ದು. ಇಲ್ಲವಾದರೆ ನೀರಮೇಲೆ ಬರೆದ ಅಕ್ಷರಗಳಂತೆ ಇಲ್ಲ
ದಂತಾಗುವದು ಆದ್ದರಿಂದ ನಾನು ನಿಮಗೆ ಆಗ್ರಹಪೂರ್ವಕ
ವಾಗಿ ಬೋಧಿಸುವದೇನೆಂದರೆ ಕಾರ್ಯಭಾರದಲ್ಲಿ ಚೆನ್ನಾಗಿ
ಲಕ್ಷ್ಯಗೊಟ್ಟು ನ್ಯಾಯತತ್ವವನ್ನು ಅನುಸರಿಸಿ ಧೈರ್ಯದಿಂ
ದ ಕೆಲಸವನ್ನು ನಡಿಸಿರಿ. ಬಡವರಲ್ಲಿ ದಯವನ್ನೂ ಸರ್ವ
ರಲ್ಲಿ ಆದರವನ್ನೂ ತೋರಿಸಿರಿ. ಈ ಜಗದಲ್ಲಿ ೫೦ ವರ್ಷ
ಬಾಳುತ್ತೇನೆಂದು ಒಳ್ಳೇ ಕೆಲಸಗಳನ್ನು ಹಿಂದೆ ಹಾಕಬೇಡ
ರಿ, ಐದೇ ವರ್ಷ ಬಾಳುತ್ತೇನೆಂದು ಬಗೆದು ಅದಷ್ಟು
ಚಲೋ ಕೆಲಸಗಳನ್ನು ನಿರಾಲಸ್ಯದಿಂದ ಮಾಡಿರಿ. ಸಾರಾಂ
ಶ ಪ್ರಜಾಕಲ್ಯಾಣದ ಕಾಲವನ್ನು ವ್ಯರ್ಥವಾಗಿ ಹೋಗಗೊ
ಡದೆ ಪ್ರಜಾಪಾಲನ ಪುಣ್ಯವನ್ನು ಗಳಿಸಿಕೊಳ್ಳಿರಿ. ಇ ಇ.
ಈ ಭಾಷಣ ಸಮಯದಲ್ಲಿ ಎಲ್ಲ ಜನರು ಎದ್ದು ನಿಂತಿದ್ದರು.
ಭಾಷಣವಾದ ಬಳಿಕ ವೈಸರಾಯರು ಸ್ವತಃ ಮಹಾರಾಜರ
ನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಆಗ ಪ್ರೇಕ್ಷಕ
ರೆಲ್ಲರೂ ಆನಂದಬಾಷ್ಪಗಳನ್ನು ಉದರಿಸಿದರು. ಬಳಿಕ
ಫಾರೆನ್ ಸೆಕ್ರಟರಿಯವರು "ಹಿಜ್ ಹೈನೆಸ್ ದಿ ಮಹಾರಾ
ಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ ಆಫ್ ಮೈಸೂ
ರ" ಎಂಬ ಮಹಾರಾಜರವರ ಪೂರ್ಣ ಬಿರುದನ್ನು ಒಕ್ಕಣಿ
ಸಿದರು. ಹಾಗೂ ಇಂದಿನಿಂದ ಈ ಸಂಸ್ಥಾನದ ಸರ್ವಾಧಿ
ಕಾರವನ್ನು ಮಹಾರಾಜರವರಿಗೆ ಒಪ್ಪಿಸಿರುತ್ತೇವೆಂದು ಸಾರಿ
ದರು.

ಈ ಸಮಯದಲ್ಲಿ ೨೧ ತೋಪುಗಳು ಬಹು ಮಾನಾರ್ಥ
ವಾಗಿ ಹಾರಿಸಲ್ಪಟ್ಟವು. ಬ್ಯಾಂಡಿನಲ್ಲಿ ಮೈಸೂರ ರಾಷ್ಟ್ರೀ

ಯು ಗೀತವು ಹಾಡಲ್ಪಟ್ಟಿತು. ಬಳಿಕ ಉಡುಗೋರೆ ಕೊಡುವ ಸಮಾರಂಭವು ನಡೆಯಿತು. ಮೊದಲು ವೈಸರಾಯರವರ ಉಡುಗೋರೆಯು ಕೊಡಲ್ಪಟ್ಟಿತು. ಬಳಿಕ ಉಳಿದವರು ಉಡುಗೋರೆಗಳನ್ನು ಕಾಣಿಕೆಯನ್ನು ಅರ್ಪಿಸಿದರು. ಇಷ್ಟಾದ ಬಳಿಕ ಮಹಾರಾಜರು ಎದ್ದುನಿಂತು—ಸಾರ್ವಭೌಮರ ಪ್ರತಿನಿಧಿಗಳೇ ಮಿಕ್ಕ ಸದ್ಗೃಹಸ್ಥರೇ ಈ ಹೊತ್ತು ನಾನು ದಯಾಲುಗಳಾದ ಏಳನೇ ಎಡ್ವರ್ಡ್ ಬಾದಶಹರ ದಯೆಯಿಂದಲೂ ಪ್ರತಿನಿಧಿಗಳ ಸಹಾಯದಿಂದಲೂ ನನ್ನ ಸಂಸ್ಥಾನದ ಕಾರಭಾರವನ್ನು ಕೈಕೊಂಡೆನು. ಆದರೆ ಈ ಕಾರ್ಯವು ಬಹು ಕಠಿಣವಾದದ್ದು. ಆದರೂ ನಮ್ಮ ಅಯ್ಯನವರು ಅಮ್ಮನವರು ಹಾಕಿಕೊಟ್ಟ ಮಾದರಿಯನ್ನು ಕೈಲಾದ ಮಟ್ಟಿಗೆ ಅನುಸರಿಸಿ ಪ್ರಜಾಪಾಲನೆ ಮಾಡಬೇಕೆಂದು ಮನಸ್ಸಲ್ಲಿ ನಿಶ್ಚಯಿಸಿದ್ದೇನೆ ದೇವರು ಇದಕ್ಕೆ ಅನುಕೂಲವಾಗಬೇಕು. ಪ್ರತಿನಿಧಿಗಳ ಉಪದೇಶವು ಬಹು ಬೆಲೆಯುಳ್ಳದ್ದು ಅದನ್ನು ನಾನು ಚಿರಕಾಲ ಮನದಲ್ಲಿ ಇಟ್ಟುಕೊಳ್ಳುವೆನು. ಆದರೆ ನನಗೆ ಚಿಕ್ಕಂದಿನಲ್ಲಿ ವಿದ್ಯೆಯನ್ನು ಕಲಿಸಿದ ಶಿಕ್ಷಕರಾದ ಮೆ. ಫ್ರೇಜರ ಸಾಹೆಬರವರ ಉಪಕಾರವನ್ನು ರೆಸಿಡೆಂಟರಾದ ಮೆ. ರಾಬರ್ಟಸನ್ ಸಾಹೇಬರ ಉಪಕೃತಿಯನ್ನು ಮರೆಯಲಾರೆನು. ಎಡ್ವರ್ಡ್ ಬಾದಶಹರು ನಮ್ಮ ಸಾರ್ವಭೌಮರಾದ್ದರಿಂದ ಅವರಲ್ಲಿ ನಾವು ಭಕ್ತಿಯನ್ನು ಇಡುವದು ಅವಶ್ಯವು. ಈ ಹೊತ್ತಿನ ಶುಭಕಾರ್ಯಕ್ಕಾಗಿ ಪ್ರತಿನಿಧಿಗಳ ಉಪಕಾರವನ್ನು ಸ್ಮರಿಸಿ ಕಾಲಕಾಲಕ್ಕೆ ಕಾರ್ಯಭಾರದಲ್ಲಿ ಉಪದೇಶಿಸುತ್ತ ಮೈಸೂರ ಪ್ರಜೆಗಳ ಕಲ್ಯಾಣವನ್ನು ನನ್ನ ಕೈಯಿಂದ ಮಾಡಿಸುವರೆಂದು ನಂಬುತ್ತೇನೆ. ಇ. ಇ ಈ ಹೊತ್ತಿಗೆ ವೈಸರಾಯರ ಹೊರತು ಎಲ್ಲರೂ ಎದ್ದುನಿಂತಿದ್ದರು.

ಈ ಭಾಷಣವು ಮುಗಿದ ಬಳಿಕ ದರ್ಬಾರದಿಂದ ಕೊಡಲ್ಪಡುವ ವಾಡಿಕೆಯ ನಜರಾಣಿಯು ಪ್ರತಿನಿಧಿಯವರಿಗೆ ರೆಸಿಡೆಂಟರ ಮುಖಾಂತರವಾಗಿ ಕೊಡಲ್ಪಟ್ಟಿತು. ಆ ಮೇಲೆ ತಾಂಬೂಲ ಗಂಧದ್ರವ್ಯಗಳನ್ನು ಎಲ್ಲರಿಗೂ ಕೊಟ್ಟು ಬಳಿಕ

ಫಾರೆನ್ ಸೆಕ್ರೆಟರಿಯು ದರ್ಬಾರಿನ ಕಾರ್ಯವು ಮುಗಿಯಿತೆಂದು ಹೇಳಿದನು. ಕೂಡಲೆ ಪ್ರತಿನಿಧಿಗಳೂ ಮಹಾರಾಜರೂ ಎದ್ದು ತಮ್ಮ ತಮ್ಮ ರಥದಲ್ಲಿ ಕುಳಿತುಕೊಂಡು ಮೊದಲಿನ ಕ್ರಮದಂತೆ ತೋಪುಗಳ ಬಹುಮಾನದೊಂದಿಗೆ ಸ್ವಸ್ಥಳಕ್ಕೆ ಬಿಜಯಂಗೈದರು.

ರಾಜ್ಯಾರೋಹಣದ ಸಂಬಂಧದಿಂದ ಮಾಡಬೇಕಾದ ಬಂಧವಿಮೋಚನೆ, ಹೋಮಹವನ, ಅನ್ನಸಂತರ್ಪಣ, ದಕ್ಷಿಣಾದಾನ, ದೀಪೋತ್ಸವ ಮುಂತಾದ ಸಕಲ ಶುಭಕಾರ್ಯಗಳು ಕಾಲಕಾಲಕ್ಕೆ ಯೋಗ್ಯವಾಗಿ ನಡೆದವು. ಮಹಾರಾಜರವರು ಆಮಂತ್ರಿತ ಜನರಿಗೆ ಅವರವರ ಯೋಗ್ಯತೆಯಂತೆ ವಸ್ತ್ರ ಪಾತ್ರಗಳಿಂದ ಸತ್ಕರಿಸಿ ಬೀಳ್ಕೊಟ್ಟರು. ಸಾರಾಂಶ, ಈ ಸಮಾರಂಭವು ಬಹು ಪ್ರೇಕ್ಷಣೀಯವಾಯಿತೆಂದು ಹೇಳಬಹುದು.

ಕೃಷಿಶಾಸ್ತ್ರವು.

(ಇತ್ತೀಚೆ ಪುಟದಿಂದ ಮುಂದೆ ಸಾಗಿದ್ದು.)

ಮೊದಲನೇ ಭೇದವು—ಮೇಲಥರದ ಮಣ್ಣಿನಲ್ಲಿ ಉಪಥರದ ಮಣ್ಣಿಗಿಂತ ಹೆಚ್ಚು ಸೇಂದ್ರಿಯ ಪದಾರ್ಥವು ಬೆರತಿರುತ್ತದೆ.

ಎರಡನೇ ಭೇದವು—ಮೇಲಥರದ ಮಣ್ಣಿನ ಕಣಗಳು ಹೆಚ್ಚು ಸೂಕ್ಷ್ಮವಾದವುಗಳಿದ್ದು ಹೆಚ್ಚು ಪೃಥಕ್ಕರಣ ಹೊಂದಿರುತ್ತವೆ.

ಉಪಥರವು—ಮಣ್ಣು ವರ್ಗದಲ್ಲಿ ಬೇರೆ ಇರುವದಲ್ಲದೆ ಹೆಚ್ಚು ಗಟ್ಟಿಯಾದದ್ದು ಇರುತ್ತವೆ. ಈ ಉಪಥರದ ಕೆಳಗೆ ಹೆಚ್ಚಿಗೆ ಅಗಿಯಲಾಗಿ ಕೆಳಗಿನ ಬಂಡೆಗಳ ಥರವು ಸಿಗುತ್ತದೆ. ಮತ್ತು ವಿಶೇಷ ಸ್ಥಳಗಳಲ್ಲಿ ಮೇಲಥರದಲ್ಲಿ ಕಲ್ಲುಗಳು, ಉಪಥರದ ಕಲ್ಲುಗಳು, ಈ ಬಂಡೆಯು ಒಡೆದು ಅದರ ಭಾಗಗಳು ಉದರಿರುವದರಿಂದಲೇ ಆಗಿರುತ್ತವೆಂದು ವಿದಿತವಾಗುತ್ತದೆ.

ಶಿಲೋತ್ಪಾದಕ ಖನಿಜಗಳು.

ಬೆಣಚುಕಲ್ಲು (ಕ್ವಾರ್ಟ್ಜ)—ಸಿಲಿಕಾ ಅಥವಾ ಸಿಲಿಕಾನ್ ಡಾಯೊಕ್ಸಾಯಿಡ ಇದು ಸಿಲಿಕಾನ ಹಾಗು ಆಕ್ಸಿಜನ (ಪ್ರಾಣ ವಾಯು) ಇವುಗಳ ರಸಾಯನಮಿಶ್ರಣದಿಂದುಂಟಾಗಿರುತ್ತದೆ. ಇದು ಭೂಪೃಷ್ಟದ ಮೇಲೆ ಅತಿ ವಿಪುಲತೆಯಿಂದ ಸಿಗುವ ಖನಿಜವು, ಇದು ಅರು ಬದಿಗಳುಳ್ಳ ಬಹು ಕಠಿಣ ಹಾಗು ಕಾಜಿನ ಹಾಗೆ ನುಣುಪಾದ ಹಳಕಿನ ರೂಪದಿಂದಲೂ, ಬೆಣಚಕಲ್ಲಿನ ಅಡ್ಡತಿಡ್ಡಾಗಿದ್ದ ಗುಂಡಿನ ಅಥವಾ ಉಸುಬಿನ ಬಿಡಿಯಾದ ಸಣ್ಣ ಕಣಗಳ ರೂಪದಿಂದಲೂ ಇರುವದು ಕಂಡುಬರುತ್ತದೆ.

ಫೆಲ್‌ಸ್ಪಾರ—ಇದು ಬೇರೆ ಬೇರೆ ಪ್ರಮಾಣದಿಂದ ಪೊಟ್ಯಾಶ್, ಸೋಡಾ ಅಥವಾ ಸುಣ್ಣ ಇವುಗಳಿಂದ ಮಿಶ್ರಿತವಾದ ಅಲ್ಯುಮಿನಿಯಮದ ಸಿಲಿಕೇಟವು ಈ ಮಿಶ್ರಣದಲ್ಲಿ ಪೊಟ್ಯಾಶದ ಪ್ರಮಾಣವು ಹೆಚ್ಚಿದ್ದಾಗ್ಗೆ ಅದಕ್ಕೆ ಆರ್ಥೊಕ್ಲೆಸ (orthoclase) ಅಥವಾ ಪೊಟ್ಯಾಶ ಫೆಲ್‌ಸ್ಪಾರ ಎಂತಲೂ, ಸೋಡಾದ ಪ್ರಮಾಣವು ಹೆಚ್ಚಿದ್ದಾಗೆ ಅಲ್ಬಾಯಿಟ (Albite) ಅಥವಾ ಓಲಿಗೊಕ್ಲೇಸ (oleggoclase) ಎಂತಲೂ, ಸುಣ್ಣದ ಪ್ರಮಾಣವು ಅಧಿಕವಿದ್ದಾಗ್ಗೆ ಲ್ಯಾಬ್ರಾಡೊರಾಯಿಟ (Labradorite) ಎಂತಲೂ ಅನ್ನುತ್ತಾರೆ. ಫೆಲ್‌ಸ್ಪಾರದ ಮೂಲತತ್ವಗಳ ಹೈಥಕ್ಕರಣದಿಂದ ಜೆಗಟು ಮಣ್ಣು ಆಗುತ್ತದೆ.

ಅಭ್ರಕ—ಇದರ ಬೇರೆ ಬೇರೆ ತರಗೆಳುಂಟು. ಇದು ಪೊಟ್ಯಾಶ, ಮಾಗ್ನೇಶಿಯಾ, ಸುಣ್ಣ, ಕಬ್ಬಿಣದ ಭಸ್ಮ ಹಾಗು ಮೊಹಮಂಡೂರ (Manganre) ಇವುಗಳಿಂದ ರಸಾಯನಮಿಶ್ರಣ ಹೊಂದಿದ ಅಲ್ಯುಮಿನಿಯಮದ ಸಿಲಿಕೇಟವು. ಇದರ ಹೊಳೆಯುವ ತೆಳ್ಳನ್ನೆ ಪದರುಗಳು ಸುಲಭವಾಗಿ ಬಿಡಿಸಲಿಕ್ಕೆ ಬರುತ್ತವೆ. ಇದು ಹಳಹಳಕಾದ ಬಹಳ ಬಂಡೆಗಲ್ಲುಗಳಲ್ಲಿಯೂ, ಸ್ಲೇಟುಗಳಲ್ಲಿಯೂ, ಪದರುಕಲ್ಲುಗಳಲ್ಲಿಯೂ, ಅಭ್ರಕದ ಉಸುಬು ಹಾಗು ಉಸುಬಿನ ಕಲ್ಲುಗಳಲ್ಲಿಯೂ ಸಿಗುತ್ತದೆ.

ಆಂಫಿಬೋಲಿ—ಹಾರ್ನ್‌ಬೆಂಡಿ (Hornblende) ಎಂಬುವದೆ ಇದರ ಮುಖ್ಯ ಪ್ರಕಾರವು. ಇದು ಕಬ್ಬಿಣದ ಭಸ್ಮ ಹಾಗು ಮಾಂಗೇನೀಜ ಇವುಗಳಿಂದ ರಸಾಯನ ಮಿಶ್ರಣ ಹೊಂದಿದ ಸುಣ್ಣ ಹಾಗೂ ಮ್ಯಾಗ್ನೇಸಿಯದ ಸಿಲಿಕೇಟವು. ಇದರ ಕಪ್ಪು ಅಥವಾ ಕಪ್ಪು ಹಸರು ಬಣ್ಣದ ಹಳಕುಗಳು ಭೂಮಿಯಲ್ಲಿ ವಿರಲವಾಗಿರುತ್ತವೆ. ಟ್ರ್ಯಾಪ ಎಂಬ ಕಲ್ಲಿನ ಬಂಡೆಗಳಲ್ಲಿ ಇವು ವಿಶೇಷವಾಗಿ ಇರುತ್ತವೆ.

ಆಗಾಯಿಟ (Augite) ಇದು ಪ್ರಕೃತಿಗುಣಗಳಿಂದಲೂ ಮಿಶ್ರತೆಯಿಂದಲೂ ಹಾರ್ನ್‌ಬ್ಲೆಂಡಿಗೆ ಸರಿಯಾಗಿರುತ್ತದೆ.

ಮ್ಯಾಗ್ನೆಟಾಯಿಟ—ಸೂಜಿಕಾಂತ ಸಂಬಂಧದ ಕಬ್ಬಿಣ. ಇದು ಗುಂಪುಗುಂಪಾಗಿ ಅಥವಾ ಕೃಪ ಶಿಲೆಗಳಲ್ಲಿ (Basoltic Rocles) ಸಣ್ಣ ಕಣಗಳ ರೂಪದಿಂದ ಹೇರಳವಾಗಿ ಸಿಗುತ್ತದೆ.

ಪೈರಾಯಿಟ್ಸ—ಸಲ್ಫಾಯಿಡ ಆಫ್ ಆಯರ್ನ್- (ಹಿರ್ಮೆ ಕಸ)?—ಇದು ಹೇರಳವಾಗಿದ್ದಲ್ಲಿ ಸಸ್ಯಾದಿಗಳ ಬೆಳೆಗೆ ವಿಷದಂತೆ ಹಾನಿಕರವಾಗಿದೆ.

ಕ್ಯಾಲಿನೆ—ಇದು ಶುದ್ಧ ಜೇಡಿಮಣ್ಣಿದ್ದು ಅಲ್ಯುಮಿನದ ಆರ್ದ್ರಸಿಲಿಕೇಟು, ಕಾರ್ಬೊನಿಕ ಆಸಿಡ (ಅಂಗಾರದ್ರವ್ಯಕ) ಹಾಗು ನೀರು ಇವುಗಳ ಸಂಯುಕ್ತಕ್ರಿಯೆಯಿಂದ ಫೆಲ್‌ಸ್ಪಾರನ ಮೂಲತತ್ವಗಳು ಪೃಥಕ್ಕರಣ ಹೊಂದಿ ಇದು ಉಂಟಾಗಿರುತ್ತದೆ.

ಆಲಿಹ್ವಾಯಿನ ಅಥವಾ ಪೆರಿಡೋಟ—ಇದು ಕಬ್ಬಿಣ ಹಾಗು ಮ್ಯಾಗ್ನೇಸಿಯದ ಸಿಲಿಕೇಟು ಹಸರು ಹಳಕುಗಳ ರೂಪದಿಂದ ಕೃಷ್ಣಶಿಲೆಗಳಲ್ಲಿ ಮುಖ್ಯವಾಗಿ ಶಿಗುತ್ತದೆ.

ಸರ್ಪೆಂಟಾಯಿನ—ಇದು ಮ್ಯಾಗ್ನೇಸಿಯದ ಆರ್ದ್ರಸಿಲಿಕೇಟು ಇದು ಫಟ್ಟಿಯಾಗಿದ್ದು ಹೇರಳವಾಗಿ ಗುಂಪುಗುಂಪಾಗಿ ಸಿಗುತ್ತದೆ. ಇದು ಆಲಿಹ್ವಾಯಿನದ ಮೂಲತತ್ವಗಳು ಅಂಶತಃ ಪೃಥಕ್ಕರಣ ಹೊಂದುವದರಿಂದ ಅಥವಾ ಮ್ಯಾಗ್ನೇಸಿಯದ ಸಿಲಿಕೇಟಿನಿಂದ ಆದ ಕೆಲವು ಥರಗಳಿಂದುಂಟಾದ ಬಂಡೆಗಳ ರೂಪಾಂತರದಿಂದ ಉಂಟಾಗಿರುತ್ತದೆ.

ಝೀಯೊಲಾಯಿಟೆಸ್—ಅಲ್ಯುಮಿನಾ ಅಥವಾ ಸುಣ್ಣದ ಆರ್ದ್ರಸಿಲಿಕೇಟುಗಳು. ದುರ್ಬಲವಾದ ಆಮ್ಲದಲ್ಲಿ ಸಹ ತೀವ್ರವಾಗಿ ಪೃಥಕ್ಕರಣವನ್ನು ಹೊಂದುತ್ತವೆ. ಇವು ಭೂಮಿಯಲ್ಲಿ ಬಹು ಸೂಕ್ಷ್ಮ ಕಣಗಳಾಗಿರುವವು. ಇವುಗಳಿಂದ ಬಹು ಮಹತ್ವದ ರಾಸಾಯನಿಕ ಕ್ರಿಯೆಯುಂಟಾಗುತ್ತದೆ.

(ಸಶೇಷ)

PROPOSED OBJECT LESSONS.

ಸೂಚಿಸಿದ ವಸ್ತುಪಾಠಗಳು.

(೧೯ನೇ ಪುಟದಿಂದ ಮುಂದೆ ಸಾಗಿದ್ದು.)

ಅಲ್ಯೂ ಅಥವಾ ಉಸುಬು } ಸಾಧಾರಣ ಸ್ವರೂಪ, ಸುಭಧರ್ಮಗಳು, ಸ್ಥಾನಿಕ ಉತ್ಪತ್ತಿ; ಇವುಗಳನ್ನು ತಿಳಿಸುವದು.

೩ ನೆಯ ಸಮುದಾಯ.

೧. ಬ್ರಿಟಿಶ್ ಇಂಡಿಯಾದೊಳಗಿನ ಧಾತುವಿನ ನಾಣ್ಯಗಳು } ಬಂಗಾರ, ಬೆಳ್ಳಿ, ತಾಮ್ರ;

೨. ಜೊರಿಯು ಅಥವಾ ಕೊಡ್ಲಿ—ಕಬ್ಬಿಣ ಅಥವಾ ಉಕ್ಕಿನ ವಿಷಯವಾಗಿ ಹೇಳುವದು.

೪ ನೆಯ ಸಮುದಾಯ.

೧. ಭತ್ತದ ಸಸಿಗಳು—ಅದರ ಭಾಗಗಳು ಬೆಳವಣಿಗೆ ಮುಂತಾದ್ದು.

೨. ತಿನ್ನುವದಕ್ಕೆ ಯೋಗ್ಯವಾದ ಕಾಯಿ, ಸಾಧಾರಣ ಕಾಯಿಪಲ್ಲೆಗಳಿಂದ ತುಂಬಿದ ಬುಟ್ಟಿ.

೬ ನೆಯ ಸಮುದಾಯ.

ಆಡು ಅಥವಾ ಹೋತು ಮತ್ತು ಕುರಿ—ಅಕಳಿಗೆ ಹೋಲಿಸಿ ಹೇಳುವದು.

೧೦ ನೆಯ ಸಮುದಾಯ.

ಸೋಜಿ ಮತ್ತು ದಾಲ.

೧೧ ನೆಯ ಸಮುದಾಯ.

೧. ಹಾಲು ಮತ್ತು ಅದರ ಬೇರೆ ಬೇರೆ ರೂಪಗಳು (ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ;)
೨. ಅಕ್ಕಿ — ಮಾಡುವ ಪ್ರಕಾರಗಳು.
೩. ಉಣ್ಣೆಯ ಬಟ್ಟೆಗಳು.

೨ನೇ ಇಯತ್ತೆ.

೧ನೇ ಸಮುದಾಯ.

(ಅ) ವಸ್ತು.

೧. ರಬ್ಬರು (ಹಿಗ್ಗುವಂಥಾದ್ದು) } ಅಂಟಿಕೊಳ್ಳುವಿಕೆ, ಸ್ಥಿತಿಸ್ಥಾಪಕತ್ವ, ಕರಗುವಿಕೆ ಮುಂತಾದ ಧರ್ಮಗಳನ್ನು ತೋರಿಸುವದು.
೨. ಸಕ್ಕರೆ. }
೩. ಗಾಳಿಯು ಸುಲಭವಾದ ಧರ್ಮಗಳು.
೪. ತೂಕಗಳೂ ಅಳತೆಗಳೂ.

ಮೊದಲು ಕಲಿತ ವಸ್ತುಗಳ ಆಕಾರದ ಸಂಬಂಧದಿಂದಲೂ ಸಾಧಾರಣವಾದ ಬೇರೆ ಬೇರೆ ಒಡಿವೆಗಳ ಸಂಬಂಧದಿಂದಲೂ ಈ ಗೊಕ್ತು ಪಡಿಸಿದ ಅಳತೆಗಳನ್ನೂ ತೂಕಗಳನ್ನೂ ಮಾಡಿನೋಡುವದು.

(ಆ) ಆಕೃತಿ.

೧. ಕಟ್ಟಿಗೆಯಿಂದ ಮಾಡಿದ ಗೋಪುರಾಕೃತಿಗಳು, ಶಂಕ್ವಾಕೃತಿಗಳು. ಹುಡುಗರು ಇಂಥ ಆಕೃತಿಗಳನ್ನು ಮಣ್ಣಿನಿಂದ ಮಾಡುವದು.
೨. ರ್ಹಾಂಬಸ್, ರ್ಹಾಂಬಾಯಿಡ, ಪೆಂಟೆಕೋನ್, ಪಟ್ಕೋನ ಇವುಗಳ ತುಂಡುಗಳು. ಕಟ್ಟಿಗೆಯಿಂದ ಮಾಡಿದವು ಇಲ್ಲವೆ ಕಾಗದದಲ್ಲಿ ಕತ್ತರಿಸಿದವು. } ಹುಡುಗರು ಇವುಗಳನ್ನು ಕಾಗದದಲ್ಲಿ ಮಡಿಚಿ ತೋರಿಸಿ, ಅವುಗಳ ಆಕಾರಗಳನ್ನು ಕತ್ತರಿಸಿ ತೋರಿಸಿ, ಅದರಂತೆ ಸ್ಲೇಟಿನ ಮೇಲೆ ಚಿತ್ರ ತೆಗೆಯುವದು

(ಇ) ಬಣ್ಣ.

ಮಿಶ್ರ ವರ್ಣಗಳನ್ನು ತೋರಿಸಲಿಕ್ಕೆ ಬೇಕಾದ ಬಣ್ಣದ ಖಡುಗಳು ತರತರದ ಬಣ್ಣದ ಉಣ್ಣೆ, ಬಣ್ಣದ ಪುಡಿಗಳು.

೭ನೇ ಸಮೂಹ.

ಉಪ್ಪು.

೫ನೆಯ ಸಮುದಾಯ.

೧. ಬೆಳ್ಳಿ, ಬಂಗಾರಗಳ, ಆಭರಣ ಮುಂತಾದ ವ್ರಗಳು
೨. ಹಾಮ್ರದ ಪಾತ್ರೆಗಳು
೩. ಹಿತ್ತಾಳೆಯ ಪಾತ್ರೆಗಳು.

} ಪ್ರತಿಯೊಂದರಲ್ಲಿರುವ ಜೇರೆ ಜೇರ ಗುಣಗಳನ್ನೂ, ಘನವರ್ಧನೀಯತ್ವ, ತೂಕ, ಕರಗುವ ಗುಣ, ಮುಂತಾದವುಗಳನ್ನೂ ತಿಳಿಸುವದು. ಧಾತುಗಳ ಸಾಧಾರಣ ಲಕ್ಷಣ ಉಪಯೋಗಗಳನ್ನು ಹೇಳಿಕೊಡುವದು.

೮ನೆಯ ಸಮೂಹ.

ಸೈಪ್ಪೆವ್ಯಾಪಾರ.

೧. ಹಗಲು ರಾತ್ರಿಗಳು ವಿಶೇಷ ಲಕ್ಷಣಗಳನ್ನೂ, ಸುಲಭ ಸಂಗತಿಗಳನ್ನಿಷ್ಟು ತಿಳಿಸುವದು.

೨ ನೆಲ ಮತ್ತು ಸಮುದ್ರ (ಮೇಲಿನಂತೆ)

೩ನೆಯ ಸಮುದಾಯ.

೧. ಗೋದಿ ಮತ್ತು ಸಿಜ್ಜಿಯ ಸಸಿಗಳು--ಹ್ಯಾಗೆ ಬೆಳೆಯುತ್ತವೆ? ಭತ್ತದ ಸಸಿಗಳಿಗೆ ಹೋಲಿಸಿ ತೋರಿಸುವದು.

೨. ತೊಗರೀ ಗಿಡ.

೩. ಹತ್ತೀ ಗಿಡ.

೪. ಕಬ್ಬು.

೪ನೇ ಸಮೂಹ.

೧. ಕುದುರೆ ಮತ್ತು ತಜ್ಜಾತಿಯ ಪ್ರಾಣಿಗಳು.

೨. ಜೀನಸುಗಳ ಮತ್ತು ಅದರಿಂದಾಗುವ ಹುಟ್ಟುವಳಿ.

೫ನೇ ಸಮೂಹ.

೧. ಶರೀರದ ಮುಖ್ಯ ಬಾಹ್ಯಭಾಗಗಳು.

೨. ಪಂಚೇಂದ್ರಿಯಗಳು.

೬ನೇ ಸಮೂಹ.

೧ನೇ ಸಮೂಹದಲ್ಲಿದ್ದ ವಸ್ತುಗಳನ್ನು ಕುರಿತು ಕಲಿಸುವದು.

೯ ನೇ ಸಮುದಾಯ.

ಸಕ್ಕರೆಯನ್ನು ಮಾಡುವದು.

೧೦ ನೇ ಸಮೂಹ

೧. ಮಣ್ಣಿನ ಪಾತ್ರೆಗಳು—ಅವುಗಳ ಉಪಯೋಗ ಮಾಡುವ ಕ್ರಮ.

೧೧ ನೇ ಸಮೂಹ.

೧. ಭಕ್ಕರೀ ಮಾಡುವ ಬಗೆ.

೨. ಆಹಾರದಂತೆ ಉಪಯೋಗಿಸುವ ಬೇಳೆಕಾಳುಗಳು-ಸಿದ್ಧಮಾಡುವ ರೀತಿ, ವಿಶೇಷ ಧರ್ಮಗಳು.

೩. ನೂಲಿನ ಬಟ್ಟೆಗಳು.

೩ ನೇ ಇಯತ್ತೆ.

೧ ನೇ ಸಮೂಹ.

೪ ಪದಾರ್ಥ.

೧ ಬೆಂಕಿ ಅಥವಾ ಉರಿ ಸಾಧಾರಣ ಧರ್ಮಗಳು. ಸುಡುವ ಮತ್ತು ಸುಡದ ಪದಾರ್ಥ.

೨ ನೀರು ಧರ್ಮಗಳು.

(ಸಶೇಷ).

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಯು ತಾ॥ ೨ ನೇ ಅಕಟೋಬರ ೧೯೦೨ ನೇ ಇಸವಿ ದಿವಸ ಕಾಲೇಜದಲ್ಲಿ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವ ಉಮೇದವಾರರು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ಬಾ॥ ರವರ ಅಪ್ಪಣೆ ಪಡಕೊಂಡು ಪರೀಕ್ಷೆಯ ಮೊದಲು ಒಂದು ದಿವಸ ಮುಂಚೆತವಾಗಿಯೇ ನಮಗೆ ಭೆಟ್ಟಿಯಾಗಬೇಕು.

ಧಾರವಾಡ ಟ್ರೇ. ಕಾಲೇಜ.
ತಾ॥ ೧೮ - ೯ - ೧೯೦೨

S. K. Rodda,
ಪ್ರಿನ್ಸಿಪಾಲ.

ಉಷ್ಣತೆಯ ಕಾರ್ಯಗಳೂ, ವ್ಯವಹಾರದಲ್ಲಿ ಅವುಗಳ ಉಪಯೋಗಗಳೂ.

ಉಪಕರಣಗಳು—ಅಗ್ನಿಪ್ಲಗ್; ೨ ತಂತಿ (೬" ಉದ್ದ); ತಗಡು (೪" ೫೧"); ಆ ತಗಡಿನ ಉದ್ದಗಲಗಳನ್ನು ಹೊಂದಿಸಿ ನೋಡಲಿಕ್ಕೆ ಬರುವಂತೆ ಕತ್ತರಿಸಿದ ತಗಡು; ತಂಬಿಗೆ; ತಂಬಿಗೆಯ ಒಡಲು ಹಿಡಿಸುವಂತೆ ಕತ್ತರಿಸಿದ ತಗಡು; ತಣ್ಣೀರಿನ ಪಾತ್ರೆ; ಇಕ್ಕಳಗಳು; ದೌತಿ; ಸಣ್ಣಸಿಸೆ; ೨ ಕಾಜಿನ ಕೊಳವೆಗಳು; ೨ ಬೆಂಡು; ಬಣ್ಣದ ನೀರು; ಉಷ್ಣಮಾಪಕಯಂತ್ರ; ತಾಬಾಣ; ದೀವಿಗೆ; ಮೇಣಬತ್ತಿ; ಸಮಾನ ಆಕಾರದ ಭಿನ್ನ ಜಾತಿಯ ತುದಿ ಜೋಡಿಸಿದ ತಗಡು; ಸೀಸ; ಸವಟು; ಕಪ್ಪುರ; ಗಂಧಕ; ಪೊಡ್ಡಸಿಸೆ; ಸ್ಪಂಜ; ಸೊಂಡಿಥಾಲಿ; ಸ್ಲೇಟು.

ಉಪೋದ್ಘಾತ—ಬೆಂಕಿಯ ಮೇಲೆ ತುಪ್ಪ ಇಟ್ಟರೆ ಏನಾಗುವದು? (ಕರಗುವದು.) ದೀಪದ ಮೇಲೆ ಅರಗು ಹಿಡಿದರೇನಾಗುವದು? (ಕರಗುವದು.) ಯಾತರಿಂದ? (ಉಷ್ಣತೆಯಿಂದ) ಉಷ್ಣತೆಯಿಂದ ಆಗುವ ಕಾರ್ಯಗಳನ್ನು ಹೇಳುತ್ತೇನೆ.

ಪ್ರಯೋಗ.	ಫಲಿತ.	ಸಿದ್ಧಾಂತ.
(೧) ಸಮಾನ ಉದ್ದಳತೆಯುಳ್ಳ ೨ ತಂತಿಗಳಲ್ಲಿ ಒಂದನ್ನು ಕಾಸಿ ೨ನೇದಕ್ಕೆ ಹೊಂದಿಸಿ ತೋರಿಸುವದು.	ಈಗೇನಾಯಿತು? ಕಾದ ತಂತಿಯು ಉದ್ದವಾಯಿತು.	

ಕಾದ ತೆಂತಿಯನ್ನು ನೀರೊಳಗೆ ಎದ್ದಿ ತೋರಿಸುವದು.

(೨) ತಗಡು ಕಾಸಿ, ಅಳತೆಯ ತಗಡಿನಲ್ಲಿ ಉದ್ದದ ಕಡೆಗೂ ಅಗಲದ ಕಡೆಗೂ ಇಟ್ಟು ತೋರಿಸುವದು.

ಕಾದ ತಗಡನ್ನು ನೀರೊಳಗೆ ಎದ್ದಿ ತೋರಿಸುವದು.

(೩) ತಂಬಿಗೆಯನ್ನು ಕಾಸಿ, ತಗಡನ್ನು ಅದರ ಹೊರಮೈ ಮೇಲಿಂದ ಹಾಯಿಸಲಿಕ್ಕೆ ಬರುವದಿಲ್ಲೆಂಬದನ್ನು ತೋರಿಸುವದು.

ತಂಬಿಗೆಯ ಮೇಲೆ ತಗಡನ್ನಿಟ್ಟು ಅದರಲ್ಲಿ ತಣ್ಣೀರನ್ನು ಸುರುವಿ ತೋರಿಸುವದು.

ಉಪಯೋಗ.

ಈಗೇನಾಯಿತು? ನೀರೊಳಗೆ ಎದ್ದಿದ ತಂತಿಯು ಕಡಿಮೆಯಾಯಿತು.

ಈಗೇನಾಯಿತು? ಕಾದ ತಗಡಿನ ಉದ್ದಗಲಗಳು ಬೆಳೆದವು.

ಈಗ? ಉದ್ದಗಲಗಳು ಕಡಿಮೆಯಾದವು.

ಈಗ ತಗಡು ಯಾಕೆ ಹಾಯಲೊಲ್ಲದು? ಉಷ್ಣತೆಯಿಂದ ಪಿಂಡವು ಬೆಳೆದಿರುವದು.

ಈಗೇನಾಯಿತು? ತಂಬಿಗೆಯ ಪಿಂಡವು ಕಡಿಮೆಯಾಯಿತು.

ಕಮ್ಮಾರನು ಹಳಿ ಕಟ್ಟುವಾಗ ಪ್ರಸರಣಾಕುಂಚನಗಳ ಉಪಯೋಗ ಮಾಡಿಕೊಳ್ಳುವನು. ಬಡಿಗರು ಕಿಡಿಕೆಗಳಿಗೆ ಗಜಗಳನ್ನು ಹಚ್ಚುವಾಗ ಹೆಚ್ಚು ಅಗಲವೂ, ಉದ್ದವೂ ಆದ ಉಗುಲುಗಳನ್ನು ಮಾಡುವರು.

ಘನಪದಾರ್ಥಗಳು ಉಷ್ಣತೆಯಿಂದ ಪ್ರಸರಣವಾಗುತ್ತವೆ, ತಂಪಿನಿಂದ ಆಕುಂಚನವಾಗುತ್ತವೆ.

ಟೀಪು—ಶಿಕ್ಷಕರು ಪ್ರಸರಣಾಕುಂಚನದ ಅರ್ಥವನ್ನು ತಿಳಿಸುವದು.

(೪) ಕೆಂಪು ಮಸೀ ದ್ರಾವಣವು ಬಾಯಿಗೆ ಬೆಣೆ ಹಾಕಿ, ಅದರಲ್ಲಿ ಕಾಜಿನ ಉದ್ದ ಕೊಳವೆಯನ್ನು ಶೇರಿಸಿ ಬೆಂಕಿಯ ಮೇಲಿಟ್ಟು ತೋರಿಸುವದು. ಉಷ್ಣಮಾಪಕ ಯಂತ್ರವನ್ನು ಬಿಸಿನೀರಿನಲ್ಲಿಟ್ಟು ತೋರಿಸುವದು. ಅವುಗಳನ್ನು ತಣ್ಣೀರಲ್ಲಿಟ್ಟು ತೋರಿಸುವದು. ಉಪಯೋಗ.	ಈಗೇನಾಯಿತು? ಮಸೀದ್ರವವು ಮೇಲಕ್ಕೇರಿತು. ಪಾದರಜವು ಮೇಲಕ್ಕೇರಿತು. ಈಗೇನಾಯಿತು? ಕೆಳಗೆ ಇಳಿಯಿತು. ಉಷ್ಣಮಾಪಕ ಯಂತ್ರವನ್ನು ರಚಿಸಿರುವರು.	ಉಷ್ಣತೆಯಿಂದ ಪ್ರವಾಹಿ ಪದಾರ್ಥಗಳು ಪ್ರಸರಣ ಹೊಂದುತ್ತವೆ. ತಂಪಿನಿಂದ ಆಕುಂಚನವಾಗುತ್ತವೆ.
(೫) ಬಾಯಿಗೆ ಕಾಜಿನ ಕೊಳವೆಯನ್ನು ಕೂಡಿಸಿದ ಸಿಸೆಯನ್ನು ಅಡ್ಡಗಟ್ಟಿಗೆ ಕೂಡಿಸಿದ ಪಾತ್ರೆಯ ಮೇಲಿಟ್ಟು ಕಾಜಿನ ಕೊಳವೆಯನ್ನು ತಾಬಾಣದೊಳಗಿನ ಕೆಂಪು ನೀರೊಳಗೆ ಮುಳುಗಿಸಿಟ್ಟು ತೋರಿಸುವದು. ಬಳಿಕ ತಣ್ಣೀರನ್ನು ಸುರುವಿ ತೋರಿಸುವದು. ಪ್ರಯೋಜನ.	ಈಗ? ಹವೆಯು ಹೊರಗೆ ಹೋಯಿತು. (ನೀರೊಳಗೆ ಗುಳ್ಳೆಗಳೇಳುವವು) ಹವೆಯು ಬೆಳೆಯಿತು. ಕೆಂಪು ನೀರು ಒಳಗೆ ಬಂತು, (ಹವೆಯು ಕಿರಿದಾಯಿತು.) ವಾಯುಗಳ ಪ್ರಸರಣದಿಂದ ಹವೆ	ಉಷ್ಣತೆಯಿಂದ ವಾಯುರೂಪ ಪದಾರ್ಥಗಳು ಪ್ರಸರಣ ಹೊಂದುತ್ತವೆ. ಮತ್ತು ತಂಪಿನಿಂದ ಆಕುಂಚನವಾಗುತ್ತವೆ.

	ಯು ಶುದ್ಧವಾಗುವದು. (ದಾರವನ್ನು ಬೆಂಕಿಯ ಮೇಲೆ ಹಿಡಿದು ತೋರಿಸುವದು.)	

ಸಾಮಾನ್ಯ ನಿಯಮವು—ಉಷ್ಣತೆಯಿಂದ ಯಾವತ್ತು ಪದಾರ್ಥಗಳು ಪ್ರಸರಣ ಹೊಂದುತ್ತವೆ. ತಂಪಿನಿಂದ ಸಂಕುಚನವಾಗುತ್ತವೆ.

(೬) ಭಿನ್ನ ಭಿನ್ನ ಧಾತುವಿನ ತಗಡು ಕಾಸಿ ತೋರಿಸುವದು. ಉಷ್ಣಮಾಪಕಯಂತ್ರ, ದೌತಿಗಳನ್ನು ಕುರಿತು ಕೇಳುವದು.	ಒಂದಕ್ಕಿಂತ ಮತ್ತೊಂದು ಹೆಚ್ಚು ಬೆಳಿಯಿತು.	ಸವಾನ ಉಷ್ಣತೆಯಿಂದ ಬೇರೆ ಬೇರೆ ಪದಾರ್ಥಗಳು ಹೆಚ್ಚು ಕಡಿಮೆ ವಿಸ್ತಾರವಾಗುತ್ತವೆ.
(೭) ಸವಟಿನಲ್ಲಿ ಸೀಸ, ಗಂಧಕ, ಕಪ್ಪುರಗಳನ್ನು ಹಾಕಿ ಬೆಂಕಿಯಮೇಲಿಟ್ಟು ತೋರಿಸುವದು.	ಕರಗಿ ನೀರಾದವು.	ಉಷ್ಣತೆಯಿಂದ ಘನಪದಾರ್ಥಗಳು ಪ್ರವಾಹಿಯಾಗುತ್ತವೆ.
ಅವುಗಳನ್ನು ತಂಪಾದ ಸ್ಥಳದಲ್ಲಿ (ಪಡಿಅಚ್ಚಿನಲ್ಲಿ) ಹಾಕಿ ತೋರಿಸುವದು.	ತಂಪಿನಿಂದ ಘನವಾಗುತ್ತವೆ.	

ಪ್ರಯೋಜನ.	ಎರಕಜೆ ಹೊಡೆಯುವದು, ಕೀಲಿಕೈ ಮೂರ್ತಿ ಮೊದಲಾದವುಗಳನ್ನು ಮಾಡುವರು.	
(v) ತಂಬಿಗೆಯಲ್ಲಿ ನೀರು ಹಾಕಿ, ಕಾಸಿ, ಅದರ ಮೇಲೆ ಸಿಸೆಯನ್ನು ಬಬ್ಬು ಹಾಕಿ, ತೊಯ್ದ ಸ್ಪಂಜವನ್ನು ಅದರ ಮೇಲೆ ಇಡುವದು. ಪ್ರಯೋಜನ.	ಸಿಸೆಯ ಒಳಮೈಯ್ಯಲ್ಲಿ ನೀರಿನ ಹನಿಗಳು ಕಾಣಿಸುವವು. ಮಳೆ ಬೀಳಲಿಕ್ಕೆ ಉಷ್ಣತೆಯು ಈ ಕಾರ್ಯಗಳೇ ಕಾರಣವೆಂಬದನ್ನು ಹೇಳುವದು.	ಉಷ್ಣತೆಯಿಂದ ಪ್ರವಾಹುಗಳು ವಾಯುರೂಪವನ್ನು ಹೊಂದುತ್ತವೆ.

ಸಾಮಾನ್ಯ ನಿಯಮವು—ಉಷ್ಣತೆಯಿಂದ ಪದಾರ್ಥಗಳು ರೂಪಾಂತರವಾಗುತ್ತವೆ.

ಪ್ರಸರಣವೇ ಮೇಲೆ ಹೇಳಿದ ೩ ಮುಖ್ಯ ಧರ್ಮಗಳ ಕಾರಣವು

ಮುಖ್ಯವಾಗಿ ವಾಯುಗಳ ಪ್ರಸರಣ, ಮಳೆಯು ಉತ್ಪತ್ತಿ ಇವುಗಳಿಂದ ದೇವರ ಮಹಿಮೆಯನ್ನು ಹೊಗಳುವದು.

ಸಿದ್ಧನಾಥ ವಾಚನ ಮು

ಶಾಲಾ ಪತ್ರಿಕೆ

ಪದ್ಯಂ.

ಪ್ರಥಮವಿದ್ಯಾಗುರುಪರ್ಯಾಯನ್ನ ತಿಕೆಯುಂ ಸಚ್ಛಿಷ್ಯಲೋತ್ಕರ್ಷಮುಂ।
ಜಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಮುದೈ।
ದಯೆಯಿಂದೋಷಪತಿದ್ದ ವೇಳ್ವುದುಮಧರ್ಜ್ಞಾನಾಭಿವೃದ್ಧಿಪ್ರಿಯರಿ ॥೧

ಪುಸ್ತಕ ೩೮] ಅಕ್ಟೋಬರ ೧೯೦೨. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಜರ್ಮನಿಯೊಳಗಿನ ಡಾಕ್ಟರ ನಾರ್ಡಮೇಯರನೆಂಬ ಒಬ್ಬ ಶಾಲಾಧ್ಯಾಪಕನು ಏನೋ ಒಂದು ಕೆಲಸದ ಸಲುವಾಗಿ ಆ ದೇಶದ ಹಾಂಬರ್ಗ ಹಾನೋವರ ಮುಂತಾದ ಉತ್ತರ ಪ್ರದೇಶದಲ್ಲಿ ಸಂಚಾರ ಮಾಡುತ್ತಿದ್ದನು. ಅವನು ಲ್ಯೂನೆಬರ್ಗರಹೈಡ ಎಂಬ ಪ್ರದೇಶದಲ್ಲಿ ತಿರುಗುತ್ತಿರುವಾಗ ಕೆಲವು ನೀರಿನ ಮಡುವ್ರಗಳನ್ನು ನೋಡಿದನು. ಅವುಗಳೊಳಗಿನ ನೀರು ತೀರ ರಾಡಿಯಾಗಿತ್ತು. ಹಾಗೇ ಮುಂದಕ್ಕೆ ಸಾಗುತ್ತಿರುವಾಗ ಒಂದು ತಿಳಿನೀರಿನ ಮಡುವು ಕಣ್ಣಿಗೆ ಬಿತ್ತು. ಆ ಮಡುವು ಸುಮಾರು ಹತ್ತು ಹದಿನಾಲ್ಕು ಮೊಳ ಆಳವಾಗಿದ್ದರೂ ಅದರ ತಳದ ಹರಳುಕಲ್ಲುಗಳು ನಿಚ್ಚಳವಾಗಿ ಕಾಣುತ್ತಿದ್ದವು. ಈ ನೀರು ಇಷ್ಟು ತಿಳಿಯಾಗಿರುವ ಕಾರಣವೇನೆಂದು ಆಲೋಚಿಸಿ ಅವನು ಆ ಸ್ಥಳದ ಭೂಸ್ತರ ಶಾಸ್ತ್ರದ ಪುಸ್ತಕವನ್ನು ಸಂಗ್ರಹಿಸಿ ಅದನ್ನು ಓದಿದನು. ಅದರಿಂದ ಆ ಸ್ಥಳದಲ್ಲಿ "ಕೇಸಲಗರ"ವೆಂಬ ಒಂದು ವಿಶೇಷ ಜಾತಿಯ ಮಣ್ಣಿನ ತೆರಗಳುಂಟೆಂದು ತಿಳಿಯಿತು. ಬಳಿಕ ಆ ಮಣ್ಣನ್ನು ಅಗಿದು ತಂದು ಅದರ ಇಟ್ಟಂಗಿಗಳನ್ನು ಮಾ

ಸಿದನು. ಆ ಇಟ್ಟಂಗೆಯು ಒಂದು ತುದಿಯನ್ನು ಕಂಪಗ
ಕಾಸಿದರೂ ಮತ್ತೊಂದು ತುದಿಯು ಕೈಯಲ್ಲಿ ನಿರ್ಭಯದಿಂ
ನ ಹಿಡಿಯುವಷ್ಟು ತಣ್ಣಗಿರುವದೆಂದು ಮನಗಂಡು, ಅದ
ರೊಳಗಿನ ಉಷ್ಣತೆಯ ಅವಾಹಕ ಗುಣಕ್ಕೆ ಅಚ್ಚರಿಪಟ್ಟನು
ಬಳಿಕ ಆ ಮಣ್ಣಿನಿಂದ ಫಿಲ್ಟರಗಳನ್ನು ಮಾಡಿಸಿದನು. ಈ
ಗ ಪ್ರಚಾರದೊಳಗಿರುವ ಫಿಲ್ಟರಗಳಿಗಿಂತ ಇವುಗಳ ಯೋ
ಗ್ಯತೆಯು ಹೆಚ್ಚೆಂದು ಮನಗಂಡನು ಹ್ಯಾಗಂದರೆ:—ಈ
ಎರಡು ಫಿಲ್ಟರಗಳೊಳಗಿಂದ ಸೋಸಿ ತೆಗೆದ ನೀರನ್ನು ರಸಾ
ಯನಶಾಸ್ತ್ರಜ್ಞರಿಂದ ಪರೀಕ್ಷಿಸಿಲು, ಈ ಮಣ್ಣಿನ ಫಿಲ್ಟರಗಳೊ
ಳಗಿನ ನೀರಲ್ಲಿ ಯಾವತೆರದ ಜಂತುಗಳು ಇಲ್ಲವೆಂತಲೂ,
ಪ್ರಚಾರದೊಳಗಿನ ಫಿಲ್ಟರಗಳ ನೀರಲ್ಲಿ ಕೆಲವು ಜಂತುಗಳು
ಇನ್ನೂ ಇರುತ್ತವೆಂತಲೂ ನಿರ್ಣಯವಾಯಿತು. ಇದ್ದಲಿ ಉ
ಸುಬುಗಳಿಂದ ನೀರು ಶೋಧಿಸುವದಕ್ಕಿಂತ ಇದರಿಂದ ಶೋಧಿ
ಸುವದು ಹೆಚ್ಚು ಪ್ರಯೋಜನಕರವೆಂದು ನಿರ್ಣಯವಾಗಲಾ
ಗಿ, ಈಗ ಜಗತ್ತಿನೊಳಗೆಲ್ಲ ಇವೇ ಫಿಲ್ಟರಗಳೇ ಹಬ್ಬು
ಗೊಂಡಿವೆ. ನೋಡಿರಿ, ಶೋಧದೃಷ್ಟಿಯ ಪರಿಣಾಮವೆಷ್ಟು
ಘನವಾದದ್ದು!!

ಈ ಸಾರೆ ಧಾರವಾಡ ಸೆಂಟರಿನಲ್ಲಾದ ಮುಲಶೀಪಡೀ
ಕ್ಷೆಗೆ ಕನ್ನಡಿನಲ್ಲಿ ೨೪೬ ಮಂದಿ ವಿದ್ಯಾರ್ಥಿಗಳೂ, ಇಂಗ್ಲಿಷ
ದಲ್ಲಿ ೪೦ ವಿದ್ಯಾರ್ಥಿಗಳೂ, ಮರಾಠಿಯಲ್ಲಿ ಒಬ್ಬನೂ ಬಂದಿ
ದ್ದರು. ಇವರೊಳಗೆ ಲೆಕ್ಕದಲ್ಲಿ ಕ್ರಮವಾಗಿ ೬೫, ೩, ೧
ಇಪ್ಪತ್ತು ಮಂದಿ ನಾಪಾಸಾದರೆಂದು ತಿಳಿಯುವದು. ಈ
ವರ್ಷದ ಪರೀಕ್ಷೆಯ ಪರಿಣಾಮವು ಬೇಗನೆ ಪ್ರಕಟವಾಗು
ವದೆಂದು ತಿಳಿಯುತ್ತದೆ.

ಸೆಕಂಡರೀ ಟೀಚರಸ್ ಎಗ್ಸಾಮಿನೇಶನ್ ಅಂದರೆ ಇಂಗ್ಲಿ
ಷ ಸಾಲೆಯ ಅಧ್ಯಾಪಕರಾಗಿ ಕೆಲಸ ಮಾಡಲಪೇಕ್ಷಿಸುವ
ಉಮೇದವಾರರ ಪರೀಕ್ಷೆಯು ಹೋದ ತಿಂಗಳಲ್ಲಾಯಿತು
ಈ ಪರೀಕ್ಷೆಗೆ ಧಾರವಾಡ ಬೆಳಗಾವ ಬಿಜಾಪೂರಗಳಿಂದ ಇ
ಬ್ಬಿಬ್ಬರಂತೆ ಬಂದಿದ್ದರು ಪರಿಣಾಮವು ಇನ್ನೂ ತಿಳಿದಿಲ್ಲ.

ಬಂಗಾಲದ ಲೆಫ್ಟಿನೆಂಟ ಗವರ್ನರ ದೊರೆಗಳು ತಮ್ಮ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿದ್ದಾರೆ. ಈ ಸುಯೋಗವು ನಮ್ಮ ಇಲಾಖೆಗೂ ಬೇಗನೆ ಒದಗುವದೆಂದು ನಂಬುತ್ತೇವೆ

ಟ್ರೇನಿಂಗ ಕಾಲೇಜಿದ ಪ್ರಿನ್ಸಿಪಾಲರು ಮೂರನೇ ವರ್ಷದ ವಿದ್ಯಾರ್ಥಿಗಳನ್ನೂ ಕೆಲಜನ ಅಧ್ಯಾಪಕರನ್ನೂ ಕರೆದುಕೊಂಡು ಪುಣೆ, ಮುಂಬಯಿ, ಅಹಮ್ಮದಾಬಾದ, ಬಡೋದಾ, ವಿಜಾಪುರ ಮುಂತಾದ ಪಟ್ಟಣಗಳನ್ನು ನೋಡಿಕೊಂಡು ಬಂದರು. ವಿದ್ಯಾರ್ಥಿಗಳಿಗೆ ಸೃಷ್ಟಿ ಚಮತ್ಕಾರಗಳನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುವದೂ, ಪ್ರಾಚೀನ ಅರ್ವಾಚೀನ ಐತಿಹ್ಯ ಸಾಮಾಜಿಕ ಸ್ಥಿತಿಗಳ ಜ್ಞಾನವನ್ನು ಮಾಡಿಕೊಡುವದೂ, ಚಿಕ್ಕಮಕ್ಕಳಿಗೆ ಕಲಿಸುವ ಪದ್ಧತಿಗಳಲ್ಲಿ ಸುಧಾರಣೆಯನ್ನುಂಟುಮಾಡುವದೂ ಈ ಪ್ರವಾಸದ ಪ್ರಧಾನ ಉದ್ದೇಶಗಳಾಗಿದ್ದವು. ಸುಮಾರು ಹದಿನಾರುನೂರು ಮೈಲುಗಳ ಪ್ರವಾಸಕ್ಕೆ ಒಬ್ಬೊಬ್ಬರಿಗೆ ಹದಿನಾರು ರೂಪಾಯಿಗಳು ವೆಚ್ಚವಾದವು.

A MODEL GIRL SCHOOL.

ಮಾದರಿ ತೆಗೆದುಕೊಳ್ಳತಕ್ಕಂಥ ಹೆಣ್ಣುಮಕ್ಕಳ ಸಾಲಿಯು.

ಮೊದಲನೇ ಭಾಗ.

(ಬರೆದುಬಂದದ್ದು.)

ಮುಂಬಯಿ ನಗರದಲ್ಲಿರುವ ಸೋರಾಬಜಿ ಶಾಪುರಜಿ ಬೆಂಗಾಲೀ ಎಂಬ ಒಬ್ಬ ಪಾರ್ಸೀ ಜಾತಿಯ ಶ್ರೀಮಂತನು ತನ್ನ ತಾಯಿಯಸ್ಮಾರಕವೆಂದು ಒಂದು ಶಾಲಾ ಗೃಹವನ್ನು ಕಟ್ಟಿಸಿರುವನು. ಇದು ಎರಡಂತಸ್ತಿನದು. ಇದನ್ನು ಕಟ್ಟಿಸುವದಕ್ಕೆ ವೆಚ್ಚವಾದ ಸುಮಾರು ಒಂದು ಲಕ್ಷ ರೂಪಾಯಿಗಳಲ್ಲಿ ಸರಕಾರದವರು ಮೂವತ್ತಾರು ಸಾವಿರ ರೂಪಾಯಿ

ಗಳನ್ನು ಮಾತ್ರ ಉಚಿತವಾಗಿ ಕೊಟ್ಟಿರುವರು. ಪಾರ್ಸೀ ಜನರಲ್ಲಿ ಶ್ರೀಮಂತರಿರುವದು ವಿಶೇಷ. ಇಂಥ ಹಲವು ಜನ ಲಕ್ಷ್ಮೀಪುತ್ರರು ಸ್ವಜಾತಿಯ ಏಳಿಗೋಸ್ಕರ ವಂತಿಗೆಯಿಂದ ಹಣ ಕೂಡಿಸಿ ಈ ಸಾಲಿಯನ್ನು ಈಗ ಸುಮಾರು ಹದಿ ನೈದು ವರುಷದಿಂದ ನಡಿಸಿರುವರು. ಈ ಸಾಲಿಯಲ್ಲಿ ಬರೇ ಪಾರ್ಸೀ ವಿದ್ಯಾರ್ಥಿನಿಯರನ್ನೇ ಸೇರಿಸಿಕೊಳ್ಳುವರು. ಶಿಕ್ಷಕಿಯರಾದರೂ ಅದೇ ಜಾತಿಯವರೇ. ಇವರು ಪಾಡಿಕೆಯಾಗಿ ದೊಡ್ಡ ಮನೆತನದವರುಂಟು

ನಮ್ಮ ಪಾಠಕರಿಗೆ ಈ ಪಾರ್ಸೀ ಜನರ ಪರಿಚಯವನ್ನು ತುಸು ಮಾಡಿಕೊಡುವದು ಅಪ್ರಾಸಂಗಿಕವೆನಿಸದು. ಇವರು ಭರತಖಂಡದಲ್ಲಿ ಕೆಂಬಹುನಾ ಇಡೀ ಭೂಮಂಡಲದಲ್ಲಿ ವಿದ್ಯಾವಿನಯ ಸದಾಚಾರಗಳಲ್ಲಿ ಅತ್ಯುಚ್ಚ ಪದವಿಯನ್ನು ಆಕ್ರಮಿಸಿದವರೆಂದು ಬಣ್ಣಿಸಲ್ಪಡುವ ಬ್ರಾಹ್ಮಣವರ್ಗಕ್ಕೆ ಅತಿನಿಕಟ ಸಂಬಂಧವುಳ್ಳವರಿರುವರು. ಎಪ್ಪತ್ತೆಂಟು ಎಳೆಗಳ ಯಜ್ಞೋಪವೀತವನ್ನು ನಡುವಿನಲ್ಲಿ ಕಟ್ಟಿಕೊಳ್ಳುವರು. ಅಗ್ನಿಯು ಪರಮದೈವತವೆಂದು ತಿಳಿಯುವರು. ನಮ್ಮಲ್ಲಿ ಕಸ ಮುಂತಾದ ಹೊಲಸು ಪದಾರ್ಥವನ್ನು ಒಲೆಯಲ್ಲಿ ದೊಬ್ಬುವಂತೆ ಇವರು ಸಾಧಾರಣ ಅಗ್ನಿಯಲ್ಲಿ ಕೂಡ ಅಪವಿತ್ರ ಪದಾರ್ಥಗಳನ್ನು ಹಾಕುವದಿಲ್ಲ. ಪವಿತ್ರಾಗ್ನಿಯು ಸಂಬಂಧದಿಂದಂತೂ ಹೇಳಲಿಕ್ಕೇಬೇಡ. ಆರಾಧನಾಕ್ರಮದಲ್ಲಿ ಅಗ್ನಿಯು ತರುವಾಯು ಸೂರ್ಯನು ಬರುವನು. ಇರಾಣದಿಂದ ಬರುವಾಗ ತಂದ ಇವರ ಪವಿತ್ರಾಗ್ನಿಯು ಈ ಹೊತ್ತಿಗೂ ಒಂದು ಭವ್ಯವಾದ ಮಂದಿರದಲ್ಲಿ ಪೂಜೆಗೊಳ್ಳುತ್ತಲಿವೆ. ಇವರ ಧರ್ಮಗ್ರಂಥವನ್ನು ಬರೆದ ಝರೋಸ್ತರನು ವೇದದಲ್ಲಿ ಉಲ್ಲೇಖಿಸಿದ ಜರತ್ಕಾರುವೆಂದು ಕೆಲವರು ಪ್ರತಿಪಾದಿಸುತ್ತಾರೆ.

ಸದ್ಯಕ್ಕೆ ಭರತಖಂಡದಲ್ಲಿ ವಾಸಿಸುವ ಬ್ರಾಹ್ಮಣವರ್ಗದಲ್ಲಿ ಸ್ಥಲಕಾಲಾನು ಭೇದಂತೆ ಆಚಾರ, ವಿಚಾರ, ಆಹಾರ, ವಸ್ತ್ರಪ್ರಾವರಣ ಮತಾದಿಗಳಲ್ಲಿ ಭೇದವಿರುವಂತೆ ಪ್ರಾಚೀನದ ಇರಾಣದಲ್ಲಿದ್ದ ಇವರಿಗೂ ಭಾರತೀಯರಾದ ನಮ್ಮ ಪೂ

ರ್ಜರಿಗೂ ಕೆಲವು ಮಾತುಗಳಲ್ಲಿ ಭಿನ್ನತ್ವವಿರುವೆದು ಸ್ವಾ
ಭಾವಿಕವು. ಇದಕ್ಕೆ ಅನಾಂತರ ಪ್ರಮಾಣಗಳು ಹೇರಳವಾ
ಗಿ ಶಿಕ್ಕುತ್ತವೆ. ಇರಾಣ ಈ ಶಬ್ದವು ಲಿರ್ಯ + ಅಯನ
ವೆಂಬ ಶಬ್ದದ ಅಪಭ್ರಂಶ ರೂಪವುಂಟು. ಪ್ರಾಚೀನದ ಅ
ಸ್ಸೀರಿಯಾ ದೇಶಕ್ಕೆ ನಮ್ಮ ಪೂರ್ವಜರು ಅಸುರರ ದೇಶವೆಂ
ದು ನುಡಿಯುತ್ತಿದ್ದರು. ಅಸುರರೆಂದರೆ ಸುರರಲ್ಲವೆಂಬ
ಭಾವವು. ರಾವಣಾದಿಗಳು ಅಸುರರು. ಇವರು ಬ್ರಾಹ್ಮಣ
ರಿದ್ದರೆಂದೂ ನಮ್ಮ ಪ್ರಾಚೀನಗ್ರಂಥಗಳಲ್ಲಿ ಉಲ್ಲೇಖವುಂಟು.
ಹಾಗೂ ಇವರಿಬ್ಬರು ಅಣ್ಣತಮ್ಮರೆಂದೂ ಅವೇ ಗ್ರಂಥಗಳು
ಸಾರುತ್ತವೆ. ಸುರರೆಂದರೆ ಸಾತ್ವಿಕಜ್ಞಾನದಿಂದ ಸಾತ್ವಿಕ ಆ
ಚರಣೆಯಿಂದ ಇರುವವರು ಶಸ್ತ್ರಾದಿಗಳನ್ನು ಉಪಯೋಗಿಸು
ತ್ತ ಕಾಲಕ್ಷೇಪ ಮಾಡುವವರು ಅಸುರರೆಂದು ಕರೆಯಲ್ಪ
ಡುತ್ತಿರಬಹುದು. ಅಸುರೀ ಕೃತ್ಯವೆಂಬ ಶಬ್ದದಿಂದ ಇದೇ
ಮಾತು ಧ್ವನಿತವಾಗುತ್ತದೆ. ದೇಶ ಕಾಲಗಳ ಪರಿಸ್ಥಿತಿಯಂ
ತೆ ಇವರಿಬ್ಬರ ಆಚರಣೆಯಲ್ಲಿ ಭೇದವುಂಟಾಗಿರಬಹುದು.
ಆದರೂ ಇವರಿಬ್ಬರು ಅತಿ ಪುರಾತನಕಾಲದಲ್ಲಿ ಒಂದೇ
ರಕ್ತದವರಿರಬೇಕೆಂಬ ಅನುಮಾನವು ನಿರಾಧಾರವಲ್ಲ.

ಇದಲ್ಲದೆ ಇನ್ನೂ ಕೆಲವು ಪ್ರಮಾಣಗಳುಂಟು. ಕಂದ
ಹಾರ (ಗಾಂಧಾರ) ಬಲ್ಕ (ಬಾಹ್ಲೀಕ) ಪಂಜಾಬದೊಳಗಿನ
ಬ್ರಾಹ್ಮಣಾಬಾದ ಮುಂತಾದ ಪಟ್ಟಣಗಳ ಐತಿಹ್ಯದಿಂದ ಉ
ತ್ತರಹಿಂದುಸ್ಥಾನದ ಆರ್ಯರೂ, ಇರಾಣದ ಪೂರ್ವಭಾಗದ
ಆರ್ಯರೂ ಒಂದೇ ವರ್ಗದವರಿದ್ದರೆಂದು ಸಿದ್ಧವಾಗುತ್ತದೆ.
ಇದಲ್ಲದೆ ಅವರ ಬುದ್ಧಿ, ಸಾಮುದ್ರಿಕಲಕ್ಷಣ ಭಾವೆ ಮುಂ
ತಾದವುಗಳಿಂದಲೂ ನಮ್ಮ ಮೇಲಿನ ಸಿದ್ಧಾಂತಕ್ಕೆ ಬಲಬರು
ವದು. ಇದು ಹ್ಯಾಗೇ ಇರಲಿ ಇವರು ಒಳಿತಾಗಿ ಸುಧಾರಿ
ಸಿದ ವರ್ಗದ ಜನರೆಂಬುದಕ್ಕೆ ಸಂಶಯವಿಲ್ಲ. ಕಾಲೀನವಂಶ
ಜನ್ಮವೂ ಬಹುಕಾಲದ ವಿದ್ಯಾಸಂಸ್ಕಾರವೂ ಮನುಷ್ಯನ
ನ್ನು ಸುಸಂಸ್ಕೃತನನ್ನಾಗಿ ಮಾಡುವದು ನಿಜವು.

ಇವರು ತಮ್ಮ ಮೂಲಸ್ಥಾನದಿಂದ ಮುಸಲ್ಮಾನರ ಉಪ
ಟಳಕ್ಕೆ ಅಂಜಿ ಗುಳೇ ಹಟ್ಟಿ ಕೊಂಡು ಭರತಖಂಡಕ್ಕೆ ಬರಲು

"ವಸುಧೈವಕುಟುಂಬಕಂ" ಎಂಬ ಉದಾತ್ತತತ್ವಾವಲಂಬಿಗಳಾದ ಭಾರತೀಯರು ಇವರಿಗೆ ಆಶ್ರಯವನ್ನು ಕೊಟ್ಟರು. ಅಂದಿನಿಂದ ಇವರು ರಾಜಕರಣದಲ್ಲಿ ಕೈಹಾಕದೆ ವ್ಯಾಪಾರವನ್ನು ನಡಿಸುತ್ತ ಹಿಂದುಸ್ತಾನದೊಳಗಿನ ಬಹುಶಃ ಯಾವತ್ತು ಪಟ್ಟಣಗಳಲ್ಲಿ ವಾಸಿಸುವರು ಆದರೂ ಮುಂಬಯಿ ನಗರದಲ್ಲಿ ಈ ಜನರ ವಸ್ತಿಯು ವಿಶೇಷವಿರುವದು

ಬಹುತರವಾಗಿ ಪಾಶ್ಚಿಮಾತ್ಯರ ಸುಧಾರಣೆಯು ಇಂಗ್ಲಿಷರು ಬಂದಂದಿನಿಂದಲೇ ನಮ್ಮಲ್ಲಿ ಪ್ರಾದುರ್ಭಾವವನ್ನು ಹೊಂದಿರುವದು. ಆದರಲ್ಲಿ ಮುಂಬಯಿ ಪಟ್ಟಣವು ಹಿಂದುಸ್ತಾನವಲ್ಲೆಲ್ಲ ದೊಡ್ಡ ಪಟ್ಟಣವೂ, ವ್ಯಾಪಾರಸ್ಥಳವೂ ವಿಲಾಯತಿಗೆ ಸವಿಾಪವಾದದ್ದೂ ಇರುವದರಿಂದ ಸರ್ವ ಸುಧಾರಣೆಗಳು ಮೊದಲಿಗೆ ಇದೇ ನಗರದಲ್ಲುಂಟಾಗುವದು ಸ್ವಾಭಾವಿಕವು. ಆ ಸುಧಾರಣೆಗಳಲ್ಲಿ ಶಿಕ್ಷಣ ಸುಧಾರಣೆಯು ಮೇಲಾದದ್ದು. ಅದನ್ನು ಈ ಪಾರ್ಸೀ ಜನರು ಕೈಕೊಂಡು ಸಾಗಿಸ ಹತ್ತಿರುವರು. ಹುಡುಗರಿಗೆ ಮನರಂಜನವಾಗುವಂತೆಯೂ ನಿಜವಾದ ಜ್ಞಾನವು ದೊರೆಯುವಂತೆಯೂ ಪ್ರಾಥಮಿಕ ಶಿಕ್ಷಣದ ಸಾಲಿಯನ್ನು ನಡಿಸಿದವರಲ್ಲಿ ಇವರೇ ಮೊದಲನೆಯವರೆಂದು ಹೇಳಬಹುದು. ನಾವು ಪ್ರವಾಸದಲ್ಲಿ ನೋಡಿದ ನಗರಗಳಲ್ಲಿ ಈ ಮಾದರಿಯ ಶಾಲೆಯು ನಮ್ಮ ಕಣ್ಣಿಗೆ ಬೀಳಲಿಲ್ಲ. ಕೆಲವು ಚಲೋ ಸಾಲಿಗಳನ್ನು ನೋಡಿದೆವು, ಆದರೆ ಒಂದೇ ವರ್ಗದವರಿಗೆಂದು ಗೊತ್ತು ಪಡಿಸಿದಂಥ ಧನಿಕರಿಂದ ನಡಿಸಲ್ಪಟ್ಟಂಥ ಶಾಲೆ ಇದೇ.

ಈ ಸಾಲೆಯಲ್ಲಿ ನಾಲ್ಕರಿಂದ ಹದಿನಾರು ವರ್ಷದವರೆಗಿನ ವಿದ್ಯಾರ್ಥಿನಿಯರು ಕಲಿಯುವರು ಶಿಕ್ಷಕಿಯರು ಇವರಿಗಿಂತ ಹಿರಿಯರಿರುವರು. ಅವರೆಲ್ಲ ಬಹುಶಃ ಅವಿವಾಹಿತರಿರುವರು. ವಿವಾಹವನ್ನು ಮಾಡಿಕೊಂಡ ಕೂಡಲೆ ಕಲಿಸುವದನ್ನು ಬಿಟ್ಟು ಬಿಡುವರು. ಮೇಲಿನ ವರ್ಗದಲ್ಲಿರುವ ದೊಡ್ಡ ಹುಡುಗಿಯರು ಶಿಕ್ಷಕಿಯರಾಗುವರು. ಇವರಿಗೆ ಸಂಬಳವಾದರೂ ಸ್ವಲ್ಪವೇ ಇರುವದು. ಇವರು ಕೇವಲ ಪರೋಪಕಾರಾರ್ಥವಾಗಿ ಅಂದರೆ ಸ್ವಜಾತಿಯ ಕಲ್ಯಾಣಕ್ಕಾಗಿ ದು

ಡಿಯುವರು ಇವರು ಕೂಲೀನ ಮನೆತನದವರೂ, ಒಹು ದಿವಸ ಇದೇ ಸೂಲಿಯಲ್ಲಿ ಕಲಿತವರೂ ಇರುವದರಿಂದ ಶಿಕ್ಷಣ ಪದ್ಧತಿಯ ಯಥಾರ್ಥ ವ್ಯಾಸಂಗವೂ ವಿಷಯದ ನಿಜವಾದ ಜ್ಞಾನವೂ ಇವರಿಗೆ ಆಗಿರುವದು. ಆದ್ದರಿಂದ ಮೂರು ನಾಲ್ಕು ವರ್ಷ ಕಾಲೇಜದಲ್ಲಿ ನಿಂತು ಹೊಟ್ಟೆಗಾಗಿ ಕಲಿತು ಕೂಲಿಯ ಕೆಲಸವನ್ನು ಕೈಕೊಳ್ಳುವ ಅಧ್ಯಾಪಕನ ವ್ಯಂಗಗಳು ಇವರಲ್ಲಿ ತೋರಲಿಕ್ಕೆ ಅಸ್ಪದವಿಲ್ಲ. ಫೌಲರನೇ ಮುಂತಾದ ಪಾಶ್ಚಿಮಾತ್ಯ ಶಿಕ್ಷಣ ಶಾಸ್ತ್ರಕೋವಿದರೂ ನಮ್ಮಲ್ಲಿ ಪ್ರಾಚೀನ ಕಾಲದ ಋಷಿಗಳೂ ಗುರುವು ಕೇವಲ ಸದ್ಗುಣದ ಕಣಿಯು, ವಿದ್ಯದ ನಿಧಿಯು, ಶಾಂತತೆಯ ಆಗರವು ಉತ್ಸಾಹದ ತವರ್ಮನೆಯು, ಶೀಲದ ಆಲಯವು ಆಗಿದ್ದು ಪರಾರ್ಥದಲ್ಲಿ ಮನಸಿದ್ದವನಿರಬೇಕೆಂದು ಪ್ರತಿಪಾದಿಸುವರು. ಆದರೆ ಕೂಲಿಯ ಶಿಕ್ಷಕನಲ್ಲಿ ಈ ಗುಣಗಳನ್ನು ಹುಡುಕ ಹೋಗುವದು ಹೆಡ್ಡತನವು ಈ ಗುಣಗಳು ಇಂಥವರಲ್ಲಿ ಶಿಗುವದೂ, ಮರದಲ್ಲಿ ಮುತ್ತು ಶಿಗುವದೂ ಒಂದೇಯೆಂದು ಹೇಳಬಹುದು.

ಸೂಲಿಯ ಬಾಹ್ಯಸ್ವರೂಪವೂ ಮನೋಹರವಾಗಿರುವದು. ಇಮಾರತು ಚಲೋದು, ಗಾಳಿ, ಬೆಳಕುಗಳು, ಸಾಕಷ್ಟು, ಉಪಕರಣಗಳು ವಿಪುಲ; ಖುರ್ಚಿ, ಬೆಂಚು, ನಕಾಶ, ಪುಸ್ತಕ ಚಿತ್ರ ಮುಂತಾದವುಗಳು ಆಯಾ ಸ್ಥಳದಲ್ಲಿ ಇರುವವು. ಶಾಲೆಯಲ್ಲಿ ಎಲ್ಲಿ ನೋಡಿದರೂ ವ್ಯವಸ್ಥೆಯೂ, ಸ್ವಚ್ಛತ್ವವೂ ದೃಷ್ಟಿಗೋಚರವಾಗುವವು. ಶಾಲೆಯ ಅಟ್ಟಣಿಗೆಯಲ್ಲಿ ಬಂದು ದೊಡ್ಡ ದಿವಾಣಖಾನೆ ಇರುವದು. ಅದಕ್ಕೆ ಎರಡು ಕಡೆಯಿಂದ ಮಾರ್ಗವಿರುವದು. ಅಲ್ಲಿ ಎಲ್ಲ ಹುಡುಗರಿಗೆ ಕೊಡಲ್ಪಡುವ ಸಾಮಾನ್ಯವಾದ ಶಿಕ್ಷಣವು ನಡೆಯುವದು ಸಾರಾಂಶ ವಿದ್ಯಾಮಂದಿರದಲ್ಲಿ ಪ್ರವೇಶಮಾಡಿದ ಶ್ರೇಷ್ಠಕನ ಮನವು ಅತಿ ವ್ಯಗ್ರವಾಗಿದ್ದರೂ ಇಲ್ಲಿ ಬಂದ ಬಳಿಕ ಅತಿ ಶಾಂತತೆಯನ್ನು ಪಡೆಯದೆ ಇರದು.

ವಿದ್ಯಾರ್ಥಿಗಳು ಸ್ವಚ್ಛವಾದ ಪೂರ್ಣ ವೇಷಾಕುಗಳನ್ನು ಹಾಕಿಕೊಂಡಿರುವರು. ಮುಖದಲ್ಲಿ ಬಾಲಕಳೆ

ಯು ಉಕ್ಕುತ್ತಿರುವದು, ಉಲ್ಲಾಸವು ತುಳುಕುತ್ತಿರುವದು. ನಸು ನಗೆಯು ಹೊರಸೂಸುತ್ತಿರುವದು, ಚಾಪಲ್ಯವು ಒಡೆದು ಕಾಣುತ್ತಿರುವದು, ಆನಂದವು ಹೊರಚಲ್ಲುತ್ತಿರುವದು. ಸಾರಾಂಶ ಹಬ್ಬದ ದಿವಸ ಸುಗ್ರಾಸವನ್ನು ಉಂಡು ಬಳ್ಳೀ ಉಡುಪುಗಳನ್ನು ಹಾಕಿಕೊಂಡು ತಾಯಿಯ ಜೊತೆಯಲ್ಲಿ ಕುಳಿತು ಸರಸವಾಡುತ್ತಿರುವ ಬಾಲಿಕೆಯರಂತೆ ಅವರು ಕಾಣುತ್ತಿರುವರೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಈ ಗುಣವು ವಿದ್ಯಾರ್ಥಿಗಳಲ್ಲುಂಟಾಗಬೇಕಾದರೆ ಶಿಕ್ಷಕಿಯರು ತಾಯಿಗಳಿಗಿಂತ ವಿದ್ಯಾರ್ಥಿಗಳ ಶಾರೀರಿಕ ನೈತಿಕ ಮಾನಸಿಕ ಪ್ರವೃತ್ತಿಗಳನ್ನು ತಿದ್ದುವ ಕೆಲಸದಲ್ಲಿ ಹೆಚ್ಚು ಮಮತೆಯನ್ನು ತೋರಿಸುತ್ತಿರಬೇಕೆಂದು ಸ್ಪಷ್ಟವಾಗುತ್ತದೆ. ಹಾಗಿರುವದು ನಿಜವೆಂದು ನಮಗೆ ಮನವರಿಕೆಯೂ ಆಯಿತು. ಯಾವ ಶಿಕ್ಷಕಿಯರಾದರೂ ಗಂಟು ಮೋರೆಯಿಂದ ಬಿರುಸು ನುಡಿಗಳನ್ನಾಡುತ್ತ ಕಾಲಪ್ಪಳಿಸುತ್ತಾ ಅಡ್ಡಾಡಿದ್ದು ನಮ್ಮ ಕಣ್ಣಿಗೆ ಬೀಳಲಿಲ್ಲ.

ಈ ಸಾಲೆಯೊಳಗಿನ ತಿದ್ದುವಿಕೆಯು ಮೇಲಾದ್ದೆಂದು ನಾವು ನಿಷ್ಕರ್ಷವಾಗಿ ಹೇಳುತ್ತೇವೆ. ಹುಡುಗರು ಅಧ್ಯಾಪಕನ ಅಪ್ಪಣೆಯನ್ನು ಕೇಳಲೇಬೇಕೆಂಬದು ಸತ್ಯವು. ಅದರಂತೆ ಎಲ್ಲ ಸಾಲೆಯಲ್ಲಿಯೂ ಕೇಳುತ್ತಾರೆ. ಆದರೆ ಈ ಆಜ್ಞಾಧಾರಕತ್ವವು ಎರಡು ಬಗೆಯಿಂದ ಒಡೆದು ಕಾಣುವದು. ಶಾಲೆಯಲ್ಲಿ ಮಾಸ್ತರನ ಮಾತನ್ನು ಕೇಳದಿದ್ದದ್ದು ನಿಮಗೆ ಕಾಣದಿದ್ದರೂ ಅಪ್ಪಣೆಯನ್ನು ಕೇಳುವವರ ಮುಖಲಕ್ಷಣದಿಂದಲೂ, ಅಪ್ಪಣೆಕೊಡುವವನ ಮುಖಮುದ್ರೆ, ಸ್ವರಗಳಿಂದಲೂ, ಅಲ್ಲಿಯ ವಿಧೇಯತೆಯ ಬೆಲೆಯನ್ನು ಕಟ್ಟಬಹುದು. "ತಮ್ಮಾ ಇಲ್ಲಿ ಬಾರೋ" ಎಂದು ಶಿಕ್ಷಕನು ಕರೆದರೆ ಹುಡುಗನು ಎದ್ದು ಬಂದು ಮಾರೀ ಜೋಲುಹಾಕಿಕೊಂಡು ನಿಂತರೆ, ಇಲ್ಲವೆ ಕಣ್ಣಿನಿಂದ ಅಂಜಿಕೆಯನ್ನು ವ್ಯಕ್ತಪಡಿಸುತ್ತಿದ್ದರೆ, ಅಥವಾ ಮುಖದಲ್ಲಿ ಬೇಸರವನ್ನು ತೋರಿಸುತ್ತಿದ್ದರೆ ಬತ್ತಾಯದಿಂದ ಬಂದ ವಿಧೇಯತೆಯೆಂದು ಹೇಳಲಿಕ್ಕೆ ಜಾಡ್ಡಿ ಇಲ್ಲ. ಇದೊಂದೇ ಮಾತಿನಿಂದ ಅವನ ನಿತ್ಯದ ಲಳಿ

ಕೆಯ ಬೆಲೆಯನ್ನು ಸಹ ಕಟ್ಟಬಹುದು. ಕಲಿಸುವಾಗ ಪ್ರಶ್ನೆ ಮಾಡಲು ಅದರ ಉತ್ತರವನ್ನು ಕೊಡುವಾಗ ಹುಡುಗರು ಏಳುವದು ಕೂಡುವದು ನೋಡುವದು ನುಡಿಯುವದು ಮುಂತಾದ ಹಾವಭಾವಗಳಿಂದಲೂ, ಮಮತೆಯ ಅಥವಾ ಒತ್ತಾಯದ ವಿಧೇಯತೆಯಂಬದು ಬಿಡದು ಕಾಣುತ್ತದೆ. ಆದರೆ ನಾವು ನೋಡಿದ ಶಾಲೆಯಲ್ಲಿ ವಿದ್ಯಾರ್ಥಿಗಳು, ಉಲ್ಲಾಸದ ಮುಖಮುದ್ರೆಯಿಂದಲೂ ಶಾಂತವಾದ ಗಂಭೀರ ವೃತ್ತಿಯಿಂದಲೂ ಅಪ್ಪಣೆಯನ್ನು ಪಾಲಿಸುವರು. ಉತ್ತರವನ್ನು ಹೇಳುವಾಗ ನಸುನಗೆಯನ್ನು ಬೀರುತ್ತ ಮುದ್ದುಮೊಗದಿಂದ "ನಾನು ಹೇಳಲಿಯಾ" ಎಂದು ನುಡಿಯುತ್ತ ಹೇಳಿದ ಕೂಡಲೆ ಆನಂದದಿಂದ ಕೂಡುತ್ತ ಆಟವಾಡಿದಂತೆ ವರ್ತಿಸುವದನ್ನು ನೋಡಿ ಆನಂದ ಬಾಷ್ಪಗಳನ್ನು ಉದರಿಸದವನು ಕಲ್ಲುಮನಸಿನವನೆಂದು ಹೇಳಬಹುದು ಹುಡುಗರು ಸಲಿಗೆಯಿಂದ ಮೈಚಳಿ ಬಿಟ್ಟು ತಮ್ಮ ವಿಚಾರವನ್ನು ಬೈಲಿಗಿಡಲಿಕ್ಕೆ ಹೆದರುತ್ತಿದ್ದಿಲ್ಲ; ಆದರೂ ಸಭ್ಯತನವು ಅವರಲ್ಲಿ ವಾಸವಾಗಿತ್ತು. ಇದು ಆ ಶಿಕ್ಷಕಿಯರ ಪ್ರಭಾವವೆಂದು ನಿರ್ವಾದವಾಗಿ ಹೇಳಬಹುದು. ಈ ಶಿಕ್ಷಕಿಯರ ಶ್ರೇಷ್ಠಯುಕ್ತವಾದ ಸ್ವರವೂ, ಚಿಕ್ಕ ಮಕ್ಕಳ ಹಿತೇಚ್ಛೆಯನ್ನು ಸೂಚಿಸುವ ಮುಖಮುದ್ರೆಯೂ, ಇನ್ನೂ ನಮ್ಮ ಕಣ್ಣಿಗೆ ಕಟ್ಟಿದಂತಾಗಿವೆ. (ಸಶೇಷ).

PROPOSED OBJECT LESSONS.

ಸೂಚಿಸಿದ ವಸ್ತುಪಾಠಗಳು.

(ಎಂದಿನ ಪುಟದಿಂದ ಮುಂದೆ ಸಾಗಿದ್ದು.)

೩ ಆಕೃತಿ.

೧ ಎಲೆಗಳ ಆಕಾರಗಳು-ಹುಡುಗರು ಎಲೆಗಳ ಚಿತ್ರಗಳನ್ನು ತೆಗೆಯಬೇಕು. ಆಕಾರಗಳನ್ನು ಮಾಡಬೇಕು.

* ೨ ಸಾದಾ ಹೊಲಿಗೆಯ ಕೆಲಸದಲ್ಲಿಯೂ ಕಸೂತೀ ಕೆಲಸದಲ್ಲಿಯೂ ಸುಲಭವಾದ ಮಾದರಿಯನ್ನು ಎಲೆಗಳ ಆಕಾರದಂತೆ ಮಾಡುವದು.

೫ ಬಣ್ಣ.

೧ ಸ್ವಭಾವಿಕ ಬಣ್ಣ (ಉದಾಹರಣಾರ್ಥ ಎಲೆಗಳ ಬಣ್ಣ, ಹೂಗಳ ಬಣ್ಣ, ಖನಿಜಗಳ ಬಣ್ಣ).

೨ ಪಡಿಯಚ್ಚಿನಲ್ಲಿಯು ಬಣ್ಣಗಳು. ಕಸೂತಿಯು ಮತ್ತು ಹೊಲಿಗೆಯ ಕೆಲಸದಲ್ಲಿ ಅವುಗಳನ್ನು ಆರಿಸಿಕೊಂಡು ಬೇರೆ ಬೇರೆ ವಿಧವಾಗಿ ಮಿಶ್ರಣ ಮಾಡುವದು.

೬ನೇ ಸಮುದಾಯ.

೧ ಸೋಡಾ.

೨ ಕಲ್ಲಿದ್ದಲಿ ಅಥವಾ ಇದ್ದಲಿ.

೭ನೇ ಸಮುದಾಯ.

೧ ಕಬ್ಬಿಣ ಅಥವಾ ಉಕ್ಕು. — ಸಾಧಾರಣ ಮತ್ತು ವಿಶೇಷ ಧರ್ಮಗಳು ಸಿಗುವ ಸ್ಥಳ. ಅವುಗಳಿಂದಾಗುವ ಒಡವೆಗಳು. ಉಪಯೋಗ.

ಟೀಪು—ತಪರದ ವಿಷಯಕ್ಕೂ ಹೇಳಬಹುದು. ಇಲ್ಲವೆ ಸೀಸನ ಬದಲಾಗಿ ತವರವನ್ನು ಕಲಿಸಬಹುದು.

೪ನೇ ಸಮುದಾಯ.

೧ ನೆಲ ಮತ್ತು ಸಮುದ್ರ ೬ನೇ ಇಯತ್ತ್ತಿಗೆ ಹೇಳಿದ್ದ ದೃಷ್ಟಾಂತ ವಿಶೇಷ ವರ್ಣನೆ

೨ ಮಳೆ ಮತ್ತು ಮೋಡಗಳು :—ಭೂನೀಭವನ ಜಾಷ್ಪೀಭವನಗಳ ಮೂಲತತ್ವಗಳು ಮೋಡಗಳು ಚಲಿಸುವ ರೀತಿಗಳು, ಕಾವುಸಬಿಲ್ಲು ಮಳೆಯುನ್ನಳೆಯುವ ಯಂತ್ರ, ಅದೂ ಸ್ಥಳದಲ್ಲಿ ಎಷ್ಟೆಷ್ಟು ಮಳೆ ಬೀಳುತ್ತದೆಂಬ ಜ್ಞಾನ ಅಂದರೆ ಸ್ಥಾನಿಕ ವೃಷ್ಟಿಯ ಪರಿಮಾಣ.

೩ ಪರ್ವತಗಳೂ ನದಿಗಳೂ — ಹುಟ್ಟುವರೀತಿ, ಕಂದರಗಳು, ಬೈಲುಗಳು, ಬುಗ್ಗೆ (ಶಲೆ)ಗಳು, ಇವುಗಳ ಬಗ್ಗೆ ಕೆಲವು ಸಂಗತಿಗಳ ಜ್ಞಾನ. ನದಿಗಳಿಂದ ಬಯ್ದು ಕಾಲವೆಗಳು ನದಿಗಳ ದಂಡೆಗಳು.

೫ನೇ ಸಮುದಾಯ.

೧ ಗಿಡದ ಜೀವನಕ್ಕೆ ಮುಖ್ಯಾಧಾರವಾದ ಭಾಗಗಳಿಂದಾಗುವ ಕೆಲಸ.

* ೨ ಹೂವು, ಅದರ ಭಾಗಗಳು, ಅವುಗಳಿಂದಾಗುವ ಕಾರ್ಯಗಳು.

೩ ಬಾದಾಮಿಯ ಗಿಡ.

೪ ನೇ ಸಮುದಾಯ.

೧ ಬೆಕ್ಕು ಮತ್ತು ಅದೇ ವರ್ಗದ ಇತರ ಪ್ರಾಣಿಗಳು.

೨ ನಾಯಿ ಮತ್ತು ಅದೇ ವರ್ಗದ ಇತರ ಪ್ರಾಣಿಗಳು.

೩ ರೇಶ್ಮೇ ಹುಳವೂ ಅದರ ಹುಟ್ಟುವಳಿಗಳೂ.

೫ನೇ ಸಮುದಾಯ.

೧ ಮುಖ್ಯ ಮುಖ್ಯ ಎಲುವುಗಳು ಉದಾಹರಣಾರ್ಥವಾಗಿ ತಲೆ, ಕೈ, ಕಾಲು, ಬೆನ್ನೆಲಬು (ಚನ್ನಾಗಿ ಕೂಡುವದು ನಿಲ್ಲುವದು ನಡಿಯುವದು ಇವುಗಳ ಮಹತ್ವವನ್ನು ತಿಳಿಸುವದು)

೨ ತ್ವಚೆ ಮತ್ತು ಅದರ ಕಾರ್ಯಗಳು. (ಸ್ನಾನಮಾಡುವದು ಇವುಗಳ ಅಗತ್ಯವನ್ನು ಹೇಳುವದು.)

೩ ಶರೀರದಲ್ಲಿ ಮುಖ್ಯ ಮುಖ್ಯ ಅಂತರ್ಭಾಗಗಳು. (ಹೃದಯ, ಅನ್ನಾಕಯ ಮಿದುಳು, ಪುಪ್ಪುಸಗಳು) ಅವುಗಳ ಕಾರ್ಯಗಳು

೬ನೇ ಸಮುದಾಯ.

೧ ಎಣ್ಣೆ ಹುಟ್ಟುವ ಕಾಯಿ ಹಾಗೂ ಬೀಜಗಳು (ಎಳ್ಳು ತೆಂಗಿನಕಾಯಿ, ಕೊಪ್ಪ ಎಣ್ಣೆ) ಅವುಗಳ ಹುಟ್ಟುವಳಿಗಳು.

೨ ಮೆಣಸಿನ ಬಳ್ಳಿ ಮತ್ತು ಅದರ ಹುಟ್ಟುವಳಿಗಳು.

* ೩ ಸಣಬು ಮತ್ತು ಅದರ ಹುಟ್ಟುವಳಿಗಳು.

೪ ಕಾಫಿ (ಚಹ)

೯ನೇ ಸಮುದಾಯ

ರೇಶಿಮೆ, ಮತ್ತು ರೇಶಿಮೆಯಿಂದ ನೇಯುವದು.

೨ ಅರಳೀ ನೂಲುವದು.

೧೦ನೇ ಸಮುದಾಯ.

೧ ತಕ್ಕಡಿ (ತರಾಜು)

೨ ಗಡಿಯಾಳ ಅಥವಾ ಉಸುಬಿನ ಗಡಿಯಾಳ.

೧೧ನೇ ಸಮುದಾಯ.

೧ ಆಹಾರ ಅದರ ಬೇರೆ ಬೇರೆ ಪ್ರಕಾರಗಳು. ಅದರ ವಿಶೇಷ ಧರ್ಮಗಳು, ಅವುಗಳ ಉಪಯೋಗ.

* ೨ ಮಾಡಿಸಿಕೊಳ್ಳುವ ಜೀನಸುಗಳು. ಅವುಗಳ ಪ್ರಕಾರಗಳು, ವಿಶೇಷ ಧರ್ಮಗಳು, ಉಪಯೋಗಗಳು.

* ೩ ಬಟ್ಟೆಗಳು ಅವುಗಳ ಅವಶ್ಯಕತೆ, ಪ್ರಕಾರಗಳು ಅವುಗಳನ್ನು ಸ್ವಚ್ಛವಿಡುವ ಹಾಗೂ ಕಾದಿಡುವ ಮತ್ತು ಪರುಕುಗಳನ್ನು ಗಟ್ಟಿಮಾಡುವ ರೀತಿಗಳು.

* ೪ ಒಗೆದು ಸ್ವಚ್ಛಮಾಡಲಿಕ್ಕೆ ಬೇಕಾದ ಪದಾರ್ಥಗಳು ನೀರು, ಸಾಬಣ, ಸೌಳು ಮುಂತಾದವುಗಳ ಪ್ರಕಾರಗಳು ಮತ್ತು ಅವುಗಳನ್ನು ಬೇರೆ ಬೇರೆಯಾಗಿ ಉಪಯೋಗಿಸುವ ತರಗಳು, ಬೇರೆ ಬೇರೆ ಬಟ್ಟೆಗಳನ್ನು ಒಗೆಯುವದರಲ್ಲಿ ಇವುಗಳ ಯೋಗ್ಯತೆ.

ಟೀಪು—* ಈ ಗುರುತು ಮಾಡಿದ ಪಾಠಗಳನ್ನು ಈ ಇಯತ್ತಿಗೆ ಕಲಿಸದೆ ಮುಂದೆ ೪ನೇ ಇಯತ್ತಿಗೆ ೫ನೇ ೬ನೇ ಸದರುಗಳಂತೆ ಕಲಿಸಬಹುದು. ಉಳಿದವುಗಳನ್ನು ಅವಶ್ಯಕಂಡರೆ ೨ ಅಥವಾ ೩ ಭಾಗಗಳಾಗಿ ಕಲಿಸಬಹುದು.

ದೇಶಭಾಷೆಯ ಪ್ರಾಥಮಿಕ ಹುಡುಗರ ಶಾಲೆಗಳ ಬಗ್ಗೆ ಸೂಚಿತ ವಸ್ತುಪಾಠ ಕ್ರಮ.

ಬಾಲಕರ ವರ್ಗ.

೧ನೇ ಸಮುದಾಯ.

(೫) ಪದಾರ್ಥ. ಕಲ್ಲುಗಳು. ಕಟ್ಟಿಗೆಯ ತುಂಡುಗಳು. ಅರಿಸಿನಮುದ್ದಿ.	ಉದ್ದಳತೆ, ಅಗಲ, ಪಿಂಡ ಮುಂತಾದವುಗಳನ್ನೂ ಹುರುಬುರಕುತನ, ನುಣುಪು ಕಠಿಣತ್ವ, ಮೃದುತ್ವ ಭಾರ, ಹಗುರುತನ ಮುಂತಾದವುಗಳನ್ನೂ ತಿಳಿಸಿಕೊಡುವದು.
(೬) ಆಕಾರ ಕಟ್ಟಿಗೆಯ ಗೋಲು. ಕಟ್ಟಿಗೆಯ ಫಲಕ. ಕಟ್ಟಿಗೆಯ ಸಿಲಿಂದರ,	ಫಲಕ ಅಥವಾ ಗೆಟ್ಟಿ ಆಕಾರದ ಬೇರೆ ಬೇರೆ ತರಗಳನ್ನೂ ಸರಳ ಹಾಗೂ ವಕ್ರರೇಖೆಗಳ

ಶಂಕ್ವಾಕೃತಿ. ಹುಡುಗರ ಸಲುವಾಗಿ ಮಾಡಿದ ಇಟ್ಟಂಗಿಗಳು.	ನ್ನೂ ತಿಳಿಸಿಕೊಡುವದು. ಬಾಲಕರು ಗೆರೆಗಳನ್ನು ತೆಗೆದು ಮಣ್ಣಿನಿಂದ ವಸ್ತುಗಳ ಆಕಾರವನ್ನು ಮಾಡಬೇಕು.

(೫) ಬಣ್ಣ.

ಬಿಳಿ, ಕರೆ, ಕೆಂಪು, ಹಸರು, ನೀಲಿ, ಹಳದಿ ಬಣ್ಣದ ಗೆಂಡುಗಳು.	ಬಣ್ಣದ ವಿಷಯಕ್ಕೆ ಸುಲಭ ಸಂಗತಿಗಳನ್ನು ಹೇಳುವದು. ಬಣ್ಣಗಳನ್ನು ಹೇಳಿದ ಕ್ರಮವಿಂದಲೇ ಕಲಿಸಬೇಕು.

ಟೀಪು—ಪದಾರ್ಥ ಸಮೂಹದ ಪುರವಣಿಯಾಗಿ ಒಂದು ಹುಳಿ, ಮತ್ತೊಂದು ಸವಿ, ಹೀಗೆ ಎರಡು ಕಿತ್ತಲೆ ಹಣ್ಣುಗಳನ್ನು ತೆಕ್ಕೊಂಡು ಸ್ವಾದ ಅಥವಾ ರುಚಿಯ ಬಗ್ಗೆ ಸಂಗತಿಗಳನ್ನು ಕಲಿಸಬೇಕು.

ಇನೇ ಸಮುನಾಯೆ.

(ಸಕೇಷ.)

ಕೃಷಿಶಾಸ್ತ್ರವು.

(೭೦೪ನೇ ಪುಟದಿಂದ ಮುಂದೆ ಸಾಗಿದ್ದು.)

ಕಾರ್ಬೊನೇಟ ಆಫ ಲಾಯಿಮು—ಇದು ಖಡು ಹಾಗೂ ಸುಣ್ಣದ ಕಲ್ಲಿನ ರೂಪದಿಂದ ಬಹಳ ಸಿಗುತ್ತದೆ. ಇದು ಭೂಮಿಯೊಳಗೆಲ್ಲ ಕಡೆಯಲ್ಲಿ ಇರುತ್ತದೆ. ಹಳಹಳಕಿನ ರೂಪದಿಂದಿದ್ದಾಗ ಇದಕ್ಕೆ 'ಕ್ಯಾಲ್‌ಸಾಯಿಟ' ಎಂತಲೂ 'ಆಯಸಲಂಡಸ್ಪಾರ' ಎಂತಲೂ ಅನ್ನುತ್ತಾರೆ.

ಡೋಲೊಮಾಯಿಟ—ಇದು ಮ್ಯಾಗ್ನೇಸಿಯದಿಂದ ಕೂಡಿದಸುಣ್ಣದಕಲ್ಲು. ಇದು ಕಾರ್ಬೊನೇಟಆಫ್‌ಲಾಯಿಮು ಕಾರ್ಬೊನೇಟ ಆಫ ಮ್ಯಾಗ್ನೇಶಿಯಗಳ ಮಿಶ್ರಣದಿಂದ ಉಂಟಾದದ್ದು. ಈ ಮಿಶ್ರಣದಲ್ಲಿ ಮ್ಯಾಗ್ನೇಸಿಯದ ಒಂದು ಪ್ರಮಾಣಕ್ಕೆ ಸುಣ್ಣದ ಎರಡು ಪ್ರಮಾಣಗಳಿರುವವು.

ಅಪಾಟಾಯಿಟ—ಹಳಹಳಕಾದ ಸುಣ್ಣದ ಫಾಸಫೇಟು. ಅಮೇರಿಕದ ಸಂಯುಕ್ತ ಸಂಸ್ಥಾನ ಕಾನಡಾಗಳಲ್ಲಿ ಇದರ

ಬಹು ಸುಂದರವಾದ ಹಸರು ಬಣ್ಣದ ಪಾರದರ್ಶಕ ಹಳಕು ಗಳು ಸಿಗುತ್ತವೆ. ನಾರ್ವೆ ದೇಶದಲ್ಲಿ ಇದರ ಕೆಂಪುಬಣ್ಣದ ಅಪಾರ ದರ್ಶಕ ಹಳಕುಗಳು ಶಿಗುವವು.

ಹಳಕಿನ ರೂಪದಿಂದಿಲ್ಲದ ಫಾಸಫೇಟ ಆಫ್ ಲಾಯುಮು ಇದಕ್ಕೆ 'ಫಾಸಫೋರಾಯಿಟ್' ಎಂದೆನ್ನುತ್ತಾರೆ. ಇದು ಅಮೇರಿಕಾ ಸ್ಪೇನ ಫ್ರಾನ್ಸಗಳಲ್ಲಿಯೂ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಸಿಗುತ್ತದೆ. ಇದನ್ನು 'ಸುಪರ ಫಾಸಫೇಟ ಆಫ್ ಲಾಯಿಮು' ಎಂಬದನ್ನು ತಯಾರ ಮಾಡುವದರಲ್ಲಿ ಉಪಯೋಗಿಸುತ್ತಾರೆ.

ಜಿಪ್ಸಮ್—(ಬಂದುತರದ ಸುಣ್ಣದಕಲ್ಲು.) ಇದು ಬಹಳ ಸ್ಥಳಗಳಲ್ಲಿ ಹೇರಳವಾಗಿ ಸಿಗುವ (Hydrated sulphate of line) ಸುಣ್ಣ ಗಂಧಕ ಹಾಗೂ ನೀರಿನ ಮಿಶ್ರಣದಿಂದಾದ ಪದಾರ್ಥವು. ಇದರೊಳಗಿನ ನೀರನ್ನು ಉಷ್ಣತೆಯಿಂದ ಹೊರಗೆಡವಿದರೆ 'ಪ್ಲಾಸ್ಟರ ಆಫ ಪಾರಿಸ' ಎಂಬ ಪದಾರ್ಥವು ಆಗುತ್ತದೆ. ವಿದ್ಯಾರ್ಥಿಗಳು ಈ ಖನಿಜಗಳ ಮಾದರಿಗಳನ್ನು ಪರೀಕ್ಷಿಸಿ ನೋಡಿ, ಅವುಗಳನ್ನು ಗೊತ್ತು ಹಿಡಿಯಲಿಕ್ಕೆ ಕಲಿಯಬೇಕು. ಹಳಹಳಕಿನ ರೂಪದಿಂದಿದ್ದರೂ ಇದು ಇಂಥ ಖನಿಜದ ಹಳಕೇ ಎಂದು ಅದನ್ನು ಬೇರೆಮಾಡಿ ಗೊತ್ತು ಹಿಡಿಯಲಿಕ್ಕೂ ಕಲಿಯಬೇಕು.

ಇನ್ನು ಮುಂದೆ ನಾವು ಬಂಡೆಗಳ ಬೇರೆಬೇರೆ ಜಾತಿಗಳನ್ನು ಸರ್ವಸಾಧಾರಣವಾಗಿ ತಿಳುಕೊಳ್ಳುವ. ಬಂಡೆಗಳನ್ನೆ ನಾವು ಮೊದಲು ಪ್ರಸ್ಫರೀಭೂತಶಿಲೆ ಪದರುಗಳುಳ್ಳ ಶಿಲೆ (ಜಲಮಯ) ಪದರುಗಳಿಲ್ಲದ ಶಿಲೆ (ಅಗ್ನಿಮಯ) ಅಪ್ರಸ್ತರೀಭೂತ ಶಿಲೆಗಳೆಂಬ ಎರಡು ಬಂಡೆಗಳ ಗುಂಪುಗಳನ್ನು ಮಾಡಿರುವೆವಷ್ಟೆ. ಅಪ್ರಸ್ತರೀಭೂತ ಶಿಲೆಗಳಿಗೆ ಪ್ರಾಥಮಿಕ ಬಂಡೆಗಳೆಂದೆನ್ನುತ್ತಾರೆ. ಯಾಕಂದರೆ ಇವು ಪ್ರಸ್ತರೀಭೂತ ಶಿಲೆಗಳಿಗಿಂತ ಮುಂಚೆ ಏಗಿರಲಿಕ್ಕೆಬೇಕು. ಈ ಪ್ರಸ್ತರೀಭೂತ ಶಿಲೆಗಳು ಅಪ್ರಸ್ತರೀಭೂತ ಶಿಲೆಗಳ ಮೂಲತತ್ವಗ

ಪೃಥಕ್ಕರಣದಿಂದಲೂ ಅವುಗಳಿಂದ ಒಡೆದು ಬೇರೆಯಾದ ತುಂಡುಗಳಿಂದಲೂ ಆಗಿರುತ್ತವೆ.

ಅಪ್ರಸ್ತರೀಭೂತ ಶಿಲೆಗಳ ವರ್ಗೀಕರಣವು ಕೆಳಗೆ ಬರೆದಂತಿರುವದು.

			ಉದಾಹರಣೆ.
ಅಗ್ನಿಮಯ	Plutonic (ಭೂಗತ)		Granite. ಕರೀಕಲ್ಲು.
	ಜ್ವಲತ್ಪರ್ವತದ ಸಂಬಂಧವಾದಂಥ	ಬೂದಿ.	ಉಜ್ಜುವಕಲ್ಲು Pumicee.
		ಶಿಲಾರಸ.	ಕೃಷ್ಣಶಿಲೆ. Basalt.
ಬೆಂಕಿಯ ಬಲದಿಂದ ರೂಪಾಂತರವಾಗುವಂಥ			Gneiss. ಬೆಣಚಿಗಲ್ಲಿನ ಹಳಕುಳ್ಳ ಒಂದು ಶಿಲೆ.

ಅಗ್ನಿಮಯಭೂಗತಶಿಲೆ ಜ್ವಲತ್ಪರ್ವತದ ಸಂಬಂಧದ ಶಿಲೆ ಇವೆರಡು ಕೆಲಕಾಲದಲ್ಲಿ ಕರಗಿದ ಸ್ಥಿತಿಯಲ್ಲಿದ್ದವು. ಜ್ವಲತ್ಪರ್ವತದ ಸಂಬಂಧದ ಶಿಲೆಗಳು ಜ್ವಾಲಾಮುಖಿ ಪರ್ವತಗಳೊಳಗಿಂದ ಬೂದಿಯು ರೂಪದಿಂದ ಹೊರಗೆ ಚಲ್ಲಲ್ಪಟ್ಟ ಅಥವಾ ಶಿಲಾರಸ ರೂಪದಿಂದ ಹೊರಗೆ ಸುರವಲ್ಪಟ್ಟ ಗಾಳಿಯ ಸಂಪರ್ಕದಿಂದ ತೀವ್ರವೇ ತಣ್ಣಗಾಗಿವೆ. ಹುರಬುರಕಾದ ಉಜ್ಜುವ ಕಲ್ಲು Punice ಜ್ವಲತ್ಪರ್ವತದ ಸಂಬಂಧದ ಬೂದಿಯಿಂದಾದ ಶಿಲೆಯು. ಅವರಲ್ಲಿದ್ದ ಉಗಿಯು ಸಣ್ಣಗುಳ್ಳೆಗಳಿಂದ ಅದು ಛಿದ್ರಯುಕ್ತವಾಗಿರುತ್ತದೆ.

ಶಿಲಾರಸದಿಂದಾದ ಬಂಡೆಗಳು ಮುಖ್ಯವಾಗಿ ಕೆಳಗೆ ಬರೆದವುಗಳಿರುತ್ತವೆ. ಬ್ಯಾಸಾಲ್ಟ (ಕೃಷ್ಣಶಿಲೆ) ಇದು 'ಆಗಾಯಿಟ' ಫೆಲ್‌ಸ್ಪಾರಗಳಿಂದಾದ ಘನ ಹಾಗು ಜಡವಾದ ಕಪ್ಪು ಬಣ್ಣದ ಬಂಡೆಯು.

ಟ್ರಾಕಾಯಿಟ—ಫೆಲ್‌ಸ್ಪಾರ ಹಾರ್ನ್‌ಬ್ಲೆಂಡಿಗಳಿಂದ ಕೂಡಿದ್ದು ಇದು ಸಾಧಾರಣವಾಗಿ ಕೈಗೆ ಹುರಬುರಕಾಗಿದ್ದು ಬೂದಿಬಣ್ಣದ್ದಿರುತ್ತದೆ.

ಪ್ಲುಟೊನಿಕ ಬಂಡೆಗಳು—ಇವು ಭೂಪೃಷ್ಟದ ಕೆಳಗೆ ಗಾ ಳಿಯು ಸಂಪರ್ಕದಿಂದಲೂ ಭೂಮಿಯ ಭಾರದಿಂದಲೂ ಉಂ ಟಾಗಿರುತ್ತವೆ. ಅವು ಬಹಳ ಸಾವಕಾಶವಾಗಿ ತಣ್ಣಗಾಗಿ ರುತ್ತವೆ. ಜ್ವಾಲಾಮುಖಿಗಳಿಂದಾದ ಬಂಡೆಗಳೊಳಗಿನ ಹಳ ಕುಗಳಿಗಿಂತ ಇವುಗಳೊಳಗಿನ ಹಳಕುಗಳು ಬಹಳ ದೊಡ್ಡ ವಿರುತ್ತವೆ. ನಮಗೆ ಒಳಿತಾಗಿ ಗೊತ್ತಿದ್ದ ಪ್ಲುಟಾನಿಕ ಬಂ ಡೆಯೆಂದರೆ ಗ್ರ್ಯಾನಾಯಿಟು (ಕಣ್ಣೋಚ್ಚೆಯಶಿಲೆ) ಇದು ಜೇಡಿಪಿಗಲ್ಲು ಅಭ್ರಕ ಫೆಲ್‌ಸ್ಪಾರಗಳಿಂದ ಆಗಿರುತ್ತದೆ.

DEPARTMENTAL NOTICE.

ನೋಟೀಸು

ಧಾರವಾಡ ಟ್ರೇನಿಂಗಕಾಲೇಜಿನ ಪ್ರವೇಶಪರೀಕ್ಷೆಯು ಬರುವ ನವ್ಹೆಂಬರ ತಿಂಗಳ ೨೬ನೇ ತಾರೀಖು ಸೋಮವಾ ರ (ಕಾರ್ತಿಕ ವದ್ಯ ೧೨) ಕನ್ನಡ ೬ನೇ ಇಯತ್ತೆಯಂತೆ ಆ ಗುವದು. ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟು ಪಡೆದವರು ಇಲ್ಲವೆ ಯುನಿ ವ್ಹರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರು (ಅಂದರೆ ಫಾಯನ ಲ್, ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರು.) ಸಶ ಕ್ತರೂ, ವ್ಯಂಗರಹಿತರೂ, ತಕ್ಕಮಟ್ಟಿಗೆ ಎತ್ತರ ಇರುವಂ ಥವರೂ, ೧೬ ರ ಮೇಲೆ ೨೦ ರ ಒಳಗೆ ವಯಸ್ಸುಳ್ಳವರೂ ಇರಬೇಕು. ಅವರು ವಯಸ್ಸಿನ ದಾಖಲೆಯನ್ನೂ ಮುಲ್ಕಿ ಸರ್ಟಿಫಿಕೇಟನ್ನೂ ಸಂಗಡ ತೆಗೆದುಕೊಂಡು ತಾರೀಖು ೨೪ ನೇ ನವ್ಹೆಂಬರ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗ ಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತಮರೀತಿಯಿಂದ ಪಾಸಾದ ಜನರನ್ನು ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು.

೨. ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ಬಿಸಿ ಇಯತ್ತೆಯ ಅಂಕಲಿಪಿ ಮೊದಲ್ಗೊಂಡು ೬ನೇ ಇಯತ್ತೆಯ ವರೆಗೆ ಇರುವ ಯಾವತ್ತು ಪುಸ್ತಕಗಳನ್ನು ಚನ್ನಾಗಿ ಓದಿ

ಮನನ ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ ಶೇರಿಸಿ ಕೊಳ್ಳಲ್ಪಟ್ಟವರು ದಸ್ಖತ್ತುವಹಿಗಳನ್ನು ಬರಕೊಡಬೇಕಾಗುತ್ತದಪ್ಪೇ; ಅದಕ್ಕೆ ೧೫೦ ರೂಪಾಯಿಗಳ ಆಯಖಿಉಳ್ಳ ಇಬ್ಬರು ಜಾಮೀನದಾರರು ಬೇಕಾಗುವದು. ಅವರನ್ನು ಸಹ ಗೊತ್ತುಮಾಡಿಕೊಂಡು ಬರಬೇಕು. ಅಂದರೆ ಕಾಲೇಜದಲ್ಲಿ ಸೇರಿಸಿಕೊಂಡಕೂಡಲೆ ಕಾಲೇಜದ ನಿಯಮುಗಳಿಗನುಸರಿಸಿ ಕರಾರಪತ್ರ ಬರಕೊಡಲಿಕ್ಕೆ ಅನುಕೂಲವಾಗುವದು. ಕಾಲೇಜದಲ್ಲಿ ನೀತವರು ಕಾಲೇಜದ ನಿಯಮುದಂತೆ ಅಡವ್ಹಾನ್ಸು ೧೦ ರೂ. ಸ್ಟ್ಯಾಂಪಿಗಾಗಿ ೧-೪-೦ ಡ್ರಾಯಿಂಗ ಸಾಮಾನಕ್ಕಾಗಿ ೫ ರೂ ಇಪ್ಪು ಹಣವನ್ನು ಕೊಡಬೇಕಾಗುವದು. ಈ ಹಣವನ್ನೂ ತಮ್ಮ ಖರ್ಚುವೆಚ್ಚಕ್ಕಾಗಿ ಬೇಕಾಗುವ ಹಣವನ್ನೂ ತೆಗೆದುಕೊಂಡು ಬರಬೇಕು.

೩. ಹೊತ್ತುಕೊಳ್ಳಲಿಕ್ಕೂ ಹಾಸಿಕೊಳ್ಳಲಿಕ್ಕೂ ತರುವ ಅರಿವೆಗಳಲ್ಲಿ ೨ ಬೆಚ್ಚಗಾದ ಉಣ್ಣೀ ಅಂಗಿಗಳೂ, ೧ ಜಡವಾದ ಹಚ್ಚಡವೂ, ೨ ಕಂಬಳಿಗಳೂ ಅವಶ್ಯವಾಗಿ ಇರಲಿಕ್ಕೆಬೇಕು. ಉಣ್ಣೀ ಅಂಗಿಗಳನ್ನು ಬೇಕಾದವರಿಗೆ ನಾವು ಇಲ್ಲಿ (ಅವರು ಯೋಗ್ಯ ಖರ್ಚು ಕೊಟ್ಟಲ್ಲಿ) ಮಾಡಿಸಿಕೊಡುವೆವು. ಅವರಿಗೆ ಕ್ಲಾಸಿನಲ್ಲಿ ಹಾಕಲಿಕ್ಕೆ ಯೋಗ್ಯವಾದ ಪೋಷಾಕ ಇರಬೇಕು. ಖರ್ಚು ಕೊಟ್ಟರೆ ಇಂಥ ಪೋಷಾಕಗಳನ್ನು ನಾವು ಮಾಡಿಸಿಕೊಡುವೆವು ತಿಳಿಯುವದು.

ಧಾರವಾಡ ಟ್ರೇ. ಕಾಲೇಜ.
ತಾ॥ ೧೦-೯-೧೯೦೨

S. K. Rodda,
ಪ್ರಿನ್ಸಿಪಾಲ

CORRESPONDENCE.

ಪತ್ರವ್ಯವಹಾರ.

ರಾ. ಸಾ. ಎಡಿಟರೆ ಕನ್ನಡ ಕಾಲಾಪತ್ರಿಕ ಇವರ ಸನ್ನಿಧಿಗೆ—

ಸಾ. ನೆ. ಪೂ. ವಿನಂತಿ—ಮುಂದಿನ ಎರಡು ಮಾತುಗಳಿಗೆ ತಮ್ಮ ಪತ್ರದಲ್ಲಿ ಸ್ಥಳ ದೊರೆದೀತೆಂದು ನಂಬಿದ್ದೇನೆ.

೧೫೫ ದಿವಸಗಳ ದೊಡ್ಡ ಪ್ರವಾಸವು.

ಅಯ್ಯಾ ವಾಚಕರೇ ಶಿರೋಲೇಖನದ ಅವಲೋಕನದಿಂ
ನ ನನ್ನ ಬರಹದ ವಿಷಯವು ತಮ್ಮ ಮನಸ್ಸಿನಲ್ಲಿ ಬಿಂಬಿಸಿ
ಬಹುದು. ಪೂರ್ವಕಾಲದಲ್ಲಿ ಈ ಭರತಖಂಡದ ಜನರು
ದ್ಯಾಭ್ಯಾಸ ಮುಗಿದಕೂಡಲೆ, ತೀರ್ಥಯಾತ್ರೆ ಮುಂತಾದ
ಮಿತ್ತದಿಂದ ದೇಶಸಂಚಾರಗೆಯ್ದು ವ್ಯವಹಾರಜ್ಞಾನವನ್ನು
ಂಪಾದಿಸಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ. ಆದರೆ ಆ ಪ
ತಿಯು ಈಗ ತೀರ ಅದೃಶ್ಯವಾಗಿ, ಪ್ರವಾಸದ ಮಹತ್ವ
ಜನರಿಗೆ ತೋರದಂತಾಗಿದೆ. ಸ್ವಸ್ಥಳದಲ್ಲಿಯೇ ಇದ್ದು
ಪುಸ್ತಕಗಳಲ್ಲಿಯು ವಿಷಯಗಳನ್ನೆಲ್ಲ ತಿರುವಿಹಾಕಿದಾಗ್ಯೂ,
ಪ್ರವಾಸ ಮಾಡಿದ ಹೊರತು ವ್ಯವಹಾರಜ್ಞಾನವು ಬರಲಾರ
ದು. ಇದೇ ತತ್ವವನ್ನವಲಂಬಿಸಿ, ರಾಜಕೀಯ ಸಾಮಾಜಿ
ಕ ಮುಂತಾದ ವ್ಯವಹಾರಜ್ಞಾನ ಮಾಡಿಕೊಡುವದಕ್ಕೂ,
ಮಾರ್ಗದಲ್ಲಿ ಅಲ್ಲಲ್ಲಿ ಕಣುವ ಸೃಷ್ಟಿ ಚಮತ್ಕಾರಗಳಿಂದ
ಸೃಷ್ಟಿಜ್ಞಾನ ಮಾಡಿಕೊಡುವದಕ್ಕೂ, ಮಾರ್ಗದಲ್ಲಿ ಮುಖ್ಯ
ವಾದ ನಮ್ಮ ಸ್ವಂತ ಹೋರೆಯಾದ ಇಲ್ಲಿಯ ಶಿಕ್ಷಣಕ್ಕೂ
ಲ್ಲಲ್ಲಿ ಕಂಡು ಬರುವ ಶಿಕ್ಷಣಕ್ಕೂ ಸರಿಹಚ್ಚಿನೋಡಿ,
ಸಾರವಾದದ್ದನ್ನು ನೆಲೆಗೊಳಿಸಿ, ನಮ್ಮ ಕರ್ನಾಟಕದ ಮೇ
ಗೆ ಮಹೋಪಕಾರ ಮಾಡುವದಕ್ಕೂ, ನಮ್ಮ ಗುರುವ
ರ್ಯರಾದ ರಾವಸಾಹೇಬ ಪ್ರಿನ್ಸಿಪಾಲರವರು, ಈ ಭರತ
ವರ್ಷದಲ್ಲಿ ಮೊದಲನೆಯದೆಂದೂ, ಇಂಗ್ಲಿಷ ರಾಜ್ಯದಲ್ಲಿ ಎ
ರಡನೆಯದೆಂದೂ ಹೆಸರಾದ ಮುಂಬಯಿ ಪಟ್ಟಣದ ಪ್ರವಾ
ಸವನ್ನು ಮಾಡಬೇಕೆಂದು ನಿಶ್ಚಯಿಸಿದರು ಶಿಕ್ಷಣ ಸುಧಾ
ಣೆಯೇ ನಮ್ಮ ಪ್ರವಾಸದ ಮುಖ್ಯೋದ್ದೇಶವಾದ್ದರಿಂದ
ಈ ನಮ್ಮ ಧಾರವಾಡ ಜಿಲ್ಲೆಯೊಳಗಿನ ಕೆಲವು ಶಿಕ್ಷಕರ
ನ್ನು ಅಂದರೆ ಮು ರಾ. ರಾ. ಗೋವಿಂದರಾವ ದೇಶಪಾಂಡೆ,
ಪೌಂ್ಯ ಮಾಸ್ತರ ಧಾರವಾಡ ಮು. ರಾ. ರಾ. ಕಡಪಡಿ ಫೀ
ಟ್ರೇ. ಕಾ. ಮಾಸ್ತರ ಧಾರವಾಡ, ಮು. ರಾ ರಾ. ಕುಂಚೂ
ರ, ಶಾಳಾಮಾಸ್ತರ ಕರ್ಜಗಿ, ಮು. ರಾ. ರಾ. ಗಳಗನಾಥ

ಶಾಲಾಮಾಸ್ತರ ಬಂಕಾಪುರ, ಮು ರಾ ರಾ. ಅಮ್ಮಿನಭಾ
ವಿ, ಶಾಲಾಮಾಸ್ತರ ನೆಗಳೂರ, ಈ ಪ್ರಕಾರ ಐದುಜನ
ಮಾಸ್ತರರನ್ನೊಡಗೊಂಡು ಅಗಷ್ಟ ೨೦ನೇ ತಾರೀಖಿನ ದಿ
ವಸ ಹೊರಡಬೇಕೆಂದು ನಿಶ್ಚಯವಾಗಿ, ಸಿದ್ಧತೆಗೆ ಪ್ರಾರಂ
ಭವಾಯಿತು. ರಾವಸಾಹೇಬ ಪ್ರಿನ್ಸಿಪಾಲರವರು ನಮ್ಮೆ
ಲ್ಲರಿಗೆ, ಕನ್ಸೆಶನ್ ಪಾಸುಗಳನ್ನು (ಉಗೆಬಂಡಿಯ ಬಾ
ಡಿಗೆಯನ್ನು ಅರ್ಧಮಾಡುವ) ತರಿಸಿದರು ಎಲ್ಲ ಸಿದ್ಧ
ತೆಯಾದಮೇಲೆ, ಮೇಲೆ ಹೇಳಿದ ತಾರೀಖಿನ ದಿವಸ ಹಗಲಿ
ನ ನಾಲ್ಕೂವರಿಗಂಟಿಗೆ ರಾವಸಾಹೇಬ ಪ್ರಿನ್ಸಿಪಾಲರವರೂ,
ಗುರುವರ್ಯ ಮು ರಾ ರಾ ಗಣಿತ ಮಾಸ್ತರರೂ, ಮೇಲೆ
ಹೇಳಿದ ಐದುಜನ ಮಾಸ್ತರರೂ, ನಾವು ೨೬ ಮಂದಿ ವಿ
ದ್ಯಾರ್ಥಿಗಳೂ, ನಾಲ್ಕು ಮಂದಿ ಪರಿಚಾರಕರೂ ಕೂಡಿ
೩೬ ಮಂದಿ ಸ್ಟೇಶನಕ್ಕೆ ಹೊರಟೆವು.

ಬಳಿಕ ಧಾರವಾಡದಿಂದ ಪ್ರಣೆಯವರೆಗೆ ಟಿಕೀಟುಗಳನ್ನು
ತಕ್ಕೊಂಡು ಉಗೆಬಂಡಿಯಲ್ಲಿ ಕುಳಿತೆವು. ಧಾರವಾಡದಿಂದ
ಪ್ರಣೆಯವರೆಗೆ ಪ್ರತಿಯೊಬ್ಬರಿಗೆ ೧॥ ಮೂರನೇವರ್ಗದ
ಬಾಡಿಗೆಯೂ ೫೫ ಎರಡನೇವರ್ಗದ ಬಾಡಿಗೆಯೂ ಬಿತ್ತು.

ಈ ಮೇರೆಗೆ ಪ್ರವಾಸ ಮಾಡುತ್ತ ಅರುಣೋದಯಕ್ಕೆ
ಮಿರ್ಜಿಗೆ ಮುಟ್ಟಿದೆವು. ಅಲ್ಲಿ ಎಲ್ಲರೂ ಪ್ರಾತರ್ವಿಧಿಗಳ
ನ್ನು ಮುಗಿಸಿಕೊಂಡು, ಮೊದಲೇ ತಿಳಿಸಿದ ಪ್ರಕಾರ ಸಿದ್ಧ
ವಾದ ಉಪಹಾರ (ಜಹಾ) ವನ್ನು ತಕ್ಕೊಂಡು ಸ್ವಸ್ಥಮಾನ
ರಾಗಿ ಸೃಷ್ಟಿಯ ಕೌತುಕಗಳನ್ನು ನೋಡಬೇಕೆಂಬ ಉದ್ದೇ
ಶದಿಂದ ಗವಾಕ್ಷದ ಕಡೆಗೆ ನೋಡುತ್ತ, ಉಗೆಬಂಡಿಯಲ್ಲಿ
ಕುಳಿತೆವು. ಮಾರ್ಗದಲ್ಲಿ ಇಂದಿನವರೆಗೆ ನಕಾಶದಲ್ಲಿ ಮಾ
ತ್ರ ನೋಡುತ್ತಿದ್ದ ಸಹ್ಯಾದ್ರಿಯನ್ನು ಪ್ರತ್ಯಕ್ಷ ನೋಡಿ, ಅದ
ರ ದೃಶ್ಯಸ್ವರೂಪವನ್ನೂ, ಖಂಡೂಬಾ ದೇವಾಲಯವನ್ನೂ,
ಶಿವನೇರಿ ಕೋಟೆಯನ್ನೂ, ಕಂಡು ಸಂತೋಷಪಡುತ್ತಲೂ
ಆ ಬೆಟ್ಟವನ್ನು ಕಡಿದು ಮಾಡಿದ ಉಗೆಬಂಡಿಯ ಮಾರ್ಗವ

ನ್ನು ನೋಡಿ ಶಾಸ್ತ್ರೀಯ ಜ್ಞಾನದ ಮಹಿಮೆಯನ್ನು ಹೊಗಳಿ
ತ್ತಲೂ, ಸಾಯಂಕಾಲದ ಆರು ಘಂಟೆಗೆ ವಿದ್ಯುದ್ದೀಪಗಳಿಂ
ದ ಚಕಚಕಿಸುವ ಪುಣೆ ಶ್ವೇಶನ್ನವನ್ನು ಸೇರಿದೆವು. ದೊಡ್ಡ
ಪಟ್ಟಣವನ್ನು ಅದೇ ಹೊಸದಾಗಿ ನೋಡಿದಂಥ ನಮಗೆ, ಆ
ನಗರದ ಬಹಿಃಶೋಭೆಯು ಬಹಳ ಆನಂದಾಶ್ಚರ್ಯಗಳ
ನ್ನುಂಟು ಮಾಡಿತು.

ಬಳಿಕ ಪುರಪ್ರವೇಶಮಾಡಿ, ನಮ್ಮ ದಕ್ಷಿಣಭಾಗದ ಮೆ.
ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ವಿಶಾಲವಾದ
ಮನೆಯಲ್ಲಿ ಇಳುಕೊಂಡೆವು. ಆ ಮನೆಯು ಎಲ್ಲ ಸಂಗತಿ
ಗಳಿಗೂ ಬಹಳ ಅನುಕೂಲವಾಗಿತ್ತು. ಈ ಉಪಕಾರ
ಕ್ಕಾಗಿ ಆ ಸಾಹೇಬ ಬಹಾದ್ದೂರವರನ್ನು ಒಂದುವೇಳೆ ಇಲ್ಲಿ
ಹೊಗಳದೆ ಇರಲಾರೆನು. ಇರಲಿ. ಆ ನಗರದಲ್ಲಿ ಮುಂದೆ
ಎರಡು ದಿವಸ ಇದ್ದು, ಡೆಕ್ಕನ್‌ಕಾಲೇಜ, ಫರ್ಗ್ಯುಶನ್‌ಕಾ
ಲೇಜ, ಸಾಯನ್ಸಕಾಲೇಜ ಮುಂತಾದ ವಿದ್ಯಾಲಯಗಳನ್ನೂ
ಇನ್ನೂ ಕೆಲವು ನೋಡತಕ್ಕ ಸ್ಥಳಗಳನ್ನೂ ನೋಡಿದೆವು.
ಕಡೆಯದಿವಸ ಪ್ರಾತಃಕಾಲಕ್ಕೆ ಅಲ್ಲಿಯ ಟ್ರೇನಿಂಗ ಕಾಲೇ
ಜದ ೫ನೇ ವರ್ಷದ ವಿದ್ಯಾರ್ಥಿಗಳು, ನೀರು, ಬಣ್ಣ, ಕೆಂಡ
ರಗಾರ್ಟನ್ನ, ಈ ಮೂರು ಪಾಠಗಳನ್ನು ಹುಡುಗರಿಗೆ ಕ
ಲಿಸಿ ತೋರಿಸಿದರು. ೪ನೇ ದಿವಸ ಅಂದರೆ ತಾರೀಖು ೭ಳ
ನೇ ಅಗಷ್ಟ ದಿವಸ ಬೆಳಗಿನ ೧೦॥ ಘಂಟೆಯ ಗಾಡಿಯಲ್ಲಿ ಕು
ಳಿತು ನಮ್ಮ ಇಲಾಖೆಯ ಮುಖ್ಯ ಪಟ್ಟಣವಾದ ಮುಂಬಯಿ
ಗೆ ಹೊರಟೆವು. ಪುಣೆಯಿಂದ ಮುಂಬಯಿವರೆಗೆ ಪ್ರತಿಯೊ
ಬ್ಬರಿಗೆ ॥= ಮೂರನೇವರ್ಗದ ಬಾಡಿಗೆಯೂ, ೧॥= ಎರಡ
ನೇವರ್ಗದ ಬಾಡಿಗೆಯೂ ಬಿತ್ತು.

ಈ ಪ್ರವಾಸದಲ್ಲಿ ನೋಡತಕ್ಕ ಅಗಾಧವಾದ ಸೃಷ್ಟಿಸೌ
ಷ್ಠವರ್ಯವನ್ನು ಕಂಡೆವು. ಉಗೆಬಂಡಿಯು ಎರಡೂ ಬದಿಗ
ಳಲ್ಲಿ ಕಾಣುವ ಸಹ್ಯಾದ್ರಿಯ ಉತ್ತರವಾದ ಶಿಖರಗಳನ್ನೂ,
ಭೂಮಿಯ ಹೊಟ್ಟೆಯೊಳಗಿನ ದುರ್ಗಪ್ರವಾಹಗಳೇನೋ ಎಂ
ಬಂತೆ, ಅಲ್ಲಲ್ಲಿ ಹೊರಸೂಸುವ ಶುಭ್ರ ಜಲಪ್ರವಾಹಗಳ
ನ್ನೂ, ಸುತ್ತುಮುತ್ತು ಹಬ್ಬಿದ ನಿರ್ಜನವಾದ ಅರಣ್ಯವನ್ನೂ,

ಆಳವಾದ ಕಂದರಗಳನ್ನೂ ನೋಡಿ ನಮ್ಮ ಮನಸ್ಸು ಭಯದಿಂದಲೂ, ಆಶ್ಚರ್ಯದಿಂದಲೂ, ತುಂಬಿಹೋಯಿತು. ಇಂಥ ಕಠಿಣವಾದ ಪ್ರದೇಶದಲ್ಲಿ, ಕತ್ತಲು ಗವಿದು ನೀರು ಸೋರುತ್ತಿರುವ ಹತ್ತಿಪ್ಪತ್ತು ಸುರಂಗ ಮಾರ್ಗಗಳೊಳಗಿಂದಲೂ, ಬಹು ಇಳುಕಲಾದ ಬೆಟ್ಟದ ಮಾರ್ಗದಿಂದಲೂ, ಉಗೆಬಂಡಿಯು ನಿರ್ಬಾಧವಾಗಿ ನಡೆಯುವದನ್ನು ಮನಸ್ಸಿನಲ್ಲಿ ತಂದರೆ, ಮನುಷ್ಯನ ಬುದ್ಧಿಗೂ ಸಾಹಸಕ್ಕೂ ಯಾವದೂ ಈಡಿಲ್ಲೆಂದು, ಆಗಲೇ ಹೊಳೆಯುತ್ತದೆ. ಇದೇ ಪ್ರಕಾರ ವಿಚಾರ ಮಾಡುತ್ತ ಸಾಯಂಕಾಲದ ಐದು ಘಂಟೆಗೆ ಮುಂಬಯಿಯಲ್ಲಿ ಹೆಸರಾದ ಬೋರಿಬಂದರ ಸ್ಟೇಶನಕ್ಕೆ ಮುಟ್ಟಿದೆವು. ಅಲ್ಲಿ ನಾಮದಾರ ದಾಜಿ ಅಬಾಜಿ ಖರೆ ಇವರಿಗೆ ಮೊದಲೇ ತಿಳಿಸಿದ್ದರಿಂದ, ಅವರು ನಮ್ಮ ಗೋಸ್ಕರ, ಮಾಧವ ಬಾಗದಲ್ಲಿ, ಮಾಧವದಾಸ ಧರ್ಮಶಾಲೆಯ ಮೇಲುಪ್ಪರಿಗೆಯಲ್ಲಿ ಪ್ರಶಸ್ತವಾದ ಸ್ಥಳವನ್ನು ಸಿದ್ಧಮಾಡಿಸಿಟ್ಟಿದ್ದರು. ಅಂಥ ದೊಡ್ಡ ಪಟ್ಟಣದಲ್ಲಿ ನಮ್ಮ ಸಮೂಹಕ್ಕೆ ಈ ಪ್ರಕಾರ ಪ ಸ್ಥಳವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ನಾಮದಾರರವರನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಇರುತ್ತದೆ. ಇದಲ್ಲದೆ ನಾವು ಮುಂಬಯಿಯಲ್ಲಿರುವವರೆಗೆ ನಮಗೆ ಪೂರ್ಣವಾಗಿ ಸಹಾಯ ಮಾಡಿದ ಕರಿರೋಡ ಶಾಲೆಯ ಮಾಸ್ತರಾದ ಮಿ, ಪೋರೊ ಪ್ರಭಾಕರ ಖರೆ ಇವರ ಉಪಕಾರವನ್ನಾದರೂ ಎಂದೂ ಮರೆಯಲಾರೆವು.

ವಾಚಕ ಮಹಾರಾಯರೇ, ಎಲ್ಲಿನೋಡಿದರೂ ಗಗನ ಚುಂಬಿಗಳಾದ ಮನೆಗಳಿಂದಲೂ, ಬರ್ರನೆ ಬರುತ್ತಿರುವ ಕುದುರೆಯ ಬಂಡಿ, ಟ್ರಾಮ್‌ವೇಗಳಿಂದಲೂ, ಇನ್ನೂ ಕೆಲವು ಸಂಗತಿಗಳಿಂದಲೂ ಆನಂದಾಶ್ಚರ್ಯಗಳನ್ನುಂಟು ಮಾಡತಕ್ಕ ಆ ನಗರದ ಶೋಭೆಯನ್ನು ಸಾಗ್ರವಾಗಿ ವರ್ಣಿಸುವ ಅಸಾಧ್ಯವಾದದ್ದರಿಂದ, ಆ ಗೋಜಿಗೆ ಹೋಗದೆ, ನಾವು ಕಂಡ ಒಂದೆರಡು ಸಂಗತಿಗಳನ್ನು ಮಾತ್ರ ಉಲ್ಲೇಖಿಸುವೆನು.

ನಾವು ಮರುದಿವಸ ಅಂದರೆ ತಾರೀಖು ೨೫ನೇ ದಿವಸ ೧೧ ಗಂಟೆಗೆ ಹೊರಟು, ಟ್ರಾಮ್‌ವೇದಮೇಲಿಂದ ನಗರದ

ಕೋಳಿಯನ್ನು ನೋಡುತ್ತ, ದೃಷ್ಟಿಯಿಂಯುಎವೆಗೆ ವಿಶಾಲ ವಾದಂಥ ಜಲನಿಧಿಯದಂಡೆಗೆ ಹೋದೆವು ಅಲ್ಲಿ ಬಂದರವನ್ನು ಕಟ್ಟಿದ್ದರಿಂದ ತೆರೆಗಳೇನೂ ಇಲ್ಲದೆ ಶಾಂತನಾದ ಸರಿನ್ನಾಥನನ್ನೂ, ಜಲಚರಗಳಂತೆ ನಿರ್ಬಾಧವಾಗಿ ಸಂಚರಿಸುತ್ತಿರುವ ಉಗೆ ಹಡಗುಗಳನ್ನೂ, ಆ ಹಡಗುಗಳಲ್ಲಿ ಮಾಡಿರುವ ಪ್ರತ್ಯಕ್ಷ ಮನೆಯಂತೆಯೇ ಇರುವ ವ್ಯವಸ್ಥೆಯನ್ನೂ ನೋಡಿ, ಆಧುನಿಕ ಮಹತ್ಕಾರ್ಯಗಳ ಜ್ಞಾನವು ನಮಗೆ ತಕ್ಕಮಟ್ಟಿಗೆ ಆಯಿತು. ಮರುದಿವಸ ಹನ್ನೆರಡುಗಂಟೆಗೆ ಸರಿಯಾಗಿ ಚಿಕಿತ್ಸಗಾರವೆಂಬ ಪಾರ್ಸೀ ಹೆಣ್ಣುಮಕ್ಕಳ ಶಾಲೆಯ ಶಿಕ್ಷಣವನ್ನು ನೋಡಲಿಕ್ಕೆ ಹೊರಟೆವು. ಈ ಶಾಲೆಯಲ್ಲಿ ಸುಶಿಕ್ಷಿತರಾದ ಸ್ತ್ರೀಯರೇ ಶಿಕ್ಷಕಿಯರಾಗಿರುತ್ತಾರೆ. ಈ ಶಾಲೆಯ ಸಂಬಂಧವಾಗಿ ಬೇರೊಂದು ವರ್ಣನೆಯೇ ವಾಚಕರ ದೃಗ್ಗೋಚರವಾಗಬಹುದು. ಇಲ್ಲಿ ನಾನು ಇದರ ಸಂಬಂಧವಾಗಿ ಹೇಳುವದೇನೆಂದರೆ:—ಈ ಶಾಲೆಯು ನಮ್ಮ ಇಲಾಖೆಯ ಶಾಲೆಗಳಲ್ಲೆಲ್ಲ ಉತ್ತಮವಾಗಿರುತ್ತದೆ. ಉತ್ತಮ ಶಿಕ್ಷಕರಾಗಬೇಕೆಂಬವರು ಒಂದು ಸಾರೆಯಾದರೂ ಈ ಶಾಲೆಯನ್ನು ಅವಶ್ಯವಾಗಿ ನೋಡತಕ್ಕದ್ದು.

ಇದಲ್ಲದೆ ವಿಕ್ಟೋರಿಯಾ ಗಾರ್ಡನ್, ಹ್ಯಾಂಗಿಂಗಗಾರ್ಡನ್ ಎಂಬ ಎತ್ತರವಾದ ಪ್ರದೇಶ ಮುಂತಾದವುಗಳನ್ನು ನೋಡಿಕೊಂಡು ಒಬ್ಬನೇ ತಾರೀಖಿನ ಹಗಲಿನ ಎರಡೂವರೆಗಂಟೆಗೆ ಉಗೆ ಬಂಡಿಯಲ್ಲಿ ಕುಳಿತು ಅಹಮ್ಮದಾಬಾದಕ್ಕೆ ಹೊರಟೆವು ಮುಂಬಯಿಯಿಂದ ಅಹಮ್ಮದಾಬಾದದವರೆಗೆ ೧೫೮ ಮೂರನೇವರ್ಗದ ಬಾಡಿಗೆಯೂ ೪೫೬ ಎರಡನೇವರ್ಗದ ಬಾಡಿಗೆಯೂ ಬಿತ್ತು.

ಅಹಮ್ಮದಾಬಾದದಲ್ಲಿ ಟ್ರೇನಿಂಗಕಾಲೇಜದಲ್ಲಿಯೇ ಇಳಿದುಕೊಂಡೆವು ಅಲ್ಲಿಯ ಪ್ರಿನ್ಸಿಪಾಲ, ವ್ಹಾ. ಪ್ರಿನ್ಸಿಪಾಲ, ಪ್ರ್ಯಾಮಾಸ್ತರ ಮುಂತಾದವರ ಸೌಜನ್ಯವು ಬಹಳ ಹೊಗಳತಕ್ಕದ್ದಾಗಿದೆ. ಅಲ್ಲಿ ಟ್ರೇನಿಂಗ ಕಾಲೇಜದಲ್ಲಿ ಕೆಲವು ಪಾಠಗಳನ್ನೂ, ಹೆಣ್ಣುಹುಡುಗರ ಕಾಲೇಜದಲ್ಲಿ ಕೆಲವು ಪಾಠಗಳನ್ನೂ ಕಲಿಸಿ ತೋರಿಸಿದರು. ಇದಲ್ಲದೆ ಗಿರಣಿ, ಜುವ್ಮ್ಮಾ

ಮೆಶೀದೆ ಮುಂತಾದ ಸ್ಥಳಗಳನ್ನು ನೋಡಿಕೊಂಡು ಮರು ದಿವಸ ಹನ್ನೆರಡು ಗಂಟೆಗೆ ಅಲ್ಲಿಂದ ಹೊರಟು, ಮೂರೂವರೆ ಗಂಟೆಗೆ ಬಡೋದೆಗೆ ಬಂದಿಳಿದೆವು. ಅಹಮ್ಮದಾಬಾದ ದಿಂದ ಬಡೋದೆಗೆ ೧೦ ಮೂರನೇವರ್ಗದ ಬಾಡಿಗೆಯೂ ೩೫ ಎರಡನೇವರ್ಗದ ಬಾಡಿಗೆಯೂ ಬಿತ್ತು. ಬಡೋದೆಯಲ್ಲಿ ನಮ್ಮ ಇನ್‌ಸ್ಪೆಕ್ಟರ ಸಾಹೇಬರವರ ಜಾವಾತ್ಯಗಳು ಇರುತ್ತಾರೆ. ಅವರು ನಮ್ಮನ್ನು ತಮ್ಮ ಮನೆಯಲ್ಲಿಯೇ ಇಳಿಸಿ ಬಹಳ ಆದರಾತಿಥ್ಯವನ್ನು ಮಾಡಿದರು.

ಅಲ್ಲಿಯೂ ಒಂದು ಹೆಣ್ಣುಮಕ್ಕಳ ಕಾಲೇಜವನ್ನು ನೋಡಿದೆವು. ಅದಾದರೂ ಬಹಳ ಸುಧಾರಿಸಿದ್ದದೆ. ಇದಲ್ಲದೆ ಆ ನಗರದಲ್ಲಿ ಸರ್ವಸಂಗ್ರಹಾಲಯ, ಗಾಯನಶಾಲೆ ಮುಂತಾದವುಗಳನ್ನು ನೋಡಿಕೊಂಡು ತಾರೀಖು ೩ನೇ ಅಗಷ್ಟ ದಿವಸ ಮೂರೂವರೆಗಂಟೆಗೆ ಅಲ್ಲಿಂದ ಹೊರಟು ಮರುದಿವಸ ೪॥ ಗಂಟೆಗೆ ಪುನಃ ಪುಣೆಗೆ ಬಂದೆವು. ಅಲ್ಲಿಂದ ಮರು ದಿವಸ ಅಂದರೆ ತಾರೀಖು ೧೦ನೇ ಸಪಟೆಂಬರ ದಿವಸ ಪುಣೆಯಿಂದ ಹೊರಟು ರಾತ್ರಿ ೧೦॥ ಗಂಟೆಗೆ ಹುಬ್ಬಳಿಗೆ ಬಂದೆವು. ಬಡೋದೆಯಿಂದ ಹುಬ್ಬಳಿಯವರೆಗೆ ಮೂರನೇ ವರ್ಗದ ಬಾಡಿಗೆ ೩೦ ರೂ. ಎರಡನೇವರ್ಗದ ಬಾಡಿಗೆ ೬೫ ಬಿತ್ತು. ಹುಬ್ಬಳಿಯಲ್ಲಿ ಬೆಳಗಾಗುವವರೆಗೆ ಇದ್ದು ಬೆಳಿಗ್ಗೆ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಉಪಹಾರ (ಚಹಾ) ವನ್ನು ತಕ್ಕೊಂಡು ಪುನಃ ಬುಗೆಬಂಡಿಯಮೇಲಿಂದ ೧೦॥ ಗಂಟೆಗೆ ವಿಜಾಪುರಕ್ಕೆ ಬಂದೆವು. ವಿಜಾಪುರದಲ್ಲಿ ಹೋದವರುಷ ಧಾರವಾಡ ಕಾಲೇಜದ ಮಾಸ್ತರರಾಗಿದ್ದ ಮೆ. ರಾ. ರಾ. ನವಲಗುಂದ ಇವರು ನಮ್ಮಗೋಸ್ಕರ ಸ್ಥಳ, ಅಡಿಗೆ ಮುಂತಾದ ಎಲ್ಲ ಸಿದ್ಧತೆಗಳನ್ನು ಮಾಡಿಸಿಟ್ಟಿದ್ದರು. ಅಲ್ಲಿ ಭೋಜನವಾದಮೇಲೆ ಪ್ರತಿಯೊಬ್ಬರು ಕುದುರೆಯ ಗಾಡಿಯಮೇಲಿಂದ ಸಾಲಾಗಿ ಊರೊಳಗಿನ ಭವ್ಯ ಮಂದಿರಗಳನ್ನೆಲ್ಲ ನೋಡಿಕೊಂಡು ಬಂದೆವು. ಅವೆಲ್ಲವುಗಳಲ್ಲಿ ಮುಖ್ಯವಾಗಿ ಬೋಳಗುಮ್ಮಟದಲ್ಲಿ ಹೊಕ್ಕಕೂಡಲೆ, ಮನಸ್ಸು ಒಂದು ವಿಲಕ್ಷಣ

ಣ ಪರಿಣಾಮವನ್ನು ಹೊಂದಿ, ಪೂರ್ವಜರ ಕೌಶಲ್ಯವನ್ನು
ಕುರಿತು ಆಶ್ಚರ್ಯಪಡುತ್ತ ಬಹಳ ಉದಾಸೀನವಾಗುತ್ತದೆ
ಮರುದಿವಸ ಅಲ್ಲಿಂದ ಹೊರಟು ಸಾಯಂಕಾಲದ ೪ ಗಂಟೆ
ಗೆ, ಗದಗಿಗೆ ಬಂದೆವು. ಅಲ್ಲಿ ಮು. ರಾ. ರಾ. ಅಡಿವೆಪ್ಪ
ಕೊಪ್ಪದ ಇವರು ನಮ್ಮ ಗೋಸ್ಕರ ಉಪಹಾರದ ಸಿದ್ಧತೆ
ಯನ್ನು ಮಾಡಿಸಿದ್ದರು. ಅಲ್ಲಿ ಉಪಹಾರವನ್ನು ತಕ್ಕೊಂಡ
ಮರುದಿವಸ ಅಂದರೆ ಶಾರೀಖು ೪ನೇ ಸಪಟಂಬರ ದಿನ
ಸ ಪ್ರಾತಃಕಾಲಕ್ಕೆ ಹೊರಟು ೧೦ ಗಂಟೆಗೆ ಧಾರವಾಡಕ್ಕೆ
ಬಂದು ಮುಟ್ಟಿದೆವು.

ಅಯ್ಯಾ ಮೇಲಿನ [illegible] ಅತಿ ಸಂಕ್ಷಿಪ್ತವಾದದ್ದಿ
ರುತ್ತದೆ. ಪ್ರತಿಯೊಂದು ಸ್ಥಳದ ವಿಶೇಷ ವರ್ಣನೆಯು ಪ
ತ್ಯೇಕವಾಗಿ ವಾಚಕರ ಮುಂದೆ ಬರಬಹುದು.

ಮೇಲಿನ ವರ್ಣನೆಯಿಂದ ತಿಳಿಯುವದೇನಂದರೆ—ಒಟ್ಟು
೧೬೦೦ ಮೈಲು ಪ್ರವಾಸಕ್ಕೆ ೪೫೬ ಮೂರನೇವರ್ಗದ ಬಾ
ಡಿಗೆಯೂ ೨೪೯ ಎರಡನೇವರ್ಗದ ಬಾಡಿಗೆಯೂ ಬಿತ್ತು
ಇದಲ್ಲದೆ ೧೬ ಕ್ಕೆ ಪರಿಚಾರಕರ ಖರ್ಚೂ, ೬೫ ಊ
ಟದ ಖರ್ಚೂ ಕೂಡಿ, ೧೫೫ ಮೂರನೇವರ್ಗದ ಬಂ
ಡಿಯಲ್ಲಿ ಕೂತವರಿಗೆ, ೭೫ ಎರಡನೇವರ್ಗದ ಬಂಡಿ
ಯಲ್ಲಿ ಕೂತವರಿಗೆ ಖರ್ಚಾಯಿತು. ಅಂದರೆ ಎರಡೂ ವ
ರ್ಗದಲ್ಲಿ ಕೂತ ಪ್ರತಿಯೊಬ್ಬರಿಗೆ, ಅನುಕ್ರಮವಾಗಿ, ೧೦
ಮೈಲಿಗೆ ೧ ರು., ೨ ರು. ಯಂತೆ ಖರ್ಚಾಯಿತು. ವಾಚಕ
ರೇ ನಮಗೆ ಆದ ಲಾಭದಮೇಲಿಂದ ಈ ಖರ್ಚನ್ನು ನೋ
ಡಿದರೆ ತೀರ ಸ್ವಲ್ಪವೇ ಸರಿ. ಇಂಥಾ ಲಾಭದ ಯೋಗವ
ನ್ನು ತಂದುಕೊಟ್ಟದ್ದಕ್ಕಾಗಿ ನಮ್ಮ ಮೆ. ಎ. ಇನೆಸ್ಪೆಕ್ಟ
ರ ಸಾಹೇಬರವರೆ ಹಾಗು ರಾವಸಾಹೇಬ ಪ್ರಿನ್ಸಿಪಾಲರವರ
ಉಪಕಾರವನ್ನು ಪುನಃ ಪುನಃ ಸ್ಮರಿಸಿ ತಮ್ಮಪ್ಪಣೆಯನ್ನು
ತೆಗೆದುಕೊಳ್ಳುತ್ತೇನೆ.

(ತಮ್ಮ ಒಬ್ಬ ಪ್ರವಾಸಗನು.)

ಪಾಠಶಾಲಾ ಪತ್ರಿಕೆ.

ಪದ್ಯ.

ಪ್ರಿಯವಿದ್ಯಾಗುರುಪರ್ಯಾಲ್ಲ ತಿಕೆಯಂ ಸಚ್ಛಿಷ್ಟಕೋತ್ಕರ್ಷಮಂ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಸಯದಿಂವಿತ್ತಪೆವೋದುವರ್ಗೆಸುಗುಣಂ ಪೋರಲ್ಕೆ ಕೈಕೊಂಮುದೈ।
ಚಯಮಿಂದೋಷಪತಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೬ ಲ] ನವಂಬರ ೧೯೦೨. [ಸಂಚಿಕೆ ೧೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈಳಿದ ತಿಂಗಳ ಮೊದಲನೇ ತಾರೀಖಿನ ದಿವಸ ಧಾರವಾಡ ದಲ್ಲಿ ವಿದ್ಯಾಭಿಮಾನಿಗಳ ಪರಿಷತ್ತು ನೆರೆದಿತ್ತು. ಪಾಡಿಕೆಯಂತೆ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರಸಾಹೇಬರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ರಾವಬಾಹದ್ದೂರ ಯನ್ನಿಮಡಿ ಸಾಹೇಬರೂ, ಮಿ. ಕರೀಮಖಾನ ಮಾಮಲೇದಾರಸಾಹೇಬರೂ, ರಾವಸಾಹೇಬ ಸವಣೂರ, ಕೆರೂರ, ಮೊದಲಾದ ಡಿಪೂಟಿ ಇನಸ್ಪೆಕ್ಟರರೂ ಮಿ. ಪಠಾಣ ಮೊದಲಾದ ಅಸಿ ಡಿಪೂಟಿಯವರೂ, ರಾವಸಾಹೇಬ ಕರಂದೀಕರ ಜತಾರ ಮೊದಲಾದ ಹಾಯಸ್ಕೂಲ ಹೆಡ್ಡ ಮಾಸ್ತರರೂ ಮಿ. ಕಟ್ಟಿ ವಿಭೂತಿ, ಪಾವಟೆ, ಕರಿಗುದರಿ, ಕಟ್ಟಿ ಮುಂತಾದ ಇತರ ಗೃಹಸ್ಥರೂ ರೆ. ಮಿ. ರೀಪ ಆರನೆಸ್ಟಸಾಹೇಬರವರೂ, ಸಭೆಗೆ ಬಂದಿದ್ದರು. ಈ ಸಭೆಯು ಚರ್ಚೆಯ ವಿಷಯನ್ನು ಮತಾಧಿಕ್ಯದಿಂದ ನಿರ್ಣೈಸಲು ಅಧಿಕೃತವಾಗಿತ್ತು.

ಸಭೆಯಕಾರ್ಯವನ್ನು ಆರಂಭಿಸುವಾಗ ಅಧ್ಯಕ್ಷರು ನುಡಿದದ್ದೇನಂದರೆ :—ಪ್ಲೇಗಿನ ಹಾವಳಿಯು ಬಹು ಭಯಂಕರ ಸ್ವರೂಪವನ್ನು ತಾಳಿದಲು, ಬಹುಶಃ ಅಮಂತ್ರಿಕರೆಲ್ಲರು

ಸಭೆಯನ್ನು ಅಲಂಕರಿಸಿದ್ದಕ್ಕಾಗಿ ನಾವು ತುಂಬಾ ಆಭಾರಿ ಇದ್ದೇವೆ. ಹೊಸ ಇಯತ್ತೆಗಳ ಸಂಬಂಧವಾಗಿ ಗ೯೦೦೯ ಇಸ್ವಿಯಲ್ಲಿ ಇದೇ ಹಾಯಸ್ಕೂಲಿನಲ್ಲಿ ಸಭೆಗೂಡಿದ್ದು ಸರ್ವ ವಿಶ್ರುತವು. ಆ ಸಭೆಯಲ್ಲಿ ಚರ್ಚಿಸಲ್ಪಟ್ಟ ವರ್ಗಗಳ ಅಭ್ಯಾಸವು ಬಹುತರವಾಗಿ ಸರಕಾರದವರಿಂದ ಅನುಮತಿಪಡೆದು ಈ ವರುಷದಿಂದ ಬಳಿಕೆಯಲ್ಲಿ ಬಂದಿರುವದು ಆದರೆ ಆ ಇಯತ್ತೆಗಳಂತೆ ಅಭ್ಯಾಸಸಾಗಲಿಕ್ಕೆ ಮೂರು ಸಂಗತಿಗಳ ಅನುಕೂಲತೆಬೇಕು. (೧) ಮೊದಲು ಅಧ್ಯಾಪಕರಿಗೆ ಈ ಬಗೆಯ ಶಿಕ್ಷಣವು ದೊರೆಯುವಂತೆ ವ್ಯವಸ್ಥೆಯನ್ನು ಮಾಡತಕ್ಕದ್ದು. (೨) ಪರೀಕ್ಷಕರಿಗೂ, ಈ ಹೊಸ ವಿಷಯವನ್ನು ತಿಳಿಸಿ ಕೊಡುವದು. (೩) ಕ್ರಮಿಕ ಪುಸ್ತಕಗಳ ಸುಧಾರಣೆಯನ್ನು ಮಾಡುವದು. ಮೊದಲಿನ ಎರಡು ಮಾತುಗಳ ಸಂಬಂಧದಿಂದ ಈ ಮೊದಲೇ ನಾವು ಕೆಲವು ಏರ್ಪಾಡುಗಳನ್ನು ಯೋಚಿಸಿ ಇಟ್ಟಿದ್ದೇವೆ. ಅ॥ ಡಿಪೂಟಿಯವರಿಗೆ ಒಂದೊಂದು ತಿಂಗಳವರೆಗೆ ಕಾಲೇಜದಲ್ಲಿ ಇರಲಿಕ್ಕೆ ಹಚ್ಚಿ ವಸ್ತುಪಾಠ ಶಿಕ್ಷಣಪದ್ಧತಿಯನ್ನು ತಿಳಿಸಿಕೊಟ್ಟರುತ್ತೇವೆ. ಉತ್ಕಂಠೆಯುಳ್ಳ ಹಳೆ ಮಾಸ್ತರರನ್ನು ಕಾಲೇಜದಲ್ಲಿ ಸೇರಿಸಿಕೊಂಡು ಅವರಿಗೂ, ಈ ಮಾದರಿಯ ಶಿಕ್ಷಣವನ್ನು ಕೊಡಬೇಕೆಂದು ನಿಶ್ಚೈಸಿದ್ದೇವೆ. ತಕ್ಕ ಇಮಾರತುಗಳನ್ನು ಕಟ್ಟುವ ಉದ್ಯೋಗವು ಸ್ವಲ್ಪದಿವಸಗಳಲ್ಲಿ ಆರಂಭವಾಗುವದರಿಂದ ಅದು ಕೈಗೂಡಿದ ಕೂಡಲೆ ಹಳೆ ಶಿಕ್ಷಕರ ವರ್ಗವನ್ನು ಕಾಲೇಜದಲ್ಲಿಡುವದೆಂದು ಗೊತ್ತಾಗಿದೆ. ಆದರೆ ತಿನೇ ಸಂಗತಿಯಾದ ಕ್ರಮಿಕ ಪುಸ್ತಕಗಳನ್ನು ತಿದ್ದುವದರ ಸಂಬಂಧದಿಂದ ಇವೊತ್ತಿನ ಸಭೆಯಲ್ಲಿ ಚರ್ಚೆ ನಡಿಸಕ್ಕದ್ದದೆ. ಆದ್ದರಿಂದ ತಾವೆಲ್ಲರೂ ತಮ್ಮ ತಮ್ಮ ಅನುಭವಗಳನ್ನೂ ಆಕ್ಷೇಪಗಳನ್ನೂ ಸೂಚನೆಗಳನ್ನೂ ಈ ಸಭೆಯ ಮುಂಬಿಡಬೇಕೆಂದು ಸೂಚಿಸುತ್ತೇವೆ.

ಬಳಿಕ ಧಾರವಾಡ ಹಾಯಸ್ಕೂಲ ಹೆಡ್ಡ ಮಾಸ್ತರರಾದ ಜಠಾರ ಭಾಸ್ಕರರಾಯರು ಕೆಲವು ಸೂಚನೆಗಳನ್ನು ಸಭೆಯಲಿ ಓದಿತೋರಿಸಿದರು. ಅವುಗಳ ಸಾರಾಂಶವೇನಂದರೆ :—

ಗಂಡು ಮಕ್ಕಳ ಹಾಗು ಹೆಣ್ಣುಮಕ್ಕಳ ವಾಚನ ಪುಸ್ತಕಗಳು ಬೇರೆ ಬೇರೆಯಾಗಿರತಕ್ಕದ್ದು. ಈಗಿನಂತೆ ಕವಿತೆಯ ಪುಸ್ತಕಗಳು ಬೇರೆಯಾಗಿರದೆ ವಾಚನ ಪುಸ್ತಕದಲ್ಲಿಯೇ ಕವಿತೆಗಳನ್ನು ಶೇರಿಸತಕ್ಕದ್ದು ೧ ರಿಂದ ೫ ವರಿಗೆ ಇರುವ ವಾಚನ ಪುಸ್ತಕಗಳು ಇಪ್ಪತ್ತಪ್ಪು ಪುಟಗಳುಳ್ಳವುಗಳು ಇರಬೇಕು. ಒಂದೊಂದು ಪುಸ್ತಕದಲ್ಲಿ ಇಂತಿಷ್ಟು ಭಾಷಾವಿಷಯಕ ಪಾಠಗಳೂ ಇಂತಿಷ್ಟು ಶಾಸ್ತ್ರೀಯ ವಿಷಯಗಳ ಪಾಠಗಳೂ, ಇರಬೇಕು. ಇತ್ಯಾದಿ.

ಈ ಸೂಚನೆಗಳಿಗೆ ಬಹುತರವಾಗಿ ಎಲ್ಲರು ಒಪ್ಪಿಕೊಂಡರು. ರೆ. ಮಿ. ರೀಪಸಾಹೇಬರು ಗಂಡು ಹೆಣ್ಣು ಮಕ್ಕಳಿಗೆ ಕ್ರಮಿಕ ಪುಸ್ತಕಗಳು ಬೇರೆ ಬೇರೆಯಾಗಿರುವ ಕಾರಣವಿಲ್ಲೆಂತಲೂ ರಾವಬಾಹದೂರ ಯನ್ನಿಮಡಿಸಾಹೇಬರು ಗಂಡು ಹೆಣ್ಣು ಮಕ್ಕಳಿಗೆ ಬೇರೆ ಬೇರೆಯಾದ ವಾಚನ ಪುಸ್ತಕಗಳು ಇರುವದು ಅವಶ್ಯವೆಂತಲೂ ಪ್ರತಿಪಾಸಿದರು. ಕಡೆಯಲ್ಲಿ ರಾ. ಕರಂದೀಕರರು ಅನೇಕ ಸಂಗತಿಗಳನ್ನು ವಿವರಿಸಿಹೇಳಿ ಮೊದಲಿನ ೪ ಇಯತ್ತೆಗಳ ಕ್ರಮಿಕ ಪುಸ್ತಕಗಳು ಹೆಣ್ಣು ಗಂಡು ಮಕ್ಕಳಿಗೆ ಒಂದೇ ಇರಬೇಕು. ಆದರೆ ಅವುಗಳಲ್ಲಿ ಕೆಲವು ಪುಟಗಳು ಹೆಣ್ಣು ಮಕ್ಕಳಿಗೇ ಸಲ್ಲುವಂಥ ವಿಷಯಗಳುಳ್ಳವು ಇರಬೇಕು. ಗಂಡುಮಕ್ಕಳು ಅವುಗಳನ್ನು ಬಿಡಬಹುದು ಎಂದು ಹೇಳಿದರು. ಬಳಿಕ ಕೆಲ ಭವತಿನಭವತಿಗಳಾಗಿ ಇದರಡಿಯಲ್ಲಿ ಬರೆದ ೧೧ ಠರಾವುಗಳು ಬಹುಮತದಿಂದ ನಿರ್ಣೈಸಲ್ಪಟ್ಟವು. ಅವು ಯಾವವೆಂದರೆ :—

(೧) ಗಂಡುಮಕ್ಕಳ ಸಾಲೆಯ ಏಳು ಇಯತ್ತೆಗಳಿಗೂ ಒಂದೊಂದು ಕ್ರಮಿಕ ಪುಸ್ತಕವು ಇರತಕ್ಕದ್ದು. ಪ್ರತಿಯೊಂದು ಪುಸ್ತಕದಲ್ಲಿ ಎರಡು ಭಾಗಗಳನ್ನು ಮಾಡಿ ಮೊದಲನೇ ಭಾಗದಲ್ಲಿ ಕವಿತೆಯಸಹಿತ ಭಾಷಾವಿಷಯವೂ ಎರಡನೇ ಭಾಗದಲ್ಲಿ ಬಾಳ್ವೆಯೊಳಗಿನ ಶಾಸ್ತ್ರೀಯ ಸಂಗತಿಗಳ ವಿವೇಚನವೂ ಇರಬೇಕು. ಆದರೆ ಹುಡುಗರ ವಯಸ್ಸು ಹಾಗೂ ಬುದ್ಧಿಸಾಮರ್ಥ್ಯಗಳಿಗೆ ಅನುಗುಣವಾಗಿ ವಿಷಯಗಳನ್ನು ಶೇರಿಸುವಲ್ಲಿ ಎಚ್ಚರಪಡಬೇಕು.

ಹೆಣ್ಣುಗಂಡು ಮಕ್ಕಳಿಗಾಗಿ.

ಪುಸ್ತಕದ ಹೆಸರು.	ಕವಿತೆಸಹಿತ ಭಾಷಾ ವಿಷಯದ ಪುಟಗಳು		ಶಾಸ್ತ್ರೀಯ ವಿಷಯದ ಪುಟಗಳು.					ಒಟ್ಟು ಅಂಕೆ.
	ಒಟ್ಟು.	ಹೆಣ್ಣುಮಕ್ಕಳಿಗೆತಕ್ಕವು.	ಸಾಮಾನ್ಯ ವಿಷಯಗಳು.	ನಾಗರಿಕಶಾಲೆಗೆ ತಕ್ಕ ವಿಷಯಗಳು	ಗ್ರಾಮ್ಯ ಶಾಲೆಗೆ ತಕ್ಕ ಕೃಷಿಶಾಸ್ತ್ರದ ಪುಟ.	ಹೆಣ್ಣುಮಕ್ಕಳಿಗೆ ತಕ್ಕ ಹವ್ಯವರ್ಕಪುಟ	ಅಂಕು.	
ನೇ ಪುಸ್ತಕ.	೨೫	೮	೧೨	೬	೬	೬	೩೦	೫೫
ನೇ ೨	೪೦	೧೨	೧೭	೮	೮	೮	೪೧	೮೧
ನೇ ೩	೬೦	೨೦	೨೮	೧೨	೧೨	೧೨	೬೪	೧೨೪
ನೇ ೪	೯೦	೩೦	೪೦	೨೦	೨೦	೨೦	೧೦೦	೧೯೦
					ಗಂಡುಮಕ್ಕಳಿಗಾಗಿ			
ನೇ ಪುಸ್ತಕ.	೧೨೦	೦	೫೫	೨೫	೨೫	೦	೮೦	೨೦೦
ನೇ ೨	೧೨೫	೦	೬೫	೩೫	೩೫	೦	೧೦೦	೨೨೫
ನೇ ೩	೧೫೦	೦	೬೦	೪೦	೦	೦	೧೦೦	೨೫೦
					ಹೆಣ್ಣುಮಕ್ಕಳಿಗಾಗಿ			
ನೇ ೪	೦	೧೨೦	೫೫	೦	೦	೨೫	೮೦	೨೦೦
ನೇ ೫	೦	೧೨೫	೬೫	೦	೦	೩೫	೧೦೦	೨೨೫

(೬) ಮೊದಲಿನ ನಾಲ್ಕು ಪುಸ್ತಕಗಳು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಿಗೂ, ಒಂದೇ ಆಗಿರತಕ್ಕದ್ದು. ೫-೬ನೇ ಪುಸ್ತಕಗಳು ಹೆಣ್ಣುಮಕ್ಕಳಿಗಾಗಿ ಬೇರೆ ರಚಿಸಲಿಕ್ಕೇ ಬೇಕು. ಆದರೆ ಈ ಪುಸ್ತಕದಲ್ಲಿ ವಿಶೇಷವಾಗಿ ಭಾಷಾವಿಷಯಕ್ಕೆ ನೇಮಿಸಿದ ಭಾಗದಲ್ಲಿ ಹೆಣ್ಣುಮಕ್ಕಳ ಕರ್ತವ್ಯಕರ್ಮಕ್ಕೆ ಸಂಬಂಧಿಸಿದ ವಿಷಯಗಳಿರಬೇಕು.

(೭) ಪಾಚೆನೆ ಪುಸ್ತಕಳಲ್ಲಿ ಭಾಷಾವಿಷಯಕಭಾಗದಲ್ಲಿ ಹೆಣ್ಣುಮಕ್ಕಳಿಗೆ ತಕ್ಕಪ್ರಗಳಾದ ಕೆಲವು ಪಾಠಗಳು ಅವಶ್ಯವಾಗಿರತಕ್ಕದ್ದು. ಶಾಸ್ತ್ರೀಯವಿಷಯಕಭಾಗದಲ್ಲಿ ವಸ್ತುಪಾಠ ಕ್ರಮದಲ್ಲಿ ಸೂಚಿಸಿದ ಸಮುದಾಯಗಳೊಳಗಿನ ವಿಷಯಗಳು, ವನಸ್ಪತಿಶಾಸ್ತ್ರ ರಸಾಯನಶಾಸ್ತ್ರ ಕೃಷಿಶಾಸ್ತ್ರ ಗೃಹವ್ಯವಸ್ಥೆ ಪ್ರಾಣಿಶಾಸ್ತ್ರ ಪ್ರಾಕೃತಿಕಶಾಸ್ತ್ರ ಮುಂತಾದ ವಿಷಯಗಳೂ, ಸಮಾವೇಶವಾಗಬೇಕು. ಕೆಳಗೆ ಬರೆದ ಮೇರೆಗೆ ವಿಷಯಗಳೂ, ಪಾಠಗಳೂ, ಕ್ರಮಿಕ ಪುಸ್ತಕದಲ್ಲಿ ಇರತಕ್ಕದ್ದು.

(೪) ಉರ್ದು ವಾಚನೆ ಪುಸ್ತಕಗಳು ಕನ್ನಡ ಪುಸ್ತಕಗಳ ಭಾಷಾಂತರವಾಗಲಿ ಅವುಗಳನ್ನು ನೋಡಿ ಬರೆದಂಥವುಗಳಾಗಲಿ ಇರತಕ್ಕದ್ದು. ಕವಿತೆಯ ಭಾಗವು ಮಾತ್ರ ಆ ಭಾಷೆಯೊಳಗಿನ ಸುಲಭ ಗ್ರಂಥಗಳೊಳಗಿಂದ ಆಯ್ದುಕೊಂಡಂಥವುಗಳಿರಬೇಕು.

(೫) ಹಂಟರಸಾಹೇಬರ ಹಿಂದುಸ್ಥಾನದ ಇತಿಹಾಸವು ಎಳನೇ ಇಯತ್ತೆಗೆ ಸಲ್ಲುವದು. ಆದರೆ ೫-೬ನೇ ಈ ಎತ್ತೆಗೆ ಗಡಚಾಗಿರುವದರಿಂದ ಲಾಂಗಮನ್‌ಕೃತ ಇತಿಹಾಸದಂಥ ಅಥವಾ ಬೇರೆ ಯೋಗದಿಂದ ಬರೆದ ಹಿಂದುಸ್ಥಾನದ ಇತಿಹಾಸದಂಥ ಒಂದು ಇತಿಹಾಸವನ್ನು ಸುಲಭಭಾಷೆಯಿಂದ ಬರಿಸಬೇಕು. ಇದೇ ಮೇರಿಗೆ ಕರ್ನಾಟಕದ ಇತಿಹಾಸವಾದರೂ ಗಡಚೂ, ನಿಸ್ಸಾರವೂ, ಆಗಿರುವದು. ಆದದರಿಂದ ಹುಡುಗರಿಗೆ ಮನೋರಂಜಕವಾದಂಥ ಒಂದು ಇತಿಹಾಸ ಪುಸ್ತಕವನ್ನು ಬರಿಸಬೇಕು. ಪ್ರಸ್ತುತದ ಭೂಗೋಳ

ಗ್ರಂಥಗಳಾದರೂ ನಿಸ್ಸಾರವಾಗಿವೆ. ಆದ್ದರಿಂದ ಈಗ ಹೊಸತರದಿಂದ ರಚಿಸಲ್ಪಟ್ಟ ಇಂಗ್ಲೀಷ ಗ್ರಂಥಗಳ ಮಾದರಿಯ ಚಿಕ್ಕಲೋ ಪುಸ್ತಕಗಳನ್ನು ಬರಿಸಬೇಕು.

(೬) ಶೀಕ್ಷಕರಿಗೆ ಅನುಕೂಲವಾಗಬೇಕೆಂದು ವಸ್ತುಪಾಠದ ಮೂರು ಪುಸ್ತಕಗಳನ್ನು ಬರಿಸಬೇಕು. ಒಂದನೇ ಪುಸ್ತಕದಲ್ಲಿ ಬಾಲಕರ ವರ್ಗಕ್ಕೂ ೧, ೨ನೇ ಇಯತ್ತೆಗಳಿಗೂ, ಸಲ್ಲುವ ವಿಷಯಗಳೂ, ೨ನೇ ಪುಸ್ತಕದಲ್ಲಿ ೩, ೪ನೇ ಇಯತ್ತೆಗಳಿಗೆ ಸಲ್ಲುವ ವಿಷಯಗಳೂ, ೩ನೇ ಪುಸ್ತಕದಲ್ಲಿ ೫, ೬ನೇ ಇಯತ್ತೆಗಳಿಗೆ ಸಲ್ಲುವ ವಿಷಯಗಳೂ, ಸಮಾವೇಶವಾಗಬೇಕು.

(೭) ಒಂದರಿಂದ ೫ನೇ ಇಯತ್ತೆಗಳವರೆಗೆ ಕಲಿಸಲಿಕ್ಕೆ ಉಪಯೋಗವಾಗುವಂತೆ ಚಿತ್ರದ ಪುಸ್ತಕಗಳನ್ನು ತಯಾರಿಸಬೇಕು.

(೮) ಶಿಕ್ಷಕರಿಗಾಗಿ ಶೀಕ್ಷಾಕ್ರಮದ ಎರಡು ಪುಸ್ತಕಗಳನ್ನು ಬರಿಸಬೇಕು. ಓದು ಮೇಲ್ತರದವರಿಗೆ ಒಂದು ಮಧ್ಯಮ ಪ್ರತಿಯವರಿಗೆ.

(೯) ಶೀಕ್ಷಾಕ್ರಮದ ಪುಸ್ತಕಗಳನ್ನೂ ವಾಚನ ಪುಸ್ತಕಗಳನ್ನೂ ವಿದ್ಯಾಖಾತೆಯಿಂದ ಆರಿಸಿಕೊಂಡ ಜನರ ಓದು ಕಮಿಟಿಯಿಂದ ಬರಿಸಬೇಕು ಈ ಕಮಿಟಿಯಲ್ಲಿ ಬೇರೆ ಸಂಸ್ಥೆಗಳಿಂದ ಕೆಲವು ಅನುಭವಿಕ ಜನರನ್ನು ಕೂಡಿಸಿಕೊಂಡು ಪುಸ್ತಕಗಳನ್ನು ಬರೆಯುವ ದಿಶೆಯನ್ನು ಗೊತ್ತುಪಡಿಸಬೇಕು.

(೧೦) ಇತಿಹಾಸ ಭೂಗೋಲ ವಸ್ತುಪಾಠ ಡ್ರಾಯಿಂಗ ಮುಂತಾದ ವಿಷಯದ ಪುಸ್ತಕಗಳನ್ನು ಬೇರೆ ಜನರಿಗೆ ಉತ್ತೇಜನಕೊಟ್ಟು ಬರಿಸಬೇಕು. ಅವುಗಳಲ್ಲಿ ಮೇಲಾದ ಪುಸ್ತಕಗಳನ್ನು ಶಾಲೆಯಲ್ಲಿ ಉಪಯೋಗಿಸಬೇಕು. ಒಬ್ಬನಿಗೇ ಒಂದು ಸಂಸ್ಥೆಯ ಹಕ್ಕಾಗಗೊಡುವದು ವಿದ್ಯಾಪ್ರಗತಿಗೆ ಹಾನಿಕರವಾಗಿರುವದು

(೧೧) ಮೆ. ಮ್ಯಾಕ್‌ಮಿಲನ್ ಅಂಡ ಕಂಪನಿಯವರ ಪ

ತ್ರವನ್ನು ವಿಚಾರಿಸಿ ಈ ಸಭೆಯವರು ಅಭಿಪ್ರಾಯಕೊಡುವ
ದೇನಂದರೆ ಕ್ರಮಿಕ ಪುಸ್ತಕಗಳನ್ನು ವಿದ್ಯಾಖಾತೆಯ ಲೋ
ಕಲ್ ಕಮಿಟಿಯವರಿಂದಲೇ ಬರಿಸುವದು ವಿಹಿತವು.

A MODEL GIRL SCHOOL.

ಪೂರಿ ತೆಗೆದುಕೊಳ್ಳತಕ್ಕಂಥ ಹೆಣ್ಣುಮಕ್ಕಳ ಸಾಲೆಯು.

ಎರಡನೇ ಭಾಗ.

(ಬರೆದುಬಂದದ್ದು.)

(ಕಳೆದ ಪುಟದಿಂದ ಮುಂದೆ ಸಾಗಿದ್ದು.)

ಈ ಸಾಲೆಯೊಳಗಿನ ವಿದ್ಯಾರ್ಥಿನಿಯರೂ, ಶಿಕ್ಷಕಿಯರೂ ಕುಲೀನರಿಹುವರೆಂದು ಹಿಂದಿನ ಭಾಗದಲ್ಲಿ ಹೇಳಿದ್ದೇವೆ. ಹಾಗೂ ನಾವು ಸಾಲೆಯನ್ನು ನೋಡಲಿಕ್ಕೆ ಬರುವವರೆಂದು ಮೊಹಲೇ ತಿಳಿಸಿದ್ದೆವು. ಅದರಿಂದ ವಿದ್ಯಾರ್ಥಿಗಳಿಗೂ ಪ್ರಿನ್ಸಿಪಾಲರೇ ಮೊದಲಾದ ಗುರೂಪಗುರುಗಳಿಗೂ ಕುಳಿತುಕೊಳ್ಳಲಿಕ್ಕೆ ತಕ್ಕ ಆಸನಗಳನ್ನು ಮಾಡಿಸಿದ್ದರು. ಒಂದು ಹರವಾದ ಮೇಜಿನ ಎರಡು ಬದಿಯಲ್ಲಿ ಸಾಲೆಯ ಹುಡುಗರು ಕೂತುಕೊಳ್ಳಲಿಕ್ಕೆಂದು ಬೆಂಚುಗಳನ್ನು ಹಾಕಿದ್ದರು. ಜರತಾರಿ ಕಸೂತಿಯಿಂದ ಮುಂಬಯಿ ನಗರದೊಳಗಿನ ಟ್ರಾಮಗಾಡಿಯ ಹಾದಿಯನ್ನೂ, ಕಟ್ಟಿಗೇ ತುಂಡುಗಳಿಂದ ಇಡೀ ನಗರದ ನಕಾಶವನ್ನೂ ತೆಗೆದಿದ್ದರು. ಓಡವೇ ಪಾಠಗಳಿಗೆ ಬೇಕಾದ ಸಾಧನಗಳನ್ನೂ ತಂತಿಯಲ್ಲಿ ಪೋಣಿಸಿದ ಮಣಿಗಳನ್ನೂ, ಬಿಡಿಮಣಿಗಳನ್ನೂ, ಲವಂಗ, ಅಕ್ಕಿ ಮುಂತಾದ ಒಡವೆಗಳನ್ನೂ ಹಾಕಿದ ಸಣ್ಣ ಸಣ್ಣ ಸೀಸೆಗಳನ್ನೂ, ತೂಕ ಅಳತೆಗಳ ಮಾಪುಗಳನ್ನೂ ಇಟ್ಟಿದ್ದರು. ನಕಾಶಗಳನ್ನೂ ತಕ್ಕ ಸ್ಥಳದಲ್ಲಿ ತೂಗಬಿಟ್ಟಿದ್ದರು. ಸಾರಾಂಶ ಕಲಿಸಲಿಕ್ಕೆ ಬೇಕಾಗುವ ಎಲ್ಲ ಉಪಕರಣಗಳನ್ನು ಮೇಜಿನ ಮೇಲೆ ಮಾಂಡಿಸಿಟ್ಟಿದ್ದರು. ನಾವು ಹೋದ ಕೂಡಲೆ ನಮ್ಮನ್ನು ಅತ್ಯಾದರದಿಂದ ಬರಮಾಡಿಕೊಂಡು ಯೋಗ್ಯಸ್ಥಳದಲ್ಲಿ ಕೂಡ ಹೇಳಿದ

ಬಳಿಕ ಮೊದಲು ಬಾಲಕರ ವರ್ಗಕ್ಕೆ ಅಕ್ಷರ, ಅಂಕಿ, ಓದವೇ ಪಾಠಗಳನ್ನು ಕಲಿಸಿ ತೋರಿಸಿದರು. ಕಟ್ಟಿಗೆಯ ಹಲಿಗೆಯಲ್ಲಿ ಕೆತ್ತಿಸಿದ ಅಕ್ಷರಗಳನ್ನು ಹುಡುಗರಿಗೆ ತೋರಿಸಿ ಅವರ ಹೆಸರನ್ನು ಕೇಳಿಕೊಂಡು ಅದೇ ಅಕ್ಷರದಿಂದ ಪ್ರಾರಂಭವಾಗುವ ಎಂಟು ಹತ್ತು ಉದಾಹರಣೆಗಳನ್ನು ಕೇಳುವರು. ಅದರಿಂದ ಆ ಅಕ್ಷರವ ದೃಢ ಜ್ಞಾನವಾಗುವದಲ್ಲದೆ ಅನೇಕ ಹೊಸ ಶಬ್ದಗಳ ಜ್ಞಾನವೂ ಆಗುವದು. ಜಗಡನ್ನು ಕತ್ತರಿಸಿ ಅಕ್ಷರದ ರಚನೆಗೆ ಬೇಕಾಗುವಂಥ ತುಂಡುಗಳನ್ನು ವಿದ್ಯಾರ್ಥಿಗಳ ಕೈಯಲ್ಲಿಕೊಟ್ಟು ಅಕ್ಷರವನ್ನು ರಚಿಸಲಿಕ್ಕೆ ಹೇಳುವರು. ಅಂಕಿಯನ್ನು ಪ್ರತ್ಯಕ್ಷ ವಸ್ತುಗಳಿಂದ ಕಲಿಸುವರು. ಎಣಿಕೆಯು ಕಲ್ಪನೆಯು ಅವರಲ್ಲುಂಟಾದ ಬಳಿಕ ಅದರ ಹೆಸರನ್ನು ಹೇಳಿ ಅದರ ಚಿಹ್ನವನ್ನು ಕಲಿಸುವರು. ಶಿಕ್ಷಕಿಯು ಮಣಿಗಳ ಸರವನ್ನು ಹಿಡಿದುಕೊಂಡು ಒಂದೊಂದು ಸರಿಸಿದಂತೆ ವಿದ್ಯಾರ್ಥಿಗಳು ಹಾಡುತ್ತಾ ಅವುಗಳನ್ನು ಎಣಿಸುವರು. ಆಕಳ ಓಡವೆಯ ಪಾಠವನ್ನು ನಾಟಕದೊಳಗಿನಂತೆ ಬೇರೆ ಬೇರೆ ಹುಡುಗರ ಕಡೆಯಿಂದ ಬೇರೆ ಬೇರೆ ಭಾಗಗಳನ್ನು ಪ್ರಶ್ನೋತ್ತರ ರೂಪದಿಂದ ಕಲಿಸಿ ಕಡೆಯಲ್ಲಿ ಎಲ್ಲರೂ ಸ್ವರ ಮೇಳದಿಂದ ದೇವರನ್ನು ಪ್ರಾರ್ಥಿಸಿದರು. ಈ ಸಮಯದಲ್ಲಿ ಬೇರೆ ಬೇರೆ ಹುಡುಗರ ಕೈಯಲ್ಲಿ ಚಹದ ಪಾತ್ರೆಗಳು, ಹುಲ್ಲು, ಮನೆ, ಸೂರ್ಯ, ಆಕಳು ಮುಂತಾದ ಆ ಪಾಠದಲ್ಲಿ ಬಂದ ಎಲ್ಲ ವಸ್ತುಗಳ ಚಿತ್ರಗಳೂ, ಪ್ರತ್ಯಕ್ಷ ವಸ್ತುಗಳೂ, ಕೊಡಲ್ಪಟ್ಟಿದ್ದವು. ಈ ಪಾಠ ನಡೆದಾಗ ಶಿಷ್ಯಶಿಕ್ಷಕಿಯರು ಏಕಜೀವವಾಗಿದ್ದರೆಂದು ಹೇಳಬಹುದು. ಗಂಡಸಿನ ನುಡಿ, ನಡತೆ ರೂಪಗಳಲ್ಲಿ ಕೋಮಲತ್ವವು ಇರುವದು ಬಹು ಕಡಿಮೆ ಚಿಕ್ಕಮಕ್ಕಳು ಗಂಡಾಗಲಿ ಹೆಣ್ಣಾಗಲಿ ನಾಲ್ಕೈದು ವರ್ಷಗಳವರೆಗೆ ತಾಯಿಯ ಬಳಿಯಲ್ಲಿರುವದರಿಂದ ಅವರ ಮನಸು ಬಹು ಕೋಮಲವಾಗಿರುವದು. ಆದ್ದರಿಂದ ಸುಮಾರು ೮, ೧೦ ವರ್ಷದವರಾಗುವವರೆಗೆ ಅವರಿಗೆ ಶಿಕ್ಷಕಿಯರೇ ಕಲಿಸುವದು ವಿಹಿತವೆಂದು ನನಗೆ ತೋರುತ್ತದೆ.

ಕಾಲು, ಅರ್ಧ, ಮುಕ್ಕಾಲುಗಳನ್ನು ಕಲಿಸಿದ್ದನ್ನು ನೋಡಿ ಭಾವು ನಾಚಿದೆವು. ಒಂದು ಹಳದೀ ಕಾಗದದ ಸಣ್ಣ ಚೌಕು ತುಂಡನ್ನೂ ಅದರಲ್ಲಿ ನಾಲ್ಕು ಸಮಭಾಗಗಳಿನ್ನೂ ಮಾಡಿದ ನಾಲ್ಕು ತುಂಡುಗಳನ್ನು ಒಂದು ರಟ್ಟಿನ ಮೇಲೆ ಹಚ್ಚಿ, ಆ ರಟ್ಟನ್ನು ಒಂದು ಹುಡುಗಿಯ ಕೈಯಲ್ಲಿ ಕೊಟ್ಟಿದ್ದರು. ಮತ್ತೊಂದು ಹುಡುಗಿಯು ಮೇಜಿನ ಮೇಲಿಟ್ಟ ಇಂಗ್ಲೀಷ ನಾಣ್ಯಗಳ ಮುಂದೆಯೂ, ಬೇರೊಂದು ಹುಡುಗಿಯು ದೇಶೀ ನಾಣ್ಯಗಳ ಮುಂದೆಯೂ, ಮತ್ತೊಂದು ತೂಕದ ಕಲ್ಲುಗಳ ಮುಂದೆಯೂ, ಇನ್ನೊಂದು ,ಅಳೆಯುವ ಮಾಪುಗಳ ಮುಂದೆಯೂ, ಮತ್ತೊಂದು ವಾರ, ಗಜ, ತಸುಗಳನ್ನು ಮಾಡಿದ ಲಾಡಿಯ ಮುಂದೆಯೂ ನಿಂತಿದ್ದಳು. ಇನ್ನೊಂದು ಗಡಿಯಾರದ ಮುಳ್ಳಿನ ತಗಡನ್ನು ಹಿಡಿದುಕೊಂಡು ನಿಂತಿತ್ತು. ಇಷ್ಟು ಮೇಳಸಿದ್ದವಾದ ಮೇಲೆ ಮೊದಲಿನ ಹುಡುಗಿಯು ಇಗೋ ಇದೊಂದು ಇಡೀ ವಸ್ತುವು. ಇದರಲ್ಲಿ ನಾಲ್ಕು ಸಮಭಾಗಗಳನ್ನು ಮಾಡಿ ಇಟ್ಟಿದ್ದೇವೆ ಇವುಗಳಲ್ಲೊಂದಕ್ಕೆ ಕಾಲೆನ್ನುವರು. ಎಂದು ನುಡಿದ ಕೂಡಲೆ ಉಳಿದ ಹುಡುಗರೆಲ್ಲರು ತಮ್ಮ ತಮ್ಮ ಮುಂದಿರುವ ವಸ್ತುಗಳೊಳಗಿನ ನಾಲ್ಕನೇ ಪಾಲನ್ನು ಹೇಳುವರು. ಹ್ಯಾಗಂದರೆ :— ರೂಪಾಯಿಯ ಕಾಲು ಪಾಲು ಪಾವಲಿ ಪಾವಲಿಯ ಕಾಲು ಪಾಲು ಅಣೆ. ಇತ್ಯಾದಿ ಇದರಿಂದ ಕಾಲೆಂದರೇನೆಂಬದೂ ಅದನ್ನು ಎಲ್ಲೆಲ್ಲಿ ಹಚ್ಚಬೇಕೆಂಬದು ಬಹು ಸರಸವಾಗಿ ತಿಳಿಯುವದಲ್ಲದೆ ಹುಡುಗರಿಗೆ ವಿಷಯವು ದೃಢವಾಗುವದು.

ಮೇಜಿನ ಮೇಲಿನ ನಗದದ ಸಕಾಶದಿಂದ ಹುಡುಗರು ಹಾದಿಗಳನ್ನೂ, ದೊಡ್ಡ ಇಮಾರತುಗಳನ್ನೂ, ಒಂದು ಭಾಗದಿಂದ ಬೇರೊಂದು ಭಾಗಕ್ಕೆ ಹೋಗುವ ಬಗೆಯನ್ನೂ ತಪ್ಪದೆ ಹೇಳುವದನ್ನು ನೋಡಿ. ನಮಗೆ ಬಹು ಸಮಾಧಾನವಾಯಿತು. ನಕಾಶದ ವ್ಯವಸ್ಥೆಯನ್ನು ಕಲಿಸಲಿಕ್ಕೆ ಪ್ರತ್ಯಕ್ಷವಾಗಿ ಮಣ್ಣಿನಿಂದ ಮಾಡಿದ ಭೂಪೃಷ್ಠದ ಮಾದರಿಯನ್ನೇ ಮಾಡಿದ್ದರು. ಅದರಿಂದ ಪರ್ವತ, ನದಿ ಮುಂತಾದವುಗಳನ್ನು ತಿಳಿಸಿದರು. ದಿಕ್ಕು ತೋರಿಸಲಿಕ್ಕೆ ಎಂಟು ಹುಡುಗ

ರ ಕೈಯಲ್ಲಿ ಲಾಡಿಯನ್ನು ಕೊಟ್ಟು ಎಂಟು ದಿಕ್ಕುಗಳಿಗೆ ನೋರೆ ಯಾಗುವಂತೆ ಹಾಡುತ್ತಲೂ, ತಮ್ಮ ತಮ್ಮ ದಿಕ್ಕು ಗಳ ೀಕ್ಷೆಯನ್ನು ಹೇಳುತ್ತಲು ಸಾಗುವಿಕೆಯನ್ನು ನೋಡಿ, ಯಾವುದೋ ಒಂದು ಆಟವನ್ನು ಆಡುತ್ತಿರುವಂತೆ ತೋರಿತು.

ನಡೆದ ವಿಷಯಗಳಲ್ಲಿ ಎಲ್ಲಕ್ಕೂ ಮೇಲಾದ ವಿಷಯ ವಿ ವೇಚನೆಯು ಯಾವುದೆಂದರೆ ಭಾಷಾ ವಿಷಯವು. ಇದನ್ನು ಕಲಿಸಿದ ಹೆಣ್ಣುಮಗಳು ಸುಮಾರು ೧೪-೧೫ ವರ್ಷದವಳಿರ ಬಹುದು. ಇವಳ ಮುಖ ಮುದ್ರೆಯು ಶಾಂತ, ಗಾಂಭೀ ರ್ಯ ಮುಮತೆ, ಚಟುವಟಿಕೆ, ವಿದ್ವತ್ತೆ ಮುಂತಾದ ಶಿಕ್ಷಕನ ಯಾವತ್ತು ಗುಣಗಳನ್ನು ವ್ಯಕ್ತಗೊಳಿಸುತ್ತಿತ್ತು. ಪ್ರಾಣಿ ಪಾಠವನ್ನು ಓದಿಸಿ, ಅದರೊಳಗೆ ಪ್ರಶ್ನೆಗಳನ್ನು ಕೇಳತೊಡ ಗಲು ನಾ, ನೀ ಎಂದು ಎದೆ ತಟ್ಟಿಕೊಳ್ಳುವ ಶಿಕ್ಷಕನು ದಂ ಗಾಗಬಹುದು. ಪ್ರಾಣಿ ಈ ಶಬ್ದದ ಅರ್ಥವನ್ನು ಎಂಟುಹತ್ತು ಉದಾಹರಣೆಗಳಿಂದ ಗಟ್ಟಿ ಮಾಡಿಸಿದಳು. ವಾಕ್ಯಾರ್ಥ, ವ್ಯಾಕರಣ, ಶಬ್ದಗಳ ವಿಭಕ್ತಿ, ಆ ವಿಭಕ್ತಿಗಳನ್ನು ಬದಲಿ ಸೋಣ ಅಂಥ ಶಬ್ದಗಳನ್ನು ಬೇರೆ ಬೇರೆ ವಾಕ್ಯದಲ್ಲಿ ಪ್ರ ಯೋಗಿಸ ಹಚ್ಚೋಣ ಮುಂತಾದ ವಿಷಯ ವಿವರಣೆಯ ಬಗೆಯನ್ನು ನೋಡಿ, ಆಕೆಯ ಬಗ್ಗೆ ನಮ್ಮಲ್ಲಿ ಪೂಜ್ಯಬುದ್ಧಿ ಯು ಉತ್ಪನ್ನವಾಯಿತು. ಹರ್ಷಶೋಕ, ಕೃತಜ್ಞತೆ, ಪೂ ಜ್ಯಬುದ್ಧಿ ಮುಂತಾದವುಗಳು ಮನೋವಿಕಾರಗಳಾಗಿರುವವು. ಆದ್ದರಿಂದ ಇವು ಮನುಷ್ಯನ ಅಂತಃಕರಣಕ್ಕೆ ಆಧೀನವಾಗಿ ರುವವು. ಅಂತಃಕರಣದಲ್ಲಿ ಆಯಾ ಮಾದರಿಯ ಭಾವನೆಗ ಳುಂಟಾದರೆ ಇವು ಹುಟ್ಟುತ್ತವಲ್ಲದೆ ಬಾಹ್ಯಕಾರಣಗಳಿಂದ ಉತ್ಪನ್ನವಾಗವು. ಸಾರಾಂಶ ಮಾತ್ಸರ್ಯ ದೃಷ್ಟಿಯಿಲ್ಲದ್ರೀ ಕ್ಷಕನಿದ್ದರೂ ಈ ಹೆಣ್ಣುಮಗಳ ಶಿಕ್ಷಣವು ಅವನಲ್ಲಿ ಪೂಜ್ಯ ಬುದ್ಧಿಯನ್ನು ಹುಟ್ಟಿಸದಿರದು. ಭೂಗೋಲ ವಿಷಯವಾದ ರೂ ಚನ್ನಾಗಿ ಕಲಿಸಲ್ಪಟ್ಟಿತು. ಆದರೆ ಇವರು ವ್ಯಾಪಾರ ಮಾಡುವ ವರ್ಗದವರಾದ ಕಾರಣ ಉಗೆಬಂಡಿಯ ಮಾರ್ಗ ಗಳನ್ನೂ, ಪ್ಲೇಶನ್ನಗಳನ್ನೂ,. ಬಳಿತಾಗಿ ನೆನಪಿಟ್ಟಿರುವರು. ಕೈ, ಕಾಲು, ಕಣ್ಣು, ತಲೆ ಮುಂತಾದವುಗಳು ನೊಂದಿದ್ದರೆ,

ಅವುಗಳನ್ನು ಹ್ಯಾಗೆ ಕಟ್ಟಬೇಕೆಂಬುದನ್ನು ಪ್ರತ್ಯಕ್ಷವಾಡಿ ತೋರಿಸಿದರು. ಚಿಕ್ಕಮಕ್ಕಳ ಕೈಯಲ್ಲಿ ಗೆಜ್ಜೆಹಬ್ಬಿದ ಕೋಲುಗಳನ್ನು ಕೊಟ್ಟು ಕವಾಯಿತು ಮಾಡಿಸಿದರು. ಗೋ ಪ್ರಹೆಣಿಸಿದರು. ಪಿಯಾನೋವಾದ್ಯದ ಸ್ವರಮೇಳದೊಂದಿಗೆ ಹೆಜ್ಜೆ ಇಡುತ್ತ ಚಕ್ರಾಕಾರವಾಗಿ ತಿರುಗುತ್ತ ತಮ್ಮತಮ್ಮ ಮುಂದಿನವರ ಹೆಳಲು ಹೆಣೆದರು. ಎಲ್ಲಕ್ಕೂ ಕಡೆಯಲ್ಲಿ ಎಲ್ಲರೂ ಕೂಡಿ ಏಕತಾಳದಿಂದ ಈಶಸ್ತುತಿಯ ಪಲವು ಪದಗಳನ್ನು ಹಾಡಿದರು. ಇದೇ ನಾಟಕದೊಳಗಿನ ಮಂಗಲಾರತಿಯ ಪದವೆಂದು ಹೇಳಬಹುದು. ಬಳಿಕ ನಮ್ಮೆಲ್ಲರನ್ನು ಸನ್ಮಾನಪೂರ್ವಕವಾಗಿ ಬೀಳ್ಕೊಟ್ಟರು.

ಈ ಶಾಲೆಯಲ್ಲಿ ನಾವು ಇಡೀ ಮೂರುವರೆ ತಾಸುಗಳನ್ನು ಕಳೆದೆವು. ಶಾಲೆಯಲ್ಲಿ ಗುಜರಾಥೀ ಭಾಷೆಯು ನಡೆಯುವದು. ನಾವಂತು ಕನ್ನಡಿಗರು ಆದರೂ ಇಪ್ಪು ಹೊತ್ತಿನಲ್ಲಿ ಒಬ್ಬರು ಸಹ ಎವೆ ಮಿಸುಕದೆ, ಮಾತಾಡದೆ ಸೂತ್ರಗೊಂಬೆಯಂತೆ ನೋಡುತ್ತ ಕುಳಿತಿದ್ದರು. ಒಂದು ವಿಷಯವಾದ ಕೂಡಲೆ ಹೋಗುವ ಹುಡುಗರು ನೆರೆದವರಿಗೆ ಹೋಗಿ ಬರುತ್ತೇವೆಂದು ಹೇಳುವದು ಸಭ್ಯತನದ ಶಿಕ್ಷಣವನ್ನು ತೋರಿಸಿತು. ಗಟ್ಟಿದಾಗಿ ನುಡಿದು ಅಪ್ಪಣೆಕೊಟ್ಟಂಥ ಅಥವಾ ಹುಡುಗರ ಮೇಲೆ ಹರಿಹಾಯ್ದಂಥ ಅಥವಾ ಧಗ್ ಧಗ್ ಎಂದು ಕಾಲನ್ನು ಅಪ್ಪಳಿಸುತ್ತಾ, ಅಡ್ಡಾಡುವಂಥ ಸುಮ್ಮ ಸುಮ್ಮನೆ ಪಿಶಿ ಪಿಶಿ ನಗುವಂಥ ಅಸಭ್ಯತನದ ಪ್ರಸಂಗಗಳು ನಮ್ಮ ದೃಷ್ಟಿಗೆ ಬೀಳಲಿಲ್ಲ. ಒಟ್ಟಿಗೆ ನಾವು ಮೂರುವರೆ ತಾಸುಗಳವರೆಗೆ ಒಂದು ಸರ್ವೋತ್ಕೃಷ್ಟ ನಾಟಕವನ್ನು ನೋಡುತ್ತ ಕುಳಿತಿದ್ದೇವೆಂದು ಭಾಸವಾಯಿತು.

ಈ ಶಾಲೆಯಲ್ಲಿ ಕೆಲವು ವ್ಯಂಗಗಳಿರಬಹುದು. ನಾವು ಹೋದ ಉದ್ದೇಶವು ಗುಣಾಂಶವನ್ನು ಸ್ವೀಕರಿಸುವದಿತ್ತು. ಆದ್ದರಿಂದ ಅಂಥ ಭಾಗವನ್ನಷ್ಟೇ ಉಲ್ಲೇಖಿಸಿದ್ದೇವೆ. ಅಧ್ಯಾಪಕರಿಗೆ ಇವೆಲ್ಲ ಸಂಗತಿಗಳು ಅನುಕೂಲವಾಗುವದು ಬಹು ದುಸ್ಸಾಧ್ಯವೆಂದು ತೋರಬಹುದು. ಈ ಶಾಲೆಗೆ ದೊರೆಯುತ್ತಿದ್ದ ದ್ರವ್ಯಾನುಕೂಲತೆ, ಜನಾನುಕೂಲತೆಗಳಂ

ತರ ಬೊರೆಯುವದು ದುರ್ಲಭವಾದರೂ ಈಗಿದ್ದ ಸ್ಥಿತಿಯಲ್ಲಿಯೂ ಈ ಶಾಲೆಯು ಗುಣಾಂಶಗಳನ್ನೆಷ್ಟೋ ಬಳಿಕೆಯಲ್ಲಿ ತರಬಹುದು. ಈಗಿರುವ ಗವರ್ನರ ಜನರಲ್ಲರಾದ ಲಾರ್ಡ ಕರ್ಜನರವರು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಹಣವನ್ನು ವೆಚ್ಚಮಾಡಬೇಕೆಂದು ನಿಶ್ಚಯಿಸಿರುವರು. ಹಾಗಾದರೆ ಧನಜನಾನುಕೂಲವು ಬೊರೆಯಬಹುದು. ಆದರೆ ಮಾಸ್ತರರು ಸ್ವಂತ ಸುಧಾರಣೆಯನ್ನು ಮಾಡಿಕೊಳ್ಳುವದು ಮೊದಲನೇ ಕೆಲಸವು ಇದಕ್ಕೇನು ರೊಕ್ಕಬೇಡ. ಸ್ವಭಾವ, ಒಳ್ಳೇನಡತೆ, ಸೌಮ್ಯಭಾಷಣ, ಉಲ್ಲಾಸದ ಮುಖಮುದ್ರೆ, ಉದ್ಯೋಗದಲ್ಲಿ ಉತ್ಕಟೇಚ್ಛೆ ಮುಂತಾದ ಸದ್ಗುಣಗಳನ್ನು ಕಲಿತುಕೊಂಡು ವರ್ತಿಸಿದರೆ, ಅರ್ಧಕಾರ್ಯವಾಯಿತೆಂದು ಹೇಳಬಹುದು.

ಮನಸಿದ್ದಲ್ಲಿ ಮಾರ್ಗದೊರೆಯುವದು ನಿಜವು. ಈ ನಮ್ಮ ಲೇಖದಿಂದ ಅಧ್ಯಾಪಕರು ಈ ಮಾದರಿ ಶಿಕ್ಷಕರಾದರಂತೂ ನಾವು ಕೃತಕೃತ್ಯರೆಂದು ತಿಳಿಯುತ್ತೇವೆ. ಕಡೆಗೆ ಈ ಮಾರ್ಗವು ಜಿಲ್ಲೋದು ಇದನ್ನು ಹಿಂಬಾಲಿಸಬೇಕೆಂಬ ತಿಳುವಳಿಕೆಯಾದರೂ ಅವರ ಮನದಲ್ಲುಂಟಾದರೆ, ನಮ್ಮ ಲೇಖವು ಸಾರ್ಥಕವಾಯಿತೆಂದು ನಂಬುತ್ತೇವೆ.

PROPOSED OBJECT LESSONS.

ಸೂಚಿಸಿದ ವಸ್ತುಪಾಠಗಳು.

(ಎರಡನೇ ಪುಟದಿಂದ ಮುಂದೆ ಸಾಗಿದ್ದು.)

ಪವಿತ್ರತಿಕೋಟಿ.

ಗಿಡ—ಮುಖ್ಯ ಸುಲಭಸ್ವರೂಪವನ್ನೂ, ಭಾಗಗಳನ್ನೂ, ಮಾತ್ರ ಕಲಿಸಬೇಕು.

ಬಾಲಕರು ಹಣ್ಣಿನ ಅಥವಾ ಹೂವಿನ ಆಕಾರವನ್ನು, } ಹಣ್ಣು (ಮಾವಿನಹಣ್ಣು)
ತೆಗಿಯಬೇಕು. } ಹೂವು. (ಸಾಧಾರಣ ಹೂವು)

೬ನೇ ಸಮುದಾಯ.

೧ ಆಕಳು ಅಥವಾ ಎಮ್ಮೆ
೨ ಗಿಳಿ

} ಮುಖ್ಯವಾಗಿ ಪ್ರಾಣಿಯ ಭಾಗಗಳನ್ನೂ ಪಕ್ಷಿಯ ಭಾಗಗಳನ್ನೂ ತಿಳಿಸಬೇಕು.

೧೦ನೇ ಸಮುದಾಯ.

ಸಾಧಾರಣ ವಸ್ತುಗಳು.

೧ ಮೇಜು ಅಥವಾ ಬೆಂಚು
೨ ಬುಟ್ಟಿ

} ೧ನೇ ಪ್ರಯತ್ನ

೧ನೇ ಸಮುದಾಯ.

(ಅ) ವಸ್ತು

ನೀರು
ಕಾಜು
ಮಣ್ಣಿನಪಾತ್ರೆ

} ಕೆಲವಾದರೂ ಪದಾರ್ಥಗಳನ್ನೂ, ಅವುಗಳಗುಣ ಧರ್ಮ ಅಂದರೆ ಪಾರದರ್ಶಕತ್ವ, ಸ್ಥಿತಿಸ್ಥಾಪಕತ್ವ, ಸಚ್ಛಿದ್ರತ, ಉಪಯೋಗ, ಅಂಶ, ಮುಂತಾದವುಗಳನ್ನು ತಿಳಿಸಿ ಕೊಡುವದು

(ಆ) ಆಕಾರ

ಸ್ಲೇಟುಗಳು, ಕಾಗದದ ತುಂಡುಗಳು, ಕಟ್ಟಿಗೆ ಅಥವಾ ದಪ್ಪ ಕಾಗದದರಟ್ಟುಗಳು, ಹಲಿಗೆಗಳು, ಆಟದ ಇಟ್ಟಂಗಿಗಳು,

} ತ್ರಿಕೋನಗಳನ್ನೂ, ಸಮಾಂತರ ರೇಷೆಗಳನ್ನೂ, ಸಾದಾ ಬಿಂದು ರಂಗದ ಪೃಷ್ಠಭಾಗದ ಆಕಾರ (ಚೌರಸ್ರ, ಕಾಟಕೋನ ಚೌಕೋನ, ತ್ರಿಕೋನ ಮುಂತಾದವುಗಳನ್ನು) ತಿಳಿಸುವದು. ಅಚ್ಚುತಿಯಂತ ಕಾಗದಗಳನ್ನು ಮಡಿಸುವದು. ರೇಖೆಗಳನ್ನೂ ಆಕಾರಗಳನ್ನೂ ಹೆಗೆಯುವದು.

(ಇ) ಬಣ್ಣ

ಬಾಲಕರ ಇಯತ್ತೆಯಲ್ಲಿ ಹೇಳಿದ್ದರ ಹೊರತು ಬಿಂಬ ಮತ್ತು ನಸುಗೆಂಪು ಬಣ್ಣಗಳು ಹಾಗೂ ಪ್ರಥಮ ಬಣ್ಣದ ಎಲ್ಲ ಪಡಿಗಳು.

} ಪ್ರಾಥಮಿಕ ಅಂದರೆ ಮೂಲ ಅಥವಾ ಮಿಕ್ರ ಬಣ್ಣಗಳ ಭೇದಗಳನ್ನು ಕಲಿಸುವದು. ಮೂಲ ಬಣ್ಣಗಳನ್ನು ಬೆರಿಸಿ ಮಿಕ್ರ ಬಣ್ಣಗಳನ್ನು ಮಾಡಿಸುವದು.

ಟೀಪು—ವಸ್ತು ಸಂಜ್ಞೆಯಕ್ಕೆ ಪುರವಣಿಯಾಗಿ ಉಪ್ಪು, ಕಹಿ, ಕಾರ, ರುಚಿಗಳನ್ನು ತೋರಿಸುವದಕ್ಕೆ ಉಪ್ಪು, ಕಹಿಬಾದಾವಿ, ಮೆಣಸು, ಲವಂಗ ಮುಂತಾದವುಗಳಿಂದ ತಿಳಿಸುವದು.

೨ನೇ ಸಮುದಾಯ

ಅಲ್ಯು ಅಥ | ಸಾಧಾರಣ ರೂಪ, ಸುಲಭ ಧರ್ಮಗಳು,
ನಾ ಉಸುಬು | ಸ್ಥಾನಿಕ ಉತ್ಪತ್ತಿ ಇವುಗಳನ್ನು ತಿಳಿಸುವದು.

೩ನೇ ಸಮುದಾಯ

೧ ಬ್ರಿತಿಶ್ ಇಂಡಿಯಾದೊಳಗ | ಬಂಗಾರ, ಬೆಳ್ಳಿ, ತಾಮ್ರ;
ನ ಧಾತುವಿನ ನಾಣ್ಯಗಳು |

೨ ಚೂರಿಯು ಅಥವಾ ಕೊಡ್ಲಿ — ಕಬ್ಬಿಣ ಅಥವಾ ಉಕ್ಕಿನ ವಿಷಯವಾಗಿ ಹೇಳುವದು

೪ನೇ ಸಮುದಾಯ

೧ ತೊಗರೀಗಿಡ | ಗಿಡಗಳಿಗೆ ಹೋಲಿಸಿ ತೋರಿಸುವದು.
೨ ಬಳ್ಳಿ ಮತ್ತು ಬಳ್ಳಿಯುಂತಿರುವ ಉದ್ಭಿಜ್ಜಗಳು | ಬೇರು, ದೇಟು, ಎಲೆ, ಹೂವು, ಹಣ್ಣು ಮುಂತಾದವುಗಳನ್ನು ಹುಡುಗರ ಮುಂದಿಟ್ಟು, ಅವರ ನಿರೀಕ್ಷಣೆಕ್ಕೆ ಅನುವು ಮಾಡಿಕೊಡುವದು. ಹಣ್ಣು ಕಾಯಿಗಳ ಚಿತ್ರವನ್ನು ತೆಗೆಯುವದು.

೫ನೇ ಸಮುದಾಯ

೧ ಆಡು, ಹೋತು ಅಥವಾ ಕುರಿ—ಇವುಗಳು, ಅಥವಾ ಎಮ್ಮೆಗಳಿಗೆ ಹೋಲಿಸಿ ತೋರಿಸುವದು.

೨ ಗುಬ್ಬಿ ಅಥವಾ ಪಾರಿವಾಳ — ಗಿಳಿಗೆ ಹೋಲಿಸಿ ಹೇಳುವದು.

೧೦ನೇ ಸಮುದಾಯ

ಸಾವಾವ್ಯ ವಸ್ತುಗಳು.

೧ ಸುಟ್ಟ ಅಥವಾ ಒಣ ಹೆಂಟೆಗಳು—ಹಂಚುಗಳು.

೨ನೇ ಇಯತ್ತೆ.

೧ನೇ ಸಮುದಾಯ

(೫) ವಸ್ತು

(೨೭೭ನೇ ಪುಟದಿಂದ ಮುಂದೆ ಸಾಗಿದ್ದು.)

ಸ್ಕಾಟಲಂಡಿನ ಎತ್ತರವಾದ ಪ್ರದೇಶವೂ ಕಂಬರ್ಲಂಡ್ ಪ್ರಾಂತದ ನೆಲವೂ ಕಾರ್ನವಾಲ ಹಾಗೂ ಡೆವ್ಹನ್ ಪ್ರಾಂತದೊಳಗಿನ ಗುಡ್ಡಗಳೂ ಮುಖ್ಯವಾಗಿ ಪ್ಲುತಾನಿಕ್ ಬಂಡೆಗಳಿಂದಲೇ ಉಂಟಾಗಿರುವವು.

ಸಿನ್ಯೈಟ ಇದು ಕಣಶಿಲೆಯ ಒಂದು ವಿಶೇಷ ಪ್ರಕಾರವು. ಕಣಶಿಲೆಯಲ್ಲಿ ಇರುವಂತೆ ಇದರಲ್ಲಿಯೂ ಒಂದು ತರದ ಬೆಣಚುಗಲ್ಲೂ ಸತುವಿನ ಅದರುಗಳೂ ಇರುವವು.

ಫೆಲ್‌ಸ್ಪೋನ್—ಇದು ಸಾಂದ್ರ ಕಣಗಳುಳ್ಳ ಬಂಡೆಯು ಇದರಲ್ಲಿ ಫೆಲ್ಸಪಾರವೂ ಬೆಣಚುಗಲ್ಲೂ ಇರುತ್ತವೆ.

ಪೊರಾಯಿಟ್—ಇದರಲ್ಲಿ ಸೋಡಾ ಫೆಲ್ಸ್‌ಪಾರವೂ ಸತುವಿನ ಅದುರುಗಳೂ ಇರುವವು. ಇದು ಬಹಳ ಆಳವಾದ ಭೂಮಿಯ ಕೆಳಗಿನ ಥರದಲ್ಲಿ ಗುಂಪುಗುಂಪಾಗಿ ದೊರೆಯುತ್ತದೆ.

ವಿಕ್ರತಶಿಲೆಗಳು—ಇವು ಪ್ರಸ್ತರೀಭೂತ ಬಂಡೆಗಳು ಉಷ್ಣತೆ ಭಾರಗಳ ಯೋಗದಿಂದ ಬಹುತರವಾಗಿ ಸ್ಫಟಿಕರೂಪವನ್ನು ಹೊಂದಿರುತ್ತವೆ. ಇದರ ರೂಪಾಂತರದ ಹೆಸರುಗಳು ಯಾವವೆಂದರೆ:—

ಸ್ಫಟಿಕರೂಪಹೊಂದಿದ ಸುಣ್ಣದಕಲ್ಲು, ಸಂಗಮೆರವರೀಕಲ್ಲು, ಬೆಣಚಿಗಲ್ಲು, ಉಸುಬಿನಕಲ್ಲು, ಮುಂತಾದವುಗಳು ಇವುಗಳ ಕಣಗಳು ಅಂಕತಃ ಕರಗಿ ಒಟ್ಟಾಗಿರುತ್ತವೆ.

ಸ್ಲೇಟು—ಇದು ಅತಿಕಯವಾದ ಬದಿಯಬತ್ತುವಿಕೆಯಿಂದ ಫಿನೀಭೂತವಾದ ಒಂದುತರದ ಕಲ್ಲು ಈ ಕಲ್ಲು ಮೊದಲು ಪ್ರಸ್ತರನ್ಯಸ್ತವಾಗಿ ನೀರಿನಭಾರದಿಂದ ಮಟ್ಟಯಾಗಿರುತ್ತದೆ.

ಸೀಸ—ಕಣಶಿಲೆಯಲ್ಲಿರುವ ಅಭ್ರಕ ಬೆಣಚಿಗಲ್ಲು, ಫೆಲ್ಸಪಾರ, ಮುಂತಾದ ಖನಿಜಗಳಿಂದಲೇ ಇದು ಉಂಟಾಗಿರುತ್ತದೆ ಆದರೆ ಸೀಸದಲ್ಲಿ ಈ ಖನಿಜಗಳು ಪ್ರಸ್ತರರೂಪದಿಂದಿರುತ್ತವೆ.

ಪ್ರಸ್ತರರಚಿತಶಿಲೆಗಳು—ಈ ಬಂಡೆಗಳಲ್ಲಿ ಹಿಬ್ಬೇರೆಬೇರೆ ವರ್ಗಗಳನ್ನು ಮಾಡಬಹುದು.

(೧) ಜಲಶಿಲೆಗಳು ಇವು ಉರ್ಲು, ಉಸುಬಿನಕಲ್ಲು, ಸುಂತಾದವುಗಳು, ನದಿಗಳ ಮುಖಗಳಲ್ಲಿಯೂ, ಸಮುದ್ರದ ತಾಗೂ ದೊಡ್ಡ ಸರೋವರಗಳ ಬುಡಗಳಲ್ಲಿಯೂ ಕೂತ ದೇವೆಯಿಂದಾವಂಥವು. ಬೇರೆ ಬೇರೆ ತೆರದ ನೆಲಗಳ ವಿಷಯವಾಗಿ ವಿಚಾರ ಮಾಡುವಾಗ ಇವುಗಳನ್ನು ಕುರಿತು ಹೆಚ್ಚಿಗ್ಗೆವಿವರಿಸುವಾ.

(೨) ಕೇಂದ್ರಿಯ ಶಿಲೆಗಳು. ಇವು ಪ್ರಾಣಿ ವನಸ್ಪತಿಗಳಿಂದ ಆದಂಥ ಶಿಲೆಗಳು ಬಿಡು, ರಂಗೋಲಿಯಕಲ್ಲು, ಸುಣ್ಣದಕಲ್ಲು, ಫಾಸ್ಫರಾಯಿಟ್ ಎಂಬುಕಲ್ಲು, ಮೇಟಿಂಬುಕಲ್ಲು, ಕಲ್ಲಿದ್ದಲಿ ಇವೆಲ್ಲ ಈ ವರ್ಗದೊಳಗೆ ಬರುತ್ತವೆ.

(೩) ರಸಾಯನಿಕ ಕ್ರಿಯೆಯಿಂದಾದ ಕಲ್ಲುಗಳು. ಇವು ಸಮುದ್ರ ಸರೋವರಗಳ ನೀರು ಕ್ರಮದಿಂದ ಬಣಗಿ ತಳಕ್ಕೆ ಹೂಡುವುದರಿಂಯುಂಟಾದ ಕಲ್ಲುಗಳು. ಲವಣ, ಪೋಟಾಶಿಯುಮ್ ಸಲ್ಫೇಟ್ ಜಿಪ್ಸಮ್ ಅಥವಾ ಸುಣ್ಣದ ಕಲ್ಲಾದರೂ ಇದೇ ವರ್ಗದಲ್ಲಿ ಬರುತ್ತದೆ.

(೪) ಪ್ರಸ್ತರೀ ಭೂತಜಲಶಿಲೆಗಳು. ಅಗ್ನಿ ಶಿಲೆಗಳಿಂದ ಹಿನ್ನಾವಾಗಿರುವ ಪ್ರಕಾರಗಳು. (೧) ಒಂದರಮೇಲೊಂದು ರಚಿಸಲ್ಪಟ್ಟ ತರಗಳಿಂದಾಗುತ್ತವೆ. (೨) ಸ್ಫಟಿಕರೂಪವನ್ನು ಹೊಂದಿದ ಖನಿಜಗಳಿಂದಾಗಿರುತ್ತವೆ. (೩) ಪೂರ್ವಕಾಲದ ಬಂಡೆಗಳು ಸವೆದದರಿಂದಾಗಿರುತ್ತವೆ. (೪) ಈ ಜಲಶಿಲೆಗಳಲ್ಲಿ ಪ್ರಾಣಿ ವನಸ್ಪತಿಗಳ ಅವಶೇಷಗಳು ಇವುಗಳಲ್ಲಿ ದೊರೆಯುತ್ತವೆ.

ಪೆಲಗಳ ರಚನೆಯು.

ಸ್ಫಟಿಕರೂಪದ ಹಾಗೂ ಇತರ ಕಲ್ಲುಗಳ ಯೋಗದಿಂದ ಆದಂಥ ನೆಲವನ್ನುಂಟುಮಾಡುವ ಸೃಷ್ಟಿಕಾರ್ಯಗಳು ಮುಖ್ಯವಾಗಿ (೨) ಎರಡು ಉಂಟು.

(೧) ವಾಯುಕಾರ್ಯ ಅಂದರೆ ಮಳೆಗಾಳಿಗಳ ಯೋಗ

ದಿಂದ ಶಿಲೆಗಳ ಛಿದ್ರೀಕರಣವಾಗುವದು ಇದಕ್ಕೆ ಪ್ರಾಣಿವ
ನಸ್ಪತಿಗಳೂ ಸಹಾಯ ಮಾಡುತ್ತವೆ.

(೨) ಸ್ಥಳಾಂತರವನ್ನು ಮಾಡುವ ಕಾರಣಗಳು.

ವಾಯುಕಾರ್ಯವನ್ನು ಕುರಿತು ಮೊದಲು ಆಲೋಚಿಸುವ.

ವಾಯುಕಾರ್ಯ ಮಾಡುವ ಪರಿಣಾಮಗಳು.
- ಯಾಂತ್ರಿಕ
  - ಜಳಿ.
  - ಕಣಿ.
- ರಾಸಾಯನಿಕ
  - ನೀರು.
  - ಕಾರ್ಬೊನಿಕ್ ಆಸಿಡ್.
  - ಆಕ್ಸಿಜನ್.

(೩) ಎಲ್ಲ ಬಂಡೆಗಳಲ್ಲಿ ಛಿದ್ರಗಳು ಇದ್ದೇ ಇರುತ್ತವೆ ಬಂದರಲ್ಲಿ ಹೆಚ್ಚಿರುತ್ತವೆ ಮತ್ತೊಂದರಲ್ಲಿ ಕಡಿಮಿ ಇರುತ್ತವೆ. ಇವ್ವೇ ಈ ಛಿದ್ರಗಳಲ್ಲಿ ಮಳೆಯ ಯೋಗದಿಂದ ಅಥವಾ ಬೇರೆ ಕಾರಣದಿಂದ ನೀರು ಶೇರುತ್ತದೆ. ಆ ನೀರಿಗೆ ಹೆಚ್ಚು ಛಳಿ ತಗಲಿದ ಕೂಡಲೆ ಅದು ಘನವಾಗಿ ಬರ್ಫದ ರೂಪವನ್ನು ಹೊಂದುತ್ತದೆ ಬರ್ಫಿಗೆ ನೀರಿಗಿಂತ ಹೆಚ್ಚು ಸ್ಥಳವು ಬೇಕು. ಬರ್ಫವು ನೀರಿನ ಆಕಾರದ ನ್ನಿ ಬಂದು ಹದಿಮೂರನೇ ಪಾಲಿನಷ್ಟು ಹೆಚ್ಚು ಸ್ಥಳವನ್ನು ವ್ಯಾಪಿಸುತ್ತದೆ ಇದಲ್ಲದೆ ಬಂದು ದಿವಸದ ಒಳ ತಾಸುಗಳಲ್ಲಿ ಉಷ್ಣಮಾನವು ಹೆಚ್ಚು ಕಡಿಮೆಯಾಗುವದು ಸ್ವಾಭಾವಿಕವಷ್ಟೇ! ಅದರಿಂದ ಉಂಟಾಗುವ ಕಣಿ ಜಳಿಗಳಿಂದ ಪ್ರಸರಣಾಕುಂಚನ ಕಾರ್ಯಗಳು ಯಾವಾಗಲೂ ಬಂಡೆಗಳಲ್ಲಿ ನಡಿದೇ ಇರುತ್ತವೆ. ಇವೆರಡು ಬಲವಾದ ಕಾರಣಗಳಿಂದ ಶಿಲೆಗಳು ಒಡಿಯುವದೂ ಸವೆಯುವದೂ ಸ್ಪಷ್ಟವೆಂಬುವದು ಮೇಲೆ ಕಾಣುತ್ತದೆ. ಇಜಿಪ್ತದೇಶದಂಥ ಕಣಿನಾಡುಗಳಲ್ಲಿರುವ ಎಷ್ಟೋ ಶಿಲಾಸ್ತಂಭಗಳು ಏನೂ ವಿಕೃತಿಯನ್ನು ಹೊಂದದೆ ಇಂದಿಗೂ ನಿಂತಿರುತ್ತವೆ. ಆದರೆ ಇಂಗ್ಲಂಡದೊಳಗಿನ ಗೋರಿಯ ಮೇಲಿನ ಬರಹವು ಬಂದು ಸಾವಿರ ವರ್ಷದೊಳಗೇ ಓದಲಿಕ್ಕೆ ಬಾರದಂತೆ ಆಗಿ ಹೋಗಿದೆ. ಧ್ರುವಪ್ರದೇಶದ ನೆರೆಯುಲ್ಲಿ ಇರುವ ಕಲ್ಲುಗಳ ಮೇಲೆ ಈ ಕಾರ್ಯದ ಪರಿಣಾಮವು ಏನೂ ಆಗುವದಿಲ್ಲ ಯಾಕಂದರೆ ಅಲ್ಲಿ ಯಾವಾಗಲೂ ಜಳಿ ಇರುತ್ತದೆ.

ಆ ಕ ಳು.

ಉಪಕರಣಗಳು—ಆಕಳ ಚಿತ್ರ; ಕೂದಲುಳ್ಳ ತೊಗಲು; ತಲೆಬುರುಡೆ ಅಥವಾ ಅದರ ಚಿತ್ರ; ಕೋಡು; ಕಾಲಿನಚಿತ್ರ;

ಸೂಚನೆ—(೧) ಪುನುಷ್ಯನಿಗೆ ಪರಿಪಚ್ಚಿ ಕಲಿಸಬೇಕು.

(೨) ಆಕಳು ಮೇಯುವ ಸ್ಥಳಕ್ಕೆ ಹುಡುಗರನ್ನು ಕರದೊಯ್ದು ಸೂಲಸಂಗತಿಗಳನ್ನೆಲ್ಲ ತಿಳಿಸಿಕೊಡು ಬುದಬಳಿಕ ಸಾಲೆಯಲ್ಲಿ ಸಾಠವನ್ನು ಕಲಿಸಬೇಕು.

ಉದ್ದೇಶ—ಜಾಳುವೆಗೂ ಉಪಯೋಗಕ್ಕೂ ತಕ್ಕ ಶರೀರರಚನೆ ಇರುತ್ತದೆಂಬವನ್ನು ಕಲಿಸುವದು.

ವಸ್ತುದರ್ಶನ.	ಫಲಿತ.	ಸಿದ್ಧಾಂತ.
(೧) ಮೈಕಟ್ಟು :— ಹುಡುಗರು ಆಕಳ ಚಿತ್ರವನ್ನು ನೋಡಲಿ; ಹಾಗೂ ಬೇರೆ ಬೇರೆ ಆಕಳುಗಳನ್ನು ನೋಡಿರುವರಷ್ಟೇ ಅವುಗಳ ಬಣ್ಣವನ್ನು ನೆನಪಿಗೆ ತಂದುಕೊಡಬೇಕು. ಕುತ್ತಿಗೆಯನ್ನು ನೋಡಲಿ; ದನಗಳು ಹುಲ್ಲು ತಿಂದು ಬದುಕುವವೆಂಬದನ್ನು ನೆನಪಿಗೆ ತಂದುಕೊಡಿರಿ.	ಶರೀರವು ಗಡುತರವಾಗಿಯೂ, ಜಡವಾಗಿಯೂ ಎತ್ತರವಾಗಿಯೂ ಇರುತ್ತದೆ. ಹಾಗೂ ಬೇರೆ ಬೇರೆ ಬಣ್ಣಗಳುಳ್ಳದ್ದಾಗಿದೆ. ಕುತ್ತಿಗೆಯು ಗಡುತರವಾಗಿಯೂ, ಕೆರಿದಾಗಿಯೂ ಅದೆ.	ದೊಡ್ಡ ಪ್ರಾಣಿಗಳಿಗೆ ಕಿರಿಗುತ್ತಿಗೆ ಇಪ್ಪುದರಿಂ, ಹುಲ್ಲು ಮೇಯುವಲಿಕ್ಕೆ ಗಾಂವಗುವದಿಲ್ಲ. ಕುತ್ತಿಗೆಯು ಹುಲ್ಲಿಗೆ ಸವಿಾಪವಿದ್ದರೆ ಹುಲ್ಲು ತಿನ್ನಲಿಕ್ಕೆ ಶ್ರಮ ಹತ್ತುವದಿಲ್ಲ.

(೨) ಹೊದಿಕೆ :— ಕೂದಲುಳ್ಳ ತೊಗಲು ತೋರಿಸಿರಿ. (ಹುಡುಗರು ಒಡಿದು ನೋಡಲಿ.)	ತೊಗಲು ಗಟ್ಟಿಯಾಗಿಯೂ, ದಪ್ಪಾಗಿಯೂ ಅದೆ. ಅದರ ಮೇಲೆ ನುಣಪಾದ ಸಣ್ಣ * ಕೂದಲು ಇರುವವು. ಅವು ದಟ್ಟಾಗಿರುತ್ತವೆ.	ಆಕಳು ಒಂದು ಗಟ್ಟಿಜಾತಿಯ ಪ್ರಾಣಿಯಾಗಿರುವ ಕಾರಣ ಬಿ ಕಾದುಧ ಹವೆಯಲ್ಲಾದರೂ ಬದು ಕುವದು. (ಇದರ ಹದಮಾಡಿ ತೊಗಲು ಚರ್ಮದ ಸಾಮಾನು ಮಾಡಲಿಕ್ಕೆ ಉಪಯೋಗಿಸಲ್ಪಡು ತ್ತದೆ.)
(೩) ತಲೆ: — ಆಕಳ ತಲೆಬುರುಡೆಯನ್ನು ಅಥವಾ ಅದರ ಚಿತ್ರವನ್ನು ತೋರಿಸಿರಿ.	ತಲೆಯು ದೊಡ್ಡದದೆ. ಹಣೆಯು ಚಪ್ಪಟೆಯಾದದ್ದೂ, ಅಗಲವಾದದ್ದೂ ಅದೆ.	ತಲೆಯು ಉದ್ದ ಇರುವ ಕಾರಣ ಕುತ್ತಿಗೆಯು ಕಿರಿದು ಇದ್ದರೂ ಹುಲ್ಲು ಮೇಯಲಿಕ್ಕೆ ತೊಂದರೆಯಾಗುವದಿಲ್ಲ.
ಚಿತ್ರದಲ್ಲಿ ಆಕಳ ಮೂಗು, ಕಣ್ಣು, ಮೋರೆ, ಇವುಗಳನ್ನು ಲಕ್ಷವಿಟ್ಟು ನೋಡಲಿ.	ಮೂಗಿನ ಹೊಳ್ಳಿಗಳು ದೊಡ್ಡವಾಗಿವೆ; ಹಾಗೂ ತೆರೆದಿರುತ್ತವೆ. ಕಣ್ಣುಗಳು ದೊಡ್ಡವೂ ಸಭ್ಯ ಕಳೆಯುಳ್ಳವೂ ಇರುವವು.	ಅಡವಿಯಲ್ಲಿ ಮೇಯುವಾಗ್ಗೆ ಅಕಸ್ಮಾತ್ತಾಗಿ ಬಂದಂಥ ಶ್ವಾಪದಗಳನ್ನು ನೋಡಿ ಅತಿ ತ್ವರೆಯಿಂದ

* ಬೇಸಿಗೆಯೊಳಗೆ ಈ ಸಣ್ಣ ಕೂದಲುಗಳಲ್ಲಿ ಉಣ್ಣಿಯಾಗುವದು.

ಬಂತಿ ಹೂಗಳಿಂದಾಗಿ ಉಂಟಾದ ಸಿಹಿಯಾದ ಅಡಿಕೆಯಂತೆ ಮೊಡವೆಗಳಿಂದ ಸಹಾಯವಾಗುವುದಿಲ್ಲ. ಚಿಕ್ಕಪುಟ್ಟ ಗಳು ದೊಡ್ಡದಾಗಿ ರುವುದರಿಂದ ತ್ವಚೆಯು ಬೇಗ ಕಾಣುವುದು.	ಭಂಡಸೂಚಿಸಾಬರಿಚಿಂಯಸ್ಸುನಗಿಸುವುದು
ಕೆಂಬಣ್ಣವು ನಗಿಸಿದಾಗ ಕೆನ್ನೆಯ ಚುನ್ನಾಗಿ ಕೆಲಸುತ್ತದೆ. ಅದು ರಿಂದ ಪುಟ್ಟಮಗುವಿನ ಚುಂಬಿಸಲಾಗಿದೆ ಎಂದಾಗಿ ನಡಲು.	ಅಕಳು ಹಿಂಡಿನ ಹುಲ್ಲರ ಹೋಲಿಕೆಗೆ ನಲ್ಲಿ ಹ ಪ್ರ ಗರು ಬಿಸಿಲೇ ಚಿಮ್ಮಿ ಬಾರಿಸಲು; ಯಾಗೂ ಬಗೆ ಅಕಳು ಕಂಗಿನಿಗಿದ್ದರೂ ಲಜ್ಜೆಯಿಲ್ಲ ನೋಡಲು,
(೪) ಕೊಡುಗಳನ್ನು ಪರಿಶೀಲಿಸಿ. ಹಿಂಡಿನ ಹೆಣ್ಣರ ಹೋಲಿಕೆಗೆ ಅಕಳುಗಳು ಕಂಡುಬರುವುದಿಲ್ಲ ಏಕೆ ನಿಮಗೆ ತೋಚಿದ	ಹೊಳಪು ಅಥವಾ ಸಾಮಾನ್ಯ ಅಥವಾ ಬದಲಾಗಿದೆ. ಗಳಲ್ಲಿ ಯಾವುದಾದರೂ ಮುಖ್ಯ ಕಾರಣ ಹೇಳಿ.
ಕೊಡುಗಳು ಉತ್ತಮವಾಗಿವೆ. ಸಾಧ್ಯವಾಗಿವೆ.	

* ಹುಡುಗರು ಬಹಳ ತ್ವಚೆಯಿಂದ ಬಿಡಿ ಬಂದಾಗ ಉದರ ಕ್ಯಾನ್ಸರ್ ಬಿಡಿಸಲು ತೀವ್ರ ನಷ್ಟವಾಗುವ ಕಾರಣ ಮಾಡಿ ಹೊಸ ಸಲು ಹಿನ ಪದವು ನಿನಗೆ ಇಂದು ತೋರಿ.

(೫) ಹಲ್ಲು:—	ಕೆಳದವಡೆಯ ಎರಡೂ ಕಡೆಗೆ ಬೀಸುವ	
ತಲೆಬುರಡೆ ಅಥವಾ ಅದರ ಚಿತ್ರವನ್ನು ತೋರಿಸಿ; ಹಲ್ಲುಗಳನ್ನೂ, ದವಡೆಯನ್ನೂ ನೋಡಲಿ.	ಅಥವಾ ಸಣ್ಣಗೆ ಪುಡಿಮಾಡುವ (ಪೇಷಕ) ಹಲ್ಲುಗಳು ಇರುವವು. ಆದರೆ ಮೇಲ್ದವಡೆಗೆ ತುಂಡುಗಡಿಯಲ್ಲಿ ಹಲ್ಲುಗಳಿರುವದಿಲ್ಲ. ಹಾಗೂ ಹರಿಯುವ(ವಿದಾರಕ)ಹಲ್ಲುಗಳು ಇಲ್ಲ.	ವಿದಾರಕ ಹಲ್ಲುಗಳು ಇಲ್ಲದ್ದರಿಂದ ಮಾಂಸಾಹಾರಿಯಲ್ಲ; ಒರೆ ಉಚ್ಛಿಜ್ಜಾಹಾರಿಯು.
ಮೇಯುವಾಗಿನ ಸ್ಥಿತಿಯನ್ನು ಲಕ್ಷಕ್ಕೆ ತಂದು ಕೊಡುವದು.	ಹುಲ್ಲಿನ ಸುತ್ತಲೂ ನಾಲಿಗೆಯನ್ನು ಸುತ್ತಿ ಕೆಳಹಲ್ಲಿನಿಂದ ಮೇಲ್ದವಡೆಗೆ ಒತ್ತಿ ಹುಲ್ಲು ಹರಿದು ತಿನ್ನುವದು.	
ಮೇಯುವದನ್ನು ಬಿಟ್ಟು ಬಾಯಾಡಿಸುತ್ತ ಮಲಗಿದಾಗ್ಗೆ ಮೊದಲು ತಿಂದ ಹುಲ್ಲಿನ ಮುದ್ದೆಯು ಗಂಟಲಿನ ಮಾರ್ಗವಾಗಿ ಬಾಯೊಳಗೆ ಬರುವದನ್ನೂ, ಬಾಯಿಯಲ್ಲಿ ಸಣ್ಣಾದ ಮೇಲೆ ಪುನಃ ಹೋಗುವದನ್ನೂ ತೋರಿಸಿರಿ.	ಮೊದಲು * ಅವಡೌಡಾಗಿ ತಿಂದ ಹುಲ್ಲನ್ನು ಪುನಃ ಬಾಯೊಳಗೆ ತಂದು ಸಣ್ಣಗೆ ಮಾಡುವದು ಅಂದರೆ ಮೆಲಕಾಡಿಸುವದು.	ಮೆಲಕಾಡಿಸುವ ಪ್ರಾಣಿಯು.

* ಹುಡುಗರು ಅನ್ನವನ್ನು ಹಾಗೆ ಅವಡೌಡಾಗಿ ತಿನ್ನಬಾರದು. ಯಾಕಂದರೆ ತಿರಿ ಬಾಯೊಳಗೆ ತಂದುಕೊಳ್ಳಲಿಕ್ಕೆ ಬರುವದಿಲ್ಲ.

(೬) ಕಾಲು ಕಾಲಿನ ಚಿತ್ರವನ್ನು ತೋರಿಸಿರಿ.	ಮೊಣಕಾಲಿನ ಮೇಲ್ಭಾಗವು ಕೆಳಭಾಗಕ್ಕಿಂತ ದಪ್ಪವಾಗಿಯೂ, ಗಡುತರವಾಗಿಯೂ ಇರುವದು. ಕೆಳಭಾಗವು ಅವಕ್ಕಿಂತ ಸಣ್ಣಗಿಯೂ, ಗಟ್ಟಿಯಾಗಿಯೂ, ಅದೆ; ಕೊಳಗು ಶೀಳಿವೆ; ಹಿಂದೆರಡು ಚಿಟ್ಟುಗೊಳಗು ಇರುವವು.	ಕಾಲು ಸಣ್ಣಗಿ ಇರುವದರಿಂದ ತೀವ್ರ ಒಡಲಿಕ್ಕೂ, ಗಟ್ಟಿ ಇರುವದರಿಂದ ದೊಡ್ಡ ಶರೀರದ ಭಾರವನ್ನು ಹೊರಲಿಕ್ಕೂ ತಕ್ಕವಾಗಿವೆ.
(೭) ಪಾದದ ಚಿತ್ರವನ್ನು ತೋರಿಸಿರಿ. ಆಕಳು ನಡೆಯುವದನ್ನು ಲಕ್ಷವಿಟ್ಟು ನೋಡಲಿ.	ಪಾದಗಳು ಅಗಲವಾಗಿಯೂ, ಗಟ್ಟಿಯಾಗಿಯೂ ಅವೆ. ಕೊಳಗು ಶೀಳಿವೆ; ಹಿಂದೆರಡು ಚಿಟ್ಟುಗೊಳಗು ಇರುವವು. ಮುಂದಿನ ಕೊಳಗುಗಳ ಮೇಲೆ ಭಾರಹಾಕಿ ನಡೆಯುವವು.	ಪಾದಗಳು ಅಡ್ಡಗಲವಾಗಿರುವದರಿಂದ ಕೆಸರಲ್ಲಿ ಶಿಗಬೀಳುವದಿಲ್ಲ; ಹಸಿ ಇರುವಲ್ಲಿ ಹುಲ್ಲು ಇರುವದರಿಂದ ಅಲ್ಲಿ ಒಡ್ಯಾಡಿದಾಗ್ಯೂ ಅಪಾಯ ಹೊಂದದಂಥ, ಭಾರವನ್ನು ಸಹಿಸುವಂಥ ಕೊಳಗುಗಳಿರುತ್ತವೆ.
(೮) ಬಾಲವನ್ನು ತೋರಿಸಿರಿ; ಅದು ಅಗಳಾಡುವ ಕಾರಣವನ್ನು ಕೇಳಿರಿ.	ಬಾಲವು ಉದ್ದವಾಗಿಹೆ; ತುದಿಯಲ್ಲಿ ಚವರಿಯಂಥ ಕೂದಲು ಇರುವವು.	ಮೈಮೇಲೆ ಬೇಕಾದಲ್ಲಿ ಕುಳಿತ ಸೊಣಗಳನ್ನು ಜಾಡಿಸಿಕೊಳ್ಳುವದು.

(೯) (೫) ಕಚ್ಚಲ ಹಾಗೂ ಮೊಲೆ ತೋರಿಸಿರಿ. (೫) ಆಕಳು ಹಿಂಡುವವನ್ನು ನೆನಪಿಗೆ ತಂದ ಕೊಡಿರಿ:	ಕೆಚ್ಚಲು ಉಬ್ಬಿದ ಚೀಲದ ಹಾಗೆ ಅದೆ. ಅದಕ್ಕೆ ನಾಲ್ಕು ಮೊಲೆಗಳಿವೆ. ಹಾಲು ಬರುತ್ತವೆ.	ಕೆಚ್ಚಲಲ್ಲಿ ಹಾಲು ತುಂಬಿರುತ್ತವೆ; ಹಾಲಿನ ಸಲುವಾಗಿಯೇ ಆಕಳು ಸಾಕುವರು.
(೧೦) ಆಕಳ ಕುತ್ತಿಗೆಯ ಕೆಳಗೆ ಜೋತಾಡುವ ಮೆತ್ತನ್ನ ತೊಗಲು (ಗಂಗೆದೊಗಲು) ತೋರಿಸಿರಿ. ಅದಕ್ಕೆ ಏನು ಅನ್ನುತ್ತಾರೆ!	* ಗಂಗೆದೊಗಲು.	

* ನಮ್ಮ ದೇಶದಲ್ಲಿ ಇರುವ ಆಕಳು ಎತ್ತುಗಳ ಮುಖ್ಯ ಲಕ್ಷಣವು ಗಂಗೆದೊಗಲು; ಆದರೆ ಅದರ ಉಪಯೋಗವು ಜಸ್ತಾಗಿ ತಿಳಿದಿಲ್ಲ; ಬೇರೆ ದೇಶದ ಆಕಳುಗಳಿಗೆ ಗಂಗೆದೊಗಲು ಇರುವದಿಲ್ಲ.

ಉಪಸಂಹಾರ.

(೧) ಕುತ್ತಿಗೆಯ ರಚನೆ ಹಾಗೂ ಉಪಯೋಗ.

(೨) ಕಾಲಿನ ರಚನೆ ,,

(೩) ಪಾದಗಳ ರಚನೆ ,,

(೪) ಅಜಾದನದ ರಚನೆ ,,

(೫) ಬಾಲದ ರಚನೆ ಹಾಗೂ ಉಪಯೋಗ.

(೬) ಕೋಡುಗಳ ರಚನೆ ,,

(೭) ಉದ್ಭಿಜ್ಜಾಹಾರಿಯು.

(೮) ಮೆಲಕಾಡಿಸುವ ಪ್ರಾಣಿಯು.

(೯) ಉಪಯೋಗ.

(೧೦) ನಮ್ಮ ದೇಶದ ಆಕಳ ವಿಶೇಷ ಲಕ್ಷಣ.

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಶೋತ್ಕರ್ಷಮುಂ।
ಲಯಸುತ್ತಂ ಪ್ರತಿಪೂಸದಾದಿಗೊಲವಿಂದೀಪತ್ರಮುಂ ಪುಟ್ಟಿಸಿ॥
ನಯದಿಂದಿತ್ತವೊದುಪರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷಪತಿದ್ದವೇಳ್ವುದುಚಿತರ್ಣ್ಣಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೮] ದಶಂಬರ ೧೯೦೨. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಭರತಖಂಡದ ಚಕ್ರವರ್ತಿಗಳಾದ ಏಳನೇ ಎಡ್ವರ್ಡ್ ದೊರೆಗಳು ಕಳೆದ ಅಗಷ್ಟ ತಿಂಗಳ ೯ನೇ ತಾರೀಖಿನ ದಿವಸ ಇಂಗ್ಲಂದದ ಸಿಂಹಾಸನವನ್ನೇರಿದ ಸಂಗತಿಯನ್ನು ಈ ಮೊದಲೇ ನಾವು ತಿಳಿಸಿರುತ್ತೇವೆ. ಆದರೆ ಆ ದೊರೆಗಳು ಹಿಂದುಸ್ತಾನದ ಬಾದಶಹರೆಂಬ ಬಿರುದನ್ನು ಪ್ರಸಿದ್ಧ ರೀತಿಯಿಂದ ಧರಿಸುವ ಮಹೋತ್ಸವವು ಸರ್ ೧೯೦೩ನೇ ಇಸವಿಯ ಜನವರಿ ೧ನೇ ತಾರೀಖಿನ ದಿವಸ ದಿಲ್ಲೀ ಪಟ್ಟಣದಲ್ಲಿ ನಡೆಯುವದು. ದಿಶಂಬರ ೨೩ನೇ ತಾರೀಖಿನಿಂದ ಜನವರಿ ೪ನೇ ತಾರೀಖಿನವರೆಗೆ ಯಾವತ್ತೂ ಸರಕಾರೀ ಕಚೇರಿಗಳಿಗೆ ಸೂಟಿಯನ್ನು ಕೊಟ್ಟಿದ್ದಾರೆ. ಪ್ರಾಥಮಿಕ ಶಾಲೆಗಳನ್ನು ಜನವರಿ ೧ರಿಂದ ೪ರವರೆಗೆ ಬಂದಿಟ್ಟು ಆಯಾ ಶಾಲೆಗಳ ಅಧ್ಯಾಪಕರು ತಮ್ಮೂರ ಜನರಿಗೆ ಬಾದಶಹರವರ ಪಟ್ಟಾಭಿಷೇಕ ಮಹತ್ವವನ್ನು ತಿಳಿಸಿ ಅವರಲ್ಲಿ ರಾಜನಿಷ್ಠೆಯನ್ನು ಉತ್ಪನ್ನಮಾಡತಕ್ಕದ್ದು. ಈ ಬಗ್ಗೆ ಆಯಾ ಜಿಲ್ಲೆಯ ವಿದ್ಯಾಧಿಕಾರಿಗಳಿಂದ ಅಪ್ಪಣೆಗಳು ದೊರೆತಿರಬಹುದು. ಈ ಸುವರ್ಣಮಯ ಸಂಧಿಯನ್ನು ಅಧ್ಯಾಪಕರು ಹೋಗಗೊಡದೆ ತಮ್ಮ ತಮ್ಮ ಶಾಲೆಯಲ್ಲಿ ಗ್ರಾಮಸ್ಥರ ನೆರವಿನಿಂದ ಸಮಾ

ಕಂಭಕ್ಕೆ ಅನುರೂಪವಾದ ಕಾರ್ಯಗಳನ್ನು ನೆರವೇರಿಸುವದು ಆವ್ಯಕರ್ತವ್ಯವಾಗಿರುವದು. ಈ ಬಗೆಯಾಗಿ ದಕ್ಷಿಣ ಭಾಗದೊಳಗಿನ ಯಾವತ್ತು ಅಧ್ಯಾಪಕರು ಮಾಡಿದ ಸಮಾರಂಭದ ಸಂಕ್ಷಿಪ್ತ ಸಂಗತಿಗಳನ್ನು ಒಂದು ಹೆಚ್ಚಿನ ಶಾಲಾಪತ್ರಿಕೆಯಲ್ಲಿ ಪ್ರಕಟಿಸಿ ಎಲ್ಲ ಶಾಲೆಗಳಿಗೂ ಕೊಡಬೇಕೆಂದು ಯೋಚಿಸಿದ್ದೇವೆ. ಇದಕ್ಕಾಗಿ ಕೆಂಚಿತ್ತು (ಸುಮಾರು ಮುಕ್ಕಾಲ ಆಣೆ) ಹೆಚ್ಚು ವೆಚ್ಚ ಬೀಳಬಹುದು. ಆದ್ದರಿಂದ ಅಧ್ಯಾಪಕರೆಲ್ಲ ತಮ್ಮ ತಮ್ಮ ಶಾಲೆಯಲ್ಲಿ ಅಥವಾ ಶಾಲೆಯಿರುವ ಊರಲ್ಲಿ ಮಾಡಿದ ಸಮಾರಂಭದ ವೃತ್ತಾಂತವನ್ನು ನಮ್ಮ ಕಡೆಗೆ ಬರೆದು ಕಳಿಸಬೇಕು.

ದಿಲ್ಲೀ ದರಬಾರದ ಸಿದ್ಧತೆಯು ಒತ್ತರದಿಂದ ನಡೆದದೆ ವಿಲಾಯತಿಯಿಂದ ಸುಮಾರು ೧೦೦।೨೦೦ ಜನ ದೊಡ್ಡ ದೊಡ್ಡ ಗೃಹಸ್ಥರು ಈ ಸಮಾರಂಭಕ್ಕೆ ಬರುವರು. ಬಾದಶಹರ ಬಂಧುಗಳಾದ ಡ್ಯೂಕ್ ಆಫ್ ಕ್ಯಾನಾಟ್‌ದೊರೆಗಳು ಬರುವರು. ಹಿಂದುಸ್ಥಾನದೊಳಗಿನ ಅನೇಕ ಮುಂದಿ ಮಾಂಡಲಿಕರೂ ಬರುವರು. ಎಲ್ಲರೂ ಮುಖ್ಯ ದಿವಸ ಅಂದರೆ ೧೫ನೇ ಜನವರಿಯ ದಿವಸ ಆನೆಯಮೇಲೆ ಕುಳಿತುಕೊಂಡು ಮೆರೆಯುತ್ತ ದರಬಾರ ಮಂದಿರವನ್ನು ಪ್ರವೇಶಿಸುವರು. ಆಗ ಬಾದಶಹರವರು ಅಧಿಕಾರ ಕೈಕೊಂಡದ್ದರ ಸಂಬಂಧದ ಲೇಖವನ್ನು ಓದುವರು. ಮುಂದೆ ದಿನ ದಿನ ಬೇರೆ ಬೇರೆ ಉತ್ಸವಗಳು ನಡೆಯುತ್ತ ಆ ತಿಂಗಳ ಅಂತ್ಯದ ವರೆಗೂ ಸಮಾರಂಭದ ಕಾರ್ಯಗಳು ಸಾಗುವವು. ಈ ಮಹೋತ್ಸಾಹ ಸಮಾರಂಭವು ಅಭೂತಪೂರ್ವವಾಗಿ ಜರಗುವದೆಂದು ತೋರುತ್ತದೆ.

ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಯು ಪ್ರಾರಂಭವಾಗಿದೆ. ಧಾರವಾಡ, ಬೆಳಗಾವಿ, ಬಿಜಾಪೂರ, ಕಾರವಾರಗಳಿಂದ ಕ್ರಮವಾಗಿ (೪೬, ೨೩, ೪೫, ೧೬) ಜನರು ಉಮೇದವಾರರು ಬಂದಿದ್ದಾರೆ.

ಶಿಕ್ಷಕರು ಆಯಾ ವರ್ಗದ ಅಭ್ಯಾಸದ ವಿಷಯಗಳನ್ನು

ಹ್ಯಾಗೆ ಹ್ಯಾಗೆ ಕಲಿಸಬೇಕೆಂಬ ಬಗ್ಗೆ ಕೆಲವು ಸೂಚನೆಗಳು ಪ್ರಕಟವಾಗಿರುವವು. ಅವು ಬಹು ಸರಸಾದವೆಂದು ಬಗೆದು ಈ ತಿಂಗಳಿಂದ ಈ ಪತ್ರಿಕೆಯಲ್ಲಿ ಇಯತ್ತ್ರೆಯ ಕ್ರಮದಂತೆ ಬರೆಯಲಾರಂಭಿಸಿದ್ದೇವೆ. ಅಧ್ಯಾಪಕರು ಈ ಸೂಚನೆಗಳನ್ನು ಚನ್ನಾಗಿ ಮನನಮಾಡಿಕೊಂಡು ಇವುಗಳಿಗನುಸರಿಸಿ ಶಿಕ್ಷಣಸಾಗಿಸಬೇಕು. ಯಾಕಂದರೆ ಮುಂದೆ ಪರೀಕ್ಷಕರಾದರೂ ಇದೇ ಧೋರಣದಿಂದಲೇ ಶಾಲೆಗಳನ್ನು ಪರೀಕ್ಷಿಸಬಹುದು. ಆದ್ದರಿಂದ ಹೊಸ ಇಯತ್ತ್ರೆಗಳಿಗೆ ಗೊತ್ತುಪಡಿಸಿದ ವಿಷಯಗಳನ್ನು ಪದ್ಧತಿಗೆ ಸರಿಯಾಗಿ ಕಲಿಸಲಿಕ್ಕೆ ಶಿಕ್ಷಕರಿಗೆ ಇವು ಬಹು ಪ್ರಯೋಜನಕರವಾಗಿರುವವು.

INSTRUCTION TO TEACHERS.

ಶಿಕ್ಷಕರಿಗೋಸ್ಕರ ಸೂಚನೆಗಳು.

ಬಾಲಕರ ವರ್ಗ.

೧. ಇಯತ್ತ್ರೆಗಳಿಗೆ ಸೇರದೆ ಇದ್ದ ಎಲ್ಲ ಹುಡುಗರನ್ನು ಬಾಲಕರ ವರ್ಗದಲ್ಲಿ ಸೇರಿಸಿಕೊಂಡು ಅದಕ್ಕಾಗಿ ನೇಮಿಸಿದ ಪಾಠಕ್ರಮದಂತೆ ಅವರಿಗೆ ಕಲಿಸಬೇಕು. ೧ನೇ ಇಯತ್ತ್ರೆ ಮತ್ತು ಬಾಲಕರ ವರ್ಗ ಇವುಗಳ ನಡುವೆ "ಜಿನ್ನ ಇಯತ್ತ್ರೆ" ಎಂಬದೊಂದು ವರ್ಗವನ್ನು ಮಾಡಿ ಅದಕ್ಕೆ ಮೊಗ್ಗೆಗಳು, ಬಳ್ಳಿಗಳು ಮುಂತಾದವುಗಳನ್ನು ಬರೇ ಯಾಂತ್ರಿಕರೀತಿಯಿಂದ ಪಾಠ ಮಾಡಿಸುವದು ಸರ್ವಥಾ ಯೋಗ್ಯವಲ್ಲ.

೨. ಬಾಲಕರ ವರ್ಗಕ್ಕಾಗಿ ನೇಮಿಸಿದ ಪಾಠಕ್ರಮವು ತೀರ ಚಿಕ್ಕ ಹುಡುಗರಿಗೆ ಮಾತ್ರ ಯೋಗ್ಯವಾದದ್ದು. ಸಾಧಾರಣವಾಗಿ ಏಳು ವರ್ಷ ವಯಸ್ಸು ದಾಟಿದ ಹುಡುಗರು ಮೊದಲನೇ ಇಯತ್ತ್ರೆಯನ್ನು ಕಲಿಯಲಿಕ್ಕೆ ಯೋಗ್ಯರಾಗಬೇಕು. ಹುಡುಗರು ವರ್ಗಗಳಲ್ಲಿ ಯೋಗ್ಯ ಕಾಲಾವಧಿಗಿಂತ ಹೆಚ್ಚು ಕಾಲ ಇದ್ದ ಪ್ರಸಕ್ತಿಯಲ್ಲಿ ಮೇಲ್ವಿಚಾರಣೆ ಮಾಡುವ ಶಾಲಾಧಿಕಾರಿಗಳು ಯಥಾಯೋಗ್ಯ ಲಕ್ಷ್ಯ ಹೂಡಿಸಬಹುದು.

೩. ಸದಯಾಂತಃಕರಣಿಯೂ, ಬುದ್ಧಿವಂತನೂ ಅನುಭವಿಕನೂ ಆದ ಅಧ್ಯಾಪಕನನ್ನು ಬಾಲಕರ ವರ್ಗವನ್ನು ಕಲಿಸಲಿಕ್ಕೆ ನೇಮಿಸಬೇಕು. ಇಂಥ ಅಧ್ಯಾಪಕರು "ಟ್ರೇಂಡ" ರಾದವರಿರಬೇಕೆಂಬ ಸಂಗತಿಯು ಅತಿ ಇಷ್ಟವಾದದ್ದು.

೪. ಬಾಲಕರ ವರ್ಗಕ್ಕೆ ಕೊಡಲ್ಪಡುವ ಪಾಠಗಳು ೨೦-೨೫ ಮಿನಿಟುಗಳಿಗಿಂತ ಹೆಚ್ಚಿಗೆ ವೇಳೆ ಹತ್ತುವವಿರಬಾರದು. ಮತ್ತು ಇಂಥ ಪಾಠಗಳ ನಡುನಡುವೆ ಹಾಡುಗಳು ಆಟಗಳು ಕವಾಯಿತು ಮನೋರಂಜಕವಾದ ಇತರ ಸಂಗತಿಗಳು ಮುಂತಾದವುಗಳು ಸೇರಿಸಲ್ಪಡಬೇಕು. ಪ್ರತಿ ೫೦ ನಿಮಿಷದ ಪಾಠದ ನಂತರ ೧೦ ಮಿನಿಟಿನ ವರೆಗೆ ವಿಶ್ರಾಂತಿಯು ಇರತಕ್ಕದ್ದು. ಮತ್ತು ಬಾಲಕರನ್ನು ಶಾಲೆಯು ಇತರ ದೊಡ್ಡ ಹುಡುಗರಿಗಿಂತಲೂ ಕೆಲಕಾಲ ಮೊದಲೇ ಮನೆಗೆ ಬಿಡತಕ್ಕದ್ದು.

೫. ಸಂಖ್ಯೆಯು—ತೀರ ಸಣ್ಣ ಹಳ್ಳಿಯಲ್ಲಿ ಸಹ ದೊರೆಯಬಹುದಾದಂಥ ಕಟ್ಟಿಗೇ ಗುಂಡುಗಳು, ಕಾಜಿನ ಮಣಿಗಳು, ಹರಳು, ಹುಣಸೇ ಕಾಳು, ಕಡ್ಡಿ ಮುಂತಾದ ಉಪಕರಣಗಳಿಂದಲೇ ಚಿಕ್ಕ ಮಕ್ಕಳಿಗೆ ಎಣಿಕೆಯನ್ನು ಕಲಿಸುವದು ಬಹು ಪ್ರಯೋಜನಕರವಾಗಿರುವದು. ಈ ಉದ್ದೇಶದಿಂದಲೇ ಹೊಸದಾಗಿ ಗೊತ್ತುಪಡಿಸಿದ ಬಾಲಕರ ವರ್ಗದ ಅಭ್ಯಾಸಕ್ರಮದಲ್ಲಿ ಹೆಚ್ಚಿನ ಮೊಗ್ಗೆಗಳನ್ನು ಸೇರಿಸಿಲ್ಲ. ಹತ್ತರ ವರೆಗೆ ಮೊಗ್ಗೆಗಳನ್ನೂ ನೂರರ ವರೆಗೆ ಸಂಖ್ಯೆಯನ್ನೂ ತೀರ ಸಣ್ಣ ಸಣ್ಣ ಬೇರೀಜು, ವಜಾಬಾಕಿಗಳನ್ನೂ ಔತ್ರ ಕಲಿಸತಕ್ಕದ್ದೆಂದು ಗೊತ್ತುಪಡಿಸಿರುತ್ತದೆ. ಗಾವಠೀ ಶಾಲೆಗಳಲ್ಲಿಯೂ ಕೆಲವು ಬೇರೆ ಪ್ರಾಥಮಿಕ ಶಾಲೆಗಳಲ್ಲಿಯೂ, ಹುಡುಗರು ಶಾಲೆಯಲ್ಲಿ ಶೇರಿದ ಕೂಡಲೆ ಶಿಕ್ಷಕರು ತಾವು ಸ್ವತಃ ಹುಡುಗರ ಪಾಟಿಗಳ ಮೇಲೆ ಅಂಕಿಗಳನ್ನು ಬರೆದುಕೊಟ್ಟು ಇದರಂತೆ ತೀಡು ಎಂದು ಹೇಳುವರು. ಹಾಗು ಅವುಗಳ ಹೆಸರುಗಳನ್ನಾದರೂ ತಾವೇ ಹೇಳಿ ಹಾಗೇ ನುಡಿಯಹಚ್ಚುವರು. ಈ ಪರಿಪಾಠವೇ ವಿಶೇಷವಾಗಿರುವದು. ಈ ಪದ್ಧತಿಯಿಂದ ಹುಡುಗರಿಗೆ ಅವುಗಳ ಅರ್ಥವನ್ನು ತಿಳಿಸದೆ

ಬರೇ ಬಾಯಿಪಾಠ ಮಾಡಿಸಿದಂತೆ ಆಗುತ್ತದೆ. ವಸ್ತುಗಳ
ನ್ನು ಹುಡುಗರ ಮುಂದೆ ಇಟ್ಟು ಅವುಗಳ ಲಕ್ಷಣವನ್ನು ಹೇ
ಳುವದಕ್ಕೆ ಬದಲಾಗಿ ಲಕ್ಷಣವನ್ನೇ ಮೊದಲು ಹೇಳಿ ಬಳಿಕ
ವಸ್ತುಗಳನ್ನು ಅವರ ಮುಂದಿರಿಸುವದು ನಿಜವಾದ ಶಿಕ್ಷಣ
ಕ್ರಮಕ್ಕೆ ವಿಪರೀತ ಕ್ರಮವಾಗಿರುತ್ತದೆ. ಇದು ಅಬದ್ಧ
ಪದ್ಧತಿಯು. ಮೊದಲು ವಸ್ತುಗಳ ದ್ವಾರದಿಂದ ಹುಡುಗರಿ
ಗೆ ಸಂಖ್ಯೆಗಳನ್ನು ತಿಳಿಸಿಕೊಟ್ಟನಂತರ ಆ ಸಂಖ್ಯೆಯ ಹೆಸ
ರನ್ನು ಹೇಳಬೇಕು. ಸಂಖ್ಯೆಯ ಅರ್ಥವು ಚೆನ್ನಾಗಿ ತಿಳಿದ
ಬಳಿಕ ಅದನ್ನು ಬರೆಯುವ ಚಿಹ್ನವನ್ನು ಕಲಿಸಬೇಕು. ಶಿಕ್ಷ
ಕನು ಹಾಕಿಕೊಟ್ಟದ್ದನ್ನು ಹುಡುಗರು ತೀಡುವ ಅಭ್ಯಾಸವು
ಕೆಲವು ಪ್ರಸಂಗದಲ್ಲಿ ಪ್ರಯೋಜನಕರವಾಗಿರುವದು. ಆದ
ರೂ ಸಂಖ್ಯೆಯನ್ನು ಕಲಿಸುವ ಪ್ರಸಂಗದಲ್ಲಿ ಸಂಖ್ಯೆಯು
ಅರ್ಥವು ತಿಳಿದ ಬಳಿಕ ಈ ಹಾದಿಯನ್ನು ಹಿಡಿಯಬೇಕಲ್ಲ
ದೆ ಮೊದಲೇ ಹಿಡಿಯಬಾರದು. ಆದ್ದರಿಂದ ಸಂಖ್ಯೆಗಳ
(ಎಣಿಕೆಯ) ಕಲ್ಪನೆಯು ಹುಡುಗರಲ್ಲುಂಟಾಗಬೇಕಾದರೆ
ವಸ್ತುಗಳನ್ನು ಅವರೆದುರಿನಲ್ಲಿಡುವದು ಬಹು ಪ್ರಯೋಜನ
ಕರವಾಗಿರುವದು. ಒಂದು ಸಂಖ್ಯೆಯನ್ನು ಕಲಿಸಲಿಕ್ಕೆ ಒಂ
ದೇ ಒಡವೆಯನ್ನಿಡುವದಕ್ಕಿಂತ ಅನೇಕ ವಸ್ತುಗಳನ್ನಿಡುವ
ದು ಪ್ರಯೋಜನಕರವಾಗಿರುವದು. ಹ್ಯಾಗಂದರೆ :—" ಎರ
ಡು " ಈ ಸಂಖ್ಯೆಯನ್ನು ಎರಡು ಗುಂಡುಗಳು, ಎರಡು
ಮಣಿಗಳು, ಎರಡು ಹರಳುಗಳು, ಎರಡು ಹುಣಸೇ ಕಾಳು
ಗಳು, ಎರಡು ಕಡ್ಡಿಗಳು, ಎರಡು ಪುಸ್ತಕಗಳು, ಎರಡು
ಕುರ್ಚಿಗಳು, ಎರಡು ದುಡ್ಡು, ಎರಡು ಕೈ, ಎರಡು ಬೆರಳು
ಮುಂತಾದ ಹಲವು ಪ್ರತ್ಯಕ್ಷ ಉದಾಹರಣೆಗಳಿಂದ ಕಲಿಸಬ
ಹುದು. ಇದರಿಂದ ಸಂಖ್ಯೆಯ ಸಂಬಂಧವಾಗಿ ಹುಡುಗರಲ್ಲಿ
ತಪ್ಪು ತಿಳುವಳಿಕೆಯುಂಟಾಗುವದು ಕಟ್ಟಾಗುತ್ತದೆ. ಸಂ
ಖ್ಯೆಗಳನ್ನು ಕ್ರಮವಾಗಿ ಅಂದರೆ ಒಂದರಹಿಂದೊಂದರಂತೆ
ಕಲಿಸಬೇಕು. ಅಂಥ ಸಂಖ್ಯೆಯನ್ನು ತಿಳಿಸುವಾಗ ಉಪ
ಯೋಗಿಸಿದ ಒಡವೆಗಳಲ್ಲಿ ಒಂದೊಂದನ್ನು ಹೆಚ್ಚು ಸೇರಿಸ
ಲು ಅದರ ಮುಂದಿನ ಸಂಖ್ಯೆಯಾಗುವದೆಂಬದನ್ನು ಕಲಿಸ

ಬೇಕು. ಆದರೆ ಹೀಗ ಕಲಿಸುವಾಗ ಒಂದು ಮತ್ತೊ ಒಂದ ನೇ, ಎರಡು ಮತ್ತು ಎರಡನೇ, ಮೂರು ಮತ್ತು ಮೂರನೇ ಮುಂತಾದ ಪ್ರತಿಬಂದು ಜೋಡಿನೊಳಗಿನ ಎರಡು ಕಬ್ಬಗ ಳ ಅರ್ಥದ ಸಂಬಂಧದಿಂದ ಹುಡುಗರು ಗೊಂದಲದಲ್ಲಿ ಬೀಳದಂತೆ ಎಚ್ಚರಿಕೆಪಡಬೇಕು. ಪ್ರತ್ಯಕ್ಷವಾಗಿ ಎಣಿಸೋ ಣ ಕೂಡಿಸೋಣ ಕಳೆಯೋಣ ಮುಂತಾದ ಕೃತಿಗಳನ್ನು ಹುಡುಗರ ಕೈಯಿಂದ ಮಾಡಿಸುವ ರೂಢಿಯನ್ನಿಡಬೇಕು. ಈ ರೂಢಿಯನ್ನು ಮಾಡಿಸುವಾಗ ಆರಂಭದಲ್ಲಂತೂ ಹುಡು ಗರು ಬಾಯಿಂದ ಮಾಡಿದ ಬೇರೀಜು ವಜಾಬಾಕಿಗಳ ಉ ತ್ತರಗಳನ್ನು ಪ್ರತ್ಯಕ್ಷ ಎಣಿಸಿ ಮನಗಾಣುವಂತೆ ಮಾಡಬೇ ಕು. ಮಣಿಗಳನ್ನು ಪೋಣಿಸುವ ರೂಢಿಯಿಂದ ವಿದ್ಯಾರ್ಥಿ ಗಳಿಗೆ ಸಂಖ್ಯೆಗಳನ್ನು ಕಲಿಯಲಿಕ್ಕೆ ಅನುಕೂಲವಾಗುವದ ಲ್ಲದೆ ಮನರಂಜನೆಯೂ ಆಗುವದು. ಮತ್ತು ಪ್ರತ್ಯಕ್ಷ ಕೃತಿಯಿಂದ ಮನಗಾಣುವದು. ಹೆಚ್ಚಿನ ಸಂಖ್ಯೆಗಳನ್ನು ಕಲಿಸುವ ಮೊದಲು ಹತ್ತರ ವರೆಗಿನ ಸಂಖ್ಯೆಗಳನ್ನು ಎಣಿಸ ಲಿಕ್ಕೂ ಅವುಗಳೊಳಗಿನ ಸಂಖ್ಯೆಗಳ ಬೇರೀಜು ವಜಾಬಾ ಕಿಗಳನ್ನು ಮಾಡಲಿಕ್ಕೂ, ಅವರು ಸಮರ್ಥರಾಗಬೇಕು. ಪಶಕ ಬರುವ ಸಂಖ್ಯೆಗಳನ್ನು ಕೂಡಿಸುವದೂ ಕಳೆಯುವ ದೂ ಚಿಕ್ಕ ಬಾಲಕರ ಬುದ್ಧಿಸಾಮರ್ಥ್ಯವನ್ನು ಮೀರಿರುವ ದು, ಅದರಿಂದಲೇ ಬಾಲಕರ ವರ್ಗಕ್ಕೆ ಬೇಕೆಂದು ಈ ವಿಷಯವನ್ನು ಇಟ್ಟಿಲ್ಲವೆಂಬುದನ್ನು ಲಕ್ಷದಲ್ಲಿಡಬೇಕು. ಹ್ಯಾ ಗಂದರೆ :—೭+೪, ೮+೩, ೯+೩, ೧೧+೦, ೧೦-೪ ಇಂಥ ವುಗಳನ್ನು ಹೇಳಬಾರದು. ಆದರೆ ೪+೫, ೧೩+೪, ೧೮-೫ ಇಂಥವುಗಳನ್ನು ಹೇಳಿಲಿಕ್ಕೆ ಅಡ್ಡಿ ಇಲ್ಲ. ಈ ತರದ ಬೇ ರೀಜು ವಜಾಬಾಕಿಗಳನ್ನು ಕ್ರಮವಾಗಿಯೂ ಮೆಲ್ಲಮೆಲ್ಲನೆ ಯೂ ಕಲಿಸಬೇಕು. ಹ್ಯಾಗಂದರೆ :—೦+೧ ಇದು ಬಂದ ಬಳಿಕ ೦+೧+೧ ಮತ್ತು ೦+೦ ಇದನ್ನೂ, ೩-೧ ಇದು ತಿಳಿದ ಬಳಿಕ ೩-೧-೧ ಮತ್ತು ೩-೦ ಇವನ್ನೂ ಕಲಿಸತ ಕ್ಕದ್ದು.

ಮೇಲೆ ಹೇಳಿದಂತೆ ಹುಡುಗರಿಗೆ ಸಂಖ್ಯೆಗಳ ಅರ್ಥವ್ಯ

ಸರಿಯಾಗಿ ತಿಳಿದ ಬಳಿಕ ಆ ಸಂಖ್ಯೆಯನ್ನು ಬರೆಯುವ ಚಿಹ್ನವನ್ನು ಕಲಿಸಬೇಕು. ಈ ಸಂಖ್ಯೆಗಳ ಚಿಹ್ನವನ್ನು ಕಲಿಸುವಾಗ ಮೊದಲು ಮಣಿ, ಹರಳು, ಹುಣಸೇ ಕಾಳು, ಕಡ್ಡಿ, ಉಂಗುರ, ಉಗುರದ ಅರ್ಧ ತುಂಡು ಮುಂತಾದವುಗಳಿಂದ ಆ ಸಂಖ್ಯೆಯ ಆಕೃತಿಯನ್ನು ಹುಡುಗರಿಂದ ಮಾಡಿಸಿದರೆ ಅವರಿಗೆ ಮನರಂಜನವಾಗುವದು. ಇದರಿಂದ ಅವರ ಮನದಲ್ಲಿ ಆ ಸಂಖ್ಯೆಯ ಚಿಹ್ನವು ನೆಲೆಗೊಂಡು ನಿಲ್ಲುವದಕ್ಕೆ ಅನುಕೂಲವಾಗುವದು. ಆಕೃತಿಯ ಕೆಟ್ಟಗೆಯಲ್ಲಿರುವ ಅಂಕಿಗಳ ಇಸ್ಪೇಟುಗಳನ್ನೂ ಗೋಡೆಗೆ ಹಾಕಿರುವ ಅಂಕಿಗಳ ಪಟವನ್ನೂ ಉಪಯೋಗಿಸಬೇಕು. ಹಾಗೂ ವಿದ್ಯಾರ್ಥಿಗಳಿಗೆ ಪಟದೊಳಗಿನ ಸಂಖ್ಯೆಗೂ, ಕೈಯೊಳಗಿನ ಇಸ್ಪೇಟಿನೊಳಗಿನ ಸಂಖ್ಯೆಗೂ ಹೋಲಿಸಿ ನೋಡಿ ಇಸ್ಪೇಟನ್ನು ನಕಾಶದೊಳಗಿನ ಅಂಥ ಆಕೃತಿಗೆ ಹೊಂದಿಸಹಚ್ಚಬೇಕು. ಈ ಮೇರೆಗೆ ಗೋಡೆಗೆ ತೂಗಬಿಟ್ಟ ಅಂಕಪಟದೊಳಗಿನ ಚಿಹ್ನಗಳನ್ನು ನಿರೀಕ್ಷಿಸಲಿಕ್ಕೂ ಹೋಲಿಸಿ ನೋಡಲಿಕ್ಕೂ ಹೊಂದಿಸಲಿಕ್ಕೂ ಅನುಕೂಲವಾಗುವಂತೆ ತರ್ಗದೊಳಗಿನ ಎಲ್ಲ ಹುಡುಗರ ಕೈಯಲ್ಲಿಯೂ ಅಂಕಿಗಳ ಇಸ್ಪೇಟುಗಳನ್ನು ಕೊಟ್ಟಿರಬೇಕು.

ಈ ಮೇರೆಗೆ ಒಂಭತ್ತರ ವರೆಗೆ ಸಂಖ್ಯೆಯನ್ನು ಕಲಿಸಿದ ಬಳಿಕ ವಿದ್ಯಾರ್ಥಿಗಳಿಂದ ಹತ್ತು ಮಣಿಗಳನ್ನು ಒಂದು ದಾರದಲ್ಲಿ ಪೋಣಿಸಿಸಬೇಕು. ಈ ಪೋಣಿಸಿದ ಮಣಿಯು ಸರವು ಹತ್ತನ್ನೂ ಉಳಿದವುಗಳು ಬಿಡಿಗಾಳುಗಳನ್ನೂ ತೋರಿಸುತ್ತವೆಂಬದನ್ನು ತಿಳಿಸಿಕೊಡಬೇಕು. ಬಳಿಕ ಇಂಥ ಒಂದು ಸರವನ್ನೂ ಒಂದು ಬಿಡಿಕಾಳನ್ನೂ ಸಾಲಾಗಿ ಅವರ ಮುಂ

---

* ಇದನ್ನು ಅನೇಕ ವಿಧವಾಗಿ ಕಲಿಸಬಹುದು. ಉದಾ :— ೧೦ ಪೋಣಿಸಿದ ಮಣಿಗಳಂತೆ ೧೦ ಕಡ್ಡಿಯ ಪೆಂಡಿಯಿಂದಲೂ ಕೆಲಸವಾಗುವದು. ಅಥವಾ ೧೦ ಸಣ್ಣ ಚೀಲವನ್ನು ಕೊಟ್ಟು ಅದರೊಳಗೆ ೧೦ ಹುಣಸೇ ಕಾಳನ್ನು ಅಥವಾ ಬೇರೆ ಪದಾರ್ಥಗಳನ್ನು ಎಣಿಸಿ ಹಾಕಲಿಕ್ಕೆ ಹೇಳಬೇಕು. ಈ ಚೀಲವು ಹತ್ತನ್ನು ತೋರಿಸುವದು.

ಏಟ್ಟು ಹನ್ನೊಂದು ಕಾಳಾದವೆಂದೂ ಒಂದು ಸರ ಎರಡು ಬಿಡಿಗಾಳುಗಳನ್ನಿಟ್ಟು ಹನ್ನೆರಡಾದವೆಂದೂ ಅವರಿಗೆ ಮನನ ಮಾಡಿಕೊಡಬೇಕು. ಇದೇ ಮೇರೆಗೆ ಮುಂದಿನ ಸಂಖ್ಯೆಗಳನ್ನು ಕಲಿಸುತ್ತ, ಪೋಣಿಸಿದ ಹಾಗು ಪೋಣಿಸದಿದ್ದ ಅಂದರೆ ಬಿಡಿಗಾಳುಗಳನ್ನು ಹುಡುಗರು ಚೆನ್ನಾಗಿ ತಿಳಿದುಕೊಳ್ಳುವಂತೆ ಮಾಡಬೇಕು. ಹೀಗೆ ಸಾಗುವಾಗ ಅವರು ಹತ್ತರಗಂಟು ಹಾಗು ಬಿಡಿಗಾಳುಗಳು ಇವುಗಳಿಗಿಂತ ಹೆಚ್ಚಿನ ಸಂಗತಿಗೆ ಹೋಗುವ ಕಾರಣವಿಲ್ಲ. ಇಷ್ಟೇ ಸಾಧನದಿಂದ ಒಂಬತ್ತರ ಮುಂದಿನ ಸಂಖ್ಯೆಗಳನ್ನು ತಿಳಿದುಕೊಳ್ಳಲಿಕ್ಕೆ ಅನುವಾಗುತ್ತದೆ. ಒಂದು ಹತ್ತರ ಸರವನ್ನೂ ಒಂದು ಬಿಡಿಗಾಳನ್ನೂ ಹುಡುಗರ ಮುಂದೆ ಸಾಲಾಗಿ ಇಡಲಾಗಿ ಅವರು ಹನ್ನೊಂದರೊಳಗಿನ ಮೊದಲಿನ ಒಂದು ಹತ್ತನ್ನೂ ಎರಡನೇ ಒಂದು ಬಿಡಿಗಾಳನ್ನೂ ತೋರಿಸುತ್ತದೆಂದು ಸುಲಭವಾಗಿ ತಿಳಕೊಳ್ಳುವರು. ಇಪ್ಪತ್ತಾದ ಕೂಡಲೆ ಎರಡು ಹತ್ತರ ಸರಗಳಾದವು. ಬಿಡಿಗಾಳುಗಳು ಉಳಿಯಲಿಲ್ಲ. ಈ ಉಳಿಯದಿದ್ದದ್ದಕ್ಕೆ ಶೂನ್ಯವನ್ನು ಅಥವಾ ಸೊನ್ನೆಯನ್ನು ಉಪಯೋಗಿಸುತ್ತಾರೆಂಬದನ್ನು ಕಲಿಸಬೇಕು. ಈ ಬಗೆಯಾಗಿ ಇಪ್ಪತ್ತರ ವರೆಗೆ ಚೆನ್ನಾಗಿ ಕಲಿತ ಹುಡುಗರಿಗೆ ಮುಂದಿನ ಸಂಖ್ಯೆಯನ್ನು ಕಲಿಯುವದು ಬಿಗಿಯಿನಿಸದು,

೬. ಮೂಲಾಕ್ಷರಗಳೂ ಶಬ್ದರಚನೆಯೂ—ಅಕ್ಷರಗಳನ್ನು ಕಲಿಸುವಾಗ ಶಿಕ್ಷಕನು ವಿದ್ಯಾರ್ಥಿಗಳ ಉಚ್ಚಾರಣೆಗೂ, ಅವರು ಬರೆದ ಅಕ್ಷರಗಳ ಚಿಹ್ನಗಳಿಗೂ ಸರಿಯಾಗಿ ಲಕ್ಷ ಕೊಡುವದು ಅತ್ಯವಶ್ಯವಾದದ್ದು. ಗ್ರಾಮ್ಯ ಅಥವಾ ಅಶುದ್ಧ ಉಚ್ಚಾರವನ್ನು ತಪ್ಪಿಸಿ ಶುದ್ಧೋಚ್ಚಾರವನ್ನು ಹುಡುಗರಲ್ಲಿ ನೆಲೆಗೊಳಿಸುವದಕ್ಕೂ, ಅವರ ಶಬ್ದೋಚ್ಚಾರದ ಅವಯವಗಳನ್ನು ಬಲಪಡಿಸುವದಕ್ಕೂ ಹುಡುಗರಿಂದ ಅಕ್ಷರಗಳನ್ನು ಮೇಲಿಂದಮೇಲೆ ಶುದ್ಧವಾಗಿ ನುಡಿಯಹಚ್ಚುವದು ಅಗತ್ಯವದೆ. ಶಿಕ್ಷಕನು ಮೊದಲು ತಾನು ಸ್ವತಃ ಒಂದೊಂದು ಅಕ್ಷರವನ್ನು ಶುದ್ಧವಾಗಿ ನುಡಿದು ಹುಡುಗರಿಗೆ ತನ್ನಂತೆ ನುಡಿಯಲಿಕ್ಕೆ ಹಚ್ಚಬೇಕು. ಹಾಗೂ ಇದೇ ಸಮಯದಲ್ಲಿ

ಉಚ್ಚಾರಣೆಗೂ ಆ ಉಚ್ಚಾರಣೆಯ ಬರಹದ ಚಿಹ್ನಕ್ಕೂ ಹೊಂದಿಕೆಯಾಗುವಂತೆ ಗೋಡೆಗೆ ತೂಗಬಿಟ್ಟ ಅಕ್ಷರ ಪಟದೊಳಗಿನ ಅದೇ ಉಚ್ಚಾರದ ಚಿಹ್ನವನ್ನು ತೋರಿಸಬೇಕು. ಆಕೃತಿಯು ಕೆಟ್ಟಿಗೆಯಲ್ಲಿರುವ ಅಕ್ಷರದ ಇಸ್ಪೇಟುಗಳನ್ನು ಹುಡುಗರ ಕೈಯಲ್ಲಿ ಕೊಟ್ಟು ಪಟದೊಳಗಿನ ಅಕ್ಷರಕ್ಕೆ ಹೋಲಿಸಿ ನೋಡಲಿಕ್ಕೂ, ಹೊಂದಿಸಲಿಕ್ಕೂ ಹಚ್ಚಿ ಅದು ಅವರ ಸ್ಮರಣದಲ್ಲಿ ನಡುವಂತೆ ಮಾಡಬೇಕು. ಪಟದೊಳಗಿನ ಅಕ್ಷರವನ್ನು ನಿರೀಕ್ಷಿಸಿ, ಹೋಲಿಸಿ, ಹೊಂದಿಸಿ ನೋಡುವದಕ್ಕಾಗಿ ಪ್ರತಿ ಒಬ್ಬ ಹುಡುಗನ ಕೈಯಲ್ಲಿ ಒಂದೊಂದು ಅಕ್ಷರದ ಇಸ್ಪೇಟುಗಳನ್ನು ಕೊಡಬೇಕು. ಮತ್ತು ಹುಡುಗರಿಗೆ ಮಣೆ, ಹುಣಸೀಕಾಳು, ಕಡ್ಡಿ, ಉಂಗುರ, ಉಂಗುರದ ಅರ್ಧಭಾಗ ಮುಂತಾದವುಗಳಿಂದ ಅಕ್ಷರಗಳನ್ನು ರಚಿಸಲಿಕ್ಕೆ ಕಲಿಸಬೇಕು. ಇಷ್ಟಾದ ಬಳಿಕ ಹುಡುಗರು ಆ ಅಕ್ಷರದ ಆಕೃತಿಯನ್ನು ಇಸ್ಪೇಟಿನೊಳಗಿದ್ದದ್ದನ್ನಾಗಲಿ ಶಿಕ್ಷಕನು ಕರೆ ಹಲಿಗೆಯ ಮೇಲೆ ಬರೆದದ್ದನ್ನಾಗಲಿ ನೋಡಿ ಬರೆಯುವಂತೆ ಮಾಡಬೇಕು.

ಅಕ್ಷರಪಟದೊಳಗಿರುವಂಥ, ಅಥವಾ ವ್ಯಾಕರಣಶಾಸ್ತ್ರದಲ್ಲಿ ಹೇಳಿದಂಥ ವರ್ಣಕ್ರಮದಂತೆಯೇ ಅಕ್ಷರಗಳನ್ನು ಕಲಿಸಬೇಕೆಂಬ ನಿರ್ಬಂಧವಿಲ್ಲ. ಆಕೃತಿಗಳ ಮೂಲತತ್ವಾನುಸಾರವಾಗಿ ಅಕ್ಷರಗಳಲ್ಲಿ ಬೇರೆ ಬೇರೆ ಗುಂಪುಗಳನ್ನು ಮಾಡಿ ಅವುಗಳಲ್ಲಿ ಸುಲಭವಾದವುಗಳನ್ನು ಅಂದರೆ ಹುಡುಗರಿಗೆ ಸಹಜವಾಗಿ ರಚಿಸಬರುವ ಅಕ್ಷರಗಳನ್ನು ಮೊದಲು ಕಲಿಸಿ ಕ್ರಮವಾಗಿ ಗಡಚಾದವುಗಳನ್ನು ಕಲಿಸುತ್ತ ಸಾಗಬೇಕು. ಕನ್ನಡ ಅಕ್ಷರಗಳು ಬಹುತರವಾಗಿ ವರ್ತುಲ ಅರ್ಧವರ್ತುಲ ಕಂಸ ಮುಂದಾದ ಪಕ್ರರೇಖೆಗಳಿಂದಲೇ ಬರೆಯಬರುವಂಥವುಗಳಿರುವವು. ಆದ್ದರಿಂದ ಶಿಕ್ಷಕನು ಮೊದಲು ವರ್ತುಲವನ್ನು ಉಂಗುರ ಮೊದಲಾದ ಸಾಧನಗಳ ಸಹಾಯದಿಂದ ತೆಗೆಯಲಿಕ್ಕೆ ಕಲಿಸಬೇಕು. ಹಾಗು ಹರಳು ಮುಂತಾದವುಗಳಿಂದ ವರ್ತುಲಾಕೃತಿಯನ್ನು ರಚಿಸಲಿಕ್ಕೆ ಕಲಿಸಬೇಕು. ತರುವಾಯ ಈ ಕೃತಿಯ ಸಹಾಯದಿಂದ

(೮) ಅಷ್ಟಂಎನ್ನೂ ಈ ಅಕ್ಷರದ ಸಹಾಯದಿಂದ (ಕ, ಈ) ಅಕ್ಷರಗಳನ್ನೂ ಕಲಿಸಬೇಕು. ಬಳಿಕ ಲ, ಅ, ಆ ಮುಂತಾದ ಪುಗೆಳನ್ನೂ ಅಲ್ಲಿಂದ (ಯಮ್ಮು) ಅಥವಾ (ಎಪ) ಮುಂತಾದ ಅಕ್ಷರಗಳನ್ನೂ ಕಲಿಸಬೇಕು. ಅರ್ಥ ತಿಳಿಯದೆ ಅಕ್ಷರಗಳನ್ನು ಕಲಿಯುವದು ಹುಡುಗರಿಗೆ ತಲೆಬೆಸರದ ಹೋರೆಯಿಸಿಸುವದು. ಆದ್ದರಿಂದ ಈ ವಿಷಯವು ಹುಡುಗರಿಗೆ ಮನೋರಂಜಕವೂ ಜ್ಞಾನವರ್ಧಕವೂ ಆಗಬೇಕೆಂತಲೇ ಬಳ್ಳಿಗಳ ಹಾದಿಯನ್ನು ನೋಡದೆ ಕಲಿತ ಮೂಲಾಕ್ಷರಗಳಿಂದ ಶಬ್ದಪನ್ನು ರಚಿಸಲಿಕ್ಕೆ ಕಲಿಸಬೇಕೆಂದು ಗೊತ್ತುಪಡಿಸಿರುವೆರು. ಹ್ಯಾಗಂದರೆ—ಕ್, ದ ಅಕ್ಷರಗಳು ಹುಡುಗರಿಗೆ ಬಂದಕೂಡಲೆ ಇವೆರಡು ಅಕ್ಷರಗಳ ಇಸ್ಪೀಟುಗಳನ್ನು ಸಾಲಾಗಿ ಇಟ್ಟು "ಕದ" ವೆಂದು ಕೂಡಿ ನುಡಿಸಬೇಕು. ಇದೇ ಮೇರೆಗೆ ರಥ, ದನ ಮುಂತಾದ ಶಬ್ದಗಳನ್ನು ರಚಿಸಲಿಕ್ಕೆ ಕಲಿಸಬೇಕು. ಹಾಗು ಈ ಶಬ್ದಗಳಿಂದ ಬೋಧವಾಗುವ ವಸ್ತುಗಳನ್ನು ಸಾಧ್ಯವಿದ್ದ ಮಟ್ಟಿಗೆ ಹುಡುಗರಿಗೆ ತೋರಿಸಬೇಕು. ಹಾಗೂ ಶಬ್ದರಚನೆಯು ಶಿಕ್ಷಣವು ವಸ್ತುಪಾಠದೊಡನೆ ಸಾಗುವಂತೆ ಯತ್ನಿಸಬೇಕು.

೭. ಆಕೃತಿ, ಬಣ್ಣ, ವಸ್ತು, ಇವುಗಳ ಸಂಬಂಧದ ಪಾಠಗಳು—ಈ ಪಾಠಗಳ ಸಂಬಂಧವಾದ ಸೂಚನೆಗಳು ವಸ್ತುಪಾಠಗಳ ಶಿಕ್ಷಣಕ್ರಮವೆಂಬ ಸ್ವತಂತ್ರ ವಿಷಯದಲ್ಲಿ ಬೇರೆಯಾಗಿ ಬರೆಯಲ್ಪಟ್ಟಿವೆ. ಹಾಗೂ ಈ ಪಾಠಗಳ ಸಂಬಂಧದ ವಿಶೇಷ ತತ್ವಗಳನ್ನು ಈ ಸೂಚನೆಗೆ ಜೋಡಿಸಿದ ಈ ಪರಿಶಿಷ್ಟವಲ್ಲಿ ವಿವರಿಸಿರುತ್ತೇವೆ. ಶಿಕ್ಷಕರು ವಸ್ತುಪಾಠ ಶಿಕ್ಷಣಕ್ರಮವನ್ನೂ ಈ ಪರಿಶಿಷ್ಟವನ್ನೂ ಚನ್ನಾಗಿ ಓದಿ ಮನನ ಮಾಡಿಕೊಳ್ಳಬೇಕು. ವಾರ್ಷಿಕ ಪರೀಕ್ಷೆಗೆ ಅಥವಾ ತಪಾಸಣೆಗೆ ಬಂದ ಇನಸ್ಪೆಕ್ಟರರಿಗೆ ಮುಂದಿನ ವರ್ಷ ಆಯಾ ವರ್ಗಗಳಿಗೆ ಕಲಿಸಲಿಕ್ಕೆ ತಕ್ಕವುಗಳೆಂದು ಅರಿಸಿ ತೆಗೆದಂಥ, ವಸ್ತುಪಾಠ ಶಿಕ್ಷಣಕ್ರಮದ ಅನುರೋಧದಿಂದ ಕ್ರಮಗೊಳಿಸಿದಂಥ ವಸ್ತುಪಾಠಗಳ ಪಟ್ಟಿಯನ್ನು ತೋರಿಸಿ, ಅವರಿಂದ ತಿದ್ದಿಸಿಕೊಂಡು, ಆ ಪಟ್ಟಿಗೆ ಅವರ ಸಹಿಯನ್ನು

ಮಾಡಿಸಿಕೊಳ್ಳಬೇಕು. ಇದರಿಂದ ಆ ಪಾಠಗಳು ಪುಟಾಣಿ ಪರ ಸಂಬಂಧವುಳ್ಳವುಗಳೂ ವಿದ್ಯಾರ್ಥಿಗಳ ಬುದ್ಧಿಯನ್ನು ಕ್ರಮವಾಗಿ ಬೆಳಿಸಲಿಕ್ಕೆ ತಕ್ಕವುಗಳಾದವುಗಳೂ ಇರುವವೋ ಇಲ್ಲವೋ ಎಂಬುದನ್ನು ಮನಗಾಣಲಿಕ್ಕೆ ಅನುವಾಗುವದು. ಈ ಮೇರೆಗೆ ಇನಸ್ಪೆಕ್ಟರರಿಂದ ಒಪ್ಪಿಗೆಯನ್ನು ಪಡೆದ ಪಾಠದ ಪಟ್ಟಿಯನ್ನು ಸ್ಪಷ್ಟವಾಗಿ ಬರೆದು ಬಂದು ಹಲಿಗೆಗೆ ಹಚ್ಚಿಡಬೇಕು. ಹಾಗೂ ಆಯಾ ವರ್ಗಗಳಿಗಾಗಿ ಗೊತ್ತುಪಡಿಸಿದ ಪಾಠಗಳನ್ನು ಆಯಾ ವರ್ಗಗಳ ವೇಳಾಪತ್ರಿಕೆಯಲ್ಲಿ ಕಾಣಿಸಬೇಕು. ಉಪಶಿಕ್ಷಕರು ತಮ್ಮ ತಮ್ಮ ವರ್ಗಗಳಿಗೆ ಗೊತ್ತುಪಡಿಸಿದ ಪಾಠದ ಟಿಪ್ಪಣಿಗಳನ್ನು ಕಾಲಕಾಲಕ್ಕೆ ಬಂದು ಪ್ರತ್ಯೇಕವಾದ ನೋಟಬುಕ್ಕಿನಲ್ಲಿ ಬರೆದು ಮುಖ್ಯಾಧ್ಯಾಪಕನಿಗೆ ತೋರಿಸಬೇಕು, ಮುಖ್ಯಾಧ್ಯಾಪಕನು ಅವುಗಳನ್ನು ತಾನು ತಪಾಸಿಸಿ ತಿದ್ದಬೇಕು. ಹಾಗೂ ಈ ಪುಸ್ತಕಗಳನ್ನು ಸಾಲಿಯನ್ನು ತಪಾಸಿಸಲಿಕ್ಕೆ ಬಂದ ಇನಸ್ಪೆಕ್ಟರರ ತಪಾಸಣೆಗಾಗಿ ಕಾದಿಡಬೇಕು.

ಆಕೃತಿಗಳ ಸಂಬಂಧದಿಂದ ಸೂಚಿಸುವದೇನೆಂದರೆ :— ಶಿಕ್ಷಕನು ಮೊದಲು ಘನಾಕೃತಿಗಳಿಂದ ಶಿಕ್ಷಣವನ್ನು ಪ್ರಾರಂಭಿಸಬೇಕು. ಬಳಿಕ ಮೇಲ್ಮೈಗಳು, ರೇಖೆಗಳು, ಅಥವಾ ಅಂಚುಗಳು (ಸರಳ ಹಾಗೂ ವಕ್ರ) ಬಿಂದುಗಳು, ಮೂಲೆಗಳು ಅಥವಾ ಕೋನಗಳು, ಮುಂತಾದವುಗಳನ್ನು ಕಲಿಸತೊಡಗಬೇಕು. ಮೇಲ್ಮೈ ಆಕೃತಿಗಳನ್ನು ಕಲಿಸಲಿಕ್ಕೆಂದು ತಯಾರ ಮಾಡಿಸಿದ ಆಕೃತಿ ಪೆಟ್ಟಿಗೆಯೊಳಗಿನ ಚಟ್ಟಿಗೆಯ ಆಕೃತಿಗಳನ್ನು ಬಹು ಎಚ್ಚರದಿಂದ ಉಪಯೋಗಿಸಬೇಕು. ಯಾಕೆಂದರೆ ಅವು ಉಬ್ಬ ಅಗಲ ಪಿಂಡಗಳುಳ್ಳ ಘನಾಕೃತಿಗಳಾಗಿರುವವು. ಆದದ್ದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ಬೀಳುವರು. ಸಿದ್ಧಾಂತದ ಆಕೃತಿಗಳನ್ನು ಕಾಗದದಲ್ಲಿಯಾಗಲಿ ರಟ್ಟಿನಲ್ಲಿಯಾಗಲಿ ಕತ್ತರಿಸಿ ಸಿದ್ಧ ಮಾಡಿಟ್ಟುಕೊಳ್ಳುವದು ಕಲಿಸಲಿಕ್ಕೆ ಬಹು ಪ ಯೋಜನಕರವಾಗಿರುವದು. ಕಲಿಸುವಾಗ ವರ್ಗದ ಪ್ರತಿ ಒಬ್ಬ ಹುಡುಗನ ಕೈಯಲ್ಲಿ ಕತ್ತರಿಸಿ ಮಾಡಿದ ಪ್ರತಿ ಒಂದು ಆಕೃತಿಯು ಕಾಗದವನ್ನು

ಕೊಟ್ಟು ಗೋಡೆಗೆ ತೂಗಬಿಟ್ಟ ಅಕೃತಿ ಪಟದೊಳಗಿನ ಆಕೃತಿಗೆ ಹೊಂದಿಸಹಚ್ಚಬೇಕು. ಆಕೃತಿಗಳ ಹೆಸರನ್ನು ಮೊದಲೇ ಸಿದ್ಧಾಂತಶಾಸ್ತ್ರದ ಪಾರಿಭಾಷಿಕ ಶಬ್ದಗಳಿಂದ ಹೇಳಲಾಗದು. ಹುಡುಗರ ಆಟದ ಒಡವೆಗಳ ಅಥವಾ ಸಾಮಾನ್ಯ ವಸ್ತುಗಳ ಇಲ್ಲವೆ ಪ್ರಾವರಣ ಅಥವಾ ಮನೆಯೊಳಗಿರುವ ದಿನದ ಬಳಿಕೆಯ ಒಡವೆಗಳ ಆಕೃತಿಗಳಿಗೆ ಹೋಲಿಸಿ ಅವುಗಳ ಹೆಸರನ್ನು ಕಲಿಸಬೇಕು.

ಹೊಸದಾಗಿ ಗೊತ್ತುಪಡಿಸಿದ ಅಭ್ಯಾಸಕ್ರಮದಲ್ಲಿ ವಸ್ತು ಪಾಠಗಳ ಶಿಕ್ಷಣದೊಂದಿಗೆ ಸಾದಾ ಚಿತ್ರಕಲೆಯನ್ನು ಕಲಿಸಬೇಕೆಂದು ಗೊತ್ತುಪಡಿಸಿದೆ. ಬಾಲಕರ ವರ್ಗದ ಹುಡುಗರು ಸರಳರೇಖೆಯನ್ನಷ್ಟೇ ತೆಗೆದರೆ ಸಾಕು. ಈ ವಿಷಯವನ್ನು ಹುಡುಗರಿಗೆ ಅಂಕಲಿಪಿ ಅಕ್ಷರಲಿಪಿಗಳನ್ನು ಕಲಿಸುವ ಮೊದಲೇ ಕಲಿಸಿದರೆ ಮುಂದಿನ ಅಭ್ಯಾಸಕ್ಕೆ ಅನುಕೂಲವಾಗುತ್ತದೆ.

ಹುಡುಗರಿಗೆ ಪ್ರಾಥಮಿಕ ಮತ್ತು ಮಿಶ್ರ ವರ್ಣಗಳನ್ನೂ ಮಿಶ್ರ ಮತ್ತು ಸಂಯುಕ್ತ ವರ್ಣಗಳನ್ನೂ ಕಲಿಸುವದಕ್ಕಿಂತ ಮೊದಲು ಬಣ್ಣದ ಇಸ್ಪೇಟುಗಳಿಂದಲೂ ತರತರದ ಪದಾರ್ಥಗಳಿಂದಲೂ ಬಣ್ಣಗಳನ್ನು ಗೊತ್ತುಹಿಡಿಯಲಿಕ್ಕೂ ಹೋಲಿಸಿ ನೋಡಲಿಕ್ಕೂ ಅವುಗಳ ಹೆಸರು ಹೇಳಲಿಕ್ಕೂ ಕಲಿಸಬೇಕು. ವಸ್ತುಪಾಠಗಳ ಶಿಕ್ಷಣಕ್ರಮದಲ್ಲಿ ಒಳ್ಳೇ ಹೆಸರು ಪಡೆದಂಥ ಬಹಳ ಹಳೆಯದಾದ ವೆರ್ಗೀಕರಣದ ಬಗೆಯಿಂತೆಂದರೆ:--ಮೊಟ್ಟಮೊದಲು ಪ್ರಾಥಮಿಕ, ಬಳಿಕ ದ್ವಿತೀಯಕ ಅಥವಾ ಮಿಶ್ರ ಹಾಗೂ ಸಂಯುಕ್ತ ಈ ಪ್ರಕಾರ ವರ್ಣಗಳನ್ನು ಕ್ರಮವಾಗಿ ಬಾಲಕರ ಹಾಗೂ ಗನೇ ಎನೇ ವರ್ಗದಲ್ಲಿ ಹಂಚಿಕೊಂಡು ಕಲಿಸಬೇಕು. ಕಣ್ಣೊಳಗಿನ ರೇಟಿನಾ ಎಂಬ ರಸದ ಗ್ರಾಹಕ ಶಕ್ತಿಗನುಗುಣವಾಗಿ ಬೇರೊಂದು ಬಗೆಯಿಂದ ವರ್ಗೀಕರಣಮಾಡಿರುವರು. ಹ್ಯಾಗಂದರೆ:—ಕೆಂಪು ಹಸುರು ಹಳದಿ ಕಿತ್ತಳೆ ನೀಲಿ ನಸುಗೆಂಪು ಇತ್ಯಾದಿ. ಈ ಪದ್ಧತಿಯಾದರೂ ಗ್ರಾಹ್ಯವಾದದ್ದು. ಬಣ್ಣ ಆಕೃತಿಗಳ ಪಾಠವನ್ನು, ಕಟ್ಟಗೆಯ ಬಣ್ಣದ ಗುಂಡು

ಗಳನ್ನೂ ಬೇರೆ ಬೇರೆ ಬಣ್ಣದ ಮಣಿಗಳನ್ನು ಹುಡುಗರಿಗೆ ಪೋಣಿಸ ಹಚ್ಚುತ್ತ ಎನೇ ವ್ಯವಸಾಯಗಳೊಂದಿಗೆ ಕಲಿಸುವದು ಬಹು ಪ್ರಯೋಜನಕರವಾದದ್ದು.

೮ ಕಥೆಗಳು—ಮುಖ್ಯಾಧ್ಯಾಪಕರು ಇಲ್ಲವೆ ಮುಖ್ಯಾಧ್ಯಾಪಕಳು ಇಲ್ಲವೆ ಟ್ರೇಡರಾದ ಉಪಶಿಕ್ಷಕರು ಕಥೆಗಳನ್ನು ಕಲಿಸತಕ್ಕದ್ದು. ಆದರೆ ಇವುಗಳನ್ನು ಬಹು ಎಚ್ಚರದಿಂದ ಆರಿಸಬೇಕು. ಶಿಕ್ಷಕರು ಕಲ್ಪಿತವಾಗಲಿ ದಿನಂಪ್ರತಿ ನಡೆಯುವ ಕೆಲಸಗಳಿಗೆ ಸಂಬಂಧಿಸಿದವಾಗಲಿ ಹುಡುಗರು ಕಣ್ಮುಟ್ಟ ನೋಡಿದ ವಸ್ತುಗಳಿಗೆ ಸಂಬಂಧಿಸಿದವಾಗಲಿ ಇಲ್ಲವೆ ಚಿತ್ರಗಳಿಗೆ ಸಂಬಂಧಿಸಿದವಾಗಲಿ ಕಥೆಗಳನ್ನು ಕಲಿಸಬಹುದು ಕಥೆಯು ಒಂದು ಸಣ್ಣನಾಟಕ ಪ್ರಯೋಗದಂತೆ ಕಲಿಸಲ್ಪಡಬೇಕು. ಕಥೆಗಳಲ್ಲಿ ಯಾವಾಗಲೂ ಯಾವದೊಂದು ನೈತಿಕ ಸಂಗತಿಯು ವ್ಯಕ್ತವಾಗುತ್ತಿರಬೇಕು. ಆದರೆ ಆ ನೈತಿಕ ಸಂಗತಿಯನ್ನೇ ಮುಖ್ಯವಾಗಿ ವಿವೇಚಿಸಬಾರದು. ಕಥೆಯೊಳಗಿನ ಸಂಗತಿಗಳಿಂದಲೂ ಪಾತ್ರಗಳ ವರ್ತನದಿಂದಲೂ ವಿದ್ಯಾರ್ಥಿಗಳ ಮನದಲ್ಲಿ ನೈತಿಕ ಪ್ರವೃತ್ತಿಗಳನ್ನು ಬಿಂಬಿಸಬೇಕಲ್ಲದೆ ಬಹಳ ಹರಟೆಯಿಂದ ನೈತಿಕ ಪ್ರವೃತ್ತಿಯನ್ನು ನೆಲೆಗೊಳಿಸುವದಕ್ಕೆ ಹವಣಿಸಬಾರದು. ವಸ್ತುಪಾಠಗಳ ಸಂಬಂಧದಿಂದ ಹೇಳಿರುವಂತೆ ಮುಂದಿನ ವರ್ಷ ಕಲಿಸಬೇಕಾದ ಕಥೆಗಳನ್ನು ಆರಿಸಿ ಅದರದೊಂದು ಪಟ್ಟಿಯನ್ನು ಮಾಡಿ ಶಾಲೆಯನ್ನು ತಪಾಸಿಸಲಿಕ್ಕೆ ಬಂದ ಇನ್‌ಸ್ಪೆಕ್ಟರರಿಗೆ ತೋರಿಸಿ ತಿದ್ದಿಸಿ ಸಹಿಮಾಡಿಸಿ ಒಪ್ಪಿಗೆಯನ್ನು ಪಡೆದುಕೊಂಡ ಬಳಿಕ ಅದನ್ನು ಒಂದು ಹಲಿಗೆಗೆ ಹಚ್ಚಿಡಬೇಕು.

ಬ್ರಾಂಡರದೊರೆಸಾನಿಯವರು ಕಥೆಗಳನ್ನು ಕಲಿಸುವ ಸಂಬಂಧದಿಂದ "ಹಿಂದುಸ್ಥಾನದೊಳಗಿನ ಬಾಲ್ಯೋಪ್ಯಾನ ಶಿಕ್ಷಣ" ವೆಂಬ ಪುಸ್ತಕದಲ್ಲಿ ಬರೆದ ಸೂಚನೆಗಳು ಬಹು ಉಪಯುಕ್ತವಾದವುಗಳಿರುವವು. ಅವು ಯಾವವೆಂದರೆ:—ಶಿಕ್ಷಕನು ಒಂದು ಸಂಪೂರ್ಣಕಥೆಯನ್ನು ಅಥವಾ ಅದರದೊಂದು ಭಾಗವನ್ನು ನಡುನಡುವೆ ನಿಲ್ಲದೆ ಕಲಿ

ಬೇಕು. ಸ್ಪಷ್ಟೀಕರಣಮಾಡಲಿಕ್ಕೆ ಇಲ್ಲವೆ ಪ್ರಶ್ನೆಗಳ
ನ್ನು ಕೇಳಲಿಕ್ಕೆ ನಡುನಡುವೆ ನಿಂತುಕೊಂಡರೆ ಕಥೆಯ ಪೂ
ರ್ವಾಪರ ಸಂಬಂಧವು ಕಡಿದುಹೋಗಿ ವಿರಸವಾಗುವದು
ಲ್ಲದೆ ಹುಡುಗರ ಕುತೂಹಲವೂ ಹೊಯ್ದಾಡಲಾರಂಭಿಸು
ವದು. ಶಿಕ್ಷಕನು ಕಥೆಯೊಳಗಿನ ಮುಖ್ಯ ಮುಖ್ಯ ಭಾ
ಗಗಳನ್ನು ವಿಸ್ತಾರವಾಗಿಯೂ ಆವೇಶಯುಕ್ತವಾಗಿಯೂ
ಹೇಳಬೇಕು. ಚಿಕ್ಕ ಪುಟ್ಟ ಸಂಗತಿಗಳ ಕಡೆಗೆ ಅಷ್ಟು ಲ
ಕ್ಷ್ಯಗೊಡುವಕಾರಣವಿಲ್ಲ. ಶಿಕ್ಷಕನು ಕಥೆಯೊಳಗಿನ ನಾ
ಯಿಕ ಅಥವಾ ನಾಯಿಕೆ ಮುಂತಾದ ಪ್ರಧಾನ ಪಾತ್ರಗಳ
ಸಂಬಂಧದಿಂದ ಹುಡುಗರಲ್ಲಿ ಸಹಾನುಭೂತಿಯನ್ನುಂಟು
ಮಾಡಬೇಕು. ಕ್ರಮ, ಜಗದೊಳಗಿನ ವಸ್ತುಗಳ ಪರ
ಸ್ಪರಾವಲಂಬನ, ಕಾರ್ಯಕಾರಣಗಳ ನಿಶ್ಚಯತ್ವ, ನೆರೆ
ನ ಅವಶ್ಯಕತೆ, ಮುಂತಾದ ಸಂಗತಿಗಳನ್ನು ಶಿಕ್ಷಕನು ಹು
ಡುಗರ ಮನದಲ್ಲಿ ಅಪ್ರತ್ಯಕ್ಷವಾಗಿ ಬಿಂಬಿಸುವಂತೆ ಯತ್ನಿಸ
ಬೇಕು. ಶಿಕ್ಷಕನು ಕಥೆಯನ್ನು ಕಲಿಸಿದನಂತರ ಹುಡುಗ
ರು ಅದನ್ನಿಷ್ಟರ ಮಟ್ಟಿಗೆ ತಿಳಿದುಕೊಂಡರೆಂಬದನ್ನು ಅ
ರಿಂದಲೇ ತಿರುಗಿ ಹೇಳಿಸಿ ಮನಗಾಣಬೇಕು. ಬಳಿಕ ಹ
ಡುಗರೊಳಗೆ ಮಾತಾಡುತ್ತ ಮಾತಾಡುತ್ತ ಆ ಕಥೆಯ ಸ
ಾರಾಂಶವನ್ನು ವ್ಯವಸ್ಥಿತವಾಗಿ ಬೈಲಿಗೆಳೆಯಬೇಕು.

೯ ಹಾಡುಗಳು :—ವಿದ್ಯಾಖಾತೆಯವರಿಂದ ಒಪ್ಪಿಗೆಯನ್ನು
ಪಡೆದು ನಡಿಸಲ್ಪಡುವ ಮಾಸಿಕ ಪತ್ರಿಕೆಗಳಿಂದಲೂ ಕೆಂ
ದಗಾರ್ಟನ ಪುಸ್ತಕಗಳೊಳಗಿಂದಲೂ ಶಿಕ್ಷಕನು ಹುಡುಗ
ಗೆ ತಕ್ಕವುಗಳಾದ ಚಿಕ್ಕ ಚಿಕ್ಕ ಪದಗಳನ್ನು ಆರಿಸಿಕೊಂಡ
ಅವುಗಳೊಳಗಿನ ಕೆಲವು ಹಾಡುಗಳನ್ನು ಅಂದರೆ ಮುಂದಿ
ವರ್ಷಕ್ಕೆ ಬೇಕಾಗುವಷ್ಟು ಹಾಡುಗಳನ್ನು ಒಂದು ಪಟ್ಟಿಯ
ಲ್ಲಿ ಬರೆದು ಶಾಲೆಯ ತಪಾಸಣೆಗೆ ಬಂದ ಇನಸ್ಪೆಕ್ಟರರಿ
ತೋರಿಸಿ ಸುಧಾರಿಸಿಕೊಳ್ಳಬೇಕು. ಹಾಗೂ ಆ ಪಟ್ಟಿಗೆ
ವರ ಸಹಿ ಮಾಡಿಸಿ ಒಪ್ಪಿಗೆಯನ್ನು ಪಡೆದುಕೊಂಡು ಬಂದ
ಹಲಿಗೆಗೆ ಹಚ್ಚಿಡಬೇಕು. ವಿಶೇಷವಾಗಿ ಆರಿಸಿಕೊಂಡಂ
ಯೋಗ್ಯವಾದಂಥ ಸಾಭಿನಯಗೀತಗಳಿಂದ ಹುಡುಗರಿ

ಸಾಮಾನ್ಯವಾದ ವ್ಯಾಯಾಮವೂ ಘಟಿಸುವಂತೆ ಯೆತ್ನಿಸಬೇಕು. ಹುಡುಗರ ಆಟಗಳಿಗೂ ವಸ್ತುಪ್ರದರ್ಶನಗಳಿಗೂ ವ್ಯವಸಾಯಗಳಿಗೂ, ಇತರ ಕೆಲಸಗಳಿಗೂ ಸಂಬಂಧಿಸುವಂಥ ಕೆಲವು ಬೇರೆ ಹಾಡುಗಳನ್ನು ಆರಿಸಿಡಬೇಕು.

೧೦ ಕವಾಯತು ಅಂಗೆನಾಥವ (ಕಸರತ್ತು) ಹಾಗು ಆಟಗಳು-ಚಿಕ್ಕ ಮಕ್ಕಳಿಗೆ ಕವಾಯತು ಕಸರತ್ತು ಆಟ ಮುಂತಾದವುಗಳನ್ನು ಹಾಡಿನೊಂದಿಗೆ ಕಲಿಸಬೇಕು. ಯೋಗ್ಯವಾದ ಅಂಗಸಾಧನೆಗಳು ಯಾವವೆಂದರೆ :— ಹುಡುಗರ ಅವಯವಗಳ ಚಲನೆಯು ಹಾಡುಗಳೊಳಗಿನ ಭಾವದಂತೆ ನಡೆಯಿಸೋಣ, ಕೈಗಳನ್ನು ಹೊಂದಿಸಿ ಅಥವಾ ಹೊಂದಿಸದೆ, ಒಬ್ಬೊಬ್ಬರು, ಇಬ್ಬಿಬ್ಬರು, ನಾಲ್ಕು ನಾಲ್ಕು ಮುಂದಿಯಂತೆ ಸಾಲಾಗಿ ನಡೆಯಿಸೋಣ, ತ್ರಿಕೋನ, ಚತುಷ್ಕೋನ, ವರ್ತುಲ, ಪಗ್ಗ ಮುಂತಾದ ಆಕೃತಿ ಪಟಿಬೊಳಗಿನ ಸಿದ್ಧಾಂತದ ಆಕೃತಿಗನುಸಾರವಾಗಿ ಕೈಗಳಿಂದ ಆಕಾರಗಳನ್ನು ಮಾಡೋಣ, ಈ ಆಕಾರಗಳಿಂದ ನಡೆಯಿಸೋಣ, ಕುಣಿಯಿಸೋಣ, ಟೊಪ್ಪಿಗೆ ಅರಿವೆ ಎತ್ತರ ಹುಡುಗನ ಕೈಯಲ್ಲಿಕೊಟ್ಟು ಹೂವು, ಬಣ್ಣದ ಇಸ್ಪೇಟು, ಚಂಡು ಮುಂತಾದವುಗಳಿಗನುಸರಿಸಿ ಹುಡುಗರಲ್ಲಿ ಮೇಳಗಳನ್ನು ಮಾಡೋಣ ಈ ಮೇಳಗಳಿಂದ ಮೇಲೆ ಹೇಳಿದ ಆಕೃತಿಗಳನ್ನು ರಚಿಸೋಣ ಮರಳಿ ಸಾಲ್ಗೊಳಿಸೋಣ, ಇಲ್ಲವೇ ಮೊದಲಿನಂತೆ ಮೇಳಗಳಾಗೋಣ ಇವೇ ಮುಂತಾದವುಗಳು. ಮಕ್ಕಳಲ್ಲಿ ಆಕ್ಕರೆ ಪಡುವ ಶಿಕ್ಷಕನು ಅವರು. ಆಡುವ ಆಟಗಳಿಂದಲಾದರೂ ಅವರ ಶರೀರ ಸಾಧನೆಕ್ಕೆ ಪ್ರಯೋಜನಕರವಾದ ಹೊಸ ಹಾದಿಯನ್ನು ಕಂಡುಕೊಳ್ಳಬಹುದು. ಶಿಕ್ಷಕನು ಹುಡುಗರ ಮಾನಸಿಕ ಶಿಕ್ಷಣದಲ್ಲಿ ಮನಸ್ಸು ಹಾಕುವಂತೆ ಅವರು ಆಡುವ ಆಟದಲ್ಲಿಯೂ ಮನಮುಟ್ಟಿ ದುಡಿಯದಿದ್ದರೆ ಆ ಶಿಕ್ಷಕನಿಂದ ವಿಶೇಷ ಲಾಭವೇನೂ ಆಗದು.

೧೧ ಕೈಕೆಲಸಗಳು ಅಥವಾ ಹಸ್ತಶಿಕ್ಷಣವು—ಈ ವಿಷಯಕ್ಕೆ ಕಿಂಡರಗಾರ್ಡನ್ ವ್ಯವಸಾಯಗಳು ನಿಯಮಿಸಲ್ಪಟ್ಟಿವೆ. ಆದರೆ ಅವು ಶಿಕ್ಷಕರೂ ಶಾಲಾವ್ಯವಸ್ಥಾಪಕರೂ ತ

ನ್ನು ತಮ್ಮ ಅನುಕೂಲತಗೂ ಶಾಲಾಪರಿಸ್ಥಿತಿಗೂ ಅನುಗ
ಣವಾದವುಗಳನ್ನೇ ಆರಿಸಿಕೊಳ್ಳತಕ್ಕದ್ದು. ರೊಕ್ಕವನ್ನು
ಖೆಚ್ಚೆಮಾಡುವ ಶಕ್ತಿಯುಳ್ಳ ಶಾಲೆಗಳಲ್ಲಿ ಫಿನೆಗಳಿಂದಲೂ
ಇಟ್ಟಂಗಿಗಳಿಂದಲೂ, ಒಡವೆಗಳನ್ನು ರಚಿಸೋಣ, ಉಂಗ
ರ, ಕಡ್ಡಿಗಳಿಂದ ಆಕೃತಿಗಳನ್ನು ಮಾಡೋಣ, ಮಾದರಿ
ಳನ್ನು ರೂಪಿಸೋಣ, ಚಾಪೀಹೆಣೆಯೋಣ, ಕಾಗದದಲ್ಲ
ಸೂಜಿಯಿಂದ ಚುಚ್ಚಿ ತೂತುಮಾಡೋಣ, ಆ ತೂತುಗಳ
ಲ್ಲಿ ಎಳೆ ತುಂಬೋಣ ಮುಂತಾದ ಕೆಲಸಗಳನ್ನು ಮಾಡಿ
ಬೇಕು. ಆದರೆ ಕಾಳು ಅಥವಾ ಬೀಜಗಳಿಂದ ಆಕೃತಿಗಳ
ನ್ನು ಮಾಡೋಣ, ಮಣಿ ಪೋಣಿಸೋಣ, ಮತ್ತು ಅವು
ಳಿಂದಲೇ ಉಂಗುರ ಬಳಿ ಮುಂತಾದವುಗಳನ್ನು ಮಾಡೋಣ
ಅರ್ಲಿನಿಂದ ಮಾದರಿಯನ್ನು ರಚಿಸೋಣ ಕಾಗದಮಡಿಚೊ
ಣ ಮತ್ತು ಕಾಗದ ಕತ್ತರಿಸೋಣ, ಇಂಥ ಕತ್ತರಿಸಿದ ಮಾ
ದರಿಗಳನ್ನು ಕಾಗದದಮೇಲೆ ಹಚ್ಚೋಣ ಮುಂತಾದ ಪ
ವಸಾಯಗಳು ಬಡ ಶಾಲಿಗಳಿಗೆ ತಕ್ಕವುಗಳಾಗಿರುವವ

ಸಾದಾಚಿತ್ರ ತೆಗೆಯೋಣ (೫ ಪರಿಶಿಷ್ಟದಲ್ಲಿಯ ಸೂಚನೆ
ಗಳಂತೆ) ವು. ಇದಾದರೂ ವಸ್ತುಪಾಠ ಶಿಕ್ಷಣಕ್ಕೆ ಸಂಬ
ಧಿಸಿ ಸಾಗಬೇಕು ಉದಾಹರಣಾರ್ಥ—ವಿದ್ಯಾರ್ಥಿಗಳಿ
ಗೋಲದ ಪಾಠವನ್ನು ಕಲಿಸಿದ ಬಳಿಕ ಅವರು ಸ್ವತಃ ಅಲಿ
ನಿಂದ ಗೋಲವನ್ನು ಮಾಡಬೇಕು. ಬಳಿಕ ಅದನ್ನು ಬಡಿದ
ಫಲಕವನ್ನು, ಹೊಸೆದು ನಿಲಿಂದರವನ್ನು ಮಾಡಬೇಕು. ಬಳಿಕ
ಮಣ್ಣಿನ ಗೋಲವನ್ನು ಸಮವಾಗಿ ದ್ವಿಭಾಗಿಸಿ, ಅವುಗಳ ಒ
ಪಲೊಳಗಿನ ಮಣ್ಣನ್ನು ಕೆದರಿ ತೆಗಿಸಿ ಬಟ್ಟಲವನ್ನು ಮಾಡಿ
ಬೇಕು. ಬಣ್ಣಕೊಡಲಿಕ್ಕೆ ಅನುಕೂಲವಿದ್ದರೆ ಬಣ್ಣದಪಾ
ಸೆಡೆದಾಗ ಈ ಬಟ್ಟಲಗಳಿಗೆ (ಒಡು ಅಥವಾ ಬಣ್ಣದಪುಡಿ
ಇದ್ದರೆ) ಬಣ್ಣವನ್ನು ಕೊಡಿಸಬೇಕು.

ಹಳ್ಳಿಯ ಹುಡುಗರು, ಜೋಳ, ಸೆಜ್ಜೆ ಮುಂತಾದ ಕಾಳ
ಗಳಿಂದ ಉಂಗುರ ಬಳಿ ಮೊದಲಾದ ಆಕೃತಿಗಳನ್ನು ರಚಿ
ಸುತ್ತಿರುತ್ತವೆ. ಆದರೆ ಶಿಕ್ಷಕನು ಈ ಆಕೃತಿಗಳಿಗೆ ಕ್ರ
ಮಗೊಳಿಸಿ ಸಾಲಿಯಲ್ಲಿ ಮಾಡಿಸಬೇಕು. ಎಲ್ಲ ಬಗೆಯ

ಕೈಗೆಲಸಗಳಲ್ಲಿ ಹುಡುಗರಿಗೆ, ಸ್ವಚ್ಛತ್ವ ಅಚ್ಚು ಕಟ್ಟುತನ, ವ್ಯವಸ್ಥೆ ಮುಂತಾದ ಚಟಗಳು ಹತ್ತಿ ಸಾಧ್ಯವಿದ್ದಷ್ಟಿಗೆ ಅವರು ತಮ್ಮ ಕಲ್ಪನೆಯಿಂದ ಹೊಸ ತರದ ಆಕೃತಿಗಳನ್ನೂ ನಮೂನೆಗಳನ್ನೂ ಹುಟ್ಟಿಸಲಿಕ್ಕೆ ಶಕ್ತರಾಗುವಂತೆ ಮಾಡುವದೇ ಅವರ ಉದ್ದೇಶವಾಗಿರಬೇಕು.

೧೭ ಪಾಠಗಳ ಹಾಗೂ ಉದ್ಯೋಗಗಳ ವಿಕೀಕರಣವು. ಬಾಲಕರ ವರ್ಗದ ಅಭ್ಯಾಸಕ್ರಮದ ಟೀಪಿನಲ್ಲಿ ಎಣಿಸೋಣ, ಶಬ್ದರಚಿಸೋಣ, ಸಾದಾಚಿತ್ರಯುಕ್ತ ವಸ್ತುಪಾಠಗಳು, ಕಥೆಗಳು, ಹಾಡುಗಳು, ಆಟಗಳು, ವ್ಯವಸಾಯಗಳು ಇವೆಲ್ಲ ಸಾಧ್ಯವಾದ ಮಟ್ಟಿಗೆ ಒಂದಕ್ಕೊಂದು ಸಂಬಂಧಿಸಿರಬೇಕೆಂದು ಹೇಳಿದೆ. ಇಂಗ್ಲೀಷ ಕೋಡಿನಲ್ಲಿ, ಯಾವದೊಂದು ಮುಖ್ಯ ವಿಚಾರ ಅಥವಾ ವಿಚಾರಗಳನ್ನು ಅನುಸರಿಸಿ ಒಂದು ಪಾಠವನ್ನು ಬೇರೊಂದು ಪಾಠಕ್ಕೆ ಸಂಬಂಧಿಸಿ ಕಲಿಸಬೇಕೆಂದು ಹೇಳಿದ ತತ್ವವಾದರೂ ಇದೇ. ಹ್ಯಾಗಂದರೆ:—ಗಿಳಿಯ ಪಾಠವನ್ನು ಹಸರು ಬಣ್ಣದ ಪಾಠಕ್ಕೆ ಹೊಂದಿಸಿ ಕಲಿಸಿದ ಬಳಿಕ ಗಿಳಿಯ ವಿಷಯವಾಗಿ ಒಂದು ಕಥೆಯನ್ನೂ ಹಾಡನ್ನೂ ಅಥವಾ ಕವಿತೆಯನ್ನೂ ಕಲಿಸಬೇಕು.

ಅನೇಕ ಹುಡುಗರು ಕೂಡಿ ಗಿಳಿಯ ಹಾರುವಿಕೆಯನ್ನು ತೋರಿಸುವಂಥ ಒಂದು ಪದವನ್ನು ಹಾವ ಭಾಗಗಳಿಂದ ಅನ್ನಬೇಕು. ಅಥವಾ ಆ ಹಾರುವಿಕೆಯನ್ನು ಸೂಚಿಸುವ ಆಟವನ್ನು ಆಡಬೇಕು. ಕಾಗದದಲ್ಲಿ ಸೂಜಿಯಿಂದ ತೂತುಮಾಡಿ ಅವುಗಳಲ್ಲಿ ಎಳೆ ತುಂಬುವದನ್ನು ಕಲಿಸುವ ಸಾಲಿಯಲ್ಲಿ ಹುಡುಗರಿಂದ ಕಾಗದದಲ್ಲಿ ತೂತುಮಾಡಿಸಿ ಎಳೆ ತುಂಬಿಸಿ ಗಿಳಿಯ ಆಕೃತಿಯನ್ನು ಮಾಡಿಸಬೇಕು. ಬೌಕು ಮನೆಯ ಪಾಟೀಯಮೇಲೆ ಸುಲಭವಾದ ಕೆಂಡರಗಾರ್ಟಿನ್ ಪದ್ಧತಿಯಿಂದ ಗಿಳಿಯ ಹಾಗೂ ಅದರ ಪಂಜರದ ಚಿತ್ರವನ್ನು ತೆಗಿಸಬೇಕು. ಮತ್ತು ಮಣಿ ಕಾಳುಗಳಿಂದ ಇಲ್ಲವೆ ಕಡ್ಡಿಗಳಿಂದ ಗಿಳಿಯ ಆಕೃತಿಯನ್ನು ಮಾಡಿಸಬೇಕು. ಶಿಕ್ಷಕನು ತಾನು ಕಾಗದದಮೇಲೆ ತೆಗೆದಂಥ ಅದರ ಚಿತ್ರವನ್ನು ಕತ್ತರಿಸಿ ರಟ್ಟಿನಮೇಲೆ ಹಚ್ಚಬೇಕು. ಈ ಪಾಠಕ್ಕೆ ಸಂಬಂಧಿಸಿ

ಒಂದು ಮಾದರಿಯನ್ನು ಮಾಡಿಸಬೇಕು. ಉದಾಹರಣಾ
ರ್ಥ—ಗಿಳಿಯೂ, ಅದರ ಪಂಜರ. ಗಿಳಿಯ ಕಣ್ಣು ಕಾಲು
ಉಗುರು ರೆಕ್ಕೆ ಮುಂತಾದವುಗಳ ಸಂಖ್ಯೆಯನ್ನು ಅದರ ಪಂ
ಜರದ ಸಳಿಗಳನ್ನು ಎಣಿಸಿ ಈ ಹೆಸರಿನ ದೇಶಭಾಷೆಯ ಪ
ದ್ಯಗಳನ್ನು ರಚಿಸಲಿಕ್ಕೆ ಕಲಿಸಬೇಕು. ಸಾರಾಂಶವೇನೆಂ
ದರೆ:—ಅನೇಕಪಾಠಗಳೂ ವ್ಯವಸಾಯುಗಳೂ ಆಟ ಮು
ತಾದವುಗಳೂ ಒಂದೇ ಮುಖ್ಯ ವಿಷಯಕ್ಕೆ ಸಂಬಂಧಿಸಿ ಹ
ಡುಗರ ಮನರಂಜನವಾಗುವದಕ್ಕೂ ಅವರ ಬೇರೆ ಬೇರೆ
ಮಾನಸಿಕ ಶಕ್ತಿಗಳನ್ನೂ ಬಲಪಡಿಸುವದಕ್ಕೂ ವಿವಕ್ಷಿತ
ವಸ್ತುವಿನ ಸ್ಪಷ್ಟಜ್ಞಾನವು ಅನೇಕ ಮಾರ್ಗಗಳಿಂದ ಅವರಲ್ಲಿ
ನೆಲೆಗೊಳ್ಳುವದಕ್ಕೂ ಅನುಗುಣವಾದವುಗಳಾಗಿರಬೇಕು. ಶಿ
ಕ್ಷಕರು ವಾರಕ್ಕೆ ಒಂದು ವಿಷಯವನ್ನು ಅಥವಾ ವಿಚಾರ
ವನ್ನು ಕಲಿಸಲಿಕ್ಕೆ ಆರಿಸಿ ಗೊತ್ತುಮಾಡಬೇಕು. ಸಾಧ್ಯ
ವಾದ ಮಟ್ಟಿಗೆ ತಮ್ಮ ಎಲ್ಲ ಪಾಠಗಳನ್ನೂ ಹಾಡುಗಳನ್ನೂ
ಆಟಗಳನ್ನೂ ವ್ಯವಸಾಯುಗಳನ್ನೂ ಆವಾರದ ಮುಖ್ಯ ವಿಷ
ಯವನ್ನೇ ಉದ್ದೇಶಿಸಿ ಸಾಗಿಸಬೇಕು. ಮುಂದಿನವಾರಕ್ಕೆ
ಬೇರೊಂದು ವಿಷಯವನ್ನೂ ಅಥವಾ ವಿಚಾರವನ್ನೂ ಆರಿಸಿ
ಕೊಳ್ಳಬಹುದು. ವರ್ಷಾರಂಭದಲ್ಲಿ ಶಿಕ್ಷಕರು ವಿದ್ಯಾರ್ಥಿ
ಗಳಲ್ಲಿ ವಾರವಾರಕ್ಕೆ ಸುಧಾರಣೆಯಾಗುವಂತೆ ಇಡೀ ವರ್ಷ
ಪಲ್ಲಿ ಕಲಿಸತಕ್ಕ ವಸ್ತು ಅಥವಾ ವಿಚಾರಗಳ ಪಟ್ಟಿಯನ್ನು
ಸಿದ್ಧಮಾಡಿಟ್ಟುಕೊಳ್ಳುವದು ಯೋಗ್ಯವಾದದ್ದು. ಈ ವಿಷ
ಯದ ಪಟ್ಟಿಯು ವಿದ್ಯಾರ್ಥಿಗಳ ಜ್ಞಾನದ ಪ್ರಗತಿಯನ್ನು ಹೆ
ಚ್ಚಿಸಿ ಒಂದೊಂದು ಅಭ್ಯಾಸವು ಹುಡುಗರ ಮನೋಯತ್ನ
ವನ್ನು ಮುಂದಕ್ಕೊಯ್ಯುವಂಥದ್ದಿರಬೇಕು. ಈ ಪಟ್ಟಿಯು
ನ್ನು ವಾರ್ಷಿಕ ಪರೀಕ್ಷೆಯ ಕಾಲದಲ್ಲಿ ಪರೀಕ್ಷಾಧಿಕಾರಿಗಳಿಗೆ
ತೋರಿಸಿ ಹಲಿಗೆಗೆ ಹಚ್ಚಿ ತೂಗಹಾಕಬೇಕು. ಇಂಥ ಪಟ್ಟಿ
ಯನ್ನು ಅಸಿಸ್ಟಂಟನು ಮಾಡಿದ್ದರೆ ಹೆಡ್‌ಮಾಸ್ತರನು ಅದನ್ನು
ಅವಶ್ಯ ಕಂಡರೆ ಪರಿಶೋಧಿಸಿ ತಿದ್ದಿಕೊಟ್ಟು, ಅವನ ಕೆ
ಸಕ್ಕೆ ಮಾರ್ಗ ತೋರಿಸುತ್ತ ನೆರವಾಗಬೇಕು. (ಸಶೇಷ.)

PROPOSED OBJECT LESSONS.

ಸೂಚಿಸಿದ ವಸ್ತುಪಾಠಗಳು.

(ಒಳ್ಳೇ ಪುಟದಿಂದ ಮುಂದೆ ಸಾಗಿದ್ದು.)

೧. (ರಬ್ಬರು ಹಿಗ್ಗು ಅಂಟಿಕೊಳ್ಳುವಿಕೆ ಸ್ಥಿತಿಸ್ಥಾಪಕ
ವಂಥಾದ್ದು) ತ್ವ ಕರಗುವಿಕೆ ಮುಂತಾದ ಧ
೨. ಸಕ್ಕರೆ. ರ್ಮಗಳನ್ನು ತೋರಿಸುವದು

೩ ಗಾಳಿಯೆ ಸುಲಭವಾದ ಧರ್ಮಗಳು.

೪. ತೂಕಗಳೂ ಅಳತೆಗಳೂ,

ಮೊದಲು ಕಲಿತ ವಸ್ತುಗಳ ಆಕಾರದ ಸಂಬಂಧದಿಂದ ಲೂ ಸಾಧಾರಣವಾದ ಬೇರೆ ಬೇರೆ ಒಡವೆಗಳ ಸಂಬಂಧದಿಂದಲೂ ಈ ಗೊತ್ತುಪಡಿಸಿದ ಅಳತೆಗಳನ್ನೂ ತೂಕಗಳನ್ನೂ ಮಾಡಿನೋಡುವದು.

೪ ಆಕೃತಿ.

೧. ಕಟ್ಟಿಗೆಯಿಂದ ಮಾಡಿದ ಗೋಪುರಾಕೃತಿಗಳು, ಶಂ
ಕ್ವಾಕೃತಿಗಳು ಹುಡುಗರು ಇಂಥ ಆಕೃತಿಗಳನ್ನು ಮಣ್ಣಿ
ನಿಂದ ಮಾಡುವದು.

೨. ರ್ಹಾಂಬಸ್, ರ್ಹಾಂಬಾಯಿಡ, ಪಂಚಕೋನ, ಷಟ್ಕೋನ ಇವು ಗಳ ತುಂಡುಗಳು ಕಟ್ಟಿಗೆಯಿಂದ ಮಾಡಿದವು ಇಲ್ಲವೆ ಕಾಗದದಲ್ಲಿ ಕತ್ತರಿಸಿದವು. ಹುಡುಗರು ಇವುಗಳನ್ನು ಕಾಗದದಲ್ಲಿ ಮಡಿಚಿ ತೋರಿಸಿ, ಅವುಗಳ ಆಕಾರಗಳನ್ನು ಕತ್ತರಿಸಿ ತೋರಿಸಿ ಅದರಂತೆ ಸ್ಲೇಟಿನ ಮೇಲೆ ಚಿತ್ರ ತೆಗೆಯುವದು.

೫ ಬಣ್ಣ.

ವಿಶ್ರ ವರ್ಣಗಳನ್ನು ತೋರಿಸಲಿಕ್ಕೆ ಬೇಕಾದ ಬಣ್ಣದ ಖಡುಗಳು, ತರತರದ ಬಣ್ಣದ ಉಣ್ಣೆ, ಬಣ್ಣದ ಪುಡಿಗಳು.

೬ ನೇ ಸಮುದಾಯ.

ಖಡು ಅಥವಾ ಸುಣ್ಣದ ಹರಳು ಇಲ್ಲವೆ ಆಯಾ ಸ್ಥಳಗಳಲ್ಲಿ ಸಿಗುವ ಸಾಧಾರಣ ಕಲ್ಲುಗಳು. ಸಾಧಾರಣ ಮತ್ತು ವಿಶೇಷ ಧರ್ಮಗಳು, ಲಕ್ಷಣಗಳು, ಉಪಯೋಗಗಳು ಸ್ಥಾನಿಕ ಉತ್ಪತ್ತಿ ಮುಂತಾದವುಗಳನ್ನು ತಿಳಿಸಿಕೊಡುವದು.

೩ ನೇ ಸಮುದಾಯ.

೧ ಬೆಳ್ಳಿ ಬಂಗಾರಗಳ ಆಭರಣ ಮುಂತಾದವುಗಳು.	ಪ್ರತಿಯೊಂದರಲ್ಲಿರುವ ಬೇರೆ ಬೇರೆ ಗುಣಗಳನ್ನೂ, ಘನವರ್ಧನೀಯತ್ವ, ತೂಕ, ಕರಗುವ ಗುಣ ಮುಂತಾದವುಗಳನ್ನೂ ತಿಳಿಸುವದು. ಧಾತುಗಳ ಸಾಧಾರಣ ಲಕ್ಷಣ, ಉಪಯೋಗಗಳನ್ನು ಹೇಳಿಕೊಡುವದು.
೨ ತಾಮ್ರದ ಪಾತ್ರೆಗಳು.	
೩ ಹಿತ್ತಾಳೆಯ ಪಾತ್ರೆಗಳು.	

೪ ನೇ ಸಮುದಾಯ.

ಸೃಷ್ಟಿವ್ಯಾಪಾರ.

೧. ಹಗಲು ರಾತ್ರಿಗಳು:–ವಿಶೇಷ ಲಕ್ಷಣಗಳನ್ನೂ ಸುಲಭವಾದ ಸಂಗತಿಗಳನ್ನೂ ತಿಳಿಸುವದು

೨. ನೆಲ ಮತ್ತು ಸಮುದ್ರ (ಮೇಲಿನಂತೆ)

೫ ನೇ ಸಮುದಾಯ.

೧. ಸಾಧಾರಣ ಹುಲ್ಲು.	ಬೇರು, ಬೊಡ್ಡಿ, ಎಲೆ, ಹೂ, ಬೀಜ ಇವುಗಳನ್ನು ತೋರಿಸಿ ಮೊದಲು ಕಲಿತ ಗಿಡ ವನಸ್ಪತಿಗಳಿಗೆ ಹೋಲಿಸಿ ತೋರಿಸುವದು. (ಹೇಳಿಕೊಡುವದು).
೨. ಗೋದಿ (ಬೇರೆ ಧಾನ್ಯ).	
೩. ಹಾವಸೆ ಅಥವಾ ತಿಪ್ಪೀವಮೇಲೆ ಬೆಳೆಯುವ ನಾಯಿಛತ್ತ್ರರಗಿ ಎಂಬ ವನಸ್ಪತಿ.	

೬ ನೇ ಸಮುದಾಯ.

೧. ಕುದುರೆ ಮತ್ತು ತಜ್ಜಾತಿಯ ಪ್ರಾಣಿಗಳು.	ಮೊದಲು ಕಲಿತ ಪ್ರಾಣಿಗಳಿಗೆ ಹೋಲಿಸಿ ವಿಶೇಷ, ಮತ್ತು ಸಾಮಾನ್ಯ ಲಕ್ಷಣಗಳನ್ನೂ ಉಪಯೋಗವನ್ನೂ ತಿಳಿಸುವದು.
೨ ಹಗ್ಗಣ (ಇಲಿ)	
೩. ಕೋಳಿ ಅಥವಾ ಬಾತುಕೋಳಿ,	

೭ ನೇ ಸಮುದಾಯ.

೧. ಶರೀರದ ಮುಖ್ಯ ಬಾಹ್ಯಭಾಗಗಳು.

೨. ಪಂಚೇಂದ್ರಿಯಗಳು.

೮ ನೇ ಸಮುದಾಯ.

೨. ನೀಗಲಾ (ರಂಟೆ), ಅದರ ಅಕ್ಕಾರ ಭಾಗ ಉಪಯೋಗ ಮುಂತಾದವುಗಳು.

೩. ಬತ್ತ ಬೆಳಿಸುವ ರೀತಿ ಅದರ ಉಪಯೋಗ ಮುಂತಾದವುಗಳು.

೯ ನೇ ಸಮುದಾಯ.

೧. ಸ್ಲೇಟು ಅಳವಾ ಪೆನಸೀಲು,

೨. ಬಂಡಿ ಅಥವಾ ಗಾಡಿ.

೩ ನೇ ಇಯತ್ತೆ.

೧ ನೇ ಸಮುದಾಯ.

೪ ಪದಾರ್ಥ.

೧. ಬೆಂಕಿ ಅಥವಾ ಉರಿ—ಸಾಧಾರಣ ಧರ್ಮಗಳು, ಸಣ್ಣ ಹುವ ಮತ್ತು ಸುಡದೆ ಇರುವ ಪದಾರ್ಥಗಳು.

೨. ನೀರು ಧರ್ಮಗಳು.

೩ ಆಕೃತಿ.

೧. ಪ್ರಿಜಮ (ಲೋಲಕಾಕೃತಿಗಳು) ಉಪ್ಪು, ಸಕ್ಕರಿ ಮುಂತಾದ ಹರಳುಗಳ ಸುಲಭ ಆಕಾರ.

೨. ವರ್ತುಲ ಹೊರ್ತಾಗಿ ವಕ್ರರೇಪೆಗಳು ಅಂದರೆ ದೀರ್ಘವರ್ತುಲ, ಮುಲಸೂತ್ರಾಕೃತಿ, ಪೆರಾಬೋಲಾ ಅಂದರೆ (ಈ ಆಕೃತಿ).

ಹುಡುಗರು ಇವುಗಳ ಚಿತ್ರವನ್ನು ತೆಗೆಯುವದು ಅಥವಾ ಇಂಥ ಆಕೃತಿಗಳನ್ನು ಮಾಡುವದು.

೩. ಎಲೆಗಳ ಆಕಾರ ಉದಾಹರಣಾರ್ಥವಾಗಿ ಅರಳೀ ಎಲೆ, ಮಾವಿನ ಎಲೆ, ಗುಲಾಟೀ ಎಲೆ, ಕವುಲದ ಎಲೆ ಮುಂತಾದವು.

ಹುಡುಗರು ಇವುಗಳ ಚಿತ್ರಗಳನ್ನು ತೆಗೆಯುವದು ಇಲ್ಲವೆ ಆಕೃತಿಗಳನ್ನು ಮಾಡುವದು.

(೫) ಬಣ್ಣ—ಪದಾರ್ಥಗಳ ಸ್ವಾಭಾವಿಕ ಬಣ್ಣ, ಉದಾಹರಣಾರ್ಥವಾಗಿ ಎಲೆಗಳ ಬಣ್ಣ, ಹೂವುಗಳ ಬಣ್ಣ, ಖನಿಜಗಳ ಬಣ್ಣ.

(ಸಂಕ್ಷೇಪ.)

ನೀರು.

ಬಿನ್ ಇಯತ್ತೈದ ತಐಸು.

ಉಪಕರಣಗಳು—ನೀರು, ಜೀನತುಪ್ಪ, ಹಾಲು, ಎಣ್ಣೆ, ವರಾಹಕೇಶ, ಕಟ್ಟಿಗೆತುಂಡು, ಗ್ಲಾಸು ಪಾತ್ರೆಗಳು, ಮಣ್ಣು, ಪಾಟಿ, ಕಾಜಿನಹಾಳಿ, ಕುಂಚ, ಉಸುಬು, ಬೇರೆ ಬೇರೆ ಬಣ್ಣದ ಹಾಗೂ ಆಕಾರದ ಕಾಜಿನ ಪಾತ್ರೆಗಳು

ಪ್ರಯೋಗ.	ಫಲಿತ.	ಸಿದ್ಧಾಂತ.
ಮೇಜಿನ ಮೇಲೆ ಒಂದು ಕಟ್ಟಿಗೆಯ ತುಂಡನ್ನೂ ಒಂದು ಶೆರಿ ಉಸುಬನ್ನೂ ಒಂದು ಕಲ್ಲನ್ನೂ ಇಡಲಿಕ್ಕೆ ಹೇಳಬೇಕು. ಬಳಿಕ ಗ್ಲಾಸಿನೊಳಗಿನ ನೀರು ಸುರುವಲಿಕ್ಕೆ ಹೇಳಬೇಕು.	ಕಟ್ಟಿಗೆ, ಮತ್ತು ಕಲ್ಲು, ಉಸುಬು ಇವು ಇಟ್ಟ ಸ್ಥಳದಲ್ಲಿ ಸುಮ್ಮನೆ ಉತವು. ನೀರು ಹರಿದು ಕೆಳಗೆ ಬಿದ್ದವು.	ನೀರು ಹರಿದಾಡುವ ಪದಾರ್ಥವು.

ಟೀಪು—ಇದರಂತೆ ಹಾಲು, ಎಣ್ಣೆಗಳು ಹರಿದಾಡುವವೆಂಬದನ್ನು ತಿಳಿಸಬೇಕು.

...ಟ್ಟಗೆ ನಿಲ್ಲಿಸಬೇಕು. ವರಾಹಕ್ಷೇತ್ರವನ್ನು ನೀರಿನಲ್ಲಿ ಎದ್ದಿ ಪಾಟೀವೇಲೆ ಸಿಡಿಸಿರಿ. ಎಂದುಹೇಳಬೇಕು.	...ಲೆ ಬಿದ್ದು ಹರಿದು ಮತ್ತೆ ಒತ್ತಟ್ಟಿಗೆ ಜಮಿ ಯಾದವು.	...ಳ್ಳಗಾದ ಪದಾರ್ಥಗಳಲ್ಲಿ ಹನಿ ಹನಿಯಾಗುವ ಗುಣವದೆ. ಹನಿ ಹನಿ ಕೂಡಿ ಒಟ್ಟಾಗುತ್ತದೆ.
ಕಾಜಿನ ಬೇರೆ ಬೇರೆ ಆಕಾರದ ಪಾತ್ರೆಗಳನ್ನು ಅವರ ಕೈಯಲ್ಲಿ ಕೊಟ್ಟು ಅವುಗಳಲ್ಲಿ ನೀರು ಹನಿಸಿರಿ ಎಂದು ಹೇಳಬೇಕು.	ನೀರು ಯಾವ ಪಾತ್ರೆಯಲ್ಲಿ ಹಾಕಿದರೂ ಆ ಪಾತ್ರೆಯ ಆಕಾರವಾಗುವದು.	ಹರಿಯುವ ಪದಾರ್ಥಕ್ಕೆ ಸ್ವತಃ ಆಕಾರವಿಲ್ಲ. ಹಾಕಿದ ಪಾತ್ರೆಯ ಆಕಾರವಾಗುವದು.
ಹುಡುಗರ ಕೈಯಲ್ಲಿ ಮಣ್ಣು ಅಥವಾ ಉಸುಕು ಕೊಟ್ಟು ಪಾಟಿಯ ಮೇಲೆ ಸುರಿವಿಸಬೇಕು. ಮತ್ತೊಂದು ಬದಿಗೆ ನೀರನ್ನು ಸುರಿವಿರಿ ಎಂದು ಹೇಳಬೇಕು. **ಅಥವಾ** ಉಸುಬು, ಕಾಳು, ನೀರು ತುಂಬಿದ ಪಾತ್ರೆಗಳೊಳಗಿಂದ ಚಮಚೆಯಿಂದ ಅವುಗಳನ್ನು ಎರಡು ಚಮಚೆಯಷ್ಟು ತೆಗಿಸಬೇಕು.	ಉಸುಕಾಗಲಿ ಮಣ್ಣಾಗಲಿ ಪಾಟಿಯ ಮೇಲೆ ಸುರವಲು ಗುಂಪಿಯಾಗಿ ಬೀಳುವದು. ನೀರು ಸಪಾಟಾಗಿ ನಿಲ್ಲುವದು. ಉಸುಬಿನಲ್ಲಿ ಕಾಳಲ್ಲಿ ತೆಗ್ಗು ಬೀಳುವದು. ನೀರಲ್ಲಿ ಬೀಳುವದಿಲ್ಲ.	ಹರಿದಾಡುವ ಪದಾರ್ಥಗಳು ಯಾವಾಗಲು ಸಮ ಪಾತಳಿಯಲ್ಲಿ ಇರುತ್ತವೆ.

ಬೇರೆ ಬೇರೆ ಬಣ್ಣದ ಕಾಜಿನ ಪಾತ್ರೆಗಳಲ್ಲಿ ನೀರು ಹಾಕಬೇಕು.	ಆಯಾ ಪಾತ್ರೆಯ ಬಣ್ಣದಂತೆ ನೀರು ಕಾಣುತ್ತವೆ.	ನೀರಿಗೆ ಬಣ್ಣವಿಲ್ಲ.
ಕಾಳು, ಉಸುಬು ನೀರು ತುಂಬಿದ ಬೇರೆ ಬೇರೆ ಪಾತ್ರೆಗಳಲ್ಲಿ ದುಡ್ಡು ಮುಳುಗಿಸಬೇಕು.	ನೀರೊಳಗಿನ ದುಡ್ಡು ಕಾಣುವದು. ಉಳಿದವುಗಳೊಳಗಿನ ದುಡ್ಡು ಕಾಣುವದಿಲ್ಲ.	ನೀರೊಳಗಿಂದ ಆಚೇ ಕಡೆಯ ಪದಾರ್ಥಗಳು ಕಾಣುತ್ತವೆ.

ಉಪಸಂಹಾರ.

ಕಲಿಸಿದ ಈ ಕೆಳಗಿನ ಐದು ಮಾತುಗಳನ್ನು ಪ್ರಶ್ನ ಕೇಳಿ ವಿದ್ಯಾರ್ಥಿಗಳಿಂದ ಹೊರಡಿಸಬೇಕು.

(೧) ನೀರು ಹರಿಯುವ ಪದಾರ್ಥ.

(೨) ನೀರಿಗೆ ಸ್ವಂತ ಆಕಾರವಿಲ್ಲ.

(೩) ಹರಿಯುವ ಪದಾರ್ಥಗಳು ಹನಿಹನಿಯಾಗುತ್ತವೆ. ಮತ್ತು ಹನಿಗಳು ಕೂಡಿ ಗುಂ ಪಾಗುತ್ತವೆ.

(೪) ನೀರಿಗೆ ಬಣ್ಣವಿಲ್ಲ.

(೫) ನೀರೊಳಗಿಂದ ಆಚೇಕಡೆಯ ಪದಾರ್ಥ ಕಾಣುತ್ತವೆ.

ವರ್ಗಣಿ ವಸೂಲು

ಧಾರವಾಡ ಜಿಲ್ಲೆ.

ರಾ. ಸಾ. ಪ. ಎ. ಇ. ಲೊ. ಶಾಲಾ ಬಗ್ಗೆ ನವಂಬರ ೧೯೨೧೧೬

ಬೆಳಗಾವ ಜಿಲ್ಲೆ.

ರಾ. ಸಾ. ಡಿ. ಎ. ಇ. ಲೊ. ಶಾಲಾ ಬಾ. ನವಂಬರ ೧೯೨೦೧೬

ಕಾರವಾರ.

ರಾ. ಸಾ. ಡಿ. ಎ. ಇ. ಲೊ. ಶಾಲಾ ಬಾ. ನವಂಬರ ೧೯೨೦೩೯

ವಿಜಾಪೂರ.

ರಾ. ಸಾ. ಡಿ. ಎ. ಇ. ಲೊ. ಶಾಲಾ ಬಾ. ನವಂಬರ ೧೯೨೧೧೯

ಕಿರುಕುಳವನ್ನು ಮುಂದಿನಸಾರಿ ಕೊಡುವೆವು.

ಇದರೊಳಗೆ ಏನಾದರೂ ತಪ್ಪು ಇದ್ದರೆ ಅದನ್ನು ದಯವಾಡಿ ತಿಳುಹಬೇಕು

ಪ್ರಕಟನೆ

ವಸ್ತುಪಾಠ ಶಿಕ್ಷಣ-ಕ್ರಮ.

ಹೊಸ ಇಯತ್ತೆಯ ಅಭ್ಯಾಸಕ್ರಮದಲ್ಲಿ ವಿವರಿಸಿದ ಮೇರೆಗೆ ವಸ್ತುಪಾಠಗಳನ್ನು ಕಲಿಸುವದಕ್ಕೆ ಸಹಾಯವಾಗಬೇಕೆಂದು ಈ ಪುಸ್ತಕವನ್ನು ಅನೇಕ ಇಂಗ್ಲಿಷ ಗ್ರಂಥಗಳ ಆಧಾರದಿಂದ ಕನ್ನಡದಲ್ಲಿ ರಚಿಸಿ, ವಿದ್ಯಾಖಾತೆಯ ಪ್ರಮುಖ ವಿದ್ವಜ್ಜನರ ಅಭಿಮತದ ಪ್ರಕಾರ ತಿದ್ದಿ ಮುದ್ರಿಸಿರುತ್ತೇನೆ. ಈ ಪುಸ್ತಕವನ್ನು ಚನ್ನಾಗಿ ಓದಿ ಮನನ ಮಾಡಿಕೊಂಡರೆ ಈ ವಿಷಯವನ್ನು ಕಲಿಸುವ ಬಗೆಯು ಗೊತ್ತಾಗುವದು. ಇದರಲ್ಲಿ ಬೇರೆ ಬೇರೆ ಸಮುದಾಯದೊಳಗಿನ ಐವತ್ತೈದು ವಿಷಯಗಳ ಟಿಪ್ಪಣಿಗಳೂ, ಅವಶ್ಯವಾದ ಚಿತ್ರಗಳೂ ಇರುತ್ತವೆ. ಇದರ ಬೆಲೆ ಒಂದು ರೂಪಾಯಿ; ಅಂಚೇ ವೆಚ್ಚ ಒಂದು ಆಣೆ. ಗ್ರಾಹಕರು "ಹಣಮಂತ ಗೋವಿಂದ ದೇಶಪಾಂಡೆ" ಟ್ರೇನಿಂಗ ಕಾಲೇಜ ಧಾರವಾಡ ಇವರ ಕಡೆಗೆ ಬರಕೊಂಡರೆ ವ್ಯೂ ಮಪೇಬಲ್ ಪಾರ್ಸಲಿನಿಂದ ಕಳಿಸಲಾಗುವದು. ಹತ್ತು ಪ್ರತಿ ಮೇಲೆ ತೆಗೆದುಕೊಂಡರೆ ಬಂದು ಪ್ರತಿಕಮಿಶನ್ ಕೊಡಲಿಯುವದು.

ಧಾರವಾಡ ಟ್ರೇ. ಕಾ. } ಗೋವಿಂದ ವಂಕಟೇಶ ದೇಶಪಾಂಡೆ,
೬-೧೧-೨೦. } ಹೆಡ್ ಮಾಸ್ತರ ಪ್ರಾಕ್ಟಿಸಿಂಗಸ್ಕೂಲ.